ಶುಕ್ರವಾರ, ಜುಲೈ 30, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಉಯ್ಯಾಲೆ
ತೀಜ್ ಉತ್ಸವದ ಅಂಗವಾಗಿ ಪಂಜಾಬ್‌ನ ಅಮೃತಸರದಲ್ಲಿ ಮಹಿಳೆಯೊಬ್ಬರು ಗುರುವಾರ ಸಾಂಪ್ರದಾಯಿಕ ದಿರಿಸು ತೊಟ್ಟು ಉಯ್ಯಾಲೆಯಾಡಿದರು

Bangle Fest

HURRY! ONLY 5 DAYS

ಶೇಕಡ 30% ಕಡಿತ

ಎಲ್ಲಾ ಬಳೆಗಳ ತಯಾರಿಕಾ ಶುಲ್ಕದ ಮೇಲೆ
(ಚಿನ್ನ, ವಜ್ರ ಮತ್ತು ಅನರ್ಘ್ಯರತ್ನ)

*conditions apply



10,000ಕ್ಕೂ ಅಧಿಕ ವಿನ್ಯಾಸ

A LEGACY OF QUALITY BIS 916 HALLMARKED GOLD

ಸುರಕ್ಷತೆಗಾಗಿ ಪ್ರವೇಶದಲ್ಲಿ ಗ್ರಾಹಕರ ತಪಾಸಣೆ | ನಿಮ್ಮ ರಕ್ಷಣೆಗಾಗಿ ಸುಧಾರಿತ ಶುಚಿತ್ವದ ಕ್ರಮಗಳು | ಆಭರಣಗಳ ಯು.ವಿ. ಸ್ಯಾನಿಟೈಸೇಷನ್ | ಲಸಿಕೆ ಪಡೆದಿರುವ ಸಿಬ್ಬಂದಿವರ್ಗ

SHOP ONLINE @ joyalukkas.com

Joyalukkas
World's favourite jeweller

BENGALURU: M G ROAD • DICKENSON ROAD • JAYANAGAR • MALLESWARAM • MARATHAHALLI • PHOENIX MARKETCITY
KAMMANAHALLI | MANGALURU • MYSURU • HUBBALLI • SHIVAMOGGA • BELAGAVI • UDUPI • HASSAN • DAVANGERE
OPEN ON SUNDAYS | SPACIOUS CAR PARKING
INDIA • USA • UK • UAE • OMAN • QATAR • BAHRAIN • KUWAIT • KSA • SINGAPORE • MALAYSIA

ಜನಪೀಡಕ ಸರ್ಕಾರ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಪರೇಷನ್ ಕಮಲದ ಮೂಲಕ ಅಧಿಕಾರಕ್ಕೆ ಬಂದ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರದ ಎರಡು ವರ್ಷದ ಸಾಧನೆ ಭ್ರಷ್ಟಾಚಾರ, ಅದಕ್ಷತೆ, ಅರಾಜಕತೆ, ದುರಾಡಳಿತ. ಅಭಿವೃದ್ಧಿ ಶೂನ್ಯ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಗುರುವಾರ ವಾಗ್ದಾಳಿ ನಡೆಸಿದರು.

ರಾಜ್ಯ ಸರ್ಕಾರದ ವೈಫಲ್ಯಗಳ ಕುರಿತ 'ಜನಪೀಡಕ ಸರ್ಕಾರ' ಕಿರು ಹೊತ್ತಿಗೆಯನ್ನು ಬಿಡುಗಡೆ ಮಾಡಿದ ಅವರು, 'ಕೇಂದ್ರ ಮತ್ತು ರಾಜ್ಯ ಎರಡರಲ್ಲೂ ಬಿಜೆಪಿ ಸರ್ಕಾರ ಇದ್ದರೆ ಸ್ವರ್ಗವನ್ನೇ ಸೃಷ್ಟಿಸುತ್ತೇವೆ ಎಂದು ನಂಬಿಸಿ, ಬಿಜೆಪಿಗರು ರಾಜ್ಯವನ್ನು ಲೂಟಿ ಹೊಡೆದರು. ಕೊರೊನಾ ಸಂದರ್ಭದಲ್ಲೂ ವಿಪರೀತ ಭ್ರಷ್ಟಾಚಾರ ನಡೆಸಿದರು. ಮಕ್ಕಳ ಪೌಷ್ಟಿಕಾಂಶ ಹೆಚ್ಚಿಸಲು ಮೀಸಲಿಟ್ಟ ಮೊಟ್ಟೆಯ ಹಣವನ್ನೂ ಸರ್ಕಾರ ನುಂಗಿ ನೀರು ಕುಡಿಯಿತು' ಎಂದು ಕಿಡಿಕಾರಿದರು.

'ಕೊರೊನಾ ಸಲಕರಣೆಗಳು, ವೆಂಟಿಲೇಟರ್, ಸ್ಯಾನಿಟೈಸರ್, ಪಿಪಿಇ ಕಿಟ್‌ಗಳ ಖರೀದಿಯಲ್ಲೂ ಲಂಚ ತಿಂದರು. ಈ ಭ್ರಷ್ಟಾಚಾರವನ್ನು ವಿಧಾನ ಸಭೆಯಲ್ಲಿ ದಾಖಲೆ ಸಮೇತ ಬಹಿರಂಗಗೊಳಿಸಿದೆ. ಅದ್ಯಾವುದಕ್ಕೂ ಮುಖ್ಯಮಂತ್ರಿ ಉತ್ತರಿಸಲಿಲ್ಲ. ಆರೋಗ್ಯ ಸಚಿವರಾಗಿದ್ದ ಸುಧಾಕರ್ ಎಲ್ಲವನ್ನೂ ಒಪ್ಪಿಕೊಂಡರು. ಆದರೆ ಭ್ರಷ್ಟಾಚಾರ ನಡೆದಿಲ್ಲ ಎಂದು ವಾದಿಸಿದರು' ಎಂದರು.

'ಯಡಿಯೂರಪ್ಪ ಮರ್ಜಿಯಲ್ಲಿ ಬೊಮ್ಮಾಯಿ'

ಬೆಂಗಳೂರು: 'ಮುಖ್ಯಮಂತ್ರಿಯಾಗಿ ಬಸವರಾಜ ಬೊಮ್ಮಾಯಿ ಅವರನ್ನು ನೇಮಿಸಿದ್ದೇ ಯಡಿಯೂರಪ್ಪ. ಹೀಗಾಗಿ, ಯಡಿಯೂರಪ್ಪ ಮರ್ಜಿಯಲ್ಲಿ ಬೊಮ್ಮಾಯಿ ಇರುತ್ತಾರೆ' ಎಂದು ಸಿದ್ದರಾಮಯ್ಯ ಹೇಳಿದರು.

'ಯಡಿಯೂರಪ್ಪ ವಿರುದ್ಧವಾಗಿ ನಡೆದರೆ ಸದಾನಂದಗೌಡರಿಗೆ ಏನಾಯಿತು ಅದೇ ಪರಿಸ್ಥಿತಿ ಇವರಿಗೂ ಬರಬಹುದು. ಅಪ್ಪನಿಗಿಂತಲೂ ಮಗ ಬುದ್ಧಿವಂತ ಆಗಬಹುದು ಅಥವಾ ದಡ್ಡ ಆಗಿರಬಹುದು' ಎಂದ ಸಿದ್ದರಾಮಯ್ಯ, 'ಎಸ್.ಆರ್. ಬೊಮ್ಮಾಯಿ ಗುಣ ಮಗನಿಗೂ ಬರುತ್ತದೆ ಎನ್ನಲಾಗದು' ಎಂದರು.

'ಯಡಿಯೂರಪ್ಪ ಸರ್ಕಾರ ಇದ್ದರೆ ಮುಂದಿನ ಚುನಾವಣೆಯಲ್ಲಿ ಹೀನಾಯ ಸೋಲು ಆಗಬಹುದೆಂಬ ಕಾರಣಕ್ಕೆ ಮುಖ್ಯಮಂತ್ರಿ ಬದಲಾವಣೆ ಮಾಡಲಾಗಿದೆ' ಎಂದರು.

'ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಮೃತಪಟ್ಟವರು ಮೂರೇ ಮಂದಿ ಎಂದು ಸಚಿವ ಸುಧಾಕರ್ ಸುಳ್ಳು ಹೇಳಿದರು. ಆದರೆ, ಮೃತಪಟ್ಟವರು 24ಕ್ಕೂ ಹೆಚ್ಚು ಮಂದಿ. ಆಮ್ಲಜನಕ ಕೊರತೆಯಿಂದ ಯಾರೂ ಮೃತಪಟ್ಟಿಲ್ಲ ಎಂದು ಕೇಂದ್ರವೂ ಸುಳ್ಳು ಹೇಳುತ್ತಿದೆ' ಎಂದರು.

'ಆರ್ಥಿಕ ಶಿಸ್ತು ಪಾಲಿಸದೆ ನಿಯಮ ಮೀರಿ ಸಾಲ ಮಾಡಿದ್ದು, ನಿಯಮ ಮೀರಿದ ಸಾಲ ತೀರಿಸುವುದಕ್ಕೇ ಮತ್ತೆ ಸಾಲ ಮಾಡುವ ಸ್ಥಿತಿಗೆ ಸರ್ಕಾರ ಬಂದಿದೆ. ರಾಜ್ಯ ಮತ್ತು ಕೇಂದ್ರ ಎರಡರಲ್ಲೂ ನಿಯಮ ಮೀರಿ ಸಾಲ ಮಾಡಿ, ಆ ಹೊರೆಯನ್ನು ಜನರ ತಲೆ ಮೇಲೆ ಹೊರಿಸಿದ್ದಾರೆ' ಎಂದು ಆರೋಪಿಸಿದರು.

ಬಿಜೆಪಿ ಅಲ್ಲ ಬ್ಲೂಜೆಪಿ: ಕಿರುಹೊತ್ತಿಗೆಯಲ್ಲಿ 'ಸುಳ್ಳಿನ ಕಾರ್ಖಾನೆ ಬಿಜೆಪಿಯನ್ನು ತಿರಸ್ಕರಿಸಿ' ಎಂದಿರುವ ಸಿದ್ದರಾಮಯ್ಯ, 'ಬಿಜೆಪಿಯವರು ಅಧಿಕಾರಕ್ಕೆ ಬಂದಾಗಲೆಲ್ಲ ಕನಾಟಕದ ಮಾನವನ್ನು ಬೀದಿ ಪಾಲು ಮಾಡುವ ಕೆಲಸವನ್ನು ಮಾಡುತ್ತಲೆ ಇದ್ದಾರೆ. ಸದನದಲ್ಲೆ ಬ್ಲೂಫಿಲಂ ನೋಡಿ ಹಲವು ಮಂತ್ರಿಗಳು ರಾಜೀನಾಮೆ ಕೊಟ್ಟರು. ಹಲವರು ಅಕ್ರಮ ಸಂಬಂಧಗಳ ಮೂಲಕ ಬೀದಿ ಮಾತಾದರು. ಹೀಗಾಗಿ, ಬಿಜೆಪಿ ಅಲ್ಲ ಬ್ಲೂಜೆಪಿ ಎಂದು ಜನ ಆಡಿಕೊಳ್ಳುವಂತಾಗಿದೆ' ಎಂದೂ ಕುಟುಕಿದ್ದಾರೆ.

ಸುದ್ದಿ 2 ನಿಮಿಷ

'ಯುಕೆಪಿ ಜಾರಿಗೆ ಮೊದಲ ಆದ್ಯತೆ'

ಹುಬ್ಬಳ್ಳಿ: ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ) ಉತ್ತರ ಕರ್ನಾಟಕ ಅಭಿವೃದ್ಧಿ ಕುರಿತಂತೆ ಪ್ರಮುಖ ಯೋಜನೆಯಾಗಿದ್ದು, ಅದರ ಜಾರಿಗೆ ಮೊದಲ ಪ್ರಾಶಸ್ತ್ಯ ನೀಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯೋಜನೆಗೆ ಸಂಬಂಧಿಸಿದಂತೆ ಏನು ಮಾಡಬೇಕೆಂಬುದರ ಸ್ಪಷ್ಟತೆ ಹಾಗೂ ಮಾಹಿತಿ ಇದೆ' ಎಂದರು.

'ನ್ಯಾಯಮೂರ್ತಿ ಬ್ರಿಜೇಶ್ ಕುಮಾರ್ ನೇತೃತ್ವದ ನ್ಯಾಯಮಂಡಳಿ ಆದೇಶದ ಬಳಿಕ, ಗೆಜೆಟ್ ನೋಟಿಫಿಕೇಶನ್ ಆಗುವ ಹಂತದಲ್ಲಿ ಆಂಧ್ರಪ್ರದೇಶ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಹೋಗಿದೆ. ಕರ್ನಾಟಕ, ಮಹಾರಾಷ್ಟ್ರ ಸರ್ಕಾರಗಳು ಈ ಬಗ್ಗೆ ಕೋರ್ಟ್‌ನಲ್ಲಿ ಹೋರಾಡುತ್ತಿವೆ. ಒಂದೂವರೆ ತಿಂಗಳೊಳಗೆ ಪ್ರಕರಣ ವಿಚಾರಣೆಗೆ ಬರಲಿದ್ದು, ನಮ್ಮ ಪರ ಆದೇಶ ಬರುವ ವಿಶ್ವಾಸವಿದೆ. ಗೆಜೆಟ್ ನೋಟಿಫಿಕೇಶನ್ ಆದ ತಕ್ಷಣ ಪುನರ್ವಸತಿ ಕೆಲಸ ಆರಂಭಿಸಿ, ಅಣೆಕಟ್ಟೆ ಎತ್ತರವನ್ನು 524 ಮೀಟರ್‌ಗೆ ಹೆಚ್ಚಳ ಮಾಡಲು ಕ್ರಮ ಕೈಗೊಳ್ಳಲಾಗುವುದು' ಎಂದು ಅವರು ವಿವರಿಸಿದರು.

ಶುಕ್ರವಾರ ದೆಹಲಿಗೆ: 'ಶುಕ್ರವಾರ ದೆಹಲಿಗೆ ಹೋಗಿ ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಅವರನ್ನು ಭೇಟಿ ಮಾಡಿ, ಆಶೀರ್ವಾದ ಪಡೆಯುವೆ. ಎರಡು ಮೂರು ದಿನದ ನಂತರ, ಮತ್ತೆ ಹೋಗಿ ಸಂಪುಟದ ಬಗ್ಗೆ ಚರ್ಚಿಸಿ, ಸಚಿವರ ಪಟ್ಟಿಯನ್ನು ಅಂತಿಮಗೊಳಿಸಲಾಗುವುದು' ಎಂದು ಅವರು ಪ್ರಶ್ನೆಯೊಂದಕ್ಕೆ ತಿಳಿಸಿದರು.



ತಂದೆ–ತಾಯಿ ಸಮಾಧಿಗೆ ನಮನ: ಇಲ್ಲಿನ ನವನಗರದ ಬಳಿ ಇರುವ ತಂದೆ ಎಸ್.ಆರ್. ಬೊಮ್ಮಾಯಿ ಮತ್ತು ಗಂಗಮ್ಮ ಬೊಮ್ಮಾಯಿ ಅವರ ಸಮಾಧಿಗೆ ಮುಖ್ಯಮಂತ್ರಿಯವರು ಪೂಜೆ ಸಲ್ಲಿಸಿದರು.

ಉನ್ನತ ಶಿಕ್ಷಣ: 700 ದಿನಗಳಲ್ಲಿ 3,760 ಕಡತಗಳ ವಿಲೇವಾರಿ

ಬೆಂಗಳೂರು: ಉನ್ನತ ಶಿಕ್ಷಣ, ಐಟಿ–ಬಿಟಿ, ವಿಜ್ಞಾನ–ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ಇಲಾಖೆಯಲ್ಲಿ ಕಳೆದ 700 ದಿನಗಳಲ್ಲಿ 3,760 ಕಡತಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಈ ಇಲಾಖೆಗಳ ಉಸ್ತುವಾರಿ ಹೊತ್ತಿದ್ದ ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರ ಕಚೇರಿ ಮೂಲಗಳು ಹೇಳಿವೆ.

ಮುಂದಿನ 15 ದಿನಗಳಲ್ಲಿ ಎಲ್ಲ ಇಲಾಖೆಗಳ ಬಾಕಿ ಉಳಿದಿರುವ ಕಡತಗಳನ್ನು ವಿಲೇವಾರಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಅಧಿಕಾರಿಗಳ ಸಭೆಯ ಬಳಿಕ ತಿಳಿಸಿದ್ದರು.

ಅದರ ಬೆನ್ನಲ್ಲೇ ಅಶ್ವತ್ಥನಾರಾಯಣ ಅವರ ಕಚೇರಿಯಿಂದ ಈ ಹೇಳಿಕೆ ಹೊರಬಿದ್ದಿದೆ. 'ಯಡಿಯೂರಪ್ಪ ಅವರು ಸಿ.ಎಂ ಸ್ಥಾನಕ್ಕೆ ರಾಜೀನಾಮೆ ನೀಡುವವರೆಗೆ ಇಲಾಖೆಗಳ ಎಲ್ಲ ಕಡತಗಳನ್ನು ವಿಲೇವಾರಿ ಮಾಡಿದ್ದು, ಕಡತಗಳ ಬಾಕಿ ಇಲ್ಲ' ಎಂದು ತಿಳಿಸಿದೆ.

'ಇ-ಆಫೀಸ್ (ಕಾಗದ ರಹಿತ ಕಡತ) ವ್ಯವಸ್ಥೆಯಡಿ ಸಾವಿರಾರು ಕಡತಗಳನ್ನು ಪಾರದರ್ಶಕವಾಗಿ ವಿಲೇವಾರಿ ಮಾಡಲಾಗಿದೆ. ಇ- ಕಚೇರಿ ಮೂಲಕವೇ ವಿಶ್ವವಿದ್ಯಾಲಯಗಳ ಕಡತಗಳ ವಿಲೇವಾರಿ ಪ್ರಕ್ರಿಯೆ ಆರಂಭವಾಗಿದೆ' ಎಂದು ಹೇಳಿದೆ.

ಯಾವುದೇ ಸ್ಥಾನ ಒಪ್ಪುವೆ: ಈಶ್ವರಪ್ಪ

ಶಿವಮೊಗ್ಗ: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಂಪುಟದಲ್ಲಿ ಯಾವುದೇ ಸ್ಥಾನ ನೀಡಿದರೂ ಒಪ್ಪಿಕೊಳ್ಳುವೆ. ಜಗದೀಶ್ ಶೆಟ್ಟರ್ ಅವರಂತೆ ಹೊರಗುಳಿಯುವ ನಿಲುವು ತಾಳುವುದಿಲ್ಲ. ಪಕ್ಷ ಸಂಘಟನೆಗೆ ಸೂಚಿಸಿದರೂ ಆಕ್ಷೇಪಿಸುವುದಿಲ್ಲ' ಎಂದು ಬಿಜೆಪಿ ಹಿರಿಯ ಮುಖಂಡ ಕೆ.ಎಸ್.ಈಶ್ವರಪ್ಪ ಹೇಳಿದರು.

'ಉಪ ಮುಖ್ಯಮಂತ್ರಿ, ಸಚಿವ ಸ್ಥಾನ ನೀಡಿದರೆ ನಿಭಾಯಿಸುವೆ. ಇಲ್ಲ, ಶಾಸಕನಾಗಿಯೇ ಉಳಿದು ಪಕ್ಷ ಸಂಘಟನೆಯ ಕೆಲಸ ಮಾಡುವೆ. ಸ್ಥಾನಕ್ಕಾಗಿ ಲಾಬಿ ಮಾಡುವ ಪ್ರಶ್ನೆಯೇ ಇಲ್ಲ' ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದರು.

'ಎಲ್ಲರ ಸಮ್ಮತಿ ಪಡೆದೇ ಮುಖ್ಯಮಂತ್ರಿ ಆಯ್ಕೆ ನಡೆದಿದೆ. ರಾಷ್ಟ್ರೀಯ ನಾಯಕರು ಸರಳವಾಗಿ ಪರಿಹಾರ ಹುಡುಕಿದ್ದಾರೆ' ಎಂದರು.

'ಸ್ವಾಭಿಮಾನ ಬಿಟ್ಟು ಸಚಿವನಾಗುವುದಿಲ್ಲ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಸ್ವಾಭಿಮಾನ, ಗೌರವ ಬಿಟ್ಟು ಸಚಿವನಾಗುವುದಿಲ್ಲ. ಇಲ್ಲಿ ನೈತಿಕತೆಯ ಪ್ರಶ್ನೆ ಬರುತ್ತದೆ. ಆತ್ಮಾಭಿಮಾನ ಬಿಟ್ಟು ಹೇಗೆ ಸಚಿವ ಸಂಪುಟ ಸೇರಲಿ' ಎಂದು ಶಾಸಕ ಜಗದೀಶ ಶೆಟ್ಟರ್ ಪ್ರಶ್ನಿಸಿದರು.

ಆರ್‌ಎಸ್‌ಎಸ್‌ನ ಕೇಶವ ಕುಂಜಕ್ಕೆ ಗುರುವಾರ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಚಿವನಾಗಿಯೇ ಎಲ್ಲ ಕೆಲಸ ಮಾಡಬೇಕು ಎಂದಿಲ್ಲ. ಮಂತ್ರಿ ಆಗದೆಯೂ ಮಾಡಿದ್ದೇನೆ. ಈಗಲೂ ಮಾಡುತ್ತೇನೆ' ಎಂದರು.

'ನಾನಂತೂ ಸಂಪುಟವನ್ನು ಸೇರುತ್ತಿಲ್ಲ. ಆರ್‌ಎಸ್‌ಎಸ್ ಕಚೇರಿಗೆ ಭೇಟಿ ನೀಡುವುದು ಸಾಮಾನ್ಯ. ಅದರಲ್ಲೇನೂ ವಿಶೇಷವಿಲ್ಲ. ರಾಜಕೀಯ ಬಗೆಗೆ ಯಾವತ್ತೂ ಆರ್‌ಆರ್‌ಎಸ್ ಕಚೇರಿಯಲ್ಲಿ ಚರ್ಚೆ ನಡೆಸುವುದಿಲ್ಲ' ಎಂದು ಹೇಳಿದರು.

'ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಬ್ಬರೂ ಈ ಭಾಗದವರೇ ಆಗಿದ್ದಾರೆ. ಅವರೂ ಈ ಭಾಗದ ಅಭಿವೃದ್ಧಿ ಮಾಡಲಿದ್ದಾರೆ' ಎಂದರು.

ಬೆಂಗಳೂರಿಗೆ ತೆರಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶೆಟ್ಟರ್ ಹಿರಿಯರು. ಅಸಮಾಧಾನ ಸಹಜ. ಅವರೊಂದಿಗೆ ಮತ್ತೆ ಮಾತನಾಡಿದ್ದೇನೆ. ಬೆಂಗಳೂರಿಗೆ 9 ಗಂಟೆಗೆ ವಿಮಾನ ಹೊರಡಬೇಕಿದ್ದರಿಂದ ಶೆಟ್ಟರ್ ಮನೆಗೆ ಹೋಗಲು ಸಾಧ್ಯವಾಗಿಲ್ಲ. ಬೆಂಗಳೂರಿನಲ್ಲಿ ಭೇಟಿ ಮಾಡಿ, ಚರ್ಚಿಸುವೆ' ಎಂದು ಪ್ರತಿಕ್ರಿಯಿಸಿದರು.

ಶೆಟ್ಟರ್ ಜತೆ ಚರ್ಚಿಸುವೆ –ಸಿ.ಎಂ

ಹುಬ್ಬಳ್ಳಿ: 'ಹಿರಿಯರಾದ ಜಗದೀಶ ಶೆಟ್ಟರ್ ಅವರು ಸಂಪುಟಕ್ಕೆ ಸೇರುವುದಿಲ್ಲ ಎಂದು ಹೇಳಿದ್ದಾರೆ. ಈ ಬಗ್ಗೆ ಅವರೊಂದಿಗೆ ಮಾತನಾಡಿದ್ದೇನೆ. ವೈಯಕ್ತಿಕವಾಗಿಯೂ ಭೇಟಿ ಮಾಡುವೆ. ಅವರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳುವೆ. ಪಕ್ಷದ ಹಿರಿಯರ ಜತೆ ಚರ್ಚಿಸಿ ಸಮಸ್ಯೆಯನ್ನು ಬಗೆಹರಿಸುವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ನಾವಿಬ್ಬರೂ ಆತ್ಮೀಯ ಸ್ನೇಹಿತರು. ರಾಜಕೀಯದಲ್ಲಿ ಒಟ್ಟಿಗೆ ಬೆಳೆದವರು. ಇಬ್ಬರ ನಡುವೆ ಅಪಾರ ಅಭಿಮಾನ ಮತ್ತು ಪ್ರೀತಿ ವಿಶ್ವಾಸವಿದೆ. ಬೇರೆ ಬೇರೆ ಪಕ್ಷದಲ್ಲಿದ್ದಾಗಿನಿಂದಲೂ ನಮ್ಮ ನಡುವೆ ಒಳ್ಳೆಯ ಬಾಂಧವ್ಯವಿದೆ' ಎಂದರು.

'ಡಿಸಿಎಂ ಹುದ್ದೆಗಾಗಿ ಮುನಿಸಿಲ್ಲ'

ಬಳ್ಳಾರಿ: 'ನನಗೆ ಉಪ ಮುಖ್ಯಮಂತ್ರಿ ಸ್ಥಾನ ಘೋಷಿಸಿಲ್ಲವೆಂದು ಮುನಿದು ಬಳ್ಳಾರಿಗೆ ಬಂದಿಲ್ಲ. ಮನೆಯಲ್ಲಿ ವಿಶೇಷ ಪೂಜೆ ಇತ್ತು, ಕುಟುಂಬದ ಜತೆ ಪಾಲ್ಗೊಳ್ಳಲು ಬಂದಿದ್ದೇನೆ' ಎಂದು ಬಿಜೆಪಿ ಶಾಸಕ ಬಿ.ಶ್ರೀರಾಮುಲು ಗುರುವಾರ ಸ್ಪಷ್ಟಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಡಿಸಿಎಂ ಸ್ಥಾನ ಕೊಟ್ಟಿಲ್ಲವೆಂದು ಮುನಿಸಿಕೊಂಡು ವಾಪಸ್ ಬಂದಿದ್ದೇನೆ ಎಂದು ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿ ನೋಡಿದ್ದೇನೆ. ಅದು ಸರಿಯಲ್ಲ' ಎಂದರು.

'ನಾನು ಪಕ್ಷದ ನಿಷ್ಠಾವಂತ ಕಾರ್ಯಕರ್ತ. ಜನ ಬೆಂಬಲದಿಂದ ಮೇಲೆ ಬಂದಿದ್ದೇನೆ. ನನಗೆ ಪಕ್ಷ ಮುಖ್ಯವೇ ವಿನಾ ಅಧಿಕಾರ, ಅಂತಸ್ತಲ್ಲ. ಪಕ್ಷ ಇದುವರೆಗೆ ನನ್ನನ್ನು ಗೌರವದಿಂದ ಕಂಡಿದೆ. ಈಗಲೂ ನನಗೆ ಸೂಕ್ತ ಸ್ಥಾನ ಸಿಗುವ ವಿಶ್ವಾಸವಿದೆ' ಎಂದರು.

ಜೆಡಿಎಸ್ ಪಕ್ಷ ಬಲಿಷ್ಠವಾಗಿದೆ: ವಿಜೇತಾ ಅನಂತಕುಮಾರ್

ಚರ್ಚೆಗೆ ಗ್ರಾಸವಾದ ಟ್ವೀಟ್ • ಪಕ್ಷಕ್ಕೆ ಬಂದರೆ ಸ್ವಾಗತ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಜೆಡಿಎಸ್ ಇನ್ನೂ ಬಲಿಷ್ಠವಾಗಿದೆ' ಎಂದು ಬಿಜೆಪಿ ಹಿರಿಯ ನಾಯಕರಾಗಿದ್ದ ದಿವಂಗತ ಎಚ್.ಎನ್. ಅನಂತಕುಮಾರ್ ಅವರ ಪುತ್ರಿ ವಿಜೇತಾ ಟ್ವೀಟ್ ಮಾಡಿರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

'ಕರ್ನಾಟಕದ ರಾಜಕೀಯ ಏಕೆ ಕುತೂಹಲಕರವಾಗಿದೆ ಗೊತ್ತಾ? ಏಕೆಂದರೆ, ಜೆಡಿಎಸ್ ಇನ್ನೂ ಬಲಿಷ್ಠ ರಾಜಕೀಯ ಪಕ್ಷವಾಗಿ ಉಳಿದಿದೆ' ಎಂದೂ ವಿಜೇತಾ ಟ್ವೀಟ್ ಮಾಡಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಎಚ್.ಡಿ.ಕುಮಾರಸ್ವಾಮಿ, 'ವಿಜೇತಾ ನನ್ನ ಸಹೋದರಿ ಸಮಾನರು. ಅವರಿಗೆ ಧನ್ಯವಾದಗಳು. ಈ ಮಾತು ನಮ್ಮ ಕಾರ್ಯಕರ್ತರಲ್ಲಿ ಉತ್ಸಾಹ ಹೆಚ್ಚಿಸಿದೆ' ಎಂದಿದ್ದಾರೆ.

'ವಿಜೇತಾ ಹಾಗೂ ಅವರ ತಾಯಿ ತೇಜಸ್ವಿನಿ ಅನಂತ್ ಕುಮಾರ್ ಅವರು ಪಕ್ಷಕ್ಕೆ ಬಂದರೆ ಸ್ವಾಗತ. ಬಿಜೆಪಿಯಂತೂ ಅವರನ್ನು ಗುರುತಿಸಿಲ್ಲ. ಮುಂದೆ ರಾಜಕಾರಣದಲ್ಲಿ ಅನೇಕ ಬದಲಾವಣೆಗಳಾಗಲಿವೆ. ಅಲ್ಲಿಯವರೆಗೆ ತಾಳ್ಮೆಯಿಂದ ಕಾಯಬೇಕು' ಎಂದಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷೆಯೂ ಆಗಿರುವ ತೇಜಸ್ವಿನಿ ಅನಂತಕುಮಾರ್, 'ನಾಯಕತ್ವ' ವಿಚಾರಕ್ಕೆ ಸಂಬಂಧಿಸಿದಂತೆ ಜೂನ್ ತಿಂಗಳಿನಲ್ಲಿ ಮಾಡಿದ್ದ ಟ್ವೀಟ್ ಚರ್ಚೆಗೆ ಕಾರಣವಾಗಿತ್ತು.

'ಯಾರ ಮಾತುಗಳನ್ನೂ ಕೇಳದ ನಾಯಕನ ಸುತ್ತ ಅಂತಿಮವಾಗಿ ಏನನ್ನೂ ಹೇಳಲು ಬಯಸದವರೇ ಸುತ್ತುವರೆದಿರುತ್ತಾರೆ' ಎಂಬ ಆ್ಯಂಡಿ ಸ್ಟ್ಯಾನ್ಲಿ ಅವರ ಈ ಮಾತನ್ನಷ್ಟೇ ಟ್ಯಾಗ್ ಮಾಡಿ ತೇಜಸ್ವಿನಿ ಟ್ವೀಟ್ ಮಾಡಿದ್ದರು. 'ಈ ಬಲಿಷ್ಠ ಸಂದೇಶವು ಸಮಾಜದ ಎಲ್ಲ ವರ್ಗಕ್ಕೂ ಅನ್ವಯವಾಗುತ್ತದೆ' ಎಂದೂ ಪ್ರತಿಪಾದಿಸಿದ್ದರು.

'ಪ್ರಧಾನಿ ಮೋದಿಯವರನ್ನೇ ಉದ್ದೇಶಿಸಿ ಈ ಟ್ವೀಟ್ ಮಾಡಿದ್ದೀರಲ್ಲವೇ' ಎಂದು ಆಗ ನೆಟ್ಟಿಗರು ಪ್ರಶ್ನಿಸಿದ್ದರು.

ಈ ಹಿಂದೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ತೇಜಸ್ವಿನಿಯವರನ್ನು ಒತ್ತಾಯಿಸಿದ್ದ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರು ಪ್ರಚಾರದಲ್ಲಿ ತೊಡಗಿಸಿದ್ದರು. ಆದರೆ, ಟಿಕೆಟ್ ನೀಡಿದ್ದು ತೇಜಸ್ವಿಸೂರ್ಯ ಅವರಿಗೆ. ಕುಟುಂಬ ರಾಜಕಾರಣಕ್ಕೆ ಮಣೆ ಹಾಕುವುದಿಲ್ಲ ಎನ್ನುತ್ತಲೇ ದಿವಂಗತ ಸುರೇಶ ಅಂಗಡಿಯವರ ಪತ್ನಿಗೆ ಲೋಕಸಭಾ ಉಪಚುನಾವಣೆಯಲ್ಲಿ ಟಿಕೆಟ್ ನೀಡಲಾಗಿತ್ತು. ಉದ್ದೇಶಪೂರ್ವಕವಾಗಿ ಅನಂತಕುಮಾರ್ ಕುಟುಂಬವನ್ನು ರಾಜಕೀಯವಾಗಿ ಮೂಲೆಗುಂಪು ಮಾಡಲಾಗಿದೆ ಎಂಬ ಟೀಕೆಗಳು ಬಿಜೆಪಿಯಲ್ಲೇ ಇವೆ.

'ಈಶ್ವರಪ್ಪಗೆ ಗೌರವ ಸ್ಥಾನ ಬೇಡುವ ಸ್ಥಿತಿ ಬರಬಾರದಿತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕ ಕೆ.ಎಸ್. ಈಶ್ವರಪ್ಪ ಅವರಿಗೆ ಗೌರವಯುತ ಸ್ಥಾನಮಾನವನ್ನು ಬೇಡಿ ಪಡೆಯಬೇಕಾದ ಸ್ಥಿತಿ ಬರಬಾರದಿತ್ತು ಎಂದು ಕುರುಬ (ಹಾಲುಮತ) ಸಮಾಜದ ಸ್ವಾಮೀಜಿಗಳು ಗುರುವಾರ ಪ್ರತಿಪಾದಿಸಿದರು.

ಯಡಿಯೂರಪ್ಪ ಅವರಂತೆ ಈಶ್ವರಪ್ಪ ಅವರೂ ಮುಂಚೂಣಿಯಲ್ಲಿ ನಿಂತು ಪಕ್ಷ ಕಟ್ಟಿದ್ದಾರೆ. ಯಡಿಯೂರಪ್ಪ ಅವರಿಗೆ ನಾಲ್ಕು ಬಾರಿ ಸಿ.ಎಂ ಆಗುವ ಅವಕಾಶ ನೀಡಲಾಯಿತು. ಈಶ್ವರಪ್ಪ ಅವರಿಗೆ ಒಮ್ಮೆಯಾದರೂ ಈ ರೀತಿಯ ಅವಕಾಶ ನೀಡಬೇಕಿತ್ತು' ಎಂದು ಮಕಣಾಪುರ ಅಮೋಘಶಿದ್ದೇಶ್ವರ ಗುರುಪೀಠದ ಸೋಮಲಿಂಗೇಶ್ವರ ಸ್ವಾಮೀಜಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಈಗ ಈಶ್ವರಪ್ಪ ಅವರಿಗೆ ಗೌರವದ ಸ್ಥಾನ ಎಂದರೆ ಉಪಮುಖ್ಯಮಂತ್ರಿ ಸ್ಥಾನ. ಈ ಸ್ಥಾನವನ್ನು ನಾವು ಬೇಡುವ ಅಥವಾ ಹಕ್ಕು ಮಂಡಿಸುವ ಸ್ಥಿತಿ ಬರಬಾರದಿತ್ತು. ಪಕ್ಷವೇ ಗುರುತಿಸಿ ನೀಡಬೇಕಿತ್ತು' ಎಂದರು.

ಅಥಣಿಯ ಅಮರೇಶ್ವರ ಸ್ವಾಮೀಜಿ ಅವರು, 'ಬಿಜೆಪಿ ನಿಯಮಗಳ ಪ್ರಕಾರವೇ ನೋಡಿದರೂ ಅಧಿಕಾರ ನಡೆಸಲು ಈಶ್ವರಪ್ಪ ಅವರಿಗೆ ಇನ್ನೂ ಎರಡು ವರ್ಷ ವಯಸ್ಸಿದೆ. ಉಪಮುಖ್ಯಮಂತ್ರಿ ಸ್ಥಾನ ನೀಡಲೇಬೇಕು' ಎಂದು ಒತ್ತಾಯಿಸಿದರು.

'ಮಠಾಧೀಶರು ರಾಜಕೀಯಕ್ಕೆ ತಲೆಹಾಕಬಾರದು ಎಂಬುದು ಸತ್ಯ. ಆದರೆ, ಬೇರೆಲ್ಲಾ ಸಮುದಾಯಗಳು ಹೋರಾಡಿ ಅಧಿಕಾರ ಪಡೆಯುತ್ತಿರುವಾಗ ನಾವು ಮಠದೊಳಗೆ ಕುಳಿತರೆ ಇಡೀ ಸಮುದಾಯಕ್ಕೆ ಅನ್ಯಾಯವಾಗಲಿದೆ' ಎಂದು ಪ್ರತಿಪಾದಿಸಿದರು.

'ಪಂಚಮಸಾಲಿ ಸಮುದಾಯಕ್ಕೆ ಪ್ರಾತಿನಿಧ್ಯ ಕೊಡಿ'

ಬೆಂಗಳೂರು: 'ಹೊಸ ಮುಖ್ಯಮಂತ್ರಿ ಆಯ್ಕೆಯ ವಿಚಾರದಲ್ಲಿ ಪಂಚಮಸಾಲಿ ಸಮುದಾಯಕ್ಕೆ ಅನ್ಯಾಯ ಆಗಿದ್ದು, ಸಮಾಜದಲ್ಲಿ ಆಕ್ರೋಶ ವ್ಯಕ್ತವಾಗುತ್ತಿದೆ. ಕೇಂದ್ರದ ನಾಯಕರು ಅನ್ಯಾಯ ಸರಿಪಡಿಸಬೇಕು. ರಾಜಕೀಯ ಪ್ರಾತಿನಿಧ್ಯ ನೀಡಬೇಕು' ಎಂದು ಕೂಡಲಸಂಗಮ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಒತ್ತಾಯಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಸಮಾಜಕ್ಕೆ ಮುಖ್ಯಮಂತ್ರಿ ಸ್ಥಾನ ತಪ್ಪಿಸುವ ಕೆಲಸವನ್ನು ಯಾರು ಮಾಡಿದ್ದಾರೆ ಎನ್ನುವುದನ್ನು ಬಿಜೆಪಿ ಹೈಕಮಾಂಡ್ ಸ್ಪಷ್ಟಪಡಿಸಬೇಕು. ಪಂಚಮಸಾಲಿ ಸಮುದಾಯಕ್ಕೆ ಉಪಮುಖ್ಯಮಂತ್ರಿ ಅಥವಾ ಮಂತ್ರಿ ಸ್ಥಾನ ನೀಡುವಂತೆ ಒತ್ತಡ ಹೇರುವುದಿಲ್ಲ. ಆ ಪಕ್ಷದ ನಾಯಕರೇ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಿ. ಬೊಮ್ಮಾಯಿ ಅವರ ಮೇಲೆ ಪಂಚಮಸಾಲಿ ಸಮುದಾಯದ ಋಣ ಇದೆ. ಅವರು ಯೋಚಿಸಿ ನಿರ್ಧಾರ ತೆಗೆದುಕೊಳ್ಳಬೇಕು' ಎಂದೂ ಹೇಳಿದರು.

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಬಿಎಸ್‌ವೈ ರಾಜೀನಾಮೆ; ಬೊಮ್ಮಾಯಿಗೆ ಹೊಣೆ– ಏನು ಇದರ ಮರ್ಮ?
ಸಂವಾದ
ಸಂವಾದದಲ್ಲಿ ಭಾಗವಹಿಸುವವರು
- ರವೀಂದ್ರ ಭಟ್ಟ, ಕಾರ್ಯನಿರ್ವಾಹಕ ಸಂಪಾದಕ, ಪ್ರಜಾವಾಣಿ
- ಬಿ.ಎಸ್. ಅರುಣ್, ಡೆಪ್ಯುಟಿ ಎಡಿಟರ್, ಡೆಕ್ಕನ್ ಹೆರಾಲ್ಡ್
- ಆಶಾ ಕೃಷ್ಣಸ್ವಾಮಿ, ಹಿರಿಯ ಪತ್ರಕರ್ತೆ
- ವೈ.ಗ. ಜಗದೀಶ್, ಮುಖ್ಯವರದಿಗಾರ, ಪ್ರಜಾವಾಣಿ
- ಭರತ್ ಜೋಶಿ, ರಾಜಕೀಯ ಬ್ಯುರೊ ಮುಖ್ಯಸ್ಥ, ಡೆಕ್ಕನ್ ಹೆರಾಲ್ಡ್
30.07.2021ರ ಶುಕ್ರವಾರ ಬೆಳಿಗ್ಗೆ–11ರಿಂದ 12ರವರೆಗೆ

ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಅವಧಿ ಮೊಟಕು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಜೂನ್ 30ರಿಂದ ಆರಂಭಗೊಂಡಿದ್ದು, ನಿಗದಿಪಡಿಸಿದ ವೇಳಾಪಟ್ಟಿ ಪ್ರಕಾರ 2021ರ ಜನವರಿವರೆಗೆ ಮುಂದುವರಿಯಲಿದೆ. ಈ ಅವಧಿಯನ್ನು ಕನಿಷ್ಠ ಒಂದೂವರೆ ತಿಂಗಳು ಕಡಿಮೆ ಮಾಡಬೇಕು ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಆಗ್ರಹಿಸಿದೆ.

ವರ್ಗಾವಣೆ ಪ್ರಕ್ರಿಯೆಗೆ ಜೂನ್ 30ರಂದು ಅಧಿಸೂಚನೆ ಹೊರಡಿಸಲಾಗಿತ್ತು. 2019–20ನೇ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾದವರಿಗೆ ಕೌನ್ಸೆಲಿಂಗ್ ವೇಳೆ ವಿಶೇಷ ಆದ್ಯತೆ ನೀಡಲು ವರ್ಗಾವಣೆ ಕಾಯ್ದೆಯಲ್ಲಿ ತಿದ್ದುಪಡಿ ಮಾಡಲಾಗಿದ್ದು, ಅಂಥ ಶಿಕ್ಷಕರು ಅರ್ಜಿ ಸಲ್ಲಿಸಲು ಗುರುವಾರ (ಜುಲೈ 7) ಕೊನೆಯ ದಿನವಾಗಿತ್ತು.

ನ.11ರಂದು ಹೊರಡಿಸಿದ್ದ ವರ್ಗಾವಣೆ ಅಧಿಸೂಚನೆ ಅನ್ವಯ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿದ ಶಿಕ್ಷಕರಿಗೆ ಅದನ್ನು ಹಿಂಪಡೆಯಲು ಇಲಾಖೆ ಅವಕಾಶ ನೀಡಿದೆ. ಅಂಥ ಶಿಕ್ಷಕರಿಗೆ ವರ್ಗಾವಣಾ ತಂತ್ರಾಂಶದಲ್ಲಿ (ಶಿಕ್ಷಕ ಮಿತ್ರ ಆ್ಯಪ್) ಲಾಗಿನ್‌ಗೆ ಅವಕಾಶ ಕಲ್ಪಿಸಲಾಗಿದೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ.

'ಸದ್ಯದ ವೇಳಾಪಟ್ಟಿಯಂತೆ, ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಸುದೀರ್ಘ ಏಳು ತಿಂಗಳು ನಡೆಯಲಿದೆ. ಇಷ್ಟೊಂದು ದೀರ್ಘ ಅವಧಿಯಲ್ಲಿ ಕೆಲವು ಶಿಕ್ಷಕರು ನಿವೃತ್ತರಾಗಲಿದ್ದಾರೆ. ಹಲವರು ಪದೋನ್ನತಿಗೆ ಅರ್ಹತೆ ಪಡೆದಿರುತ್ತಾರೆ. ಹೀಗಾಗಿ, ವರ್ಗಾವಣೆ ಪ್ರಕ್ರಿಯೆ ಅವಧಿಯನ್ನು ಕನಿಷ್ಠ ಒಂದೂವರೆ ತಿಂಗಳು ಕುಗ್ಗಿಸಲು ಮನವಿ ಮಾಡಿದ್ದೇವೆ' ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಅಧ್ಯಕ್ಷ ಶಂಭುಲಿಂಗನಗೌಡ ಪಾಟೀಲ ಮತ್ತು ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಲಿ ತಿಳಿಸಿದ್ದಾರೆ.

'ಆಕ್ಷೇಪಣೆ ಸಲ್ಲಿಸಲು ನಿಗದಿಪಡಿಸಿದ ಅವಧಿಯನ್ನು ಕುಗ್ಗಿಸಿ ವರ್ಗಾವಣೆ ಪ್ರಕ್ರಿಯೆಯ ಅವಧಿಯನ್ನು ಕಡಿಮೆ ಮಾಡಲು ಅವಕಾಶವಿದೆ. ನಮ್ಮ ಬೇಡಿಕೆಗೆ ಆಯುಕ್ತರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದೂ ಹೇಳಿದ್ದಾರೆ.

ಆ. 2ರಿಂದ ಎಲ್ಲ ಸೇವೆಗೆ 'ಶಿಕ್ಷಕ ಮಿತ್ರ'

'ಸೇವಾ ಸೌಲಭ್ಯಗಳಿಗೆ ಸಂಬಂಧಿಸಿದ ಎಲ್ಲ ಅರ್ಜಿಗಳನ್ನು ಆಗಸ್ಟ್ 2ರಿಂದ ಆನ್‌ಲೈನ್ ಮೂಲಕವೇ ಸಲ್ಲಿಸಿ, ಇತ್ಯರ್ಥಪಡಿಸಬೇಕು. ಅದಕ್ಕೆಂದೇ ಅಭಿವೃದ್ಧಿಪಡಿಸಿರುವ 'ಶಿಕ್ಷಕ ಮಿತ್ರ' ಆ್ಯಪ್ ಬಳಸಬೇಕು' ಎಂದು ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ. ಶಿಕ್ಷಕರು, ಅಧಿಕಾರಿಗಳು, ಬೋಧಕೇತರ ಸಿಬ್ಬಂದಿ ಸೇರಿ ಇಲಾಖೆಯಲ್ಲಿ 2.50 ಲಕ್ಷ ಮಂದಿ ಇದ್ದಾರೆ. ರಜೆ, ವಿವಿಧ ಭತ್ಯೆಗಳು, ಇತರ ಹುದ್ದೆಗೆ ಅರ್ಜಿ ಸಲ್ಲಿಸಲು ಅವಕಾಶ ಹೀಗೆ ಎಲ್ಲ ಸೇವೆಗಳನ್ನು ಆ. 2ರಿಂದ ಈ ಆ್ಯಪ್ ಮೂಲಕವೇ ನಿರ್ವಹಿಸಬೇಕು ಎಂದೂ ಸೂಚಿಸಿದ್ದಾರೆ.

ಕಳಚೆ ಗ್ರಾಮ ಸ್ಥಳಾಂತರಕ್ಕೆ ಸೂಚನೆ

ಕಾರವಾರ: 'ಭಾರಿ ಭೂ ಕುಸಿತಕ್ಕೆ ಒಳಗಾಗಿರುವ ಯಲ್ಲಾಪುರ ತಾಲ್ಲೂಕಿನ ವಜ್ರಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಳಚೆ ಗ್ರಾಮವನ್ನು ಸಂಪೂರ್ಣವಾಗಿ ಸ್ಥಳಾಂತರಿಸಲಾಗುವುದು. ಇದಕ್ಕೆ ಅಗತ್ಯವಿರುವ 10-15 ಎಕರೆ ಜಮೀನನ್ನು ಗುರುತಿಸಿ ಪ್ರಸ್ತಾವ ಸಲ್ಲಿಸಿ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜಿಲ್ಲಾಡಳಿತಕ್ಕೆ ಸೂಚಿಸಿದರು.

ಮಳೆ ಮತ್ತು ಭೂಕುಸಿತದಿಂದ ಹಾನಿಗೀಡಾದ ಪ್ರದೇಶಗಳಿಗೆ ಗುರುವಾರ ಭೇಟಿ ನೀಡಿ ಪರಿಶೀಲಿಸಿದ ಅವರು, ಅಂಕೋಲಾದಲ್ಲಿ ಅಧಿಕಾರಿಗಳ ಸಭೆ ನಡೆಸಿದರು.

'ಕಳಚೆಯಲ್ಲಿ ಜೀವನ ನಡೆಸಲು ಸಾಧ್ಯವಿಲ್ಲ. ಸ್ಥಳಾಂತರಿಸುವಂತೆ ಗ್ರಾಮಸ್ಥರೂ ಕೋರಿದ್ದಾರೆ. ಅಲ್ಲಿ ಪರಿಹಾರ ಕಾಮಗಾರಿಗೆ ಹಣ ನೀಡಿದರೆ ವ್ಯರ್ಥವಾಗಲಿದೆ. ಹಾಗಾಗಿ ಪೂರ್ಣ ಗ್ರಾಮವನ್ನೇ ಸ್ಥಳಾಂತರಿಸಿ' ಎಂದು ಸೂಚಿಸಿದರು.

ಘಟಪ್ರಭೆ, ಮಲಪ್ರಭೆ ಇಳಿಕೆ: ಕೃಷ್ಣೆ ಯಥಾಸ್ಥಿತಿ

ಕೃಷ್ಣಾ ನದಿ ಪ್ರವಾಹದಿಂದ ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಬಾವನಸೌಂದತ್ತಿ ಗ್ರಾಮದ ಮನೆಗಳು ಮತ್ತು ಬೆಳೆಗಳು ಜಲಾವೃತವಾಗಿರುವುದು ಡ್ರೋನ್ ಕ್ಯಾಮೆರಾದಲ್ಲಿ ಕಂಡಿದ್ದು ಹೀಗೆ... ಚಿತ್ರ: ರಾಜು ಧೋಂಗಡಿ (ಎಡಚಿತ್ರ) ಕೃಷ್ಣಾ ನದಿಯಲ್ಲಿ ಪ್ರವಾಹ ಹೆಚ್ಚಳವಾಗಿದ್ದರಿಂದ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗೂಗಲ್ ಗ್ರಾಮದ ಅಲ್ಲಮಪ್ರಭು ದೇವಸ್ಥಾನಕ್ಕೆ ನೀರು ನುಗ್ಗಿರುವುದು

ಪ್ರಜಾವಾಣಿ ವಾರ್ತೆ

ಬೆಳಗಾವಿ/ಬಾಗಲಕೋಟೆ: ಜಿಲ್ಲೆಯಲ್ಲಿ ಕೃಷ್ಣಾ ನದಿಯಲ್ಲಿ ನೀರಿನ ಮಟ್ಟ ಇಳಿಕೆಯಾಗುತ್ತಿದ್ದರೂ ತೀರದಲ್ಲಿರುವ ಚಿಕ್ಕೋಡಿ, ಅಥಣಿ, ಕಾಗವಾಡ, ರಾಯಬಾಗ ತಾಲ್ಲೂಕುಗಳಲ್ಲಿನ ಗ್ರಾಮಗಳಲ್ಲಿ ಪ್ರವಾಹ ಪರಿಸ್ಥಿತಿ ಮುಂದುವರಿದಿದೆ.

ಮಹಾರಾಷ್ಟ್ರದ ಕಡೆಯಿಂದ 3.43 ಲಕ್ಷ ಕ್ಯುಸೆಕ್ ನೀರು ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ಕೃಷ್ಣಾ ನದಿಗೆ ಬಂದು ಸೇರುತ್ತಿದೆ. ಬುಧವಾರ 3.82 ಲಕ್ಷ ಕ್ಯುಸೆಕ್ ನೀರು ಬರುತ್ತಿತ್ತು. 24 ಗಂಟೆಗಳ ಅವಧಿಯಲ್ಲಿ ನೀರಿನ ಹರಿವಿನ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಗುರುವಾರ ಮಲಪ್ರಭಾ ಹಾಗೂ ಘಟಪ್ರಭಾ ನದಿಗಳಲ್ಲಿ ಪ್ರವಾಹ ಇಳಿಮುಖವಾಗಿದೆ. ಕೃಷ್ಣಾ ನದಿಯಲ್ಲಿ ಯಥಾಸ್ಥಿತಿ ಮುಂದುವರೆದಿದೆ.

ಮುಧೋಳ ತಾಲ್ಲೂಕಿನ ಚಿಂಚಕಂಡಿ ಬಳಿ ಘಟಪ್ರಭಾ ನದಿ ಸೇತುವೆ ಮುಳುಗಡೆಯಿಂದ ಸಂಪರ್ಕ ಕಡಿತಗೊಂಡಿದ್ದ ಮುಧೋಳ–ಬಾಗಲಕೋಟೆ ರಸ್ತೆ ಯಲ್ಲಿ ಸಂಚಾರ ಪುನಃ ಆರಂಭವಾಗಿದೆ. ಕಾರು, ಟಂಟಂ, ಬೈಕ್‌ಗಳಂತಹ ಲಘು ವಾಹನಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ.

ಮೂರು ನದಿಗಳ ದಂಡೆಯಲ್ಲಿ ಪ್ರವಾಹ ಬಾಧಿತರಿಗೆ ಜಿಲ್ಲಾಡಳಿತ 55 ಕಡೆ ಕಾಳಜಿ ಕೇಂದ್ರಗಳ ತೆರೆದಿದೆ. ಒಟ್ಟು 11,961 ಮಂದಿ ಸಂತ್ರಸ್ತರು ಹಾಗೂ 9755 ಜಾನುವಾರು ಅಲ್ಲಿ ಆಶ್ರಯ ಪಡೆದಿವೆ.

ಕೃಷ್ಣಾ, ಮಲಪ್ರಭಾ ನದಿಗಳ ಸಂಗಮ ಸ್ಥಳ ಕೂಡಲಸಂಗಮದಲ್ಲಿ ದೇವಾಲಯ ಸಂಕೀರ್ಣಕ್ಕೆ ನೀರು ನುಗ್ಗಿರುವುದರಿಂದ ಗುರುವಾರದಿಂದ ಭಕ್ತರಿಗೆ ಪ್ರವೇಶ ನಿರ್ಬಂಧಿಸಲಾಗಿದೆ. ಕೂಡಲ ಸಂಗಮ ಗ್ರಾಮಕ್ಕೂ ನೀರು ನುಗ್ಗಿದೆ.

ಗ್ರಾಮ ಸಂಪರ್ಕಿಸುವ ಸೇತುವೆಗಳು ಮುಳುಗಡೆ

ಯಾದಗಿರಿ: ಜಿಲ್ಲೆಯ ಬಸವಸಾಗರ ಜಲಾಶಯದಿಂದ ಕೃಷ್ಣಾ ನದಿಗೆ ಗುರುವಾರ 4 ಲಕ್ಷಕ್ಕೂ ಹೆಚ್ಚು ಕ್ಯುಸೆಕ್ ನೀರು ಹರಿಸುತ್ತಿದ್ದು, ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸೇತುವೆಗಳು ಮುಳುಗಡೆಯಾಗಿವೆ.

ಶಹಾಪುರ ತಾಲ್ಲೂಕಿನ ಮರಕಲ್–ಕೊಳ್ಳೂರು (ಎಂ), ವಡಗೇರಾ ತಾಲ್ಲೂಕಿನ ಹಯ್ಯಾಳ (ಬಿ)–ಐಕೂರು ಗ್ರಾಮದ ಮಧ್ಯದಲ್ಲಿರುವ ಸೇತುವೆ ಮುಳುಗಿದ್ದರಿಂದ ಶಹಾಪುರ–ರಾಯಚೂರಿಗೆ ತೆರಳುವ ರಸ್ತೆ ಸಂಪರ್ಕ ಕಡಿತಗೊಂಡಿದೆ. ನದಿ ಪಾತ್ರದ ಮತ್ತಷ್ಟು ಜಮೀನುಗಳಿಗೆ ನೀರು ನುಗ್ಗಿದೆ.

ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಹೂವಿನಹೆಡಗಿ, ಅಂಜಳ, ಜೋಳದಹೆಡಗಿ, ಗೂಗಲ್, ಕೊಪ್ಪರ, ಕುರ್ಕಿಹಳ್ಳಿ, ಕರ್ಕಿಹಳ್ಳಿ, ಕೊಣಚಪ್ಪಳ್ಳಿ, ಮೇದರಗೋಳ ಗ್ರಾಮಗಳ ಕೃಷಿ ಜಮೀನುಗಳಿಗೆ ನೀರು ನುಗ್ಗಿದ್ದರಿಂದ ಸಾವಿರಾರು ಎಕರೆ ಭತ್ತದ ಬೆಳೆಹಾನಿಯಾಗಿದೆ.

ಶಿವಮೊಗ್ಗ ಅಲ್ಲಲ್ಲಿ ಮಳೆ

ಶಿವಮೊಗ್ಗ: ಜಿಲ್ಲೆಯಲ್ಲಿ ನಾಲ್ಕು ದಿನಗಳಿಂದ ಬಿಡುವು ನೀಡಿದ್ದ ಮಳೆ, ಗುರುವಾರ ಕೆಲವೆಡೆ ಬಂದಿದೆ.

ಹೊಸನಗರದಲ್ಲಿ 83.20 ಮಿ.ಮೀ, ತೀರ್ಥಹಳ್ಳಿಯಲ್ಲಿ 6.80 ಮಿ.ಮೀ, ಸೊರಬದಲ್ಲಿ 4.30 ಮಿ.ಮೀ, ಶಿವಮೊಗ್ಗದಲ್ಲಿ 2.40 ಮಿ.ಮೀ ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	113.42	14,621	13,337
ಹಾರಂಗಿ	2,859	2,855.56	4,431	4,904
ಕಬಿನಿ	2284	2,279.94	13,290	5,000
ಹೇಮಾವತಿ	2,922	2,919.35	8,958	7,400
ಲಿಂಗನಮಕ್ಕಿ	1,819	1,806.20	18,552	-
ಸೂಪಾ (ಮೀ)	564	551.33	11,721.6	3,331
ಮಾಣಿ	594.36	581.38	1,799	-
ತುಂಗಭದ್ರಾ	1,633	1,632.75	93,284	45,253
ಮಲಪ್ರಭಾ	2079.50	2,074.10	34,909	5,094
ಘಟಪ್ರಭಾ	2175	2,172.86	17,260	6,109
ಭದ್ರಾ	186	181.4	8,055	2,812
ಆಲಮಟ್ಟಿ (ಮೀ)	519.60	517.00	4,23,240	3,92,141
ನಾರಾಯಣಪುರ (ಮೀ)	492.25	489.61	4,10,000	4,06,600

* ನೆಲಮಟ್ಟದಿಂದ

ಶುಕ್ರವಾರ, ಜುಲೈ 30, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 211 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

‘ಡಾಲಿ ಧನಂಜಯ್’ ಆದ ಧನಂಜಯ್, ‘ಪುಷ್ಪ’ ಸಿನಿಮಾ ಮೂಲಕ ಪ್ಯಾನ್ ಇಂಡಿಯಾ ವೇದಿಕೆಗೆ ಕಾಲಿರಿಸಿದ್ದಾರೆ. ಅವರ ಸರಣಿ ಚಿತ್ರಗಳು ಬಿಡುಗಡೆಯಾಗುವ ಹೊತ್ತಿನಲ್ಲಿ ಒಂದಿಷ್ಟು ಮಾತು.

ಆಳ-ಅಗಲ

ಡಿಜಿಟಲ್ ಕರೆನ್ಸಿ: ಹಣದ ಚಹರೆ ಬದಲಿಗೆ ಚಿಂತನೆ

ಚಿನ್ನಕ್ಕೆ ಬೇಡಿಕೆ ಶೇ 19ರಷ್ಟು ಹೆಚ್ಚಳ 8

ಜಾರ್ಖಂಡ್: ನ್ಯಾಯಾಧೀಶನ ಹತ್ಯೆ 9

ಸೆನ್ಸೆಕ್ಸ್	ನಿಫ್ಟಿ	₹/$
52,653 ▲	15,778 ▲	74.29 ▲

ಒಳ ಪುಟಗಳು

ಕೇಂದ್ರದಿಂದ ಅನ್ಯಾಯ: ರಾಷ್ಟ್ರಪತಿ, ಪ್ರಧಾನಿಗೆ ಮೊರೆ 4

ಟ್ವಿಟರ್‌ನಲ್ಲಿ ಮೋದಿಗೆ ಈಗ 7 ಕೋಟಿ ಫಾಲೋವರ್‌ಗಳು! 9

14 ಹುಲಿ ಮೀಸಲು ಅರಣ್ಯ ಪ್ರದೇಶಗಳಿಗೆ ಸಿಎ/ಟಿಎಸ್ ಮಾನ್ಯತೆ 9

ಇಂದಿನ ಪಾಡ್‌ಕಾಸ್ಟ್ ವಿಶೇಷ

ಕಥೆ ಕೇಳು ಮಗುವೆ ಸಿನಿಮಾ ಮ್ಯಾಟಿನಿ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಂಪುಟದಿಂದ ‘ಕಳಂಕಿತ’ರ ದೂರ ಇಡಿ: ಬಿಜೆಪಿಗೆ ಆರ್‌ಎಸ್‌ಎಸ್ ಸಲಹೆ

ತಡೆಯಾಜ್ಞೆಯೇ ತೊಡಕು?

ಪ್ರಜಾವಾಣಿ ವಾರ್ತೆ

ನವದೆಹಲಿ/ಬೆಂಗಳೂರು: ಬಿಜೆಪಿಯಲ್ಲಿ ವಿವಾದಕ್ಕೆ ಒಳಗಾಗಿರುವ ಶಾಸಕರು, ಅದರಲ್ಲೂ ಮಾಧ್ಯಮಗಳು ತಮ್ಮ ವಿರುದ್ಧ ಮಾನಹಾನಿಕಾರಕ ಸುದ್ದಿಗಳನ್ನು ಪ್ರಕಟಿಸಬಾರದು ಎಂದು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುವುದು ಸೂಕ್ತವಲ್ಲ ಎಂದು ಆರ್‌ಎಸ್‌ಎಸ್ ಮುಖಂಡರು ಬಿಜೆಪಿ ವರಿಷ್ಠರಿಗೆ ಸಲಹೆ ನೀಡಿದ್ದಾರೆ.

‘ಬೊಮ್ಮಾಯಿ ಸಂಪುಟದಲ್ಲಿ ಶುದ್ಧ ಚಾರಿತ್ರ್ಯ ಹೊಂದಿರುವವರಿಗೆ ಆದ್ಯತೆ ನೀಡಬೇಕು. ವಿವಾದಕ್ಕೆ ಒಳಗಾಗಿರುವ ಶಾಸಕರು ಬಿಜೆಪಿ ಮೂಲದವರು ಅಥವಾ ಹೊರಗಿನಿಂದ ಬಂದವರಾಗಿರಬಹುದು, ಅವರನ್ನು ತೆಗೆದುಕೊಳ್ಳುವುದು ಸೂಕ್ತವಲ್ಲ. ಈಗಾಗಲೇ ಇಂತಹವರಿಂದ ಬಿಜೆಪಿ ಸರ್ಕಾರಕ್ಕೆ ಕೆಟ್ಟ ಹೆಸರು ಬಂದಿದೆ. ಈ ಬಗ್ಗೆ ಎಚ್ಚರ ವಹಿಸಿ ಎಂದು ಅವರು ಪಕ್ಷದ ವರಿಷ್ಠರಿಗೆ ತಿಳಿಸಿದ್ದಾರೆ’ ಎಂದು ಬಿಜೆಪಿ ನಾಯಕರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

‘ಮಾನಹಾನಿಕರವಾದ ಆಪಾದನೆ ಅಥವಾ ಸಂಶಯಕ್ಕೆ ಗುರಿಯಾಗಿರುವವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಂಡ ಬಳಿಕ ರಮೇಶ ಜಾರಕಿಹೊಳಿ ಎದುರಿಸಿದ ಪ್ರಕರಣ ಮರುಕಳಿಸಿದರೆ ಸರ್ಕಾರ ಮತ್ತೆ ಮುಜುಗರ ಎದುರಿಸಬೇಕಾಗುತ್ತದೆ. ಸೇರಿಸಿಕೊಳ್ಳುವವರ ಚಾರಿತ್ರ್ಯವನ್ನು ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು. ಕಳಂಕಿತರನ್ನು ಸಂಪುಟಕ್ಕೆ ತೆಗೆದುಕೊಳ್ಳುವುದರಿಂದ ತಪ್ಪು ಸಂದೇಶ ರವಾನಿಸಿದಂತಾಗುತ್ತದೆ’ ಎಂದು ಅವರು ವಿವರಿಸಿದ್ದಾರೆ.

4ನೇ ಪುಟ ನೋಡಿ

‘ಸಂಪುಟ ರಚನೆಗೆ ಒತ್ತಡ ಸಹಜ’

ಬೆಂಗಳೂರು: ‘ಸಚಿವ ಸಂಪುಟ ರಚನೆಗೆ ಒತ್ತಡಗಳು ಸಹಜ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ವರಿಷ್ಠರ ಭೇಟಿಗಾಗಿ ಶುಕ್ರವಾರ ದೆಹಲಿಗೆ ಹೋಗುತ್ತೇನೆ. ಆದರೆ, ಸಂಪುಟ ಸಂಪುಟ ರಚನೆ ವಿಚಾರ ಮೊದಲ ಭೇಟಿಯಲ್ಲಿ ಚರ್ಚೆ ಮಾಡುವುದಿಲ್ಲ. ಮುಂದಿನ ಭೇಟಿಯಲ್ಲಿ ಚರ್ಚೆ ಮಾಡುತ್ತೇನೆ’ ಎಂದು ಸುದ್ದಿಗಾರರಿಗೆ ಹೇಳಿದರು.

‘ಬುಧವಾರ ಕರೆ ಮಾಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಒಳ್ಳೆಯ ಆಡಳಿತ ಕೊಡಿ ಎಂದು ಶುಭ ಕೋರಿದ್ದಲ್ಲದೇ, ನಿಮ್ಮ ಮೇಲೆ ವಿಶ್ವಾಸವಿದೆ ಎಂದೂ ಹೇಳಿದ್ದಾರೆ’ ಎಂದರು.

‘ದೆಹಲಿಗೆ ಹೋದ ವೇಳೆ ಲಭ್ಯ ಸಮಯವನ್ನು ಬಳಕೆ ಮಾಡಿ ರಾಜ್ಯದ ಸಂಸದರು, ಕರ್ನಾಟಕದ ಸಚಿವರನ್ನು ಭೇಟಿ ಮಾಡಿ ಚರ್ಚೆ ಮಾಡುತ್ತೇನೆ. ಬಾಕಿ ಇರುವ ರಾಜ್ಯದ ಯೋಜನೆಗಳ ಬಗ್ಗೆಯೂ ಚರ್ಚೆ ಮಾಡುತ್ತೇನೆ’ ಎಂದರು.

ಪ್ರಧಾನಿ ಭೇಟಿಗೆ ಸಮಯ ನಿಗದಿ: ಮುಖ್ಯಮಂತ್ರಿಯಾದ ಬಳಿಕ ಮೊದಲ ಬಾರಿಗೆ ದೆಹಲಿಗೆ ತೆರಳುತ್ತಿರುವ ಬೊಮ್ಮಾಯಿ, ಪ್ರಧಾನಿ ಮೋದಿ ಅವರನ್ನು ಶುಕ್ರವಾರ ಬೆಳಿಗ್ಗೆ ಭೇಟಿಯಾಗಲಿದ್ದಾರೆ. ಇದಾದ ಬಳಿಕ ಗೃಹ ಸಚಿವ ಅಮಿತ್ ಶಾ, ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಸಚಿವರು, ಸಂಸದರನ್ನು ಭೇಟಿಯಾಗಲಿದ್ದಾರೆ. ಶನಿವಾರ ಸಂಜೆ ಅವರು ಬೆಂಗಳೂರಿಗೆ ವಾಪಸ್ ಆಗುವ ಸಾಧ್ಯತೆ ಇದೆ.

ತಡೆಯಾಜ್ಞೆ ತಂದಿರುವವರು

ಡಾ.ಕೆ. ಸುಧಾಕರ್, ಬೈರತಿ ಬಸವರಾಜ, ಬಿ.ಸಿ.ಪಾಟೀಲ, ಶಿವರಾಂ ಹೆಬ್ಬಾರ್, ಎಸ್.ಟಿ. ಸೋಮಶೇಖರ್, ಕೆ.ಸಿ. ನಾರಾಯಣಗೌಡ

ಆಕಾಂಕ್ಷಿಗಳ ಒತ್ತಡ ಆರಂಭ

ಬೆಂಗಳೂರು: ಬಸವರಾಜ ಬೊಮ್ಮಾಯಿ ಅವರ ಸಚಿವ ಸಂಪುಟ ಸೇರಲು ಹಲವು ಶಾಸಕರು ಪ್ರಭಾವ ಬೀರುವ, ಒತ್ತಡ ಹೇರುವ ಕಾರ್ಯ ಆರಂಭಿಸಿದ್ದಾರೆ. ತಮ್ಮ ಆಕಾಂಕ್ಷೆಯನ್ನು ಮಾಧ್ಯಮಗಳ ಮುಂದೆ ಬಹಿರಂಗವಾಗಿ ತೋಡಿಕೊಳ್ಳಲಾರಂಭಿಸಿದ್ದಾರೆ.

ಹಿರಿಯ ಶಾಸಕರಾದ ಕೆ.ಎಸ್. ಈಶ್ವರಪ್ಪ, ಮುರುಗೇಶ ನಿರಾಣಿ, ಉಮೇಶ ಕತ್ತಿ, ಸೋಮಶೇಖರ ರೆಡ್ಡಿ, ಎಂ.ಪಿ.ರೇಣುಕಾಚಾರ್ಯ ಮುಂತಾದವರು ಗುರುವಾರ ತಮ್ಮದೇ ಆದ ರೀತಿಯಲ್ಲಿ ಹೇಳಿಕೆ ನೀಡಿದ್ದಾರೆ.

4ನೇ ಪುಟ ನೋಡಿ

‘ಭೂಕುಸಿತ ಅಧ್ಯಯನಕ್ಕೆ ತಜ್ಞರ ತಂಡ’

ಪ್ರಜಾವಾಣಿ ವಾರ್ತೆ

ಯಲ್ಲಾಪುರ/ಶಿರಸಿ (ಉತ್ತರ ಕನ್ನಡ): ‘ಪಶ್ಚಿಮಘಟ್ಟದಲ್ಲಿ ಮಳೆಯಿಂದ ಭೂಕುಸಿತವಾಗುತ್ತಿರುವ ಕುರಿತು ಅಧ್ಯಯನಕ್ಕಾಗಿ ಭೂಗರ್ಭ ಶಾಸ್ತ್ರಜ್ಞರನ್ನು ಒಳಗೊಂಡ ತಜ್ಞರ ತಂಡ ನೇಮಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮಳೆಯಿಂದ ಹಾನಿಗೀಡಾದ ಪ್ರದೇಶಗಳನ್ನು ಪರಿಶೀಲಿಸಿದ ಬಳಿಕ ಮಾತನಾಡಿದ ಅವರು, ‘ಪಶ್ಚಿಮ ಘಟ್ಟ ಸೂಕ್ಷ್ಮ ಪ್ರದೇಶ. ಇಲ್ಲಿ ಆಗಾಗ್ಗೆ ಭೂಕುಸಿತವಾಗುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ’ ಎಂದರು.

‘ಉತ್ತರ ಕನ್ನಡದಲ್ಲಿ ಉಂಟಾದ ನೆರೆಹಾನಿಗೆ ಎನ್.ಡಿ.ಆರ್.ಎಫ್. ಮಾರ್ಗಸೂಚಿ ಪ್ರಕಾರ ಪರಿಹಾರ ನೀಡಿದರೆ ಸಾಲದು. ಪರಿಹಾರ ನೀಡಲು ವಿಶೇಷ ಅನುದಾನ ಒದಗಿಸಲಿದ್ದು, ಈ ಬಗ್ಗೆ ಅಧಿಕಾರಿಗಳ ಸಭೆಯಲ್ಲಿ ನಿರ್ಣಯಿಸಲಾಗುವುದು' ಎಂದರು.

4ನೇ ಪುಟ ನೋಡಿ

ಉತ್ತರ ಕನ್ನಡದ ರಸ್ತೆಗಳ ದುರಸ್ತಿಗೆ ₹210 ಕೋಟಿ: ಬೊಮ್ಮಾಯಿ

ಕಾರವಾರ: ‘ಪ್ರವಾಹ ಮತ್ತು ಭೂಕುಸಿತದಿಂದ ಹಾನಿಗೀಡಾಗಿರುವ ಉತ್ತರ ಕನ್ನಡದ ರಸ್ತೆಗಳ ತಕ್ಷಣದ ದುರಸ್ತಿಗೆ ಒಟ್ಟು ₹210 ಕೋಟಿ ಬಿಡುಗಡೆ ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು. ಜಿಲ್ಲೆಯ ಯಲ್ಲಾಪುರ ಮತ್ತು ಅಂಕೋಲಾ ತಾಲ್ಲೂಕುಗಳ ವಿವಿಧೆಡೆ ಮಳೆ ಮತ್ತು ಭೂಕುಸಿತದಿಂದ ಹಾನಿಗೀಡಾದ ಪ್ರದೇಶಗಳಿಗೆ ಗುರುವಾರ ಭೇಟಿ ನೀಡಿ ಪರಿಶೀಲಿಸಿದ ಅವರು, ಅಂಕೋಲಾದಲ್ಲಿ ಅಧಿಕಾರಿಗಳ ಸಭೆ ನಡೆಸಿದರು.

4ನೇ ಪುಟ ನೋಡಿ

ಮನೆ ಕೊಡದ ಸರ್ಕಾರ!

ಎರಡು ಮಳೆಗಾಲ ಮುಗಿದರೂ ನೆರೆ ಸಂತ್ರಸ್ತರ ಕಷ್ಟ ತಪ್ಪಿಲ್ಲ

ಪ್ರಜಾವಾಣಿ ವಾರ್ತೆ

ಮೈಸೂರು: ‘ಎರಡು ಮಳೆಗಾಲವನ್ನು ಮಳೆಯಲ್ಲೇ ಕಳೆದಿದ್ದೇವೆ. ಆದರೂ ಮನೆ ಕೊಟ್ಟಿಲ್ಲ. ಅದಕ್ಕಾಗಿ ಪ್ರತಿಭಟನೆ ಮಾಡಿ ಜೈಲಿನಲ್ಲಿರೋದೇ ಒಳ್ಳೆಯದು ಎನಿಸುತ್ತಿದೆ’

–2019ರ ಪ್ರವಾಹದಲ್ಲಿ ಮನೆಗಳನ್ನು ಕಳೆದುಕೊಂಡಿದ್ದ ಸರಗೂರು ತಾಲ್ಲೂಕಿನ ಬಿದರಹಳ್ಳಿ ಸರ್ಕಲ್‌ನ 42 ಸಂತ್ರಸ್ತರ ಅಳಲು ಇದು. ಅವರು ಕಬಿನಿ ಜಲಾಶಯ ನಿರ್ಮಿಸುವ ಸಲುವಾಗಿ ಬಂದು ನೆಲೆಗೊಂಡವರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಮ್ಮ ಸಂಕಷ್ಟಗಳನ್ನು ತೆರೆದಿಟ್ಟ ಸಂತ್ರಸ್ತೆ ಚೆಲುವಿ, ‘ಸಂತ್ರಸ್ತರಿಗೆ ಹೊಸ ಮನೆಗಳನ್ನು ನಿರ್ಮಿಸಿಕೊಟ್ಟಿದ್ದು, ಎಲ್ಲರೂ ನೆಮ್ಮದಿಯಾಗಿದ್ದಾರೆ ಎಂದು ಸರ್ಕಾರ ಜುಲೈ 26ರಂದು ಜಾಹೀರಾತು ಪ್ರಕಟಿಸಿದೆ. ಆದರೆ, ನಾವು ಮಾತ್ರ ಇಂದೋ, ನಾಳೆಯೋ ಕುಸಿಯಲಿರುವ ಮನೆ ಯಲ್ಲೇ ಜೀವಭಯದಲ್ಲಿ ವಾಸಿಸುತ್ತಿದ್ದೇವೆ’ ಎಂದರು.

‘ಹೆಗ್ಗಣ, ಹಾವು, ಚೇಳು, ಕ್ರಿಮಿಕೀಟಗಳ ನಡುವೆ ಬದುಕು ನಡೆದಿದೆ. ಮಳೆಗಾಲದಲ್ಲಿ ಮನೆ ಸುತ್ತ ನೀರು ಆವೃತವಾಗಿ ಆರೋಗ್ಯ ಕೆಡುತ್ತಿದೆ. ಹೊಸ ಮನೆ ನೀಡುವ ಭರವಸೆ ನೀಡಿದ್ದ ಸರ್ಕಾರ, 2 ವರ್ಷವಾದರೂ ತಳಪಾಯವನ್ನೂ ಹಾಕಿಲ್ಲ. ಆಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವಿ.ಸೋಮಣ್ಣ, ಮನೆಗಳ ದುರಸ್ತಿಗೆಂದು ₹50 ಸಾವಿರ ಚೆಕ್ ನೀಡಿ, ಮಾಂಸ, ಮದ್ಯ ಸೇವಿಸಿ ಹಣ ಕಳೆದು ಬಿಡುತ್ತೀರಿ ಎಂದು ವಾಪಸ್ ಪಡೆದರು. ಹೊಸಮನೆ ನಿರ್ಮಿಸಿ ಕೊಡಲೂ ಇಲ್ಲ’ ಎಂದು ಕಣ್ಣೀರು ಹಾಕಿದರು.

‘42 ಕುಟುಂಬಗಳಿಗೆ ಹೊಸ ಮನೆ ನಿರ್ಮಿಸಿಕೊಡುವ ಸಲುವಾಗಿ ಸರ್ಕಾರ ಕಾವೇರಿ ನೀರಾವರಿ ನಿಗಮದ ಜಮೀನನ್ನು ಗುರುತಿಸಿದ್ದರೂ ಕಂದಾಯ ಇಲಾಖೆಗೆ ಹಸ್ತಾಂತರವಾಗಿಲ್ಲ. ತಿಂಗಳೊಳಗೆ ಮನೆ ನಿರ್ಮಿಸಿಕೊಡದಿದ್ದರೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ ನಡೆಸಲಾಗುವುದು’ ಎಂದು ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಜಿಲ್ಲಾ ಕಾರ್ಯದರ್ಶಿ ಬಿ.ರವಿ ತಿಳಿಸಿದರು.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ವಜ್ರಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಳಚೆಯಲ್ಲಿ ಭೂಕುಸಿತದಿಂದ ಮನೆಗಳಿಗೆ ಹಾನಿಗೀಡಾದವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಪರಿಹಾರದ ಚೆಕ್ ವಿತರಿಸಿದರು. ಶಾಸಕ ಶಿವರಾಮ ಹೆಬ್ಬಾರ ಇದ್ದಾರೆ

‘ಶಾಲೆಗೂ ಹೋಗಲಾಗ್ತಿಲ್ಲ; ನಮ್ಮೂರು ಸರಿ ಮಾಡ್ಸಿ ಪ್ಲೀಸ್..’

ಕಾರವಾರ: ‘ಸರ್, ನಮ್ಮ ಮನೆ ಕುಸಿದಿದೆ. ಶಾಲೆಗೆ ಹೋಗಲಾಗ್ತಿಲ್ಲ. ನನ್ನ ವಿದ್ಯಾಭ್ಯಾಸದ ಗತಿಯೇನು..? ಏನಾದ್ರೂ ಮಾಡಿ ನಮ್ಮೂರು ಸರಿ ಮಾಡ್ಸಿ ಪ್ಲೀಸ್...’

ಯಲ್ಲಾಪುರ ತಾಲ್ಲೂಕಿನ ವಜ್ರಳ್ಳಿ ಗ್ರಾಮ ಪಂಚಾಯಿತಿಯ ಕಳಚೆಯಲ್ಲಿ ಆಗಿರುವ ಭಾರಿ ಭೂಕುಸಿತವನ್ನು ಪರಿಶೀಲಿಸಲು ಗುರುವಾರ ಆಗಮಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಎದುರು ಹತ್ತನೇ ತರಗತಿ ವಿದ್ಯಾರ್ಥಿನಿ ವಾಣಿ ಗಜಾನನ ಭಟ್ ಕಣ್ಣೀರಿಡುತ್ತ ಅಳಲು ತೋಡಿಕೊಂಡಳು. ಅವಳನ್ನು ಸಮಾಧಾನಿಸಲು ಮುಖ್ಯಮಂತ್ರಿ ಪ್ರಯತ್ನಿಸಿದರು.

ಉತ್ತರ ಕನ್ನಡದ ವಿವಿಧ ಪ್ರವಾಹಪೀಡಿತ ಪ್ರದೇಶಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭೇಟಿ ನೀಡಿದರು. ಅವರು ಹೋದಲ್ಲೆಲ್ಲ ಭೇಟಿಯಾದವರು ತಮ್ಮ ನೋವು, ಸಂಕಟಗಳನ್ನು ಹೇಳುತ್ತ ಕಣ್ಣೀರು ಸುರಿಸಿದರು.

ಯಲ್ಲಾಪುರ ತಾಲ್ಲೂಕಿನ ತಳಕೇಬೈಲ್‌ನಲ್ಲಿ ರಾಜ್ಯ ಹೆದ್ದಾರಿ 6ರಲ್ಲಿ ಗುಡ್ಡ ಕುಸಿದಿದ್ದ ಜಾಗವನ್ನು ಪರಿಶೀಲಿಸಿದರು. ಇದೇ ವೇಳೆ, ಅಲ್ಲಿ ಸೇರಿದ್ದ 500-600 ಗ್ರಾಮಸ್ಥರು ಭೂಕುಸಿತದಿಂದ ಆಗಿರುವ ಹಾನಿಯನ್ನು ವಿವರಿಸಿದರು.

ಗ್ರಾಮಸ್ಥರ ನೋವಿನ ನುಡಿ ಆಲಿಸಿದ ಅವರು, ‘ನಿಮ್ಮೆಲ್ಲ ಕಷ್ಟಗಳೂ ನನಗೆ ಅರ್ಥವಾಗುತ್ತವೆ. ಅಧ್ಯಯನ ನಡೆಸಿ ಸೂಕ್ತ ಪರಿಹಾರದ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿದೆ' ಎಂದು ಭರವಸೆ ನೀಡಿದರು.

ನೀರು ಜಿನುಗುತ್ತಿರುವ ಗೋಡೆಗಳು ನಮ್ಮ ಮೇಲೆ ಬಿದ್ದು ನಾವು ಸಾಯಬಹುದು. ನಂತರವಾದರೂ ಸರ್ಕಾರ ಕಣ್ತೆರೆಯಬಹುದು

ಪಾಪಮ್ಮ, ಸಂತ್ರಸ್ತೆ

ಕಾವೇರಿ ನೀರಾವರಿ ನಿಗಮಕ್ಕೆ ಸೇರಿದ 2.16 ಎಕರೆ ಗ್ರಾಮೀಣಾಭಿವೃದ್ಧಿ ಇಲಾಖೆಗೆ ವರ್ಗಾವಣೆಯಾಗಬೇಕಿದೆ. ನೀರಾವರಿ ಇಲಾಖೆಯ ಉನ್ನತಾಧಿಕಾರ ಸಮಿತಿ ನಿರ್ಧಾರ ಕೈಗೊಳ್ಳಬೇಕು

ಚೆಲುವರಾಜು, ತಹಶೀಲ್ದಾರ್

ವೈಕುಂಠ ಸಮಾರಾಧನೆ

ಶ್ರೀಮತಿ ಎಸ್. ನಾಗರತ್ನ

09.10.1956 - 20.07.2021

ಶ್ರೀ ಕೆ. ಹೇಮಾ ರೆಡ್ಡಿರವರ ಧರ್ಮಪತ್ನಿ, ದೊಮ್ಮಲೂರು, ಬೆಂಗಳೂರು

ಇವರು ದಿನಾಂಕ: 20.07.2021, ಮಂಗಳವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿನಾಂಕ: 30.07.2021, ಶುಕ್ರವಾರ ಬೆಳಿಗ್ಗೆ 11.00 ರಿಂದ 12.00 ರವರೆಗೆ ನಮ್ಮ ಸ್ವಗೃಹ ದೊಮ್ಮಲೂರಿನಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ನೀವು ಎಂದೆಂದಿಗೂ ನಮ್ಮ ಮನಸುಗಳಲ್ಲಿ ಅಜರಾಮರರಾಗಿರುವಿರಿ...

ದುಃಖತಪ್ತರು: ಕೆ. ಹೇಮಾ ರೆಡ್ಡಿ

ಹೆಚ್. ಸುನೀಲ್‌ಕುಮಾರ್ ಮತ್ತು ದೀಕ್ಷಾ ಎಂ., ರಿಯಾ ಎಸ್. ರೆಡ್ಡಿ, ಮಾ|| ದಕ್ಷ್ ಎಸ್.
ಹೆಚ್. ಶೋಭಾ ಮತ್ತು ಡಾ|| ವಿ. ರಾಜೀವ್, ಮಾ|| ಆರ್. ಪ್ರಣವ್ ಸ್ವರೂಪ್, ಹರಿತ್ರ ಆರ್.
ಹೆಚ್. ಭರತ್
ಹಾಗೂ ಅಪಾರ ಬಂಧು-ಮಿತ್ರರು

ICICI Bank | EXPRESS Bank Guarantee

ಸರಳತೆ ಮತ್ತು ಅನುಕೂಲತೆಯ ಅನುಭವ ಪಡೆಯಿರಿ

ICICI Bank ಎಕ್ಸ್‌ಪ್ರೆಸ್ ಬ್ಯಾಂಕ್ ಗ್ಯಾರಂಟಿಯೊಂದಿಗೆ

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿರಿ ಅಥವಾ ನಿಮ್ಮ ಅತಿ ಹತ್ತಿರದ ಶಾಖೆಯಲ್ಲಿ

ಸರಳೀಕೃತ ಕಾಗದ ಪತ್ರಗಳು

ಆಕರ್ಷಕ ಬೆಲೆಯನ್ನು ಆನಂದಿಸಿರಿ

ಇಲ್ಲಿಗೆ ಮಿಸ್ಡ್ ಕಾಲ್ ನೀಡಿರಿ 9625 470 470

BG ಯನ್ನು 5676766 ಇಲ್ಲಿಗೆ SMS ಮಾಡಿರಿ

ಭೇಟಿ ನೀಡಿರಿ icicibank.com/bg

*ಆಯ್ದ ಶಾಖೆಗಳಲ್ಲಿ ಟ್ರೇಡ್‌ಸರ್ವಿಸಸ್‌ಗಾಗಿ ವ್ಯಾಪಾರದ ಅವಧಿಯೊಳಗೆ ಎಲ್ಲಾ ಸಂಬಂಧಿತ ದಸ್ತಾವೇಜುಗಳು ಸ್ವೀಕರಿಸಲ್ಪಡುವುದಕ್ಕೆ ಒಳಪಟ್ಟು. icicibank.com ನ ನಿಯಮ ಮತ್ತು ನಿಬಂಧನೆಗಳು ಅನ್ವಯ.

ಕೇಂದ್ರೀಯ ಯೋಗ ಮತ್ತು ನಿಸರ್ಗ ಚಿಕಿತ್ಸೆ ಸಂಶೋಧನಾ ಪರಿಷತ್

(ಆಯುಷ್ ಸಚಿವಾಲಯ, ಭಾರತ ಸರ್ಕಾರ)
61–65, ಇನ್‌ಸ್ಟಿಟ್ಯೂಷನಲ್ ಏರಿಯಾ, ಜನಕಪುರಿ, ನವದೆಹಲಿ–110058
ಫೋನ್: 011–28520429, 30, 31, 32 ಫ್ಯಾಕ್ಸ್: 28520435
ಇಮೇಲ್: ccryn.goi@gmail.com

ವಾಹನಗಳ ಬಾಡಿಗೆಗಾಗಿ ಟೆಂಡರ್ ಆಹ್ವಾನ ಪ್ರಕಟಣೆ

ಪಿಜಿಐವೈಎನ್‌ಇಆರ್, ನಾಗಮಂಗಲ, ಕರ್ನಾಟಕ ಇವರಿಗೆ ಮಾಸಿಕ ಆಧಾರದಲ್ಲಿ ಏಸಿ/ನಾನ್–ಏಸಿ ವಾಣಿಜ್ಯ ಲಘು ವಾಹನಗಳ ಪೂರೈಕೆಗಾಗಿ ನೊಂದಾಯಿತ ಕಂಪನಿ/ ಸಂಸ್ಥೆಗಳಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹತಾ ಮಾನದಂಡ, ಷರತ್ತು ಮತ್ತು ನಿಬಂಧನೆಗಳು ಹಾಗೂ ಟೆಂಡರ್ ನಮೂನೆಗಳ ಕುರಿತಾದ ವಿವರಗಳನ್ನು ಟೆಂಡರ್ ದಸ್ತಾವೇಜುಗಳಲ್ಲಿ ಕಾಣಬಹುದು ಮತ್ತು ಪರಿಷತ್‌ನ www.ccryn.gov.in ವೆಬ್‌ಸೈಟ್‌ನಿಂದ ಕೂಡ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಇದಕ್ಕೆ ಸಂಬಂಧಿಸಿದಂತೆ ಯಾವುದೇ ಮಾರ್ಪಾಡು/ತಿದ್ದುಪಡಿ ಉಂಟಾದಲ್ಲಿ, ಅಂತಹುದನ್ನು ಪರಿಷತ್‌ನ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

davp 17205/11/0005/2122 ನಿರ್ದೇಶಕರು

ಭಾರತ ಸರ್ಕಾರ
ಸಾಲ ವಸೂಲಾತಿ ನ್ಯಾಯಾಧಿಕರಣ–2, ಬೆಂಗಳೂರು
ಜೀವನ್ ಮಂಗಲ್ ಕಟ್ಟಡ, ಎರಡನೇ ಮಹಡಿ, ಸಂಖ್ಯೆ 4, ರೆಸಿಡೆನ್ಸಿ ರಸ್ತೆ, ಬೆಂಗಳೂರು–25

ಫಾರಂ ಸಂಖ್ಯೆ 14(ರೆಗ್ಯುಲೇಷನ್ 33(2) ನೋಡಿ)
ಟಿಆರ್‌ಸಿ ಸಂಖ್ಯೆ : 303/2019

1. **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ:** ಸ್ಟ್ರೆಸ್ಡ್ ಅಸೆಟ್ಸ್ ಮ್ಯಾನೇಜ್‌ಮೆಂಟ್ ಶಾಖೆ, 2ನೇ ಮಹಡಿ, ಆಫೀಸ್ ಕಾಂಪ್ಲೆಕ್ಸ್ ಕಟ್ಟಡ, ಸ್ಥಳೀಯ ಮುಖ್ಯ ಕಚೇರಿ ಆವರಣ, ಸಂಖ್ಯೆ 65, ಸೆಂಟ್ ಮಾರ್ಕ್ಸ್ ರಸ್ತೆ, ಬೆಂಗಳೂರು–560 001
2. **ಬ್ಯಾಂಕ್ ಆಫ್ ಬರೋಡಾ** : ಪಿ.ಒ.ಸಂಖ್ಯೆ 11745, ಸಮತಾ ಬಿಲ್ಡಿಂಗ್, ಜನರಲ್ ಭೋಸ್ಲೆ ಮಾರ್ಗ್, ನಾರಿಮನ್ ಪಾಯಿಂಟ್, ಮುಂಬೈ–400 021
3. **ಬ್ಯಾಂಕ್ ಆಫ್ ಇಂಡಿಯಾ(ಈಗ ಜೆಎಮ್‌ಎಫ್ ಎಆರ್‌ಸಿ)** : ಕಾರ್ಪೊರೇಟ್ ಶಾಖೆ, ನೆಲ ಅಂತಸ್ತು, ಓರಿಯಂಟಲ್ ಬಿಲ್ಡಿಂಗ್, 364, ಡಿ.ಎನ್. ರಸ್ತೆ, ಫೋರ್ಟ್, ಮುಂಬೈ–400 001
4. **ಕಾರ್ಪೊರೇಷನ್ ಬ್ಯಾಂಕ್(ಈಗ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ)** : ಇಂಡಸ್ಟ್ರಿಯಲ್ ಫೈನಾನ್ಸ್ ಶಾಖೆ, ರಲ್ಲಾರಾಂ ಮೆಮೋರಿಯಲ್ ಬಿಲ್ಡಿಂಗ್, ಮೊದಲ ಮಹಡಿ, ಸಿಎಸ್‌ಐ ಆವರಣ, ಬೆಂಗಳೂರು–560027
5. **ಐಡಿಬಿಐ ಬ್ಯಾಂಕ್ ಲಿಮಿಟೆಡ್** : ಕಾರ್ಪೊರೇಟ್ ಬಿಲ್ಡಿಂಗ್ ಗ್ರೂಪ್–ಎಫ್‌ಎಂಜಿ, 9ನೇ ಅಂತಸ್ತು, ಐಡಿಬಿಐ ಟವರ್, ಡಬ್ಲ್ಯುಟಿಸಿ ಕಾಂಪ್ಲೆಕ್ಸ್, ಕಫ್ ಪರೇಡ್, ಕೊಲಾಬಾ, ಮುಂಬೈ–400 005
6. **ಇಂಡಿಯನ್ ಓವರ್ಸೀಸ್ ಬ್ಯಾಂಕ್** : ಹರಿಕೃಪ 26 ಎ, ಎಸ್‌ವಿ ರೋಡ್, ಸಂತಾಕ್ರುಜ್(ಪಶ್ಚಿಮ), ಮುಂಬೈ–400 554
7. **ಜಮ್ಮು & ಕಾಶ್ಮೀರ್ ಬ್ಯಾಂಕ್ ಲಿಮಿಟೆಡ್** : ಸೈಯದ್ ಹೌಸ್, 124, ಎಸ್.ವಿ. ಸಾವರ್ಕರ್ ಮಾರ್ಗ್, ಮಾಹಿಮ್ (ಪಶ್ಚಿಮ), ಮುಂಬೈ–400 016
8. **ಪಂಜಾಬ್ ನ್ಯಾಷನಲ್ ಬ್ಯಾಂಕ್** : ಸೆಂಟನರಿ ಬಿಲ್ಡಿಂಗ್, ಸಂಖ್ಯೆ 28, ಎಂ.ಜಿ. ರಸ್ತೆ, ಬೆಂಗಳೂರು–560 001
9. **ಯುಕೋ ಬ್ಯಾಂಕ್** : ಮೊದಲ ಮಹಡಿ, 13/22, ಕೆಂಪೇಗೌಡ ರಸ್ತೆ, ಬೆಂಗಳೂರು–560 009
10. **ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ(ಈಗ ಪಂಜಾಬ್ ನ್ಯಾಷನಲ್ ಬ್ಯಾಂಕ್)** : ಶಾಖಾ ಕಚೇರಿ, ಸಂಖ್ಯೆ 40, ಕೆಂಪೇಗೌಡ ರಸ್ತೆ, ಬೆಂಗಳೂರು–560 009.

ಮೇಲಿನ 1 ರಿಂದ 10 ಅರ್ಜಿದಾರರನ್ನು ಶ್ರೀ ಎಂ.ಎಸ್.ರಂಗ ವಿಟ್ಟಲ್, ಸಹಾಯಕ ಜನರಲ್ ಮ್ಯಾನೇಜರ್ ಮತ್ತು ಕೇಸ್ ಲೀಡ್ ಅಧಿಕಾರಿ, ಎಸ್‌ಬಿಐ, ಸ್ಟ್ರೆಸ್ಡ್ ಅಸೆಟ್ಸ್ ಮ್ಯಾನೇಜ್‌ಮೆಂಟ್ ಶಾಖೆ, ಬೆಂಗಳೂರು ಅವರು ಪ್ರತಿನಿಧಿಸುತ್ತಿದ್ದಾರೆ. **(ಪ್ರಮಾಣೀಕೃತ ಹೋಲ್ಡರ್ ಬ್ಯಾಂಕ್)**

ವರ್ಸಸ್

ಯುನೈಟೆಡ್ ಬ್ರೂವರೀಸ್(ಹೋಲ್ಡಿಂಗ್ಸ್) ಲಿಮಿಟೆಡ್ ಹಾಗೂ ಇನ್ನೊಬ್ಬರು
(ಪ್ರಮಾಣೀಕೃತ ಸಾಲಗಾರ/ಪ್ರತಿವಾದಿ)

ಬೇಡಿಕೆ ನೋಟಿಸ್

1. **ಯುನೈಟೆಡ್ ಬ್ರೂವರೀಸ್(ಹೋಲ್ಡಿಂಗ್ಸ್) ಲಿಮಿಟೆಡ್,** ಯು.ಬಿ. ಟವರ್, ಯು.ಬಿ. ಸಿಟಿ, ವಿಟ್ಟಲ್ ಮಲ್ಯ ರಸ್ತೆ, ಬೆಂಗಳೂರು–560 001,ಕರ್ನಾಟಕ, ಭಾರತ
2. **ಕಿಂಗ್‌ಫಿಷರ್ ಏರ್‌ಲೈನ್ಸ್ ಲಿಮಿಟೆಡ್,** ಯುಬಿ ಟವರ್, ಯು.ಬಿ. ಸಿಟಿ, ವಿಟ್ಟಲ್ ಮಲ್ಯ ರಸ್ತೆ, ಬೆಂಗಳೂರು–560 001, ಕರ್ನಾಟಕ, ಭಾರತ **(ಪ್ರಮಾಣೀಕೃತ ಸಾಲಗಾರ/ಪ್ರತಿವಾದಿಗಳು)**

ಗೌರವಾನ್ವಿತ ನಿಯೋಜಿತ ಅಧಿಕಾರಿ, ಡಿಆರ್‌ಟಿ, ಬೆಂಗಳೂರು ಅವರು 30 ಜೂನ್ 2018ರಂದು ಪ್ರಕಟಗೊಳಿಸಿದ ಸಾಲವಸೂಲಿ ತಿಳಿವಳಿಕೆ ಪತ್ರ ಟಿಎ/927/2017 ಅನ್ವಯ **ರೂ.644,92,97,534.25**(ಆರುನೂರ ನಲವತ್ತನಾಲ್ಕು ಕೋಟಿ ತೊಂಬತ್ತೆರಡು ಲಕ್ಷ ತೊಂಬತ್ತೇಳು ಸಾವಿರದ ಐನೂರ ಮೂವತ್ತನಾಲ್ಕು ರೂ. ಇಪ್ಪತ್ತೈದು ಪೈಸೆ) ಬಡ್ಡಿ ಹಾಗೂ ವೆಚ್ಚದೊಂದಿಗೆ ಬಾಕಿ ಉಳಿದುಕೊಂಡಿದೆ.

ಮೇಲೆ ಕಾಣಿಸಿದ ವೆಚ್ಚದೊಂದಿಗೆ ನಿಮ್ಮಿಂದ ಹಣ ವಸೂಲಿ ಮಾಡಲು ಬಿಡುಗಡೆಗೊಳಿಸಿದ ಈ ತಿಳಿವಳಿಕೆ ನೋಟಿಸ್ ಹಾಗೂ ಇನ್ನಿತರ ಪ್ರಕ್ರಿಯೆಗಳಿಗೆ ಎಲ್ಲ ಖರ್ಚು ಹಾಗೂ ವೆಚ್ಚವನ್ನು ನೀವೇ ಭರಿಸಬೇಕಾಗುತ್ತದೆ.

ನೀವು ಮೇಲ್ಕಾಣಿಸಿದ ಮೊತ್ತವನ್ನು ಈ ತಿಳಿವಳಿಕೆ ಪತ್ರ ಪ್ರಕಟವಾದ ಹದಿನೈದು ದಿನದೊಳಗೆ ಪಾವತಿಸಬೇಕಿದ್ದು, ಒಂದು ವೇಳೆ ಪಾವತಿಸದೆ ಹೋದಲ್ಲಿ ಕಾನೂನಿನನ್ವಯ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ನ್ಯಾಯಾಧಿಕರಣದ ಮುದ್ರೆ ಹಾಗೂ ಸ್ವಹಸ್ತದಿಂದ **9 ನೇ ಆಗಸ್ಟ್ 2019ರಂದು** ನೀಡಲ್ಪಟ್ಟಿದೆ.

ಸಹಿ/–
ರಿಕವರಿ ಆಫೀಸರ್, ಡಿಆರ್‌ಟಿ–2, ಬೆಂಗಳೂರು

ಟಿಪ್ಪಣಿ: 1961ರ ಐಟಿ ಕಾಯಿದೆಯ ಎರಡನೇ ಅನುಬಂಧದ 16ನೇ ನಿಯಮದ ಜೊತೆಗೆ ರಿಕವರಿ ಆಫ್ ಡೆಟ್ಸ್ ಡ್ಯೂಟು ಬ್ಯಾಂಕ್ಸ್ ಆಂಡ್ ಫೈನಾನ್ಷಿಯಲ್ ಇನ್ಸ್ಟಿಟ್ಯೂಷನ್ಸ್ ಕಾಯಿದೆ, 1993ನ್ನು ಕೆಳಗೆ ಮರುಪ್ರಕಟಿಸಲಾಗಿದೆ:

"ನಿಯಮ 16(1)–ನಿಯಮ 2ರಡಿ ಬಾಕಿದಾರ ಅಥವಾ ಆತನ ಪ್ರತಿನಿಧಿಗೆ ತಿಳಿವಳಿಕೆ ಪತ್ರ ನೀಡಿದಾಗ, ಆತನ ಪ್ರತಿನಿಧಿಯು ಸುಸ್ತಿದಾರನ ಯಾವುದೇ ಆಸ್ತಿಯನ್ನು ಭೋಗ್ಯ, ಅಡ ಇಲ್ಲವೇ ಇತ್ಯಾದಿಯನ್ನು ಡೆಟ್ ರಿಕವರಿ ಅಧಿಕಾರಿಯ ಅನುಮತಿ ಇಲ್ಲದೆ ಇರಿಸುವಂತಿಲ್ಲ ಅಥವಾ ಯಾವುದೇ ಸಿವಿಲ್ ನ್ಯಾಯಾಲಯವು ಹಣ ವಸೂಲಿಗಾಗಿ ಇಂಥ ಆಸ್ತಿ ಕುರಿತು ಆದೇಶ ನೀಡಲು ಅವಕಾಶವಿಲ್ಲ.(2). ಈ ಅನುಬಂಧದಡಿ ಆಸ್ತಿಯನ್ನು ಜಪ್ತಿ ಆದೇಶ ನೀಡಿದಾಗ, ಯಾವುದೇ ಖಾಸಗಿ ವರ್ಗಾವಣೆ ಇಲ್ಲವೇ ಆಸ್ತಿಯ ವಶಕ್ಕೆ ಪಡೆಯುವುದು ಅಥವಾ ಬಡ್ಡಿ ನೀಡುವಿಕೆ ಹಾಗೂ ಸುಸ್ತಿದಾರನಿಗೆ ಸಾಲ, ಡಿವಿಡೆಂಡ್ ಇನ್ನಿತರ ಹಣವನ್ನು ಪಾವತಿ ಮಾಡುವುದು ಅಸಿಂಧುವಾಗಲಿದೆ. 3) ನಿಮ್ಮ ಚರಾಸ್ತಿ ಹಾಗೂ ಸ್ಥಿರಾಸ್ತಿ ಹಾಗೂ ಕಳೆದ ಐದು ವರ್ಷಗಳ ಆದಾಯ ತೆರಿಗೆ ಸಲ್ಲಿಕೆ ದಾಖಲೆಯನ್ನು ನ್ಯಾಯಾಧಿಕರಣಕ್ಕೆ ನೀಡಬೇಕಾಗುತ್ತದೆ.

ಈಶಾನ್ಯ ರೈಲ್ವೆ — ಟೆಂಡರ್ ಆಹ್ವಾನ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಸೀನಿಯರ್ ಡಿವಿಜನಲ್ ಕಮರ್ಷಿಯಲ್ ಮ್ಯಾನೇಜರ್, ಲಕ್ನೌ ಇವರು 5 ವರ್ಷಗಳ ಅವಧಿಗೆ ಲಕ್ನೌ ಡಿವಿಜನ್‌ನ ಮೈಲ್ ಎಕ್ಸ್‌ಪ್ರೆಸ್ ಎಸ್‌ಎಲ್‌ಆರ್ (04 ಟನ್) ರೈಲಿನ ಲೀಸಿಂಗ್ ಗುತ್ತಿಗೆಗಾಗಿ ಎ ಮತ್ತು ಬಿ ಪ್ರವರ್ಗದ ಲೀಸ್ ಹೋಲ್ಡರ್ ರಿಂದ ಇ–ಟೆಂಡರ್ ವ್ಯವಸ್ಥೆ ಮುಖಾಂತರ ಬಹಿರಂಗ ಟೆಂಡರ್ ಆಹ್ವಾನಿಸಿದ್ದಾರೆ. ಇಎಂಡಿ ಮತ್ತು ಟೆಂಡರ್ ಶುಲ್ಕಗಳನ್ನು ನೆಟ್‌ಬ್ಯಾಂಕಿಂಗ್ ಮತ್ತು ಪೇಮೆಂಟ್ ಗೇಟ್‌ವೇ ಮುಖಾಂತರ ಪಾವತಿಸುವುದು. ರೈಲುಗಳು ಮತ್ತು ಟೆಂಡರ್ ಪ್ರಕಟಣೆ ಸಂಖ್ಯೆ, ಮೀಸಲು ಬೆಲೆ, ಇಎಂಡಿ ಹಾಗೂ ಬಿಡ್ ದಸ್ತಾವೇಜುಗಳ ವಿವರ ಕೆಳಗಿನಂತಿರುತ್ತದೆ:–

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂ.	ರೈಲು ಸಂ.	ಇಂದ	ಗೆ	ರೈಲು ಸಂಚಾರ (ವಾರದಲ್ಲಿ)	ಲಭ್ಯವಿರುವ ಕಂಪಾರ್ಟ್‌ಮೆಂಟ್‌ಗಳ ಸಂ. (04 ಟನ್) ಎಸ್‌ಎಲ್‌ಆರ್/ಎಸ್‌ಎಲ್‌ಆರ್‌ಡಿ	ಮೀಸಲು ಬೆಲೆ (ಪ್ರತಿ ಟ್ರಿಪ್‌ಗೆ) ಪ್ರತಿ ದಿನಕ್ಕೆ
1	22-2021-05018-FSLR	05018	ಗೋರಖ್‌ಪುರ	ಲೋಕಮಾನ್ಯ ತಿಲಕ್ (ಎಲ್‌ಟಿಟಿ)	ಪ್ರತಿದಿನ	(01) ಎಫ್‌ಎಸ್‌ಎಲ್‌ಆರ್-ಫರ್ಸ್ಟ್	17008/-(R)
2	23-2021-05023-FSLR	05023	ಗೋರಖ್‌ಪುರ	ಯಶವಂತಪುರ	1 ದಿನ (ಮಂಗಳವಾರ)	(01) ಎಫ್‌ಎಸ್‌ಎಲ್‌ಆರ್-ಫರ್ಸ್ಟ್	22048/-(P)
3	24-2021-05015-FSLR	05015	ಗೋರಖ್‌ಪುರ	ಯಶವಂತಪುರ	1 ದಿನ (ಮಂಗಳವಾರ)	(01) ಎಫ್‌ಎಸ್‌ಎಲ್‌ಆರ್-ಫರ್ಸ್ಟ್	22297/-(P)
4	25-2021-05029-FSLR	05029	ಗೋರಖ್‌ಪುರ	ಪುಣೆ	1 ದಿನ (ಗುರುವಾರ)	(01) ಎಫ್‌ಎಸ್‌ಎಲ್‌ಆರ್-ಫರ್ಸ್ಟ್	8586/-(S)
5	26-2021-02587-FSLR	02587	ಗೋರಖ್‌ಪುರ	ಜಮ್ಮು ತಾವಿ	1 ದಿನ (ಸೋಮವಾರ)	(01) ಎಫ್‌ಎಸ್‌ಎಲ್‌ಆರ್-ಫರ್ಸ್ಟ್	13297/-(P)
6	27-2021-05005-FSLR	05005	ಗೋರಖ್‌ಪುರ	ಡೆಹ್ರಾಡೂನ್	2 ದಿನ (ಬುಧ, ಶುಕ್ರ)	(01) ಎಫ್‌ಎಸ್‌ಎಲ್‌ಆರ್-ಫರ್ಸ್ಟ್	4617/-(S)
7	28-2021-05204-FSLR	05204	ಲಕ್ನೌ	ಬದೌನಿ	ಪ್ರತಿದಿನ	(01) ಎಫ್‌ಎಸ್‌ಎಲ್‌ಆರ್-ಫರ್ಸ್ಟ್	11648/-(R)
8	29-2021-02531-FSLR	02531	ಗೋರಖ್‌ಪುರ	ಲಕ್ನೌ	ಪ್ರತಿದಿನ	(01) ಎಫ್‌ಎಸ್‌ಎಲ್‌ಆರ್-ಫರ್ಸ್ಟ್	2064/-(S)
9	30-2021-02533-FSLR	02533	ಲಕ್ನೌ	ಛತ್ರಪತಿ ಶಿವಾಜಿ (ಟಿ)	ಪ್ರತಿದಿನ	(01) ಎಫ್‌ಎಸ್‌ಎಲ್‌ಆರ್-ಫರ್ಸ್ಟ್	22641/-(R)
10	31-2021-02532-FSLR	02532	ಲಕ್ನೌ	ಗೋರಖ್‌ಪುರ	ಪ್ರತಿದಿನ	(01) ಎಫ್‌ಎಸ್‌ಎಲ್‌ಆರ್-ಫರ್ಸ್ಟ್	2064/-(S)
11	32-2021-02108-FSLR	02108	ಲಕ್ನೌ	ಲೋಕಮಾನ್ಯ ತಿಲಕ್ (ಎಲ್‌ಟಿಟಿ)	03 ದಿನ (ಮಂಗಳ, ಗುರು, ಭಾನುವಾರ)	(01) ಎಫ್‌ಎಸ್‌ಎಲ್‌ಆರ್-ಫರ್ಸ್ಟ್	14883/-(R)
12	33-2021-02555-FSLR	02555	ಗೋರಖ್‌ಪುರ	ಹಿಸಾರ್	ಪ್ರತಿದಿನ	(01) ಎಫ್‌ಎಸ್‌ಎಲ್‌ಆರ್-ಫರ್ಸ್ಟ್	10728/-(P)
13	34-2021-02537-FSLR	02537	ಗೋರಖ್‌ಪುರ	ಲೋಕಮಾನ್ಯ ತಿಲಕ್ (ಎಲ್‌ಟಿಟಿ)	ಪ್ರತಿದಿನ	(01) ಎಫ್‌ಎಸ್‌ಎಲ್‌ಆರ್-ಫರ್ಸ್ಟ್	16836/-(P)
14	35-2021-05022-FSLR	05022	ಗೋರಖ್‌ಪುರ	ಶಾಲಿಮಾರ್	1 ದಿನ (ಸೋಮವಾರ)	(01) ಎಫ್‌ಎಸ್‌ಎಲ್‌ಆರ್-ಫರ್ಸ್ಟ್	17133/-(R)
15	36-2021-05004-FSLR	05004	ಗೋರಖ್‌ಪುರ	ಕಾನ್ಪುರ್ ಅನ್ವರ್‌ಗಂಜ್	ಪ್ರತಿದಿನ	(01) ಎಫ್‌ಎಸ್‌ಎಲ್‌ಆರ್-ಫರ್ಸ್ಟ್	3281/-(S)

ಸೂಚನೆ : ಕ್ರ.ಸಂ. 1 ರಿಂದ 15 ಭದ್ರತಾ ಠೇವಣಿ ಮೊತ್ತ (ರೂ.ಗಳಲ್ಲಿ) ಆನ್‌ಲೈನ್ ಪೇಮೆಂಟ್ ಮೂಲಕ: ರೂ. 1,00,000/–. ಟೆಂಡರ್ ದಸ್ತಾವೇಜುಗಳ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): ರೂ. 1000/–, ಟೆಂಡರ್ ಕ್ಲೋಸಿಂಗ್ ದಿನಾಂಕ ಮತ್ತು ಸಮಯ: 18.08.2021 ರಂದು 14.00 ಗಂಟೆವರೆಗೆ, ಟೆಂಡರ್ ತೆರೆಯುವ ದಿನಾಂಕ: 18.08.2021 ರಂದು 15.00 ಗಂಟೆ, ಟೆಂಡರ್ ವ್ಯಾಲಿಡಿಟಿ: 45 ದಿನಗಳು, ಗುತ್ತಿಗೆ ಅವಧಿ: 05 ವರ್ಷ, ವೆಬ್‌ಸೈಟ್ ವಿಳಾಸ: www.ireps.gov.in

CPRO/Comm=35 ಡಿವಿಜನಲ್ ಕಮರ್ಷಿಯಲ್ ಮ್ಯಾನೇಜರ್, ಲಕ್ನೌ

ಪ್ರಯಾಣಿಕ ಸೌಲಭ್ಯದ ಯಾವುದೇ ದೂರುಗಳನ್ನು ಎಸ್‌ಎಂಎಸ್ ಮಾಡಿರಿ–09794845955

ರೈಲಿನಲ್ಲಿ ಬೀಡಿ / ಸಿಗರೇಟ್ ಸೇದಿಸದಿರಿ

विशेष शाखा पुलिस मुख्यालय, मध्यप्रदेश भोपाल

क्रमांक– विशा / स्टोर / 2021–25(290), दिनांक 28.07.2021

निविदा सूचना का शुद्धि पत्र (Corrigendum)

विशेष शाखा पुलिस मुख्यालय की निविदा सूचना क्रमांक SB/Store/2021-25 (260), Bhopal, Dated 02-07-2021 द्वारा Analyzer Display Monitor & 8 other item के क्रय हेतु ई–निविदा सूचना जारी की गई है। निविदा के माध्यम से क्रय किये जाने वाले आयटम्स के तकनीकी मापदण्डों में (Specification) में ''आंशिक संशोधन'' तथा निविदा समय सारणी में परिवर्तन के संबंध में ''शुद्धि पत्र'' (Corrigendum/Addendum) जारी किया गया है जो website https://mptenders.gov.in/nicgep/app पर तथा विभाग की वेबसाईट www.mppolice.gov.in पर उपलब्ध है।

सहायक पुलिस महानिरीक्षक,
विशेष शाखा (जी), म.प्र. भोपाल
दूरभाष क्रं.–0755–2443654
Email: sec24-sb@mppolice.gov.in

(G-15016/21)

दो गज की दूरी, मास्क है जरुरी।

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ರಾಮನಗರ ವಿಭಾಗ, ಸಂಚಾರ ಶಾಖೆ

ಮೊದಲನೇ ಮಹಡಿ, ವಾಹನ ನಿಲ್ದಾಣ, ಐಜೂರು ವೃತ್ತ ರಾಮನಗರ–562159.

ಸಂಖ್ಯೆ.ಕರಾಸಾ.ರಾನವಿ.ಸಂ.ವಾ/678/679/21–22 ದಿ.28.07.2021

"ಅಲ್ಪಾವಧಿ ಸಂಧಾನ ಪ್ರಕಟಣೆ ಸಂಖ್ಯೆ:03 & 04–2021–22"

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು, ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕೋಡಿಹಳ್ಳಿ, ಚನ್ನಪಟ್ಟಣ, ಕನಕಪುರ ಮತ್ತು ಆನೇಕಲ್ ಬಸ್ ನಿಲ್ದಾಣದಲ್ಲಿ ಖಾಲಿಯಿರುವ ಕಟ್ಟಿದ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ/ತೆರೆದ ಸ್ಥಳದ ಮಳಿಗೆಗೆ/ದ್ವಿ ಚಕ್ರ & ಕಾರು ನಿಲುಗಡೆಯ ನಿರ್ವಹಣೆಗೆ 03 ವರ್ಷಗಳವರೆಗೆ ಹಾಗೂ ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಖಾಲಿ ಇರುವ ಹೋರ್ಡಿಂಗ್ಸ್/ಗ್ಲೋಸೈನ್/ಪ್ಲಾಟ್ ಫಾರಂ ಫಲಕಗಳ ಜಾಹೀರಾತುಗಳಿಗೆ 05 ವರ್ಷಗಳವರೆಗೆ ಸಂಧಾನದ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ **ದಿ:06.08.2021ರಂದು 12.00 ಗಂಟೆ**ಗೆ ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು/ಪ್ರತಿನಿಧಿಗಳ ಎದುರು ಸಂಧಾನ ಸಭೆಯನ್ನು ನಡೆಸಲಾಗುವುದು. ಸಂಧಾನ ಅರ್ಜಿಗಳನ್ನು **ದಿನಾಂಕ:29.07.2021 ರಿಂದ ದಿನಾಂಕ:06.08.2021ರ 11.00 ಗಂಟೆ**ಗಳವರೆಗೆ ಪಡೆಯಬಹುದು. **ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ–562159**ರಲ್ಲಿ ಸಂಪರ್ಕಿಸಲು ಕೋರಲಾಗಿದೆ. **ದೂ.ಸಂ:080–27272306** ಹಾಗೂ ವಿಭಾಗ ಸಂಚಲನಾಧಿಕಾರಿಗಳ ಮೊಬೈಲ್ **ಸಂ:7760990852**.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ : ರಾಮನಗರ

ವಾಸಾಸಂಇ/ಬೆಂನ/973/ಅಲಕ್‌ನಂದ/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ. ಬಿಐಎಎಪಿಎ/ಟಿಪಿ/ಭೂಉಬ/08/2020–21/499 ದಿನಾಂಕ : 29–07–2021

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69ರ ತಿದ್ದುಪಡಿ ಕಾಯ್ದೆಯಂತೆ)

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ : ನಅಇ 157 ಬಿಎಂಆರ್ 2005 ದಿನಾಂಕ : 27–01–2009 ಮತ್ತು ತಿದ್ದುಪಡಿ ಆದೇಶ ದಿನಾಂಕ : 29–01–2009 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (4) ರನ್ವಯ ಈ ಕೆಳಕಂಡ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀಮತಿ ಉಮಾವತಿ ವಿ. ಕೋಂ ಲೇ॥ ವಿ. ನಾಗರಾಜು	ಯಲಹಂಕ	ಜಾಲ	ತರಬನಹಳ್ಳಿ	7/5	0–11	ಸಾರ್ವಜನಿಕ/ಅರೆಸಾರ್ವಜನಿಕ	ವಸತಿ

ಪ್ರಶ್ನಿತ ಜಮೀನಿನಲ್ಲಿ ಅನುಮೋದಿತ ಮಹಾಯೋಜನೆಯ ಪ್ರಸ್ತಾಪಿತ ರಸ್ತೆ ಪಂಕ್ತೀಕರಣವಿದ್ದು, ಯಥಾವತ್ತಾಗಿ ಕಾಯ್ದಿರಿಸಬೇಕಾಗಿರುತ್ತದೆ.

ವಾಸಾಸಂಇ/ಉನಿಕ/ಬೆಂಗ್ರಾಜಿ/132/2021–22

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಶ್ರವಣ ಆರೈಕೆಯ ಧ್ವನಿ ಕೇಂದ್ರ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾಜಿ ಕ್ರಿಕೆಟಿಗ ಸೈಯದ್ ಕೀರ್ಮಾನಿ ಪಾಲ್ಗೊಂಡಿದ್ದರು. ಅವಿನಾಶ್ ಪವಾರ್ ಹಾಗೂ ಕೆ.ಡಿ. ರಾಜೇಶ್ ಇದ್ದಾರೆ

ಶ್ರವಣ ಆರೈಕೆಯ ಧ್ವನಿ ಕೇಂದ್ರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಫ್ರೇಜರ್ ಟೌನ್‌ನಲ್ಲಿ ಶ್ರವಣ ಆರೈಕೆಯ ಧ್ವನಿ ಕೇಂದ್ರವು ಗುರುವಾರದಿಂದ ಕಾರ್ಯಾರಂಭ ಮಾಡಿತು. ನಗರದಲ್ಲಿ ಆರಂಭವಾಗಿರುವ ವಿಶ್ವದರ್ಜೆಯ ಮೊದಲ ಧ್ವನಿ ಕೇಂದ್ರ ಇದು.

ವೈಡೆಕ್ಸ್ ಇಂಡಿಯಾದ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಅವಿನಾಶ್ ಪವಾರ್, 'ಈ ಕೇಂದ್ರವು ಶಾಬ್ದಿಕ ತಾಣದ ಪರಿಕರಗಳ ಸುಸಜ್ಜಿತ ಸೌಲಭ್ಯಗಳನ್ನು ಹೊಂದಿದೆ. ಇಲ್ಲಿ ಬಳಕೆದಾರರು ಶಬ್ದಗಳ ಸಂಪರ್ಕ ಮತ್ತು ಸ್ಪಷ್ಟತೆಯನ್ನು ಅನುಭವಿಸಬಹುದು. ಶೂನ್ಯ ವಿಳಂಬ ತಂತ್ರಜ್ಞಾನದೊಂದಿಗೆ ಶುದ್ಧ ಮತ್ತು ನೈಸರ್ಗಿಕ ಧ್ವನಿಯನ್ನು ತಲುಪಿಸುವ ಸಾಧನಗಳು ಇಲ್ಲಿವೆ' ಎಂದರು.

ಕಾರ್ಟಿ ಸೌಂಡ್ ಸೆಂಟರ್ ನಿರ್ದೇಶಕ ಕೆ.ಡಿ. ರಾಜೇಶ್, 'ಶ್ರವಣ ನಷ್ಟವು ಯಾರಿಗಾದರೂ, ಯಾವ ವಯಸ್ಸಿನಲ್ಲಿ ಬೇಕಾದರೂ ಸಂಭವಿಸಬಹುದು. ಆದರೆ, ಅದು ಸಾಮಾನ್ಯ ಜೀವನ ನಡೆಸಲು ತೊಂದರೆಯಾಗಬಾರದು. ಈ ಕೇಂದ್ರದಲ್ಲಿರುವ ಆಧುನಿಕ ತಂತ್ರಜ್ಞಾನದ ಸಾಧನಗಳು ಜನರ ಶ್ರವಣ ಸಾಮರ್ಥ್ಯವನ್ನು ಸುಧಾರಿಸುತ್ತವೆ' ಎಂದರು.

ಮಾಜಿ ಕ್ರಿಕೆಟಿಗ ಸೈಯದ್ ಕೀರ್ಮಾನಿ ಕೇಂದ್ರವನ್ನು ಉದ್ಘಾಟಿಸಿದರು.

ವಿದ್ಯುತ್ ವ್ಯತ್ಯಯ ಇಂದು, ನಾಳೆ

ಬೆಂಗಳೂರು: ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 30 ಮತ್ತು 31ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಎಲೆಕ್ಟ್ರಾನಿಕ್ ಸಿಟಿ ಒಂದನೇ ಹಂತ, ದೊಡ್ಡತೋಗೂರು, ಬೊಮ್ಮನಹಳ್ಳಿ, ಎನ್.ಜೆ.ಆರ್. ಬಡಾವಣೆ, ಚಿಕ್ಕತೋಗೂರು, ಹೊಂಗಸಂದ್ರ, ಕೋನಪ್ಪನ ಅಗ್ರಹಾರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

31: ಎಲೆಕ್ಟ್ರಾನಿಕ್ ಸಿಟಿ ಎರಡನೇ ಹಂತ, ವೀರಸಂದ್ರ, ದೊಡ್ಡನಾಗಮಂಗಲ, ಅನಂತನಗರ, ಶಾಂತಿಪುರ, ಬಯೊಕಾನ್, ಟೆಕ್ ಮಹಿಂದ್ರ, ಚೊಕ್ಕಸಂದ್ರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

72ನೇ ವಾರ್ಷಿಕ ದಿನಾಚರಣೆ

ಬೆಂಗಳೂರು: ಅಣುಶಕ್ತಿ ಇಲಾಖೆಯ ಅಂಗವಾಗಿರುವ 'ಅಣು–ಖನಿಜ ಸಂಶೋಧನೆ ನಿರ್ದೇಶನಾಲಯ'ದ ಹೈದರಾಬಾದ್‌ನ ಮುಖ್ಯ ಕಚೇರಿಯಲ್ಲಿ ಹಾಗೂ ಬೆಂಗಳೂರು ಸೇರಿದಂತೆ ಒಟ್ಟು ಏಳು ಪ್ರಾದೇಶಿಕ ಕಚೇರಿಗಳಲ್ಲಿ ಗುರುವಾರ 72ನೆಯ ವಾರ್ಷಿಕ ದಿನಾಚರಣೆ ಆಯೋಜಿಸಲಾಗಿತ್ತು.

ನಿರ್ದೇಶನಾಲಯದ ನಿರ್ದೇಶಕ ಡಾ.ಡಿ.ಕೆ. ಸಿನ್ಹಾ ಹಾಗೂ ನಿರ್ದೇಶನಾಲಯದ ಕೆಲವು ಹಿರಿಯ ಅಧಿಕಾರಿಗಳು ಸಮಾರಂಭದಲ್ಲಿ ಹಾಜರಿದ್ದರು ಎಂದು ಪ್ರಕಟಣೆ ತಿಳಿಸಿದೆ. ನಿರ್ದೇಶನಾಲಯದ ನಿರಂತರ ಪ್ರಯತ್ನದ ಫಲವಾಗಿ ದೇಶದಲ್ಲಿನ ಅಣು–ಖನಿಜ ಸಂಪನ್ಮೂಲ ಹೆಚ್ಚಳ ಆಗಿದೆ ಎಂದು ಡಾ. ಸಿನ್ಹಾ ಅವರು ಕಾರ್ಯಕ್ರಮದಲ್ಲಿ ಹೇಳಿದರು.

ಸ್ವಾತಂತ್ರ್ಯೋತ್ಸವ: ಸ್ಪರ್ಧೆ ಆಯೋಜನೆ

ಬೆಂಗಳೂರು: ಸ್ವಾತಂತ್ರ್ಯೋತ್ಸವ ಪ್ರಯುಕ್ತ ಆರ್ಟ್ ರಿಫ್ಲೆಕ್ಟ್ಸ್ ಅಕಾಡೆಮಿಯು ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಂಡಿದೆ.

ಚಿತ್ರಕಲೆ, ದೇಶಭಕ್ತಿ ಗೀತೆ, ಭಾಷಣ, ನೃತ್ಯ, ರಂಗೋಲಿ, ವಾದ್ಯ ಸಂಗೀತ ಸೇರಿದಂತೆ ವಿವಿಧ ಸ್ಪರ್ಧೆಗಳು ಆನ್‌ಲೈನ್ ವೇದಿಕೆಯಲ್ಲಿ ನಡೆಯಲಿವೆ. ಹೆಸರು ನೋಂದಣಿಗೆ ಆ.1 ಕೊನೆಯ ದಿನಾಂಕ ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ ಮೊ.: 9380671947

ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

ನಂ. 1, 1ನೇ ಮುಖ್ಯ ರಸ್ತೆ , 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು - 560 034. ದೂರವಾಣಿ : 080-25526266/25526288/25526299

ದಿನಾಂಕ : 31-3-2021 ರಲ್ಲಿದ್ದಂತೆ ಆಸ್ತಿ - ಜವಾಬ್ದಾರಿ ತಃಖ್ತೆ

31-3-2020ರಂದು ರೂ.	ಜವಾಬ್ದಾರಿಗಳು	31-3-2021 ರಂದು ರೂ.
14,25,34,900.00	ಸದಸ್ಯರಿಂದ ಪಾವತಿಯಾದ ಷೇರು ಬಂಡವಾಳ	12,69,28,400.00
67,37,78,655.29	ಕಾಯ್ದಿಟ್ಟ ಹಾಗೂ ಇತರೆ ನಿಧಿಗಳು	73,87,98,607.29
240,13,84,379.44	ಠೇವಣಿಗಳು ಮತ್ತು ಇತರೆ ಖಾತೆಗಳು	233,69,97,424.08
--	ಬರಬೇಕಾಗಿರುವ ಬಿಲ್ಲುಗಳ ಮೊತ್ತ	37,83,630.00
55,21,000.00	ಸುಸ್ತಿ ಬಡ್ಡಿ ಕಾಯ್ದಿರಿಸಿದ್ದು	1,38,79,012.00
63,89,522.00	ಠೇವಣಿಗಳ ಮೇಲೆ ಕೊಡಬೇಕಾದ ಬಡ್ಡಿಗಳು	47,68,823.00
10,46,78,074.00	ಇತರೆ ಜವಾಬ್ದಾರಿಗಳು	18,11,95,697.00
7,88,39,938.00	ನಿವ್ವಳ ಲಾಭ	7,50,81,646.00
49,68,712.00	ಅನ್‌ಕ್ಲೈಮಡ್ - ಡಿ.ಇ.ಎ.ಎಫ್‌ನಲ್ಲಿ ಇರಿಸಿದ್ದು (ಕಾಂಟ್ರಾ)	50,94,174.00
10,000.00	ಬ್ಯಾಂಕ್ ಗ್ಯಾರಂಟಿ (ಕಾಂಟ್ರಾ)	10,000.00
341,81,05,180.73	ಜುಮ್ಲಾ	348,65,37,413.37

31-3-2020 ರಂದು ರೂ.	ಆಸ್ತಿಗಳು	31-3-2021 ರಂದು ರೂ.
1,16,49,132.00	ನಗದು ಶಿಲ್ಕು	1,05,58,475.00
17,62,12,610.55	ಬ್ಯಾಂಕುಗಳಲ್ಲಿ ಶಿಲ್ಕು	21,22,95,850.06
142,22,93,175.00	ಹೂಡಿಕೆಗಳು	156,02,33,989.00
176,62,90,965.98	ಸಾಲ ಮತ್ತು ಮುಂಗಡಗಳು	160,64,13,481.95
55,21,000.00	ಸುಸ್ತಿ ಸಾಲದ ಬಡ್ಡಿ ಬರಬೇಕಾದದ್ದು	1,38,79,012.00
1,57,69,648.00	ಹೂಡಿಕೆಗಳ ಮೇಲಿನ ಬಡ್ಡಿ ಬರಬೇಕಾದದ್ದು	1,85,44,050.00
--	ಬರಬೇಕಾದ ಬಿಲ್ಲುಗಳ ಮೊತ್ತ	37,83,630.00
1,53,89,937.20	ಸ್ಥಿರಾಸ್ತಿ , ಚರಾಸ್ತಿ ಮತ್ತು ಇತರೆ ಆಸ್ತಿಗಳು (ಸವಕಳಿ ಕಡಿತದ ನಂತರ)	5,57,24,751.36
49,68,712.00	ಅನ್‌ಕ್ಲೈಮಡ್ - ಡಿ.ಇ.ಎ.ಎಫ್‌ನಲ್ಲಿ ಇರಿಸಿದ್ದು (ಕಾಂಟ್ರಾ)	50,94,174.00
10,000.00	ಬ್ಯಾಂಕ್ ಗ್ಯಾರಂಟಿ (ಕಾಂಟ್ರಾ)	10,000.00
341,81,05,180.73	ಜುಮ್ಲಾ	348,65,37,413.37

2020 - 21ನೇ ಸಾಲಿನ ಲಾಭ - ನಷ್ಟದ ತಃಖ್ತೆ

2019-20 ರೂ.	ವೆಚ್ಚ	2020-21 ರೂ.
16,75,23,904.00	ಠೇವಣಿ ಮೇಲಿನ ಬಡ್ಡಿ ಪಾವತಿ	15,10,33,903.00
3,49,69,065.09	ಆಡಳಿತಾತ್ಮಕ ಹಾಗೂ ಇತರೆ ವೆಚ್ಚಗಳು	3,29,56,218.26
20,54,574.00	ಸವಕಳಿ	18,49,586.00
4,67,000.00	ಉತ್ಪಾದಕ ಸಾಲಗಳ ಮೇಲಿನ ಅವಕಾಶ	—
15,33,000.00	ಕೋವಿಡ್ -19ರ ಕಂಟಿಂಜೆಂಟ್ ಅವಕಾಶ	—
-	ರಿಸ್ಟ್ರಕ್ಚರ್ ಸಾಲದ ಮೇಲಿನ ಅವಕಾಶ	36,67,000.00
4,24,21,212.00	ಆದಾಯ ತೆರಿಗೆ ಮತ್ತು ಡೆಫರ್ಡ್ ತೆರಿಗೆ	2,54,27,130.00
7,88,39,938.00	ನಿವ್ವಳ ಲಾಭ	7,50,81,646.00
32,78,08,693.09	ಜುಮ್ಲಾ	29,00,15,483.26

2019-20 ರೂ.	ಆದಾಯ	2020-21 ರೂ.
21,72,68,038.00	ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿ	18,15,79,223.00
10,70,93,984.97	ಹೂಡಿಕೆಗಳ ಮೇಲಿನ ಬಡ್ಡಿ	10,42,45,236.61
34,46,670.12	ಇತರೆ ಆದಾಯ	41,91,023.65
32,78,08,693.09	ಜುಮ್ಲಾ	29,00,15,483.26

ಲೆಕ್ಕ ಪತ್ರಗಳ ಮೇಲೆ ಟಿಪ್ಪಣಿಗಳು

(1) ಸಿ. ಆರ್. ಎ. ಆರ್ . (CRAR) ಪ್ರಮಾಣವು ಪ್ರಸಕ್ತ ಸಾಲಿನಲ್ಲಿ ಶೇ. 43.69 ಆಗಿರುತ್ತದೆ (2) ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣವು ವರದಿ ಸಾಲಿನಲ್ಲಿ ಶೇ. (0) ಆಗಿರುತ್ತದೆ. ವರದಿ ಸಾಲಿನಂತ್ಯದವರೆಗೂ ಅನುತ್ಪಾದಕ ಆಸ್ತಿಗೆ ಒಟ್ಟು ರೂ. 962.76 ಲಕ್ಷ ಅವಕಾಶ ಕಲ್ಪಿಸಲಾಗಿದೆ.
(3) ಉತ್ಪಾದಕ ಸಾಲಗಳ ಮೇಲೆ ಒಟ್ಟು ರೂ. 135.33 ಲಕ್ಷಗಳ ಅವಕಾಶ ಕಲ್ಪಿಸಲಾಗಿದೆ. (4) ರಿಸ್ಟ್ರಕ್ಚರ್ ಸಾಲ ರೂ. 366.70 ಲಕ್ಷದ ಮೇಲೆ ರೂ. 36.67 ಲಕ್ಷ ಅವಕಾಶ ಕಲ್ಪಿಸಲಾಗಿದೆ.
(5) ಹೂಡಿಕೆಗಳ ಮೇಲಿನ ಇಳಿಕೆ ಮತ್ತು ಏರಿಳಿತದ ಅವಕಾಶವು ದಿನಾಂಕ 31.3.2021ಕ್ಕೆ ರೂ. 223.94 ಲಕ್ಷ ಇರುತ್ತದೆ. (6) ಬ್ಯಾಂಕಿನ ವ್ಯವಹಾರವು ಪ್ರತಿ ಸಿಬ್ಬಂದಿಗೆ 2464.63 ಲಕ್ಷ ಇರುತ್ತದೆ. ಹಾಗೂ ನಿವ್ವಳ ಲಾಭವು ಪ್ರತಿ ಸಿಬ್ಬಂದಿಗೆ ರೂ. 46.93 ಲಕ್ಷ ಇರುತ್ತದೆ.
(7) ಬ್ಯಾಂಕಿನ ನಿರ್ದೇಶಕರ ಮಂಡಳಿ ಸದಸ್ಯರಿಗೆ / ಅವರ ಹತ್ತಿರದ ಸಂಬಂಧಿಗಳಿಗೆ ಅಥವಾ ಅವರ ಹಿತಾಸಕ್ತಿ ಇರುವ ಯಾವುದೇ ಕಂಪನಿ ಸಂಸ್ಥೆಗಳಿಗೆ ಸಾಲ ನೀಡಿರುವುದಿಲ್ಲ. (8) ಷೇರು / ಡಿಬೆಂಚರ್‌ಗಳ ಮೇಲೆ ಸಾಲ ನೀಡಿರುವುದಿಲ್ಲ ಹಾಗೂ ವಿದೇಶಿ ವಿನಿಮಯ ವ್ಯವಹಾರ ನಡೆದಿರುವುದಿಲ್ಲ.
(9) ವರದಿ ಸಾಲಿಗೆ ಠೇವಣಿ ವಿಮೆ ಬಾಬ್ತು (DICGC) ರೂ. 32.89 ಲಕ್ಷಗಳನ್ನು ಡಿ.ಐ.ಸಿ.ಜಿ ಕಾರ್ಪೊರೇಷನ್ನಿಗೆ ಪಾವತಿಸಿದ್ದು ವಿಮಾ ಕಂತು ಬಾಕಿಯಾಗಿಲ್ಲ ಹಾಗೂ ಚಾಲ್ತಿಯಲ್ಲಿರುತ್ತದೆ.
(10) 10 ವರ್ಷಕ್ಕೂ ಮೇಲ್ಪಟ್ಟು ವ್ಯವಹಾರವಿಲ್ಲದೆ ಸ್ಥಗಿತಗೊಂಡ (ಅನ್‌ಕ್ಲೈಮ್ಡ್) ಖಾತೆಗಳಲ್ಲಿನ ಮೊಬಲಗನ್ನು ಆರ್.ಬಿ.ಐ. ನಿರ್ದೇಶನದಂತೆ ಡಿ.ಇ.ಎ.ಎಫ್ ಖಾತೆಗೆ ವರ್ಗಾವಣೆ ಮಾಡಲಾಗಿದೆ. ಈ ಮೊತ್ತವು 31.3.2021 ರಂತ್ಯಕ್ಕೆ ರೂ. 50.94 ಲಕ್ಷ ಆಗಿರುತ್ತದೆ.

ಸಹಿ/-	ಸಹಿ/-	ಸಹಿ/-	ಸಹಿ/-	ಸಹಿ/-
(ಶಿವಣ್ಣ ಕೆ.ಬಿ.)	(ವೆಂಕಟೇಶ್ ಅಯ್ಯರ್ ಪಿ.ವಿ.)	(ನಾರಾಯಣ್ ಎಸ್. ಭಟ್)	(ಮುನಿರೆಡ್ಡಿ ಎಂ.)	ಮೆ॥ ಎಂ.ವಿ ರೆಡ್ಡಿ ಅಂಡ್ ಅಸೋಸಿಯೇಟ್ಸ್
ಮುಖ್ಯ ಕಾರ್ಯನಿರ್ವಹಣಾಧಿಕಾರಿ	ನಿರ್ದೇಶಕರು	ಉಪಾಧ್ಯಕ್ಷರು	ಅಧ್ಯಕ್ಷರು	ಚಾರ್ಟರ್ಡ್ ಅಕೌಂಟೆಂಟ್ಸ್ ಬೆಂಗಳೂರು

ದಿನಾಂಕ : 22/07/2021 ಸ್ಥಳ : ಬೆಂಗಳೂರು

ಅಕ್ರಮ ಹೆಚ್ಚಳಕ್ಕೆ ಕಾರಣವಾಗಲಿದೆ ಹೊಸ ಜಾಹೀರಾತು ನಿಯಮ: ಕಳವಳ

ಸ್ವಾಧೀನಾನುಭವ ಪ್ರಮಾಣಪತ್ರ ಇಲ್ಲದ ಕಟ್ಟಡದಲ್ಲೂ ಹೋರ್ಡಿಂಗ್!

ಪ್ರಜಾವಾಣಿ ವಾರ್ತೆ

ಹೋರ್ಡಿಂಗ್ ಮಾಫಿಯಾಕ್ಕೆ ಮಣೆ 3

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ನಿರ್ಮಿಸುವ ಕಟ್ಟಡವನ್ನು ಬಳಸುವುದಕ್ಕೆ ಮುನ್ನ ಸ್ವಾಧೀನಾನುಭವ ಪ್ರಮಾಣಪತ್ರ ಪಡೆಯುವುದು ಕಡ್ಡಾಯ. ಅಚ್ಚರಿ ಎಂದರೆ, ಸರ್ಕಾರ ಇತ್ತೀಚೆಗೆ ಜಾರಿಗೆ ತಂದಿರುವ 'ಬಿಬಿಎಂಪಿ ಜಾಹೀರಾತು ನಿಯಮಗಳು 2019', ಸ್ವಾಧೀನಾನುಭವ ಪ್ರಮಾಣಪತ್ರ ಪಡೆಯದ ಕಟ್ಟಡಗಳಲ್ಲೂ ಹೋರ್ಡಿಂಗ್‌ಗಳನ್ನು ಅಳವಡಿಸಲು ಅವಕಾಶ ಕಲ್ಪಿಸುತ್ತದೆ.

ಅಸ್ತಿತ್ವದಲ್ಲಿರುವ ಯಾವುದೇ ಕಟ್ಟಡದಲ್ಲಿ ಹೋರ್ಡಿಂಗ್ ಅಥವಾ ಜಾಹೀರಾತು ಅಳವಡಿಸುವುದಕ್ಕೆ ಆ ಕಟ್ಟಡದ ದೃಢತೆ ಪ್ರಮಾಣಪತ್ರ ಹಾಗೂ ಸ್ವಾಧೀನಾನುಭವ ಪ್ರಮಾಣಪತ್ರವನ್ನು ಹಾಜರುಪಡಿಸುವುದು ನಿಯಮ 6 (2) (iv)ರ ಪ್ರಕಾರ ಕಡ್ಡಾಯ. ಒಂದು ವೇಳೆ ಕಟ್ಟಡವು ಸ್ವಾಧೀನಾನುಭವ ಪ್ರಮಾಣಪತ್ರ ಹೊಂದಿರದಿದ್ದಲ್ಲಿ ಹೆಚ್ಚುವರಿ ದಂಡ ವಿಧಿಸಿ ಜಾಹೀರಾತು ಅಳವಡಿಸುವುದಕ್ಕೂ ಇದೇ ನಿಯಮ ಅವಕಾಶ ಕಲ್ಪಿಸುತ್ತದೆ.

ಸ್ವಾಧೀನಾನುಭವ ಪ್ರಮಾಣಪತ್ರ ಇಲ್ಲದ ಕಟ್ಟಡದಲ್ಲಿ ಜಾಹೀರಾತು ಅಳವಡಿಸಬೇಕಾದರೆ ಶೆಡ್ಯೂಲ್ 1ರಲ್ಲಿ ನಿಗದಿಪಡಿಸಿದ ಮೊತ್ತಕ್ಕೆ ಶೇ 150ರಷ್ಟು ದಂಡವನ್ನು ಸೇರಿಸಿ ಶುಲ್ಕ ಪಾವತಿಸಬೇಕಾಗುತ್ತದೆ ಎನ್ನುತ್ತದೆ ನಿಯಮ 6 (3) (ಬಿ). ಅಷ್ಟೇ ಅಲ್ಲ, ಅದರ ಜೊತೆಗೆ ಆ ಕಟ್ಟಡವು ಅನಧಿಕೃತವಾಗಿದ್ದರೆ ಅಥವಾ ಮಂಜೂರಾತಿ ಪಡೆದ ಯೋಜನಾ ನಕ್ಷೆ ಉಲ್ಲಂಘಿಸಿದ್ದರೆ ಸರ್ಕಾರವು ನಿಗದಿಪಡಿಸಿದಷ್ಟು ಮೊತ್ತದ ಇತರ ದಂಡವನ್ನೂ ಪಾವತಿಸಬೇಕಾಗುತ್ತದೆ ಎಂದು ಈ ನಿಯಮದಲ್ಲಿ ವಿವರಿಸಲಾಗಿದೆ.

ಕಟ್ಟಡ ಉಲ್ಲಂಘನೆ ಎಷ್ಟು ಪ್ರಮಾಣದವರೆಗೆ ಇದ್ದರೆ ಅದರ ಮೇಲೆ ಜಾಹೀರಾತು ಅಥವಾ ಹೋರ್ಡಿಂಗ್ ಅಳವಡಿಕೆಗೆ ಅವಕಾಶ ಕಲ್ಪಿಸಬಹುದು ಎಂಬ ಬಗ್ಗೆ ನಿಯಮಗಳಲ್ಲಿ ಸ್ಪಷ್ಟತೆ ಇಲ್ಲ. 2003ರ ಬಿಬಿಎಂಪಿ ಕಟ್ಟಡ ಬೈಲಾ ನಿಯಮಗಳ ಪ್ರಕಾರ ನಗರದಲ್ಲಿ ಪ್ರಸ್ತುತ ನಕ್ಷೆಗೆ ಮಂಜೂರಾತಿ ಪಡೆದ ಬಳಿಕ ಅನಿವಾರ್ಯ ಕಾರಣಗಳಿಂದ ಶೇ 5ರಷ್ಟು ಉಲ್ಲಂಘನೆಗಳು ಆಗಿದ್ದರೆ, ಅಂತಹ ಕಟ್ಟಡಗಳಿಗೆ ದಂಡನಾ ಶುಲ್ಕ ವಿಧಿಸಿ ಸ್ವಾಧೀನಾನುಭವ ಪ್ರಮಾಣಪತ್ರ (ಒ.ಸಿ) ನೀಡಲು ಅವಕಾಶ ಇದೆ. ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಉಲ್ಲಂಘನೆ ಆಗಿದ್ದರೆ ಆ ಕಟ್ಟಡಗಳಿಗೆ ಒ.ಸಿ ಲಭಿಸದು. ಅಂದರೆ ಅಂತಹ ಕಟ್ಟಡಗಳು ಅಕ್ರಮ ಕಟ್ಟಡಗಳೆಂದೇ ಲೆಕ್ಕ. ಕಟ್ಟಡ ನಿರ್ಮಾಣದ ವೇಳೆ ಶೇ 5ಕ್ಕಿಂತ ಹೆಚ್ಚು ಉಲ್ಲಂಘನೆ ಆಗಿದ್ದರೆ, ಅಂತಹ ಅಕ್ರಮ ಕಟ್ಟಡಗಳಿಗೆ ದಂಡ ವಿಧಿಸಿ ಜಾಹೀರಾತು ಅಳವಡಿಕೆಗೆ ಅವಕಾಶ ಕಲ್ಪಿಸುವುದು ಎಷ್ಟು ಸರಿ ಎಂಬುದು ಪ್ರಶ್ನೆ.

'ಇಂತಹ ಗೊತ್ತು ಗುರಿ ಇಲ್ಲದ ನಿಯಮಗಳು ಅಕ್ರಮ ಕಟ್ಟಡಗಳನ್ನು ಉತ್ತೇಜಿಸಿದಂತೆ. ಶೇ 150ರಷ್ಟು ದಂಡನಾ ಶುಲ್ಕ ಪಾವತಿಸುವುದು ಜಾಹೀರಾತು ಏಜೆನ್ಸಿಗಳಿಗೆ ದೊಡ್ಡ ಹೊರೆ ಏನಲ್ಲ. ನಗರದ ಪ್ರಮುಖ ಸ್ಥಳಗಳಲ್ಲಿನ ಅಕ್ರಮ ಕಟ್ಟಡಗಳಲ್ಲೂ ಜಾಹೀರಾತು ಹಾಕಲು ಅವಕಾಶ ಕಲ್ಪಿಸುತ್ತಾ ಹೋದರೆ, ಬಿಬಿಎಂಪಿಯು ಭವಿಷ್ಯದಲ್ಲಿ ಇಕ್ಕಟ್ಟಿಗೆ ಸಿಲುಕಲಿದೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

ಹೋರ್ಡಿಂಗ್: ನಿಗದಿಪಡಿಸಿರುವ ಗಾತ್ರಗಳ ವಿವರ

ವಿಧ	ಗರಿಷ್ಠ ಉದ್ದ (ಮೀ)	ಗರಿಷ್ಠ ಅಗಲ (ಮೀ)	ಗರಿಷ್ಠ ಎತ್ತರ (ಮೀ)	ನೆಲಮಟ್ಟದಿಂದ ಕನಿಷ್ಠ (ಮೀ)
30 ಮೀ.ಗಿಂತ ಕಡಿಮೆ ಅಗಲದ ಕಟ್ಟಡ/ ಗೋಡೆ	12	6	18	ಅನ್ವಯಿಸದು
30 ಮೀ.ಗಿಂತ ಹೆಚ್ಚು ಅಗಲದ ಕಟ್ಟಡ/ ಗೋಡೆ	18	9	18	ಅನ್ವಯಿಸದು
ತ್ರಿಕೋನಾಕಾರದ ಜಾಹೀರಾತು	12	6	18	ಅನ್ವಯಿಸದು
ಕ್ಷಣ ಕ್ಷಣಕ್ಕೂ ವಿಷಯ ಬದಲಾಗುವ ಎಲ್‌ಇಡಿ/ ಎಲ್‌ಸಿಡಿ ಪರದೆಯ ಜಾಹೀರಾತು	12	6	-	ನೆಲದ ಮೇಲೆ 2.5 (ಕಟ್ಟಡದ ಮೇಲಿನದ್ದಕ್ಕೆ ಅನ್ವಯಿಸದು)
ನೆಲದಲ್ಲಿ ನಿಲ್ಲಿಸುವ ಬಿಲ್ ಬೋರ್ಡ್	18	9	25	2.5

ಇಂತಹ ಜಾಹೀರಾತುಗಳಿಗೆ ಅನುಮತಿ ನಿರಾಕರಿಸಬಹುದು

- ವಾಹನ ಚಲಾವಣೆಗೆ ಅಡ್ಡಿ ಉಂಟುಮಾಡುವ ಮೂಲಕ ಸಾರ್ವಜನಿಕರ ಸುರಕ್ಷತೆಗೆ ಭಂಗ ತರುವಂತಹವು
- ಅಧಿಕೃತ ಸಂಚಾರ ಸಂಕೇತಗಳು, ಸಿಗ್ನಲ್‌ಗಳನ್ನು ಹೋಲುವ ಮೂಲಕ ಜನರಲ್ಲಿ ಗೊಂದಲ ಮೂಡಿಸುವಂತಹವು; ಸಂಚಾರ ಸಿಗ್ನಲ್‌ಗಳಲ್ಲಿ ಬಳಸುವ ಕೆಂಪು, ಹಳದಿ ಹಾಗೂ ಹಸಿರು ಬಣ್ಣವನ್ನು ಬಳಸುವಂತಹವು ಅಥವಾ ಸಂಚಾರ ಸಿಗ್ನಲ್‌ಗಳ ಆಕಾರವನ್ನು ಹೋಲುವಂತಹವು
- ನಿಲ್ಲಿಸಿ, ವೀಕ್ಷಿಸಿ, ಬಳಸುದಾರಿ, ಅಪಾಯ, ಎಚ್ಚರಿಕೆ.. ಮುಂತಾದ ಪದಗಳನ್ನು ಹೊಂದಿರುವಂಥವು



ಒಲಂಪಿಕ್ಸ್ ನಲ್ಲಿ ಉನ್ನತ ಮಟ್ಟಕ್ಕೇರಲು ನಮ್ಮ ಅಥ್ಲೀಟ್ ಗಳನ್ನು ನಾವು ಪ್ರೋತ್ಸಾಹಿಸುತ್ತಿದ್ದೇವೆ.

ಪ್ರಜಾವಾಣಿ LIVE

prajavani.net prajavani prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಪಿಯುಸಿ ನಂತರದ ಶೈಕ್ಷಣಿಕ ಆಯ್ಕೆಗಳು

ಈಗಾಗಲೇ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟವಾಗಿದೆ. ಮುಂದೆ ಯಾವ ಕೋರ್ಸ್ ಮಾಡಬೇಕು, ಸಾಂಪ್ರದಾಯಿಕ ಡಿಗ್ರಿ ಸಾಕೇ, ವೃತ್ತಿಪರ ಕೋರ್ಸ್‌ಗಳಿಗೆ ಸೇರಬೇಕೆ ಅಥವಾ ಆಫ್‌ಬೀಟ್ ಕೋರ್ಸ್‌ಗಳಿವೆಯೇ, ಯಾವುದನ್ನು ಮಾಡಿದರೆ ಭವಿಷ್ಯದಲ್ಲಿ ಒಳ್ಳೆಯ ಉದ್ಯೋಗ ಸಿಗಬಹುದು.. ವಿದ್ಯಾರ್ಥಿಗಳ ಇಂತಹ ಗೊಂದಲಗಳನ್ನು ಪರಿಹರಿಸಲಿದ್ದಾರೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ

ವಿ. ಪ್ರದೀಪ್ ಕುಮಾರ್

ನೀವೂ ಪ್ರಶ್ನೆಗಳನ್ನು ಕೇಳಬಹುದು

ಇಂದು ಸಂಜೆ 4ಕ್ಕೆ

ಬಿಜೆಪಿಯ ರಾಜ್ಯಮಟ್ಟದ ಇ–ಚಿಂತನದಲ್ಲಿ ಶಾಸಕ ಪಿ. ರಾಜೀವ್

ರೈತರ ಅಭಿವೃದ್ಧಿಗೆ ಮೊದಲ ಆದ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈತರ ಕಲ್ಯಾಣವೇ ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಪ್ರಥಮ ಆದ್ಯತೆ. ರೈತರ ಆದಾಯ ದ್ವಿಗುಣಗೊಳಿಸಲು ಕೃಷಿ ಕಾಯ್ದೆ ಮತ್ತು ಎಪಿಎಂಸಿ ಕಾಯ್ದೆಗಳಿಗೆ ತಿದ್ದುಪಡಿ ತಂದು ರೈತರ ಸ್ವಾಭಿಮಾನ ಹೆಚ್ಚಿಸಿದೆ' ಎಂದು ಕುಡುಚಿಯ ಬಿಜೆಪಿ ಶಾಸಕ ಪಿ.ರಾಜೀವ್ ಹೇಳಿದ್ದಾರೆ.

ಪಕ್ಷದ ರಾಜ್ಯ ಕಾರ್ಯಾಲಯದಲ್ಲಿ ಗುರುವಾರ ರಾಜ್ಯಮಟ್ಟದ ಇ-ಚಿಂತನ ವರ್ಗದಲ್ಲಿ ಬಡವರ ಕಲ್ಯಾಣಕ್ಕಾಗಿ ಸಂಕಲ್ಪ ಮತ್ತು ಆ ದಿಸೆಯಲ್ಲಿ ನಮ್ಮ ಪ್ರಯತ್ನಗಳು ವಿಷಯದ ಕುರಿತು ಅವರು ಮಾತನಾಡಿದರು.

'ಕೇವಲ ದಲ್ಲಾಳಿಗಳ ಏಕ ಸ್ವಾಮ್ಯಕ್ಕೆ ಒಳಪಟ್ಟಿದ್ದ ಕೃಷಿ ಮಾರುಕಟ್ಟೆಗಳ ಸಂಕೋಲೆ ಬಿಡುಗಡೆಯಾಗಿದೆ. ದೇಶದ ಯಾವುದೇ ಮೂಲೆಯಲ್ಲೂ ಹೆಚ್ಚು ಬೆಲೆ ಕೊಡುವ ವ್ಯಾಪಾರಿಗೆ ಉತ್ಪನ್ನ ಮಾರಾಟ ಮಾಡುವ ಸ್ವಾತಂತ್ರ್ಯ ರೈತರಿಗೆ ಸಿಕ್ಕಿದೆ' ಎಂದು ರಾಜೀವ್ ಹೇಳಿದರು.

ಪಿ.ರಾಜೀವ್

'ಫಸಲ್ ಬಿಮಾ ಯೋಜನೆಯಡಿ 9.42 ಕೋಟಿಗೂ ಹೆಚ್ಚು ರೈತರಿಗೆ ಸೌಲಭ್ಯ ಲಭಿಸುತ್ತಿದೆ. ರಾಷ್ಟ್ರೀಯ ಕೃಷಿ ಮಾರುಕಟ್ಟೆ ಯೋಜನೆ ಇ-ನಾಮ್ ಅಡಿಯಲ್ಲಿ ಇಲ್ಲಿಯವರೆಗೆ 1.70 ಕೋಟಿಗೂ ಹೆಚ್ಚು ರೈತರು ನೋಂದಾವಣೆಗೊಂಡಿದ್ದಾರೆ. ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ ಅಡಿ 66 ಲಕ್ಷ ಹೆಕ್ಟೇರ್ ಭೂಮಿಗೆ ಹನಿ ನೀರಾವರಿ ಸೌಲಭ್ಯ ನೀಡಲಾಗಿದೆ' ಎಂದು ಹೇಳಿದರು.

'ಮಣ್ಣು ಪರೀಕ್ಷೆಗೆ ಹೆಚ್ಚಿನ ಆದ್ಯತೆ ನೀಡಿದ ಮೊದಲ ಕೇಂದ್ರ ಸರ್ಕಾರ ನಮ್ಮದು. 11.94 ಕೋಟಿ ರೈತರಿಗೆ ಸಾಯಿಲ್ ಹೆಲ್ತ್ ಕಾರ್ಡ್ ವಿತರಿಸಲಾಗಿದೆ. ಸಣ್ಣ ಹಿಡುವಳಿದಾರರು ಸಾಲದ ಸುಳಿಯಲ್ಲಿ ಸಿಲುಕಬಾರದು ಎಂಬ ದೃಷ್ಟಿಯಿಂದ ಕೃಷಿ ಸಮ್ಮಾನ್ ಯೋಜನೆ ಜಾರಿಗೊಳಿಸಿದ್ದು, ವಾರ್ಷಿಕ ಒಟ್ಟು ₹6,000 ನೀಡಲಾಗುತ್ತಿದೆ. ಇದಕ್ಕೆ ಪೂರಕವಾಗಿ ₹4,000ವನ್ನು ರಾಜ್ಯ ನೀಡುತ್ತಿದೆ. ಇದರಿಂದ ಒಟ್ಟು ₹10 ಸಾವಿರ ರೈತರಿಗೆ ಸಿಗುತ್ತಿದೆ. ಬಿಜೆಪಿ ಸರ್ಕಾರಗಳು ಬಡವರು, ಶೋಷಿತರ ಮತ್ತು ರೈತರ ಪರವಾಗಿ ಕಾರ್ಯನಿರ್ವಹಿಸುತ್ತಿವೆ' ಎಂದು ಅವರು ಹೇಳಿದರು.

'ದೇಶದ ಕಟ್ಟಕಡೆಯ ವ್ಯಕ್ತಿಯೂ ಸೇರಬಹುದಾದ ಅಟಲ್ ಪಿಂಚಣಿ ಯೋಜನೆ, ಪ್ರಧಾನಮಂತ್ರಿ ಜೀವನ್ ಜ್ಯೋತಿ ಯೋಜನೆ, ಸುಕನ್ಯಾ ಸಮೃದ್ಧಿ ಯೋಜನೆ ಜಾರಿಗೊಳಿಸಿದ್ದು, ವಾರ್ಷಿಕವಾಗಿ ₹ 21ರಿಂದ ಪ್ರೀಮಿಯಂ ಆರಂಭವಾಗುತ್ತಿದೆ. ವಾರ್ಷಿಕ ₹ 2 ಲಕ್ಷದಿಂದ ₹ 5 ಲಕ್ಷದವರೆಗೆ ಪ್ರಯೋಜನ ಲಭಿಸುತ್ತಿದೆ' ಎಂದು ರಾಜೀವ್ ವಿವರಿಸಿದರು.

ಸಿದ್ದರಾಮಯ್ಯ ಹೇಳಿಕೆ ಕ್ಷುಲ್ಲಕ: ಕಾರ್ಣಿಕ್

ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಲಂಗು ಲಗಾಮಿಲ್ಲದೇ ಕೀಳು ಮಟ್ಟದ ಮತ್ತು ಕ್ಷುಲ್ಲಕ ಹೇಳಿಕೆಗಳ ಮೂಲಕ ಅಪಪ್ರಚಾರ ನಡೆಸುತ್ತಿದ್ದಾರೆ ಎಂದು ಬಿಜೆಪಿ ವಕ್ತಾರ ಗಣೇಶ್ ಕಾರ್ಣಿಕ್ ಹೇಳಿದ್ದಾರೆ.

ಕಾಂಗ್ರೆಸ್‌ನ ಮಹಾನಾಯಕ ಮತ್ತು ಮೀರ್ ಸಾದಕ್‌ರ ದೆಹಲಿ ಭೇಟಿ ವಿಫಲವಾಗಿದ್ದು, ಅಧಿನಾಯಕಿಯಿಂದ ತೀವ್ರ ಖಂಡನೆಗೆ ಒಳಗಾಗಿದ್ದಾರೆ. ಸಿದ್ದರಾಮಯ್ಯ ಅವರು ತಮ್ಮ ರಾಜಕೀಯ ಭವಿಷ್ಯದ ಬಗ್ಗೆ ಅನಿಶ್ಚಿತತೆಯಿಂದ ಹತಾಶರಾಗಿದ್ದಾರೆ. ಹೀಗಾಗಿ ಅಸಂಬದ್ಧ ಹೇಳಿಕೆಗಳನ್ನು ಮುಂದುವರಿಸಿದ್ದಾರೆ ಎಂದು ಅವರು ಟೀಕಿಸಿದ್ದಾರೆ.

ತಮ್ಮ ಹಿಂಬಾಲಕರ ಮೂಲಕ ಮುಂದಿನ ಮುಖ್ಯಮಂತ್ರಿ ಎಂದು ಹೇಳಿಸಿಕೊಂಡ ಸಿದ್ದರಾಮಯ್ಯ ಅವರು ಈಗ ಹೈಕಮಾಂಡ್‌ನಿಂದ ಛೀಮಾರಿಗೆ ಒಳಗಾಗಿದ್ದಾರೆ ಎಂದೂ ಹೇಳಿದ್ದಾರೆ.

ಅಭ್ಯರ್ಥಿಯೊಬ್ಬರಿಗೆ ಆಯುಕ್ತ ಪಿ. ವಸಂತಕುಮಾರ್ (ಮಧ್ಯದಲ್ಲಿ) ನೇಮಕಾತಿ ಆದೇಶ ಪತ್ರ ನೀಡಿದರು. ಇಲಾಖೆಯ ಇತರ ಅಧಿಕಾರಿಗಳೂ ಇದ್ದರು

ಸ್ಥಳ ನಿಯುಕ್ತಿಗೆ ಕೌನ್ಸೆಲಿಂಗ್: ನೇಮಕಾತಿ ಪತ್ರ

ಬೆಂಗಳೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಪ್ರಥಮದರ್ಜೆ ಸಹಾಯಕರು (ಎಫ್‌ಡಿಎ), ದ್ವಿತೀಯದರ್ಜೆ ಸಹಾಯಕರು (ಎಸ್‌ಡಿಎ) ಮತ್ತು ನಿಲಯ ಮೇಲ್ವಿಚಾರಕ (ಮಹಿಳೆ) ಹುದ್ದೆಗಳಿಗೆ ಕೆಪಿಎಸ್‌ಸಿ ಮೂಲಕ ನೇರವಾಗಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಕೌನ್ಸೆಲಿಂಗ್ ಮೂಲಕ ಸ್ಥಳ ಆಯ್ಕೆಗೆ ಅವಕಾಶ ಕಲ್ಪಿಸಿ, ಇಲಾಖೆಯ ಆಯುಕ್ತ ಪಿ. ವಸಂತಕುಮಾರ್ ನೇಮಕಾತಿ ಆದೇಶ ಪತ್ರ ನೀಡಿದರು.

ಒಟ್ಟು 58 ಎಫ್‌ಡಿಎ, 70 ಎಸ್‌ಡಿಎ, 10 ನಿಲಯ ಮೇಲ್ವಿಚಾರಕ ಹುದ್ದೆಗಳಿಗೆ ಆಯ್ಕೆಯಾದವರಿಗೆ ಬುಧವಾರ ಮತ್ತು ಗುರುವಾರ ಕೌನ್ಸೆಲಿಂಗ್ ನಡೆಸಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಹುದ್ದೆ ಖಾಲಿ ಇರುವ ಸ್ಥಳಗಳನ್ನು ಅರ್ಹತೆ ಮತ್ತು ಪಾರದರ್ಶಕ ವ್ಯವಸ್ಥೆಯಲ್ಲಿ ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಲಾಗಿತ್ತು. ಅಲ್ಲದೆ, ಸ್ಥಳದಲ್ಲಿಯೇ ನೇಮಕಾತಿ ಆದೇಶ ನೀಡಲಾಯಿತು.

ಕೋವಿಡ್ ನಿಯಂತ್ರಣ- ಕಟ್ಟುನಿಟ್ಟಿನ ಮುನ್ನೆಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೆಲವು ಕಡೆ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತೆ ಹೆಚ್ಚಳವಾಗುತ್ತಿರುವುದು ಹಾಗೂ ನೆರೆಯ ರಾಜ್ಯ ಕೇರಳದಲ್ಲಿ ಕೊರೊನಾ ಸೋಂಕಿನ ಪ್ರಮಾಣ ಮತ್ತೆ ಏರಿಕೆಯಾಗುತ್ತಿರುವುದು ಬಿಬಿಎಂಪಿಯ ಕಳವಳಕ್ಕೆ ಕಾರಣವಾಗಿದೆ. ಎರಡನೇ ಅಲೆಯಲ್ಲಿ ಸಾಕಷ್ಟು ಸಾವು ನೋವುಗಳನ್ನು ಕಂಡಿರುವ ನಗರದಲ್ಲಿ ಮೂರನೇ ಅಲೆಯಿಂದ ಹೆಚ್ಚಿನ ಹಾನಿ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಲು ಪಾಲಿಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಮುಂದಾಗಿದೆ.

ಕೋವಿಡ್ ಹರಡದಂತೆ ತಡೆಯಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಧಿಕಾರಿಗಳ ಗುರುವಾರ ಸಭೆ ನಡೆಸಿದರು.

'ನಗರದಲ್ಲೂ ಕೆಲವು ಪ್ರದೇಶಗಳಲ್ಲಿ ಸೋಂಕಿನ ಪ್ರಮಾಣ ನಿಧಾನವಾಗಿ ಹೆಚ್ಚುತ್ತಿದೆ. ಸೋಂಕಿತರ ಪ್ರವಾಸದ ಹಿನ್ನೆಲೆ ತಿಳಿದುಕೊಳ್ಳುವುದರ ಜೊತೆ ನಗರದಲ್ಲಿ ಕೋವಿಡ್ ಸೋಂಕು ವ್ಯಾಪಿಸದಂತೆ ತಡೆಯಬೇಕಿದೆ. ಸೋಂಕು ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆ ಆಗುತ್ತಿರುವ ಕಡೆ ಸೋಂಕಿತರ ನೇರ ಹಾಗೂ ಪರೋಕ್ಷ ಸಂಪರ್ಕಕ್ಕೆ ಬಂದವರನ್ನು ಪತ್ತೆ ಹಚ್ಚಲು ಹಾಗೂ ಅಂತಹವರನ್ನು ಪರೀಕ್ಷೆಗೆ ಒಳಪಡಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದ್ದೇನೆ. ಇಂತಹ ಪ್ರದೇಶಗಳಲ್ಲಿ ಕೋವಿಡ್ ಲಸಿಕೆ ಅಭಿಯಾನವನ್ನೂ ತೀವ್ರಗೊಳಿಸುಂತೆ ಸಲಹೆ ನೀಡಿದ್ದೇನೆ' ಎಂದು ಗೌರವ್ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.

'ಕೆಲವು ಕಡೆ ಮದುವೆ ಮತ್ತಿತರ ಸಮಾರಂಭಗಳ ಮೂಲಕವೂ ಕೋವಿಡ್ ಸೋಂಕು ಹೆಚ್ಚುತ್ತಿದೆ. ಇಂತಹ ಕಾರ್ಯಕ್ರಮಗಳಲ್ಲಿ ಕೋವಿಡ್ ನಿಯಂತ್ರಣ ಕ್ರಮಗಳು ಸರಿಯಾಗಿ ಪಾಲನೆ ಆಗುವಂತ ನೋಡಿಕೊಳ್ಳಬೇಕು. ಜನಜಂಗುಳಿ ಉಂಟಾಗುವ ಮಾರುಕಟ್ಟೆ ಮತ್ತು ಇತರ ಕಡೆಗಳಲ್ಲೂ ಮಾಸ್ಕ್ ಧರಿಸುವಿಕೆ ಹಾಗೂ ಅಂತರ ಕಾಪಾಡುವ ಬಗ್ಗೆ ನಿಗಾ ಇಡುವಂತೆ ನಿರ್ದೇಶನ ನೀಡಿದ್ದೇನೆ' ಎಂದರು.

'ನಗರದಲ್ಲಿ ಕೋವಿಡ್ ಸೋಂಕನ್ನು ಪರಿಣಾಮಕಾರಿಯಾಗಿ ತಡೆಯಲು ಎಲ್ಲ ಅಧಿಕಾರಿಗಳು ಕ್ರಿಯಾಶೀಲರಾಗಿ ಕೆಲಸ ಮಾಡಬೇಕು. ಈ ಪೈಕಿ ಹೆಚ್ಚು ಕೋವಿಡ್ ಸೋಂಕು ಕಂಡುಬರುವ ಪ್ರದೇಶಗಳಲ್ಲಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡು ಕೋವಿಡ್ ನಿಯಂತ್ರಿಸಬೇಕು. ಕೋವಿಡ್ ನಿಯಮಗಳನ್ನು ಸರಿಯಾಗಿ ಪಾಲಿಸದಿರುವವರಿಗೆ ದಂಡ ವಿಧಿಸಬೇಕು' ಎಂದು ಮುಖ್ಯ ಆಯುಕ್ತರು ಸೂಚಿಸಿದರು.

ವಿಶೇಷ ಆಯುಕ್ತ (ಆರೋಗ್ಯ) ಡಿ.ರಂದೀಪ್, 'ನಗರದಲ್ಲಿ ಪ್ರತಿನಿತ್ಯ ಸರಾಸರಿ 400 ಕೋವಿಡ್ ಪ್ರಕರಣಗಳು ಪತ್ತೆಯಾಗುತ್ತಿವೆ. ಕೋವಿಡ್ ಹೆಚ್ಚು ಕಂಡುಬರುತ್ತಿರುವ ಪ್ರದೇಶದಲ್ಲಿ ಹೆಚ್ಚು ಹೆಚ್ಚು ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಸೋಂಕಿತರ ಸಂಪರ್ಕಕ್ಕೆ ಬಂದವರ ಪತ್ತೆಗೂ ಕ್ರಮ ವಹಿಸಲಾಗಿದೆ' ಎಂದು ಮಾಹಿತಿ ನೀಡಿದರು.

ನೇಮಕಾತಿ: ಜಲಮಂಡಳಿ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಲಾಗಿದೆ ಎಂಬಂತೆ ತಪ್ಪು ಮಾಹಿತಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ರೀತಿ, ಯಾವುದೇ ನೇಮಕಾತಿ ಅಧಿಸೂಚನೆ ಹೊರಡಿಸಿಲ್ಲ ಎಂದು ಜಲಮಂಡಳಿ ಸ್ಪಷ್ಟನೆ ನೀಡಿದೆ.

ಈಜಿಪುರ ಮೇಲ್ಸೇತುವೆ ಕಾಮಗಾರಿ ಸ್ಥಗಿತ: ಬಿಬಿಎಂಪಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಜಿಪುರ ಮೇಲ್ಸೇತುವೆ ಕಾಮಗಾರಿ ಸ್ಥಗಿತ ಸಂಬಂಧ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ನೋಟಿಸ್ ನೀಡಲು ಹೈಕೋರ್ಟ್ ಆದೇಶಿಸಿದೆ.

ಕೋರಮಂಗಲ ನಿವಾಸಿ ಆದಿ ನಾರಾಯಣಶೆಟ್ಟಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿತು.

ಕೋರಮಂಗಲದ ಈಜಿಪುರ ಜಂಕ್ಷನ್‌ನಿಂದ ಕೇಂದ್ರೀಯ ಸದನ ನಡುವಿನ 2.5 ಕಿಲೋ ಮೀಟರ್ ಮೇಲ್ಸೇತುವೆ ಕಾಮಗಾರಿ ಒಪ್ಪಂದದ ಪ್ರಕಾರ 2019ರ ನವೆಂಬರ್ 4ರಂದೇ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಆದರೆ, ಮೇಲ್ಸೇತುವೆ ನಿರ್ಮಾಣ ಕಾಮಗಾರಿ ಅರ್ಧಕ್ಕೆ ನಿಲ್ಲಿಸಲಾಗಿದೆ ಎಂದು ಅರ್ಜಿದಾರರು ಆರೋಪಿಸಿದ್ದಾರೆ.

ಜೆನರ್ಮ್ ಯೋಜನೆಯಡಿ ಕೇಂದ್ರ ಸರ್ಕಾರದ ಶೇ 35ರಷ್ಟು, ರಾಜ್ಯ ಸರ್ಕಾರದ ಶೇ 15ರಷ್ಟು ಮತ್ತು ಬಿಬಿಎಂಪಿಯ ಶೇ 50ರಷ್ಟು ಅನುದಾನದಲ್ಲಿ ಈ ಕಾಮಗಾರಿ ಆರಂಭಿಸಲಾಗಿತ್ತು.

ಒಟ್ಟಾರೆ ₹158 ಕೋಟಿ ವೆಚ್ಚದ ಕಾಮಗಾರಿಗೆ 2014ರಲ್ಲಿ ಟೆಂಡರ್ ಆಹ್ವಾನಿಸಲಾಗಿತ್ತು. 2017ರ ಮೇ 4ರಂದು ಸಿಂಪ್ಲೆಕ್ಸ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್‌ಗೆ ಕಾಮಗಾರಿ ವಹಿಸಲಾಗಿತ್ತು.

ಕಾಮಗಾರಿಯನ್ನು ಒಂದು ತಿಂಗಳಲ್ಲಿ ಪೂರ್ಣಗೊಳಿಸುವ ಭರವಸೆ ಜತೆಗೆ ಆಕ್ಷೇಪಣಾ ಅರ್ಜಿ ಸಲ್ಲಿಸುವಂತೆ ಪೀಠ ತಿಳಿಸಿತು.

'ಹೈಕೋರ್ಟ್ ಆದೇಶ: ಅಭಿವೃದ್ಧಿ ಕಾರ್ಯ ಚುರುಕು'

ಬೆಂಗಳೂರು: 'ಜೆಡಿಎಸ್–ಕಾಂಗ್ರೆಸ್ ನೇತೃತ್ವದ ಸರ್ಕಾರವು ಕ್ಷೇತ್ರದ ಅಭಿವೃದ್ಧಿಗೆ ನೀಡಿದ್ದ ಹಣವನ್ನು, ಬಿಜೆಪಿ ನೇತೃತ್ವದ ಸರ್ಕಾರ ತಡೆಹಿಡಿದಿತ್ತು. ₹110.75 ಕೋಟಿ ಅನುದಾನವನ್ನು ಒಂದು ತಿಂಗಳೊಳಗೆ ಬಿಡುಗಡೆ ಮಾಡಬೇಕು ಎಂದು ಹೈಕೋರ್ಟ್ ಬುಧವಾರ ಆದೇಶ ನೀಡಿದ್ದು, ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ಚುರುಕು ಪಡೆಯಲಿವೆ' ಎಂದು ದಾಸರಹಳ್ಳಿ ಶಾಸಕ ಆರ್. ಮಂಜುನಾಥ್ ಹೇಳಿದರು.

ಬಾಗಲಗುಂಟೆ ವಾರ್ಡ್‌ನ ಕಿರ್ಲೋಸ್ಕರ್ ಬಡಾವಣೆ, ಸಿದ್ದೇಶ್ವರ ಬಡಾವಣೆ, ಸೌಂದರ್ಯ ಬಡಾವಣೆ, ಭೈರವೇಶ್ವರನಗರ ಭಾಗದ ರಸ್ತೆಗಳ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಕ್ಷೇತ್ರದ ಅಭಿವೃದ್ಧಿಗೆ ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದ್ದರೂ, ಕಾಣದ ಕೈಗಳು ಅನುದಾನವನ್ನು ತಡೆಹಿಡಿಯುವ ಕೆಲಸವನ್ನು ನಿರಂತರವಾಗಿ ಮಾಡಿದ್ದವು. ಆದರೂ, ನನ್ನ ಆತ್ಮಸ್ಥೈರ್ಯ ಕುಂದಿಲ್ಲ. ಕ್ಷೇತ್ರದ ಅಭಿವೃದ್ಧಿಗೆ ಎಲ್ಲ ಕ್ರಮಗಳನ್ನೂ ಕೈಗೊಳ್ಳುತ್ತೇನೆ' ಎಂದು ಆರ್. ಮಂಜುನಾಥ್ ಅವರು ಹೇಳಿದರು.

ಬಾಗಲಗುಂಟೆ ವಾರ್ಡ್‌ನಲ್ಲಿ ರಸ್ತೆಗಳ ಡಾಂಬರೀಕರಣ ಕಾಮಗಾರಿಗೆ ಶಾಸಕ ಆರ್. ಮಂಜುನಾಥ್ ಚಾಲನೆ ನೀಡಿದರು. ಹಿರಿಯ ಮುಖಂಡರಾದ ಗುಂಡಪ್ಪ, ತಮ್ಮಣ್ಣ, ಹನುಮಂತರಾಜು, ರಾಜಣ್ಣ, ಚಂದ್ರಣ್ಣ, ಮುದ್ದಹನುಮೇಗೌಡ, ಸೀತಾ ಮರಿಗೌಡ, ಸಿದ್ಧರಾಜು, ಜಯಣ್ಣ, ಸದಾಶಿವ, ರಾಣಿ ಪ್ರತಾಪ್ ಹಾಜರಿದ್ದರು.

ಪರಿಸರ ಸಮ್ಮತಿ ಪ್ರಕ್ರಿಯೆ ಪುನರ್ ಆರಂಭಿಸಲು ಸೂಚನೆ

ಬೆಂಗಳೂರು: ಕಾರವಾರದಲ್ಲಿ 2ನೇ ಹಂತದ ಬಂದರು ಅಭಿವೃದ್ಧಿ ಯೋಜನೆಗೆ ಸಮ್ಮತಿ ಪತ್ರ(ಸಿಎಫ್‌ಇ) ನೀಡುವ ಪ್ರಕ್ರಿಯೆಯನ್ನು ಪುನರ್ ಆರಂಭಿಸಬೇಕು ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಗೆ (ಕೆಎಸ್‌ಪಿಸಿಬಿ) ಹೈಕೋರ್ಟ್ ನಿರ್ದೇಶನ ನೀಡಿದೆ. 2020ರ ಜುಲೈ 1 ರಂದು ಕೆಎಸ್‌ಪಿಸಿಬಿ ನೀಡಿರುವ ಸಮ್ಮತಿಯು ಕಾನೂನು ಬಾಹಿರ ಎಂದು ಅಭಿಪ್ರಾಯಪಟ್ಟಿದೆ.

'ವಾಯು ಮಾಲಿನ್ಯ ಮತ್ತು ಸಮುದ್ರದ ಮಲೀನದ ಬಗ್ಗೆ ಸಮರ್ಪಕವಾದ ತನಿಖೆಯಲ್ಲಿ ಕೆಎಸ್‌ಪಿಸಿಬಿ ನಡೆಸಿಲ್ಲ. ಮತ್ತೊಮ್ಮೆ ಪರಿಶೀಲನೆ ನಡೆಸಿ ಸಮ್ಮತಿ ನೀಡುವ ತನಕ ಯೋಜನೆ ಸಂಬಂಧ ಕಾಮಗಾರಿ ಆರಂಭಿಸಬಾರದು' ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ತಿಳಿಸಿದೆ.

'ಈ ಆದೇಶ ನೀಡಿದ ಒಂದು ತಿಂಗಳ ಅವಧಿಯಲ್ಲಿ ಮತ್ತೊಮ್ಮೆ ಪ್ರಕ್ರಿಯೆ ಪೂರ್ಣಗೊಳಿಸಬೇಕು' ಎಂದು ಪೀಠ ಹೇಳಿದೆ.

ಜೆಸಿಬಿಯ ನೂತನ ಯಂತ್ರವಾಹನ ಸಿವಿಇ4 3ಡಿಎಕ್ಸ್ ಅನ್ನು ಆರ್‌ಎನ್‌ಎಸ್ ಅರ್ಥ್‌ಮೂವರ್ಸ್‌ನ ಮುಖ್ಯಕಾರ್ಯನಿರ್ವಾಹಕ ನಿರ್ದೇಶಕ ಅನ್ಮೋಲ್ ಶೆಟ್ಟಿ ಮತ್ತು ಜೆಸಿಬಿ ಇಂಡಿಯಾದ ಪ್ರಾದೇಶಿಕ ವ್ಯವಸ್ಥಾಪಕ ಪಿಯೂಷ್ ಭಾರತಿ ಉದ್ಘಾಟಿಸಿದರು. ಇದೇ ವೇಳೆ 30 ಗ್ರಾಹಕರಿಗೆ ಹೊಸ ಯಂತ್ರದ ಕೀಲಿ ಕೈಯನ್ನು ಹಸ್ತಾಂತರಿಸಲಾಯಿತು. ಮಾರಾಟ ವಿಭಾಗದ ವ್ಯವಸ್ಥಾಪಕ ರೋಷನ್ ರಾವ್ ಇದ್ದರು.

ನಗರದಲ್ಲಿ ಇಂದು

ಕಾರ್ಯಾಗಾರ: ಕನ್ನಡ ಜಾಗೃತಿ ಸಮಿತಿ ಸದಸ್ಯರ 'ಒಂದು ದಿನದ ರಾಜ್ಯಮಟ್ಟದ ಕಾರ್ಯಾಗಾರ', ಉದ್ಘಾಟನೆ: ಡಾ. ಗುರುರಾಜ ಕರಜಗಿ, ಅಧ್ಯಕ್ಷತೆ: ಟಿ.ಎಸ್. ನಾಗಾಭರಣ, ಮುಖ್ಯ ಅತಿಥಿ: ಸುಚೇಂದ್ರ ಪ್ರಸಾದ್, ಉಪಸ್ಥಿತಿ: ಸಂತೋಷ ಹಾನಗಲ್, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಶಿವಾನಂದ ವೃತ್ತ, ಬೆಳಿಗ್ಗೆ 10

ಡಾ. ಗುರುರಾಜ ಕರಜಗಿ

ವಾಹನ ಲೋಕಾರ್ಪಣೆ: ಮಹಿಳೆಯರ ಸುರಕ್ಷತೆಗಾಗಿ: ನಿರ್ಭಯಾ ನಿಧಿಯಲ್ಲಿ ಖರೀದಿ ಮಾಡಿದ ದ್ವಿಚಕ್ರ ವಾಹನಗಳ ಲೋಕಾರ್ಪಣೆ: ಎಡಿಜಿಪಿ ಭಾಸ್ಕರ್ ರಾವ್, ಆಯೋಜನೆ: ಕರ್ನಾಟಕ ರಾಜ್ಯ ರೈಲ್ವೆ ಪೊಲೀಸ್, ಸ್ಥಳ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಆವರಣ, ಬೆಳಿಗ್ಗೆ 11

ದತ್ತಿ ಪ್ರಶಸ್ತಿ ಪ್ರದಾನ: 'ಕೆ. ಮೋಹನ್‌ದೇವ್ ಆಳ್ವ ಹಾಗೂ ಡಾ.ಎಂ.ಕೆ. ಶೈಲಜಾ ಆಳ್ವ ದತ್ತಿ ಪ್ರಶಸ್ತಿ' ಪ್ರದಾನ: ಕೆ. ಮೋಹನ್‌ದೇವ್ ಆಳ್ವ, ಅಧ್ಯಕ್ಷತೆ: ಮನು ಬಳಿಗಾರ್, ಪ್ರಶಸ್ತಿ ಪುರಸ್ಕೃತರು: ಬಿ.ಕೆ. ಸುಮಿತ್ರಾ, ಪ್ರೊ.ಟಿ.ಎನ್. ಪದ್ಮಾ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 2.30

ಬಿ.ಕೆ. ಸುಮಿತ್ರಾ

ಕೋವಿಡ್‌ನಿಂದ ಪಾಠ ಕಲಿತ ಪಾಲಿಕೆ • ತಳಮಟ್ಟದ ಆರೋಗ್ಯ ಸೇವೆ– ಕೊರತೆ ತುಂಬಲು ಕ್ರಮ

ಹೆಚ್ಚುವರಿಯಾಗಿ ಆರೋಗ್ಯ ಕಾರ್ಯಕರ್ತರ ಹುದ್ದೆ ಸೃಷ್ಟಿ?

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಸಾಂಕ್ರಾಮಿಕ ರೋಗ ನಿಯಂತ್ರಣದಲ್ಲಿ ತಳಹಂತದ ಆರೋಗ್ಯ ಸೇವೆ ಹಾಗೂ ಆರೋಗ್ಯ ಕಾರ್ಯಕರ್ತರ ಮಹತ್ವ ಏನೆಂಬುದು ಬಿಬಿಎಂಪಿಗೆ ತಡವಾಗಿಯಾದರೂ ಅರಿವಾಗಿದೆ.

ಕೋವಿಡ್ ನಿಯಂತ್ರಣದ ವಿಚಾರದಲ್ಲಿ ಪಾಠ ಕಲಿತ ಪಾಲಿಕೆ, ತಳ ಹಂತದ ಆರೋಗ್ಯ ಸೇವೆಯ ಕೊರತೆ ನೀಗಿಸಲು ಕಿರಿಯ ಆರೋಗ್ಯ ಸಹಾಯಕಿಯರು (ಎಎನ್‌ಎಂ), ಕಿರಿಯ ಆರೋಗ್ಯ ಪರಿವೀಕ್ಷಕರು (ಜೆಎಚ್‌ಐ) ಹಾಗೂ ಆಶಾ ಕಾರ್ಯಕರ್ತೆಯರು ಸೇರಿ ಒಟ್ಟು 2,823 ಆರೋಗ್ಯ ಕಾರ್ಯಕರ್ತರ ಹುದ್ದೆಗಳನ್ನು ಹೊಸತಾಗಿ ಸೃಷ್ಟಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದೆ.

1.30 ಕೋಟಿ ಜನಸಂಖ್ಯೆ ಹೊಂದಿರುವ ನಗರದಲ್ಲಿ ಸಮುದಾಯ ಆರೋಗ್ಯ ಸೇವೆಯನ್ನು ನಿಭಾಯಿಸಲು ಬಿಬಿಎಂಪಿ 429 ಕಿರಿಯ ಆರೋಗ್ಯ ಸಹಾಯಕಿಯರು ಹಾಗೂ 978 ಆಶಾ ಕಾರ್ಯಕರ್ತರನ್ನು ಹೊಂದಿತ್ತು. ಇತ್ತೀಚೆಗೆ 320 ಕಿರಿಯ ಆರೋಗ್ಯ ಪರಿವೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗಿತ್ತು. ಈಗ ಈ ಮೂರು ವಿಧಗಳ ಒಟ್ಟು 2,823 ಹೊಸ ಹುದ್ದೆಗಳಿಗೆ ಮಂಜೂರಾತಿ ನೀಡುವಂತೆ ಪ್ರಸ್ತಾವನೆ ಸಲ್ಲಿಸಿದೆ. ಹೆಚ್ಚುವರಿಯಾಗಿ ನೇಮಿಸಿಕೊಳ್ಳುವ ಎಎನ್‌ಎಂಗಳು, ಜೆಎಚ್‌ಐಗಳು ಹಾಗೂ ಆಶಾ ಕಾರ್ಯಕರ್ತರ ವೇತನ ಹಾಗೂ ಗೌರವ ಧನಕ್ಕಾಗಿ ವಾರ್ಷಿಕ ₹ 2.37 ಕೋಟಿ ಆರ್ಥಿಕ ಹೊರೆ ಬೀಳಲಿದೆ.

> ಆರೋಗ್ಯ ಕಾರ್ಯಕರ್ತರ ಪಾತ್ರ ಮುಖ್ಯವಾದುದು. ಹಾಗಾಗಿ ಆರೋಗ್ಯ ಕಾರ್ಯಕರ್ತರ ಸಂಖ್ಯಾಬಲ ಹೆಚ್ಚಳದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ
> **ಗೌರವ್ ಗುಪ್ತ**
> ಮುಖ್ಯ ಆಯುಕ್ತ, ಬಿಬಿಎಂಪಿ

ಹೆಚ್ಚುವರಿ ಹುದ್ದೆಗಳ ಬೇಡಿಕೆ ವಿವರ

ಹುದ್ದೆ	ಈಗಿರುವುದು	ಹೆಚ್ಚುವರಿ ಬೇಡಿಕೆ	ವೇತನಕ್ಕೆ ಬೇಕಾಗುವ ವಾರ್ಷಿಕ ಮೊತ್ತ (₹ ಕೋಟಿಗಳಲ್ಲಿ)
ಎಎನ್‌ಎಂ	429	871	1.31
ಜೆಎಚ್‌ಐ	320	330	0.50
ಆಶಾ	978	1,622	0.57

ಪ್ರಜಾವಾಣಿ ವಿಶೇಷ

ಹೊಸ ಸಾಂಕ್ರಾಮಿಕ ರೋಗ ಕಾಣಿಸಿಕೊಂಡಾಗ ಅದನ್ನು ಪತ್ತೆ ಹಚ್ಚುವುದು, ಸರ್ವೇಕ್ಷಣೆ ನಡೆಸುವುದು, ಜನರಲ್ಲಿ ಜಾಗೃತಿ ಮೂಡಿಸುವುದು ಮುಂತಾದ ಚಟುವಟಿಕೆಗಳಿಗೆ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ನೋಡಲ್ ಕೇಂದ್ರಗಳಿದ್ದಂತೆ. ಈ ವಿಚಾರದಲ್ಲಿ ಕಿರಿಯ ಆರೋಗ್ಯ ಸಹಾಯಕಿಯರು, ಕಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತೆಯರು (ಆಶಾ) ನಾಲ್ಕು ಸ್ತಂಭಗಳಂತೆ ಎನ್ನುತ್ತಾರೆ ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ಡಾ.ಬಿ.ಕೆ.ವಿಜಯೇಂದ್ರ.

'ಡೆಂಗಿ ಹಾಗೂ ಮಲೇರಿಯಾದಂತಹ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕಾಗಿ ತಳಮಟ್ಟದ ಆರೋಗ್ಯ ಕಾರ್ಯಕರ್ತರ ಬಲವನ್ನು ಹೆಚ್ಚಿಸಲು ಬಿಬಿಎಂಪಿ ಈ ಹಿಂದೆಯೇ ನಿರ್ಧರಿಸಿತ್ತು. ಕೋವಿಡ್ ವ್ಯಾಪಿಸಿದ ಬಳಿಕವಂತೂ ಎಎನ್‌ಎಂ, ಜೆಎಚ್‌ಐ ಹಾಗೂ ಆಶಾ ಕಾರ್ಯಕರ್ತೆಯರ ಪ್ರಾಮುಖ್ಯತೆ ಮನದಟ್ಟಾಗಿದೆ' ಎನ್ನುತ್ತಾರೆ ಅವರು.

'ಕೋವಿಡ್ ಹೊಸ ಪ್ರಕರಣಗಳು ಪತ್ತೆಯಾದಾಗ, ಸೋಂಕಿತರ ನೇರ ಹಾಗೂ ಪರೋಕ್ಷ ಸಂಪರ್ಕಕ್ಕೆ ಬಂದವರ ಪತ್ತೆಕಾರ್ಯ, ಮನೆಯಲ್ಲೇ ಆರೈಕೆಗೆ ಒಳಗಾಗುವವರಿಗೆ ತಿಳಿವಳಿಕೆ ನೀಡುವುದು, ಕೋವಿಡ್ ಪರೀಕ್ಷೆಗಳನ್ನು ನಡೆಸುವುದು, ಲಸಿಕೆ ಬಗ್ಗೆ ಜಾಗೃತಿ ಮೂಡಿಸುವುದು... ಹೀಗೆ ಪ್ರತಿಯೊಂದು ಕ್ಷೇತ್ರಕಾರ್ಯಕ್ಕೂ ಆರೋಗ್ಯ ಕಾರ್ಯಕರ್ತರನ್ನು ಅವಲಂಬಿಸಬೇಕಾಗುತ್ತದೆ' ಎಂದು ವಿವರಿಸಿದರು.

'ಭವಿಷ್ಯದಲ್ಲಿ ಯಾವುದೇ ಸಾಂಕ್ರಾಮಿಕ ರೋಗ ಕಾಣಿಸಿಕೊಂಡರೂ ಅದನ್ನು ಸಮರ್ಥವಾಗಿ ನಿಯಂತ್ರಿಸಬೇಕಾದರೆ ತಳ ಮಟ್ಟದ ಆರೋಗ್ಯ ಕಾರ್ಯಕರ್ತರ ಪಡೆಯನ್ನು ಸನ್ನದ್ಧವಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಹಾಗಾಗಿಯೇ ಎಎನ್‌ಎಂ, ಜೆಎಚ್‌ಐ ಹಾಗೂ ಆಶಾ ಕಾರ್ಯಕರ್ತರ ಬಲ ಹೆಚ್ಚಿಸಲು ಅನುಮೋದನೆ ಕೋರಿ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ತಿಳಿಸಿದರು.

ತಾಯಿ ಮತ್ತು ಶಿಶು ಆರೈಕೆಯಲ್ಲಿ ಕಿರಿಯ ಆರೋಗ್ಯ ಸಹಾಯಕಿಯರ ಹೊಣೆ ಮಹತ್ವದ್ದು. ಸಮುದಾಯದ ಸಹಭಾಗಿತ್ವದಲ್ಲಿ ಕೈಗೊಳ್ಳಬೇಕಾದ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಆಶಾ ಕಾರ್ಯಕರ್ತೆಯರ ತಂಡವನ್ನು ಎಎನ್‌ಎಂಗಳೇ ಮುನ್ನಡೆಸುತ್ತಾರೆ. ಹಾಗಾಗಿ ಇವರ ಸಂಖ್ಯಾಬಲ ಹೆಚ್ಚಳಕ್ಕೆ ಪಾಲಿಕೆ ಮುಂದಾಗಿದೆ.

ಜನರ ಜೊತೆ ನೇರ ಸಂಪರ್ಕ ಸಾಧಿಸಿ, ಆರೋಗ್ಯ ರಕ್ಷಣೆ ಸಂಬಂಧ ಜನರ ನಡವಳಿಕೆಯಲ್ಲಿ ಮಾರ್ಪಾಡು ಮಾಡುವುದಕ್ಕೆ ಆಶಾ ಕಾರ್ಯಕರ್ತೆಯರನ್ನು ಬಿಬಿಎಂಪಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಉದ್ದೇಶಿಸಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	19.70 ಕೋಟಿ ▲	3.15 ಕೋಟಿ
ಸಕ್ರಿಯ ಪ್ರಕರಣ	1.44 ಕೋಟಿ ▲	3.99 ಲಕ್ಷ ▲
ಗುಣಮುಖ	17.83 ಕೋಟಿ ▲	3.07 ಕೋಟಿ ▲
ಸಾವು	41.10 ಲಕ್ಷ ▼	4.23 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	6.59 ಲಕ್ಷ ▲	44,276 ▲
ಗುಣಮುಖ	4.36 ಲಕ್ಷ ▼	41,435 ▲
ಸಾವು	10,136 ▲	548 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 84,534 ▲ ಅಮೆರಿಕ; 48,443 ▲ ಬ್ರೆಜಿಲ್; 27,571 ▲ ಬ್ರಿಟನ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 52.55 ಅಮೆರಿಕ; 7.13 ಬ್ರೆಜಿಲ್; 11.60 ▲ ಬ್ರಿಟನ್

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು): 1.32 ಲಕ್ಷ ಮಹಾರಾಷ್ಟ್ರ; 34,023 ▲ ತಮಿಳುನಾಡು; 25,049 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 62.90 ಮಹಾರಾಷ್ಟ್ರ ▲; 33.49 ಕೇರಳ ▲; 25.55 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್–19: ಮತ್ತೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಏರಿಕೆ ಪಡೆದಿದ್ದು, 2,052 ಮಂದಿ ಸೋಂಕಿತರಾಗಿರುವುದು ಗುರುವಾರ ದೃಢಪಟ್ಟಿದೆ. ಕಳೆದ 19 ದಿನಗಳಲ್ಲಿ 24 ಗಂಟೆಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಜುಲೈ 10ರ ಬಳಿಕ ಪ್ರತಿನಿತ್ಯ ಹೊಸ ಪ್ರಕರಣಗಳು 2 ಸಾವಿರದ ಗಡಿಯೊಳಗೆ ದೃಢಪಟ್ಟಿದ್ದವು. ಒಂದು ದಿನದ ಅವಧಿಯಲ್ಲಿ 1.48 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, ಶೇ 1.37ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ. ಹೊಸದಾಗಿ 364 ಡೆಲ್ಟಾ ಪ್ರಕರಣಗಳು ದೃಢಪಟ್ಟಿವೆ. ಈ ತಳಿಯ ವೈರಾಣು ಕಾಣಿಸಿಕೊಂಡವರ ಒಟ್ಟು ಸಂಖ್ಯೆ 1,089ಕ್ಕೆ ಏರಿಕೆಯಾಗಿದೆ. ಮತ್ತೆ ಒಬ್ಬರಲ್ಲಿ ಬೀಟಾ ವೈರಾಣು ಖಚಿತಪಟ್ಟಿದ್ದು, ಈ ಸಂಖ್ಯೆ 7ಕ್ಕೆ ತಲುಪಿದೆ.

15 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 10 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬೆಂಗಳೂರಿನಲ್ಲಿ 506, ದಕ್ಷಿಣ ಕನ್ನಡದಲ್ಲಿ 396, ಉಡುಪಿಯಲ್ಲಿ 174, ಮೈಸೂರಿನಲ್ಲಿ 157 ಹಾಗೂ ಹಾಸನದಲ್ಲಿ 136 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 29 ಲಕ್ಷ ದಾಟಿದೆ.

35 ಮಂದಿ ಸಾವು: ಸೋಂಕಿತರಲ್ಲಿ 35 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 16 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ದೃಢಪಟ್ಟಿವೆ. ಮರಣ ಪ್ರಮಾಣ ದರ ಶೇ 1.70ರಷ್ಟಿದೆ. ಬೆಂಗಳೂರಿನಲ್ಲಿ 9, ದಕ್ಷಿಣ ಕನ್ನಡದಲ್ಲಿ 8, ಉತ್ತರ ಕನ್ನಡ, ಮೈಸೂರು, ಕೋಲಾರ, ಚಾಮರಾಜನಗರದಲ್ಲಿ ತಲಾ ಇಬ್ಬರು, ಉಳಿದ ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಕೋವಿಡ್‌ನಿಂದ ಮೃತರಾದವರ ಸಂಖ್ಯೆ 36,491ಕ್ಕೆ ತಲುಪಿದೆ.

ಸೋಂಕಿತರಲ್ಲಿ 1,332 ಮಂದಿಗೆ ಕಾಯಿಲೆ ವಾಸಿಯಾಗಿದೆ. ಗುಣಮುಖರಾದವರ ಸಂಖ್ಯೆ 28.41 ಲಕ್ಷ ದಾಟಿದೆ.

ನಗರದ ಕೋವಿಡ್ ಅಂಕಿ–ಅಂಶ

12,26,463 ▲	ಒಟ್ಟು ಪ್ರಕರಣಗಳು (12,25,957 ನಿನ್ನೆಯ ವಿವರ)
8,416 ▲	ಸಕ್ರಿಯ ಪ್ರಕರಣಗಳು
12,02,194 ▲	ಗುಣಮುಖರಾದವರು
15,852 ▲	ಒಟ್ಟು ಸಾವು

ಗುರುವಾರದ ಏರಿಕೆ

ಹೊಸ ಪ್ರಕರಣ	506 ▲
ಗುಣಮುಖ	257 ▲
ಸಾವು	09 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

'ಕ್ಯಾಮ್ಸ್' ಪ್ರಧಾನ ಕಾರ್ಯದರ್ಶಿ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟದ (ಕ್ಯಾಮ್ಸ್) ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಮೇಲೆ ಮಾರಕಾಸ್ತ್ರದಿಂದ ಹಲ್ಲೆ ನಡೆದಿದ್ದು, ಅವರ ತೊಡೆ ಹಾಗೂ ಬಲಗೈಗೆ ಗಾಯವಾಗಿದೆ.

ಜಾಲಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಗುರುವಾರ ರಾತ್ರಿ 9 ಗಂಟೆ ಸುಮಾರಿಗೆ ಈ ಘಟನೆ ನಡೆದಿದ್ದು, ಪೊಲೀಸರು ಸ್ಥಳ ಪರಿಶೀಲನೆ ನಡೆಸಿದ್ದಾರೆ.

'ಮನೆಯ ಮುಂದೆ ಕಾರು ನಿಲ್ಲಿಸಿ ಇಳಿಯುವಾಗ ಶಶಿಕುಮಾರ್ ಮೇಲೆ ಮೂವರು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದರು. ಆತ್ಮರಕ್ಷಣೆಗಾಗಿ ಶಶಿಕುಮಾರ್ ಪಿಸ್ತೂಲ್ ತೋರಿಸುತ್ತಿದ್ದಂತೆ ದುಷ್ಕರ್ಮಿಗಳು ಓಡಿಹೋಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ವೈದ್ಯರ ರಕ್ಷಣೆ: ರಾಜ್ಯ ಸರ್ಕಾರದಿಂದ ವಿವರಣೆ ಕೇಳಿದ ಹೈಕೋರ್ಟ್

ಬೆಂಗಳೂರು: ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ರಕ್ಷಣೆಗೆ ಕೈಗೊಂಡ ಕ್ರಮಗಳನ್ನು ವಿವರಿಸುವ ಹೇಳಿಕೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಹುಬ್ಬಳ್ಳಿಯ ವೈದ್ಯ ಹಾಗೂ ಸಾಮಾಜಿಕ ಹೋರಾಟಗಾರ ಡಾ. ವಿನೋದ್ ಜಿ. ಕುಲಕರ್ಣಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ವೈದ್ಯರ ರಕ್ಷಣೆಗೆ ಅನುಸರಿಸಿರುವ ಕ್ರಮಗಳನ್ನು ಒಳಗೊಂಡ ಆಕ್ಷೇಪಣಾ ಅರ್ಜಿಯನ್ನು 3 ವಾರಗಳಲ್ಲಿ ಸಲ್ಲಿಸಬೇಕು' ಎಂದು ತಿಳಿಸಿತು.

ವೈದ್ಯರು ಮತ್ತು ಆರೋಗ್ಯ ಕಾರ್ಯಕರ್ತರ ಮೇಲೆ ರೋಗಿಗಳ ಸಂಬಂಧಿಕರು ಆಗಾಗ ದಾಳಿ ನಡೆಸುತ್ತಿದ್ದಾರೆ. ವೈದ್ಯರ ಮೇಲಿನ ದೌರ್ಜನ್ಯ ಸಂವಿಧಾನದ 21ನೇ ವಿಧಿಯ ಉಲ್ಲಂಘನೆ ಎಂದು ಅರ್ಜಿದಾರರು ಪ್ರತಿಪಾದಿಸಿದರು.

ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ಮೇಲೆ ಹಲ್ಲೆ ನಡೆಸುವವರಿಗೆ 10 ವರ್ಷದ ತನಕ ಶಿಕ್ಷೆ ಮತ್ತು ₹ 5 ಲಕ್ಷ ದಂಡ ವಿಧಿಸಲು ಕಾನೂನು ರೂಪಿಸಲು ನ್ಯಾಯಾಲಯ ನಿರ್ದೇಶನ ನೀಡಬೇಕು ಎಂದು ಅರ್ಜಿದಾರರು ಮನವಿ ಮಾಡಿದರು.

ಸುರಂಜನದಾಸ್ ರಸ್ತೆ ಮರಗಳ ಹನನ ಪುನರ್ ಪರಿಶೀಲನೆಗೆ ಸೂಚನೆ

ಬೆಂಗಳೂರು: ಸುರಂಜನದಾಸ್ ರಸ್ತೆಯಲ್ಲಿ ಕೆಳಸೇತುವೆ ನಿರ್ಮಿಸಲು ಮರಗಳನ್ನು ಕಡಿಯುವ ಸಂಬಂಧ ಸ್ಥಳ ಪರಿಶೀಲನೆಯನ್ನು ಮತ್ತೊಮ್ಮೆ ನಡೆಸುವಂತೆ ಮರಗಳ ತಜ್ಞರ ಸಮಿತಿಗೆ (ಟಿಇಸಿ) ಹೈಕೋರ್ಟ್ ನಿರ್ದೇಶನ ನೀಡಿದೆ.

ಮರ ಕಡಿಯಲು ಬಿಬಿಎಂಪಿ ಹೊರಡಿಸಿರುವ ಆದೇಶ ರದ್ದುಪಡಿಸುವಂತೆ ಕೋರಿ ಸ್ವಾತಿ ದಾಮೋದರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿದೆ.

'ಮರ ಕಡಿಯುವ ಸಂಬಂಧ ಸಲ್ಲಿಕೆಯಾಗುವ ಅರ್ಜಿಗಳನ್ನು ಆಧರಿಸಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಅನುಮತಿ ನೀಡುವುದು ಸಮಿತಿಯ ಕರ್ತವ್ಯ. ಯೋಜನೆಗೆ ಅಡ್ಡಿಯಾಗದಿದ್ದರೆ ಅಂತಹ ಮರಗಳನ್ನು ಉಳಿಸಬೇಕು. ಈ ರೀತಿಯ ಪ್ರಕ್ರಿಯೆಯನ್ನು ಸಮಿತಿ ನಡೆಸಿದಂತೆ ಕಾಣಿಸುತ್ತಿಲ್ಲ' ಎಂದು ಪೀಠ ಅಭಿಪ್ರಾಯಪಟ್ಟಿತು.

'ಸಮಿತಿಯು ವಾಸ್ತವ ಗಮನಿಸದೆ ಯಾಂತ್ರಿಕವಾಗಿ ವರ್ತಿಸುತ್ತಿದೆ. ಹೀಗಾಗಿಯೇ ಬಿಬಿಎಂಪಿ ಪರವಾಗಿ ವರದಿ ನೀಡಿದೆ' ಎಂದು ಅರ್ಜಿದಾರರ ಪರ ವಕೀಲರು ಆರೋಪಿಸಿದರು. 'ಸಂಪೂರ್ಣ ಪ್ರಕ್ರಿಯೆಯನ್ನು ಪುನರ್ ಆರಂಭಿಸಿ ವರದಿ ನೀಡಬೇಕು. ನ್ಯಾಯಾಲಯವೂ ವರದಿ ಪರಿಶೀಲನೆ ನಡೆಸಲಿದೆ. ಆ ತನಕ ಮರ ಕಡಿಯಬಾರದು' ಎಂದು ಪೀಠ ತಿಳಿಸಿತು.

ಕಮಾಂಡ್ ಆಸ್ಪತ್ರೆಯಿಂದ ಹೋಪ್ ಫಾರ್ಮ್ ತನಕ ಸಿಗ್ನಲ್ ರಹಿತ ಕಾರಿಡಾರ್ ನಿರ್ಮಾಣಕ್ಕಾಗಿ ಅಂಡರ್ ಪಾಸ್ ನಿರ್ಮಾಣ ಮಾಡುವ ಉದ್ದೇಶ ಇದೆ. ಅದಕ್ಕಾಗಿ 25 ಮರಗಳನ್ನು ಕಡಿಯಲು, 7 ಮರಗಳನ್ನು ಸ್ಥಳಾಂತರಿಸಲು ಬಿಬಿಎಂಪಿ ಮುಂದಾಗಿತ್ತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Hospital & Medical Jobs

HEALTH BLOOM POLYCLINIC
with Clinical Lab, Pharmacy, Dental with Multispeciality also with Online Services.
Opening Shortly, offers Attractive Salary for immediate Vacancy
DUTY MEDICAL OFFICER – MBBS with Minimum 2years experience or those waiting for PG also can apply
PHARMACIST – D.Pharm with Minimum 5years experience of managing pharmacy of repute independently
SALES GIRLS – Minimum one year experience of selling medicines/home product in pharmacy
LAB TECHNICIAN/LAB IN CHARGE – Diploma in Medical Lab Technology with Minimum 5years of experience of Managing independently
RADIOLOGY TECHINICIAN(RT) – Diploma in Radiology with Minimum 3years experience of Operating X-Ray / Scanning & ECG
NURSES – Diploma in Nursing /+2 pass with nursing qualification with Minimum 2 years experience. Freshers can also apply
PURCHASE & FINANCE OFFICER – B.Com/M.Com with Minimum 5 Years experience in Purchase and also Finance in any hospital of repute.
RECEPTIONIST /CASHIER – BA/B.Sc preferably in computer science with 3 years experience in front office
Candidates matching job specs and looking for alround growth, May Walk in for Interview @ 10am on 1st Aug 2021 for posts in S.No 1 to 4 and 2nd Aug 2021 for posts in S.No 5 to 8 at 795, BEML Layout, Whitefield, Bangalore - 560066.
Those interested but not able to attend, May apply by E-mail info@healthbloomclinics.com & radicalreality@live.com
For Contact 97413 33222 99621 82221 0422-3513451

Drivers
WANTED BIKE rider's! Earn up to 30,000 per month & ride at your convenience time, Gauranteed Earnings, Extra Incentives, Insurance & more Benfits. Contact :-08041434143

Graphic Designers
WANTED MALE/ Female Graphic Designer for HI- END Prepress Software for a Pvt Limited Company in around Rajajinagar Age below 40 years Contact: 9108458798/ 23384085

General
WANTED OFFICE ASSISTANTS (Male) & DRIVERS. Bommanahalli (Bangalore) Ph: 08041109278/ 41110253 Email:starsilks@gmail.com

Marketing & Sales
WANTED MARKETING Executives For Private Limited Company Bangalore, Age Below 40 with Good Communication Skill fluent In English, Kannada, Hindi Contact: 9108458798/ 23384085

Situation Required
RETIRED VIGILANCE/ Security Manager, Expert Investigator,,60 Plus Seeks Suitable Position. Contact: 9845182814

RENTAL PROPERTIES

Accommodation Wanted

Commercial
"PLANET BLOOMINGDALE Pre-School looking for independent house with garden/ open play area in Basaveshwaranagar. 9035788999"

BUILDERS ESSENTIAL

Water Proofing Materials
LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology-9880916988

EDUCATION SPECIAL
DH Classifieds PV Classifieds
We are coming out with special offer for Admission Notice, Education Success Congratulation Ads
For details contact:
Jerry: 9731810277 Vishal: 9845114560
Tanveer: 9886213331
E-mail: dhclassifieds@deccanherald.co.in
DH Classifieds

REAL ESTATE SELLING

Farm House/ Land/ Resorts

General
5 ACRES On Magadi Bangalore High Way. 30 Kms From Vidhana Soudha. Suitable for Resorts, Schools, Petrol Pump etc. Contact Arjun: 7829774230

House

Vishweshwariah Layout
SALE: NAGADEVANAHALLI (Amma Ashrama) 20X42 BBMP 'A' Khatha EF Independent and Duplex- 3-Floors- 9980733501/ 9845021795

Sites

Jayanagar
SITE NO 868 WITH OLD HOUSE ON SALE 4 TBLOCK JAYANAGARA 38 A CROSS 40X52 SF CONTACT AGENT KRISHNAMURTHY- 82773 05783

REAL ESTATE BUYING

Industrial & Factory

Kavalbyrasandra
NEED SHUD 1000-1500 sq feet in & around Kavalbysandra/Kanakanagar Contact 9113007837.

Sites

Banashankari
BDA-SITES WANTED @ Banashankari VI Stage Vishweshwraiah Layout Anjanapura, Kempegowda Layout 20x30, 30x40, 40x60, 50x80 Imediate Settlement Call Rajesh: 9741072999

PUBLIC NOTICE
IN THE COURT OF THE HON'BLE LXXXV ADDITIONAL CITY CIVIL & SESSIONS JUDGE AT COMMERCIAL COURT, BANGALURU (CCH - 86)
Com. O.S. No. 1127 / 2019
BETWEEN: M/s SAMARTH ENTERPRISES Represented by its Proprietor viz., Sri G. SRIKANTH S/o Late H. Gopal Rao, Aged about 56 Years, office at: No. 15, 2nd Main Road, Tata Silk Farm, Basavanagudi, BENGALURE - 560 004. ...PLAINTIFF
AND
M/s. SRI NIDHI PHARMA Rep by its Proprietrix viz., Miss ANUSHA & OTHERS ...DEFENDANTS
NOTICE TO THE DEFENDANTS
1. M/s. SRI NIDHI PHARMA Rep by its Proprietrix viz., Miss ANUSHA, R/at: No. 2, 7th Main Road, Vinayaka Nagar, Wilson Garden, (Opposite to Wilson Garden) BENGALURU - 560 027.
And also at: No. 3823, Kuvempu Nagar, 17th Main Road, MCCB Block, DAVANAGERE - 577 004.
2. Sri KUMAR RAO S/o Not known, Age: Major
3. Sri Ullas S/o Sri Kumar Rao, Age: Major
Both are Residing at No. 3823, Kuvempu Nagar, 17th Main Road, MCCB Block, DAVANAGERE - 577 004.
Take notice that the Plaintiff has filed the above case against all of you for recovery of amount of Rs. 29,75,000/- (Rupees Twenty Nine Lakhs Seventy Five Thousand Only) along with 24% p.a. as interest.
All of you are hereby summoned to appear in this court in person or through pleader on the 16.8.2021 at 11.0' Clock to answer the same, failing which the matter will be heard and determined as ex-parte.
Given under my hand and seal of this Court the 27th day of July 2021.
By order of the Court, Sheristedar, City Civil Court, Bengaluru.
ADVOCATE FOR PLAINTIFF: Smt. VANI GOWDA K.B., Advocate No. 7, 1st Floor, Door No. 20, 5th Cross, Sirsi Road, Chamarajpet, BANGALORE - 560 018.

BUSINESS

Business to Business

Business
50 ROOMS HOTEL, Off Kanakapura Main Road available for Rent or Revenue sharing basis with MG Contact: 9591400500.

WEEKEND CORNER ಕ್ಲಾಸಿಫೈಡ್ಸ್

ಕಾಂಚೀಪುರಂ ಎ.ಜಿ. ಬಾಬು ಸಾಹ್ ರೇಷ್ಮೆ ಸೀರೆ ವ್ಯಾಪಾರಿಗಳು
ವರಮಹಾಲಕ್ಷ್ಮೀ ಹಬ್ಬದ ಮಾರಾಟ
ವೈಟ್ ಹೌಸ್
ನಂ.4ಬಿ, 14ನೇ ಮುಖ್ಯರಸ್ತೆ, 6ನೇ ಸೆಕ್ಟರ್, ಬಿ.ಡಿ.ಎ. ಕಾಂಪ್ಲೆಕ್ಸ್ ಹತ್ತಿರ, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು–560 102. ಮೊ. : 7904413982
ದಿನಾಂಕ: 30,31ನೇ ಜುಲೈ,1,2,3 ಮತ್ತು 4 ನೇ ಆಗಸ್ಟ್ 2021
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ – ಹಿಂತಿರುಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
ಒಂದು ಬಾರಿಗೆ 50 ಜನರಿಗೆ ಮಾತ್ರ ಪ್ರವೇಶ
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ
ನಮ್ಮ ಚಾನೆಲ್ ಅನ್ನು ಸಬ್‌ಸ್ಕ್ರೈಬ್ ಮಾಡಿ ಎ.ಜಿ. ಬಾಬು ಸಾಹ್ YouTube ಹೊಸ ಮಾರಾಟ ಮತ್ತು ಮಾಹಿತಿಗಾಗಿ ಬೆಲ್ ಐಕಾನ್ ಅನ್ನು ಒತ್ತಲು ಮರೆಯದಿರಿ

WANTED BUSINESS Partner, Lahab Veg Hotel, Investment Rs 5 Lakhs, Income 50:50. Contact: 8892501007/ 9606701007

Construction And Maintenance
CONSTRUCTION OF YOUR Dream House/ Villa- Renovation, Extension Floor Work etc with good Materials- 9880438314.

Business Offers

Finance
NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

MATRIMONIAL

Brides Wanted

Brahmin
TAMIL IYER IT executive MNC, Oct 77,5'7', Vegetarian seeks suitable girl from brahmin community- all sects contact Whatsapp no +1(818)9279760 or 9884075992

PERSONAL

Change of Name
I, GOPALA KRISHNA.A.R. Residing at #269/65, Sri KrishnaGarden, Kyalasanahalli, Bangalore-77 have changed my name to GEORGE A.R. videaffidavit dated 29.07.2021 before Notary Uday Kumar.K, Bangalore.

I, MAHIMA GUPTA BAL GOVIND GUPTA W/o. Ashish Agarwal, R/a#23, 50 Feet Road, Girinagar, Avalahalli Extension, Banashankari 3rd Stage, Bengaluru- 560085 Have Changed My Name to MAHIMA GUPTA Vide Affidavit Dated: 28.07.2021 Before Notary A.Manjula, Bangalore-09.

I EESHA KARTIK KRISHNAMOORTHY D/O Kartik Krishnamoorthy aged about 18 years R/A Flat No. F-015 Habitat Splender Apartment Gopalan Enterprises, ITPL Main Road, kundanahalli, Bangalore - 37, have changed my name as EESHA KARTIK vide affidavit dt: 12-7-2021, before Notary N Narendra Bangalore

I, ANUSHA, W/o, Rahul Bevinahal, R/o, #11, 'Srivatsa', 3rd Cross, Apoorva Layout, Nagarbhavi 2nd Stage, Bengaluru-72 have changed my name as ANUSHA BEVINAHAL, vide affidavit dated 28/07/2021 before Notary D.P. Jyothi, Bengaluru.

I, SANDEEP SI change my name to Mariappa C S/O Sottappa vide affidavit dated 24 July, 2021 before notary Muniswamy Bangalore- 562106.

SANJEEVA RAO F/o 14833801Y- Sep/MT-SRIKANTH LAMMATA R/a 1-9, Kattivaram, Pedda Srirampuram, Srikakulam, Andhra Pradesh changed name from SANJEEVA RAO to LAMMATA SANJEEVARAO notary KV Mani Bangalore.

I, ASFIYA Fareen, Student resident of Moidu complex, Vinayaka Temple Street, D.K.Halli Plantation, BEML-Nagar Post, K.G.F. Have changed my name to Asfiya Farheen Afzal vide affidavit dated 28.07.2021 before Notary Thangaraj S KGF.

RERA Registered Project: PRM/KA/RERA/1251/309/PR/191025/002967
SAI SHAKTHI shreya blessed life
READY FOR INTERIOR'S
BBMP APPROVED
off MAGADI ROAD Behind Andhra Bank, Andrahalli Main Road, that's reachable to everything...
2/3 BHK Apartments Starting 42 Lacs* Onwards
*T&C apply
Approved by leading Financial Institutions: SBI Canara Bank HDFC
ಸಾಯಿ ಶಕ್ತಿ ಡೆವಲಪರ್ಸ್ SAI SHAKTHI Developers Simple. Honest. Different
Dr. V. Subba Reddy/Kokila 99455 39673

ADMISSION CORNER

GOODWILL CHRISTIAN COLLEGE FOR WOMEN
(CSI Karnataka Central Diocese)
AFFILIATED TO BENGALURU NORTH UNIVERSITY
ADMISSIONS OPEN - 2021-22 (DIRECT AND ONLINE)
COURSES OFFERED
BBA
B.Com
BCA
B.Sc
B.A
#10, Promenade Road, Frazer Town, Bengaluru-560005
Ph : 080-25567177 / 41100422.
E-mail : goodwillchristiancollege@gmail.com
Website: www.goodwillchristiancollege.com

SOCIAL SERVICES

Others
HOME NURSES available for HOME/ HOSPITAL/ PATIENT CARE-24/7 MAJ Gandhinagar, Bangalore. Contact: 7022399993, 6366883838

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಗಾಂಧಿನಗರ: ಏಕಕಾಲಕ್ಕೆ 40 ಮಂದಿ ಉಳಿದುಕೊಳ್ಳಲು ವ್ಯವಸ್ಥೆ • ಪ್ರತಿ 15 ದಿನಕ್ಕೊಮ್ಮೆ ಆರೋಗ್ಯ ತಪಾಸಣೆ

ವಸತಿರಹಿತರ ಆಶ್ರಯ ಕೇಂದ್ರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಲಿಕೆ ವ್ಯಾಪ್ತಿಯಲ್ಲಿ ಇದುವರೆಗೆ ರಾತ್ರಿ ವಸತಿರಹಿತರಿಗಾಗಿ ಒಟ್ಟು 10 ಆಶ್ರಯ ಕೇಂದ್ರಗಳಿದ್ದವು. ಗಾಂಧಿನಗರ ವಾರ್ಡ್‌ನ ತುಳಸಿತೋಟದ ಬಳಿಯ ಆರೋಗ್ಯ ವೈದ್ಯಾಧಿಕಾರಿಯವರ ಕಚೇರಿ ಮೇಲ್ಭಾಗದಲ್ಲಿ ಸ್ಥಾಪಿಸಿರುವ ಆಶ್ರಯ ಕೇಂದ್ರ ಈ ಪಟ್ಟಿಗೆ ಹೊಸತಾಗಿ ಸೇರ್ಪಡೆಯಾಗಿದೆ.

ತುಳಸಿ ತೋಟದ ನೂತನ ಆಶ್ರಯ ಕೇಂದ್ರವನ್ನು ಶಾಸಕ ದಿನೇಶ್ ಗುಂಡೂರಾವ್ ಹಾಗೂ ಬಿಬಿಎಂಪಿಯ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಗುರುವಾರ ಉದ್ಘಾಟಿಸಿದರು.

ಈ ಕೇಂದ್ರದಲ್ಲಿ ಏಕಕಾಲಕ್ಕೆ 40 ಮಂದಿ ಉಳಿದುಕೊಳ್ಳಲು ವ್ಯವಸ್ಥೆ ಕಲ್ಪಿಸಲಾಗಿದೆ. ನಗರದಲ್ಲಿರುವ ರಾತ್ರಿ ವಸತಿರಹಿತರು, ನಿರಾಶ್ರಿತರು ಈ ಆಶ್ರಯ ಕೇಂದ್ರದಲ್ಲಿ ಆಶ್ರಯ ಪಡೆಯಬಹುದು. ಅವರಿಗೆ ಪಾಲಿಕೆ ವತಿಯಿಂದ ಊಟದ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಪ್ರತಿ 15 ದಿನಕ್ಕೊಮ್ಮೆ ಅವರ ಆರೋಗ್ಯ ತಪಾಸಣೆ ಮಾಡಲಾಗುತ್ತದೆ. ಯಾರಿಗಾದರೂ ಅನಾರೋಗ್ಯ ಸಮಸ್ಯೆ ಕಾಣಿಸಿಕೊಂಡರೆ ತಕ್ಷಣವೇ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತದೆ.

ವಸತಿರಹಿತರ ಆಶ್ರಯ ಕೇಂದ್ರಗಳಿಗೆ ದೀನದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದಡಿ ಅನುದಾನ ಒದಗಿಸಲಾಗುತ್ತದೆ.

ಗೂಡ್ಸ್‌ಶೆಡ್ ರಸ್ತೆಯ ಆಶ್ರಯ ಕೇಂದ್ರಕ್ಕೆ ಭೇಟಿ: ಗೂಡ್ಸ್‌ಶೆಡ್ ರಸ್ತೆಯಲ್ಲಿರುವ ಆಶ್ರಯ ಕೇಂದ್ರಕ್ಕೆ ಗೌರವ್ ಗುಪ್ತ ಹಾಗೂ ದಿನೇಶ್ ಗುಂಡೂರಾವ್ ಭೇಟಿ ನೀಡಿ ಅಲ್ಲಿ ಆಶ್ರಯ ಪಡೆದಿರುವ ವಸತಿರಹಿತರ ಯೋಗಕ್ಷೇಮ ವಿಚಾರಿಸಿದರು. ಈ ಆಶ್ರಯ ಕೇಂದ್ರದಲ್ಲೂ 40 ಮಂದಿ ಉಳಿದುಕೊಳ್ಳುವಷ್ಟು ವ್ಯವಸ್ಥೆ ಇದೆ. ಪ್ರಸ್ತುತ 38 ಮಂದಿ ಆಶ್ರಯ ಪಡೆದಿದ್ದಾರೆ.

ವಿಶೇಷ ಆಯುಕ್ತ (ಕಲ್ಯಾಣ) ರವೀಂದ್ರ ಹಾಗೂ ಪಶ್ಚಿಮ ವಲಯ ಜಂಟಿ ಆಯುಕ್ತ ಶಿವಸ್ವಾಮಿ ಆಶ್ರಯ ಕೇಂದ್ರಗಳ ವ್ಯವಸ್ಥೆ ಬಗ್ಗೆ ವಿವರಿಸಿದರು.

ಗೂಡ್ಸ್‌ಶೆಡ್ ರಸ್ತೆ ಬಳಿಯ ಆಶ್ರಯ ಕೇಂದ್ರದಲ್ಲಿ ಉಳಿದುಕೊಂಡಿರುವ ವಸತಿರಹಿತರೊಬ್ಬರ ಯೋಗಕ್ಷೇಮವನ್ನು ಗೌರವ್ ಗುಪ್ತ ವಿಚಾರಿಸಿದರು. ದಿನೇಶ್ ಗುಂಡೂರಾವ್ ಇದ್ದಾರೆ

ಬಿಬಿಎಂಪಿ ವ್ಯಾಪ್ತಿಯ ಆಶ್ರಯ ಕೇಂದ್ರಗಳು

- ಗೂಡ್ಸ್‌ಶೆಡ್ ರಸ್ತೆ ಆಶ್ರಯ ಕೇಂದ್ರ
- ಗೂಡ್ಸ್‌ಶೆಡ್ ರಸ್ತೆ (ತುಳಸಿ ತೋಟ) ಆಶ್ರಯ ಕೇಂದ್ರ
- ರಾಜಾಜಿನಗರ ರಾಮ ಮಂದಿರದ ಬಳಿ
- ಉಪ್ಪಾರಪೇಟೆ ಮುಂಭಾಗದ ಹೆಲ್ತ್ ಕಿಯಾಸ್ಕ್
- ಗಾಂಧಿನಗರದ ಬಿಬಿಎಂಪಿ (ಹುಡುಗರ) ಕಾಲೇಜು ಬಳಿ
- ಮರ್ಫಿ ಟೌನ್‌ನಲ್ಲಿ
- ಪೀಣ್ಯ ದಾಸರಹಳ್ಳಿಯಲ್ಲಿ ತುಮಕೂರು ರಸ್ತೆ ಪಕ್ಕ
- ಚೊಕ್ಕಸಂದ್ರ ಮುಖ್ಯ ರಸ್ತೆ ಬಳಿ
- ಹೂಡಿ ಮುಖ್ಯ ರಸ್ತೆ ಬಳಿಯ ನಗರಸಭೆ ಕಟ್ಟಡದಲ್ಲಿ
- ಜಂಬೂಸವಾರಿ ದಿಣ್ಣೆಯ ಅಂಬೇಡ್ಕರ್ ಭವನದಲ್ಲಿ
- ಬಾಗಲೂರು ರಸ್ತೆ ಬಳಿ

ಸ್ವಾತಂತ್ರ್ಯ ಉದ್ಯಾನ– ಅನುದಾನಕ್ಕೆ ಕೋರಿಕೆ

ಸುಮಾರು 21 ಎಕರೆ ಪ್ರದೇಶದಲ್ಲಿ ವ್ಯಾಪಿಸಿರುವ ನಗರದ ಸ್ವಾತಂತ್ರ್ಯ ಉದ್ಯಾನವನ್ನು ಗೌರವ್ ಗುಪ್ತ ಪರಿಶೀಲನೆ ನಡೆಸಿದರು.

ಇಲ್ಲಿ ವಾಯುವಿಹಾರ ಮಾರ್ಗ, ಕಾರಂಜಿ, ಸಭಾಂಗಣ, ಇಲ್ಲಿನ ಭೂದೃಶ್ಯ ಸುಂದರಗೊಳಿಸುವಿಕೆ, ಶೌಚಾಲಯ ಮತ್ತಿತರ ಸೌಕರ್ಯಗಳ ಅಭಿವೃದ್ಧಿಗೆ ಅನುದಾನ ಒದಗಿಸುವಂತೆ ದಿನೇಶ್ ಗುಂಡೂರಾವ್ ಅವರು ಮುಖ್ಯ ಆಯುಕ್ತರಲ್ಲಿ ಕೋರಿದರು.

ಸ್ವಾತಂತ್ರ್ಯ ಉದ್ಯಾನ ನವೀಕರಣದ ರೂಪುರೇಷೆ ಸಿದ್ದಪಡಿಸುವಂತೆ ಪಾಲಿಕೆಯ ತೋಟಗಾರಿಕಾ ವಿಭಾಗದ ಅಧಿಕಾರಿಗೆ ಮುಖ್ಯ ಆಯುಕ್ತರು ಸೂಚನೆ ನೀಡಿದರು.

ಒಡೆಯರ್ ಕಾಲದ ಶಾಲಾ ಕಟ್ಟಡ ₹ 2 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ

ನಗರದ ಗಾಂಧಿನಗರ ವಾರ್ಡ್‌ನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡವನ್ನು ವಿಶೇಷ ಅಭಿವೃದ್ಧಿ ಕಾರ್ಯಕ್ರಮಗಳ ಅಡಿ ₹ 2 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಮೈಸೂರು ಒಡೆಯರ್ ಆಡಳಿತದ ಕಾಲದಲ್ಲಿ ಪ್ರಾರಂಭಿಸಲಾದ ಈ ಶಾಲೆಯ ಕಟ್ಟಡ ತೀರಾ ಹಳೆಯದು. ಈ ಪುರಾತನ ಕಟ್ಟಡವನ್ನು ಸಂರಕ್ಷಿಸಿ ಉನ್ನತೀಕರಿಸಲಾಗುತ್ತಿದೆ. ಈಗಾಗಲೇ ಶೇ 80 ರಷ್ಟು ಕಾಮಗಾರಿ ನಡೆದಿದೆ.

ದಿನೇಶ್ ಗುಂಡೂರಾವ್ ಹಾಗೂ ಗೌರವ್ ಗುಪ್ತ ಅವರು ಕಟ್ಟಡ ಕಾಮಗಾರಿಯನ್ನು ಪರಿಶೀಲಿಸಿದರು. ತ್ವರಿತವಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಮುಖ್ಯ ಆಯುಕ್ತರು ಸೂಚನೆ ನೀಡಿದರು.

‘ಬೃಂದಾವನ ಪ್ರಾಪರ್ಟೀಸ್’ ವಿರುದ್ಧ ಎಫ್‌ಐಆರ್

ಬೆಂಗಳೂರು: ನಿವೇಶನ ಮಾರಾಟ ಹೆಸರಿನಲ್ಲಿ ನೂರಾರು ಜನರಿಂದ ಲಕ್ಷಾಂತರ ರೂಪಾಯಿ ಪಡೆದು ವಂಚಿಸಿರುವ ಆರೋಪದಡಿ ‘ಬೃಂದಾವನ ಪ್ರಾಪರ್ಟೀಸ್’ ಕಂಪನಿ ವಿರುದ್ಧ ರಾಜಾಜಿನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ವಂಚನೆಗೀಡಾಗಿರುವ ಗಾಯತ್ರಿ ಎಂಬುವರು ದೂರು ನೀಡಿದ್ದಾರೆ. ಕಂಪನಿಯ ನಿರ್ದೇಶಕ ದಿನೇಶ್ ಎಸ್. ಗೌಡ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ. ಆರೋಪಿಗಳು ತಲೆಮರೆಸಿಕೊಂಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ರಾಜಾಜಿನಗರದ 3ನೇ ಹಂತದಲ್ಲಿ ಕಂಪನಿ ಕಚೇರಿ ಇದೆ. ತಾವರೆಕೆರೆ, ಹೆಸರಘಟ್ಟ, ನೆಲಮಂಗಲ ಹಾಗ ಇತರೆಡೆ ಕಂಪನಿಯ ಜಾಗವಿರುವುದಾಗಿ ಆರೋಪಿಗಳು ಹೇಳುತ್ತಿದ್ದರು. ನಿವೇಶನಗಳನ್ನು ಅಭಿವೃದ್ಧಿಪಡಿಸಿ ಕಡಿಮೆ ಹಣದಲ್ಲಿ ಮಾರಾಟ ಮಾಡುವುದಾಗಿ ತಿಳಿಸುತ್ತಿದ್ದರು. ಈ ಬಗ್ಗೆ ಜಾಹೀರಾತು ಸಹ ನೀಡುತ್ತಿದ್ದರು.’

‘ಆರೋಪಿಗಳ ಮಾತು ನಂಬಿದ್ದ ನೂರಾರು ಜನ, ನಿವೇಶನ ಖರೀದಿಗಾಗಿ ಹಣ ಪಾವತಿ ಮಾಡಿದ್ದರು. ಆದರೆ, ಅವರಿಗೆ ಇದುವರೆಗೂ ನಿವೇಶನ ನೀಡಿರಲಿಲ್ಲ. ಈ ಬಗ್ಗೆ ಪ್ರಶ್ನಿಸಿದಾಗ, ‘ನಿವೇಶನ ಅಭಿವೃದ್ಧಿ ಕೆಲಸ ನಡೆದಿದೆ’ ಎಂದಷ್ಟೇ ಆರೋಪಿಗಳು ಹೇಳುತ್ತಿದ್ದರು. ಈ ಸಂಗತಿಯೂ ದೂರಿನಲ್ಲಿದೆ’ ಎಂದೂ ಮೂಲಗಳು ತಿಳಿಸಿವೆ.

‘ಕಾರ್ಮಿಕರು, ಆಟೊ ಚಾಲಕರು, ಖಾಸಗಿ ನೌಕರರು ಸೇರಿ 200ಕ್ಕೂ ಹೆಚ್ಚು ಜನರಿಂದ ಸುಮಾರು ₹ 5 ಕೋಟಿ ಹಣವನ್ನು ಆರೋಪಿಗಳು ಪಡೆದಿದ್ದ ಮಾಹಿತಿ ಸಿಕ್ಕಿದೆ’ ಎಂದೂ ಹೇಳಿವೆ.

ಕಚೇರಿಗೆ ಬೀಗ: ‘ಬೃಂದಾವನ ಪ್ರಾಪರ್ಟೀಸ್’ ಕಂಪನಿಯ ಕಚೇರಿಗೆ ಬೀಗ ಹಾಕಿಕೊಂಡು ಆರೋಪಿ ದಿನೇಶ್ ಗೌಡ ಹಾಗೂ ಇತರರು ಪರಾರಿಯಾಗಿದ್ದಾರೆ.

ಕಚೇರಿ ಬಳಿ ಗುರುವಾರ ಸೇರಿದ್ದ ಗ್ರಾಹಕರು, ಪ್ರತಿಭಟನೆ ನಡೆಸಿದರು. ‘ಆರೋಪಿಗಳನ್ನು ಬಂಧಿಸಿ ನಮ್ಮ ಹಣ ಕೊಡಿಸಿ’ ಎಂದು ಒತ್ತಾಯಿಸಿದರು.

ಹಬೆ: ದೇಹ ಸುಟ್ಟುಕೊಂಡ ಬಾಲಕ

ಬೆಂಗಳೂರು: ಏಳು ವರ್ಷದ ಬಾಲಕನೊಬ್ಬ ಹಬೆ ತೆಗೆದುಕೊಳ್ಳುವಾಗ ಬಿಸಿ ನೀರು ಮೈಮೇಲೆ ಚೆಲ್ಲಿ ದೇಹದ ಅರ್ಧದಷ್ಟು ಭಾಗ ಸುಟ್ಟು ಹೋದ ಘಟನೆ ನಗರದಲ್ಲಿ ನಡೆದಿದೆ.

ವೈಟ್‌ಫೀಲ್ಡ್‌ನ ಬಾಲಕನಿಗೆ ಕೊಲಂಬಿಯಾ ಏಷ್ಯಾ ಆಸ್ಪತ್ರೆಯ ವೈದ್ಯರು ಚಿಕಿತ್ಸೆ ನೀಡಿದ್ದು, ಚರ್ಮದ ಕಸಿ ಮಾಡಲಾಗಿದೆ. ಇದರಿಂದಾಗಿ ಬಾಲಕ ಚೇತರಿಸಿಕೊಂಡಿದ್ದಾನೆ.

‘ಶೀತಜ್ವರ ಸಮಸ್ಯೆ ಇದ್ದ ಬಾಲಕನಿಗೆ, ಹಬೆ ತೆಗೆದುಕೊಳ್ಳುವಂತೆ ಬಿಸಿನೀರು ಒಳಗೊಂಡ ಸಾಧನವನ್ನು ಆತನ ತಾಯಿ ಒದಗಿಸಿದ್ದರು. ಹಬೆ ತೆಗೆದುಕೊಳ್ಳುವ ವೇಳೆ ನಿದ್ದೆಗಣ್ಣಿನಲ್ಲಿ ತೂಕಡಿಸಿದ ಬಾಲಕ, ಆ ಸಾಧನವನ್ನು ತಳ್ಳಿದ್ದಾನೆ. ಇದರಿಂದಾಗಿ ದೇಹದ ವಿವಿಧ ಭಾಗಗಳು ಸುಟ್ಟಿವೆ’ ಎಂದು ಆಸ್ಪತ್ರೆ ತಿಳಿಸಿದೆ.

ಮೆಟ್ರೊ ಕೆಂಗೇರಿ ಮಾರ್ಗ: ರೈಲ್ವೆ ಸುರಕ್ಷತಾ ಆಯುಕ್ತರಿಂದ ಪರಿಶೀಲನೆ

ಶೀಘ್ರದಲ್ಲಿ ಸಂಚಾರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ ಎರಡನೇ ಹಂತದಲ್ಲಿ ಮೈಸೂರು ರಸ್ತೆಯ ವಿಸ್ತರಿತ ಮಾರ್ಗದಲ್ಲಿ ಆಗಸ್ಟ್ ಕೊನೆಯ ಅಥವಾ ಸೆಪ್ಟೆಂಬರ್ ಮೊದಲ ವಾರದಲ್ಲಿ ಮೆಟ್ರೊ ರೈಲು ಸಂಚಾರ ಆರಂಭವಾಗುವ ಸಾಧ್ಯತೆ ಇದ್ದು, ಮಾರ್ಗವನ್ನು ಆ.11 ಮತ್ತು 12ರಂದು ರೈಲ್ವೆ ಸುರಕ್ಷತಾ ಆಯುಕ್ತರು (ಸಿಆರ್‌ಎಸ್) ಪರಿಶೀಲನೆ ನಡೆಸಲಿದ್ದಾರೆ.

ಬಹು ನಿರೀಕ್ಷಿತ ಮೈಸೂರು ರಸ್ತೆ ನಿಲ್ದಾಣದಿಂದ ಕೆಂಗೇರಿ ನಿಲ್ದಾಣದವರೆಗಿನ ಮಾರ್ಗದಲ್ಲಿ ಈಗಾಗಲೇ ಭೌತಿಕ ಕಾಮಗಾರಿ ಪೂರ್ಣಗೊಂಡಿದೆ. ಸಿಗ್ನಲಿಂಗ್, ದೂರಸಂವಹನ ಸಂಬಂಧಿತ ವ್ಯವಸ್ಥೆ ಅಳವಡಿಕೆಯೂ ಮುಕ್ತಾಯವಾಗಿದೆ.

ಮೆಟ್ರೊ ಸಿಗ್ನಲ್‌ಗಳು, ಹಳಿಗಳು, ನಿಲ್ದಾಣಗಳು, ತುರ್ತು ನಿರ್ಗಮನ ಸೇವೆ ಸೇರಿದಂತೆ ಸಮಗ್ರ ಪರಿಶೀಲನೆಯನ್ನು ಸಿಆರ್‌ಎಸ್ ತಂಡ ನಡೆಸಲಿದೆ. ನಂತರ ಯಾವುದಾದರೂ ಮಾರ್ಪಾಡುಗಳು ಕಂಡುಬಂದರೆ, ಅವುಗಳ ಬಗ್ಗೆ ನಿಗಮಕ್ಕೆ ಸೂಚನೆ ನೀಡಲಿದೆ. ಈ ಎಲ್ಲ ಪ್ರಕ್ರಿಯೆಗಳು ಮುಗಿದು, ಹೆಚ್ಚು-ಕಡಿಮೆ 15-20 ದಿನಗಳಲ್ಲಿ ಹಸಿರು ನಿಶಾನೆ ಸಿಗುವ ಸಾಧ್ಯತೆ ಇದೆ. ಆದರೆ, ವಾಣಿಜ್ಯ ಸೇವೆಗೆ ಮುಕ್ತಗೊಳಿಸುವ ಬಗ್ಗೆ ಇನ್ನೂ ದಿನಾಂಕ ನಿಗದಿಯಾಗಿಲ್ಲ ಎಂದು ಬಿಎಂಆರ್‌ಸಿಎಲ್ ಮೂಲಗಳು ಸ್ಪಷ್ಟಪಡಿಸಿವೆ.

ಹಲವು ಗಡುವು: ಕೆಂಗೇರಿ ಮಾರ್ಗವು ಈಗಾಗಲೇ ಹಲವು ಗಡುವುಗಳನ್ನು ಮೀರಿದೆ. ವಾಸ್ತವವಾಗಿ 2018ರ ಡಿಸೆಂಬರ್‌ನಲ್ಲೇ ಇದು ಲೋಕಾರ್ಪಣೆ ಆಗಬೇಕಿತ್ತು. ಆದರೆ, ಕಾರಣಾಂತರಗಳಿಂದ 2019ರ ಮಾರ್ಚ್‌ಗೆ ಮುಂದೂಡಲ್ಪಟ್ಟಿತ್ತು. ಅಲ್ಲಿಂದ 2019ರ ನವೆಂಬರ್, 2020ರ ಅಕ್ಟೋಬರ್, 2021ರ ಫೆಬ್ರುವರಿ, ಏಪ್ರಿಲ್, ಜೂನ್‌ಗೆ ಸೇವೆಗೆ ಮುಕ್ತಗೊಳಿಸುವ ಗುರಿ ಇತ್ತು. ಇತ್ತೀಚೆಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮಾರ್ಗ ಪರಿಶೀಲನೆ ನಡೆಸಿದಾಗ, ಜುಲೈಗೆ ಉದ್ಘಾಟನೆ ಮಾಡಲಾಗುತ್ತದೆ ಎಂದು ಬಿಎಂಆರ್‌ಸಿಎಲ್ ಹೇಳಿತ್ತು.

ಗರಿಷ್ಠ ಪ್ರಯಾಣ ದರ ₹56 ?: ಉದ್ದೇಶಿತ ಮಾರ್ಗದಲ್ಲಿ ನಾಯಂಡಹಳ್ಳಿ ಸೇರಿದಂತೆ ಏಳು ನಿಲ್ದಾಣಗಳು ಬರಲಿದ್ದು, ನಿತ್ಯ 75 ಸಾವಿರ ಜನರಿಗೆ ಇದರಿಂದ ಅನುಕೂಲ ಆಗಲಿದೆ. ಸೇವೆಗೆ ಮುಕ್ತಗೊಂಡ ನಂತರ ನೇರಳೆ ಮಾರ್ಗದ (ಬೈಯಪ್ಪನಹಳ್ಳಿಯಿಂದ ಕೆಂಗೇರಿ) ಗರಿಷ್ಠ ಪ್ರಯಾಣ ದರ ಅಂದಾಜು ₹56 ಆಗುವ ಸಾಧ್ಯತೆ ಇದೆ.

ಅಂಕಿ–ಅಂಶ

- **7.53** ಕಿ.ಮೀ. — ಮೈಸೂರು ರಸ್ತೆ ವಿಸ್ತರಿತ ಮಾರ್ಗದ ಉದ್ದ
- **₹1,920** ಕೋಟಿ — ಒಟ್ಟು ಯೋಜನಾ ವೆಚ್ಚ
- **₹254** ಕೋಟಿ — ಪ್ರತಿ ಕಿ.ಮೀ. ಮೆಟ್ರೊ ಮಾರ್ಗ ನಿರ್ಮಾಣ ವೆಚ್ಚ
- **₹300** ಕೋಟಿ — ಭೂಸ್ವಾಧೀನ ಪರಿಹಾರ ವೆಚ್ಚ

ಈ ಮಾರ್ಗದಲ್ಲಿನ ನಿಲ್ದಾಣಗಳು

ನಾಯಂಡಹಳ್ಳಿ, ರಾಜರಾಜೇಶ್ವರಿ ನಗರ, ಜ್ಞಾನ ಭಾರತಿ, ಪಟ್ಟಣಗೆರೆ, ಕೆಂಗೇರಿ ಬಸ್ ಟರ್ಮಿನಲ್, ಕೆಂಗೇರಿ, ಚಲ್ಲಘಟ್ಟ

ವೈದ್ಯ ಕೋರ್ಸ್: ಒಬಿಸಿಗೆ ಶೇ 27 ಮೀಸಲು

ಪ್ರಜಾವಾಣಿ ವಾರ್ತೆ

ನವದೆಹಲಿ: ವೈದ್ಯಕೀಯ, ದಂತ ವೈದ್ಯಕೀಯ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ನ ಅಖಿಲ ಭಾರತ ಕೋಟಾದಲ್ಲಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಶೇ 27ರಷ್ಟು ಮತ್ತು ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ (ಇಡಬ್ಲ್ಯುಎಸ್) ಶೇ 10ರಷ್ಟು ಮೀಸಲಾತಿ ಯನ್ನು ಕೇಂದ್ರ ಸರ್ಕಾರವು ಘೋಷಿಸಿದೆ. 2021–22ನೇ ಶೈಕ್ಷಣಿಕ ವರ್ಷದಿಂದ ಇದು ಅನ್ವಯ ಆಗಲಿದೆ.

ಒಬಿಸಿಗೆ ಸೇರಿದ ಪದವಿಯ ಸುಮಾರು 1,500 ವಿದ್ಯಾರ್ಥಿಗಳು, ಸ್ನಾತಕೋತ್ತರ ಪದವಿಯ ಸುಮಾರು 2,500 ವಿದ್ಯಾರ್ಥಿಗಳಿಗೆ ಈ ನಿರ್ಧಾರದಿಂದ ಪ್ರತಿ ವರ್ಷ ಅನುಕೂಲ ಆಗಲಿದೆ ಎಂದು ಆರೋಗ್ಯ ಸಚಿವಾಲಯವು ಮಾಹಿತಿ ನೀಡಿದೆ. ಹಾಗೆಯೇ, ಇಡಬ್ಲ್ಯುಎಸ್‌ನ 550 ವಿದ್ಯಾರ್ಥಿಗಳಿಗೆ ಪದವಿಯಲ್ಲಿ ಮತ್ತು 1,000 ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಪ್ರಯೋಜನ ಆಗಲಿದೆ.

ವೈದ್ಯಕೀಯ ಕೋರ್ಸ್‌ಗಳಲ್ಲಿ ಒಬಿಸಿ ಮೀಸಲು ಜಾರಿ ದೀರ್ಘ ಕಾಲದಿಂದ ಬಾಕಿ ಇತ್ತು. ಪ್ರಧಾನಿ ನರೇಂದ್ರ ಮೋದಿ ಅವರು ಹಿರಿಯ ಸಚಿವರ ಜತೆಗೆ ಸೋಮವಾರ ಸಭೆ ನಡೆಸಿ, ಮೀಸಲಾತಿ ಸಮಸ್ಯೆ ಪರಿಹರಿಸುವಂತೆ ಆರೋಗ್ಯ ಸಚಿವಾಲಯಕ್ಕೆ ನಿರ್ದೇಶನ ನೀಡಿದ್ದಾರೆ.

ದೇಶದ ಯಾವುದೇ ರಾಜ್ಯದಲ್ಲಿ ಇರುವ ಉತ್ತಮ ವೈದ್ಯಕೀಯ ಕಾಲೇಜಿನಲ್ಲಿ ವ್ಯಾಸಂಗ ನಡೆಸಲು ವಿದ್ಯಾರ್ಥಿಗೆ ಅವಕಾಶ ಸಿಗಬೇಕು. ಅದಕ್ಕಾಗಿ ಪ್ರತಿಭೆ ಆಧಾರಿತ ಅವಕಾಶ ನೀಡಿಕೆ ವ್ಯವಸ್ಥೆ ಬೇಕು ಎಂದು ಸುಪ್ರೀಂ ಕೋರ್ಟ್ 1986ರಲ್ಲಿ ಹೇಳಿತ್ತು. ಹಾಗಾಗಿಯೇ ಅಖಿಲ ಭಾರತ ಕೋಟಾ ಎಂಬುದು ಜಾರಿಗೆ ಬಂದಿತ್ತು.

ಸರ್ಕಾರಿ ಕಾಲೇಜುಗಳಲ್ಲಿ ವೈದ್ಯಕೀಯ, ದಂತ ವೈದ್ಯಕೀಯ ಪದವಿ ಕೋರ್ಸ್‌ಗಳ ಲಭ್ಯ ಇರುವ ಒಟ್ಟು ಸೀಟುಗಳ ಪೈಕಿ ಶೇ 15ರಷ್ಟು ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಶೇ 50ರಷ್ಟು ಸೀಟುಗಳನ್ನು ಅಖಿಲ ಭಾರತ ಕೋಟಾ ಎಂದು ಪರಿಗಣಿಸಲಾಗುತ್ತದೆ.

ಅಖಿಲ ಭಾರತ ಕೋಟಾದಲ್ಲಿ ಮೀಸಲಾತಿ ಮೊದಲು ಇರಲಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಕ್ರಮವಾಗಿ ಶೇ 15ರಷ್ಟು ಮತ್ತು ಶೇ 7.5ರಷ್ಟು ಮೀಸಲಾತಿ ನೀಡಬೇಕು ಎಂದು ಸುಪ್ರೀಂ ಕೋರ್ಟ್ 2007ರಲ್ಲಿ ನಿರ್ದೇಶನ ನೀಡಿತ್ತು. ಹೀಗಾಗಿ ಅಖಿಲ ಭಾರತ ಕೋಟಾದಲ್ಲಿ ಮೀಸಲಾತಿ ಜಾರಿಗೆ ಬಂದಿತ್ತು.

ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳ (ಪ್ರವೇಶಾತಿಯಲ್ಲಿ ಮೀಸಲಾತಿ) ಕಾಯ್ದೆಯು 2007ರಲ್ಲಿ ಜಾರಿಗೆ ಬರುವುದರೊಂದಿಗೆ ಒಬಿಸಿಗೆ ಏಕರೂಪದಲ್ಲಿ ಶೇ 27ರಷ್ಟು ಮೀಸಲಾತಿ ನೀಡಲು ಅವಕಾಶ ಆಯಿತು. ಸಫ್ದರ್‌ಜಂಗ್ ಆಸ್ಪತ್ರೆ, ಲೇಡಿ ಹಾರ್ಡಿಂಜ್ ವೈದ್ಯಕೀಯ ಕಾಲೇಜು, ಅಲೀಗಡ ಮುಸ್ಲಿಂ ವಿಶ್ವವಿದ್ಯಾಲಯ, ಬನಾರಸ್ ಹಿಂದೂ ವಿಶ್ವವಿದ್ಯಾಲಯದಂತಹ ಕೇಂದ್ರೀಯ ಸಂಸ್ಥೆಗಳಲ್ಲಿ ಈ ಮೀಸಲಾತಿ ಜಾರಿಗೆ ಬಂತು. ಆದರೆ, ರಾಜ್ಯಗಳ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿ ಇದು ಜಾರಿಗೆ ಬರಲಿಲ್ಲ.

ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇ 10ರಷ್ಟು ಮೀಸಲಾತಿ ಒದಗಿಸುವುದಕ್ಕಾಗಿ ಸಂವಿಧಾನಕ್ಕೆ 2019ರಲ್ಲಿ ತಿದ್ದುಪಡಿ ತರಲಾಯಿತು.

ನಿರ್ಮಾಪಕರ ಮನೆಯಲ್ಲಿ ಕಳವು

ಬೆಂಗಳೂರು: ಸಿನಿಮಾ ನಿರ್ಮಾಪಕ ರಮೇಶ್ ಕಶ್ಯಪ್ ಮನೆಯಲ್ಲಿ ಕಳವು ಮಾಡಿದ್ದ ಆರೋಪದಡಿ, ಅವರ ಕಾರು ಚಾಲಕ ಚಂದ್ರಶೇಖರ್ (32) ಸೇರಿ ಇಬ್ಬರನ್ನು ಹನುಮಂತನಗರ ಪೊಲೀಸರು ಬಂಧಿಸಿದ್ದಾರೆ.

ಮನೆಯಲ್ಲಿ ಜುಲೈ 10ರಂದು ಕಳ್ಳತನ ಆಗಿತ್ತು. ₹ 3 ಲಕ್ಷ ನಗದು ಹಾಗೂ 710 ಗ್ರಾಂ ಚಿನ್ನಾಭರಣ ಕಳವಾಗಿರುವುದಾಗಿ ಕಶ್ಯಪ್ ದೂರು ನೀಡಿದ್ದರು.

‘ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಾಗ, ಆರೋಪಿಗಳ ಬಗ್ಗೆ ಸುಳಿವುಗಳು ಸಿಕ್ಕವು. ಅದನ್ನು ಆಧರಿಸಿ ಚಂದ್ರಶೇಖರ್ ಹಾಗೂ ಅಭಿಷೇಕ್ (34) ಎಂಬುವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಕಳ್ಳತನ ಎಸಗಿರುವುದಾಗಿ ಅವರಿಬ್ಬರು ತಪ್ಪೊಪ್ಪಿಕೊಂಡರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕಶ್ಯಪ್ ಕಾರು ಚಾಲಕ ಚಂದ್ರಶೇಖರ್, ಮನೆಯ ನಕಲಿ ಕೀ ಮಾಡಿಸಿಟ್ಟುಕೊಂಡಿದ್ದ. ಮನೆಯಲ್ಲಿ ಯಾರೂ ಇಲ್ಲದ ವೇಳೆ ಸ್ನೇಹಿತ ಅಭಿಷೇಕ್ ಕೈಗೆ ನಕಲಿ ಕೀ ಕೊಟ್ಟು ಕಳ್ಳತನ ಮಾಡಿಸಿದ್ದ.’ ಎಂದೂ ಮೂಲಗಳು ತಿಳಿಸಿವೆ.

₹ 5 ಲಕ್ಷ ಸುಲಿಗೆ ಮಾಡಿ ₹ 10 ಲಕ್ಷ ಲಂಚಕ್ಕೆ ಬೇಡಿಕೆ

ಇನ್‌ಸ್ಪೆಕ್ಟರ್, ಪಿಎಸ್‌ಐಗಳ ಅಮಾನತು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ‘ಆರೋಪಿಯಿಂದ ₹ 5 ಲಕ್ಷ ಸುಲಿಗೆ ಮಾಡಿ, ₹ 10 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಆರೋಪದಡಿ ವೈಟ್‌ಫೀಲ್ಡ್ ವಿಭಾಗದ ಸೈಬರ್ ಕ್ರೈಂ ಠಾಣೆಯ ಇನ್‌ಸ್ಪೆಕ್ಟರ್ ಸೇರಿ ನಾಲ್ವರು ಪೊಲೀಸರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ನೆಪದಲ್ಲಿ ಆರೋಪಿಗೆ ಕಿರುಕುಳ ನೀಡಿದ್ದ ಪೊಲೀಸರು, ಅವರಿಂದ ಹಣ ಸುಲಿಗೆ ಮಾಡಿದ್ದರು. ಬೇಸತ್ತ ಆರೋಪಿ, ಆಡಿಯೊ ರೆಕಾರ್ಡಿಂಗ್ ಸಮೇತ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ದೂರು ನೀಡಿದ್ದರು.

ಇನ್‌ಸ್ಪೆಕ್ಟರ್ ರೇಣುಕಾ, ಸಬ್ ಇನ್‌ಸ್ಪೆಕ್ಟರ್‌ಗಳಾದ (ಪಿಎಸ್‌ಐ) ನವೀನ್, ಗಣೇಶ್ ಹಾಗೂ ಕಾನ್‌ಸ್ಟೆಬಲ್ ಹೇಮಂತ್ ವಿರುದ್ಧ ಜುಲೈ 20ರಂದು ಎಫ್‌ಐಆರ್ ದಾಖಲಾಗಿತ್ತು. ಪ್ರಾಥಮಿಕ ತನಿಖೆ ನಡೆಸಿದ್ದ ಎಸಿಬಿ ಪೊಲೀಸರು, ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಹಾಗೂ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ವರದಿ ನೀಡಿದ್ದರು.

ರೇಣುಕಾ

ಎಸಿಬಿ ವರದಿ ಪರಿಶೀಲಿಸಿದ್ದ ರಾಜ್ಯ ಪೊಲೀಸ್ ಮಹಾನಿರ್ದೇಶಕರು, ಇನ್‌ಸ್ಪೆಕ್ಟರ್ ರೇಣುಕಾ ಅವರನ್ನು ಅಮಾನತು ಮಾಡಿ ಆದೇಶಿಸಿದ್ದಾರೆ. ಪಿಎಸ್‌ಐಗಳಾದ ನವೀನ್, ಗಣೇಶ್ ಹಾಗೂ ಕಾನ್‌ಸ್ಟೆಬಲ್ ಹೇಮಂತ್ ಅವರು ಅಮಾನತುಗೊಂಡವರು.

ಪ್ರಕರಣ ವಿವರ: ‘ಒಳಾಂಗಣ ವಿನ್ಯಾಸ ಕೆಲಸ ಮಾಡುವುದಾಗಿ ಹೇಳಿ ಹಣ ಪಡೆದಿದ್ದ ಸುದೀಪ್ ಎಂಬುವರು, ಕೆಲಸ ಮಾಡಿಲ್ಲ. ಹಣವನ್ನೂ ಮರಳಿಸಿಲ್ಲ’ ಎಂದು ಶ್ವೇತಾಸಿಂಗ್ ಎಂಬುವರು ವೈಟ್‌ಫೀಲ್ಡ್ ವಿಭಾಗದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದರು. ಇದೇ ಪ್ರಕರಣದಲ್ಲೇ ಪೊಲೀಸರು ತಮ್ಮಿಂದ ಹಣ ಸುಲಿಗೆ ಮಾಡಿರುವುದಾಗಿ ಸುದೀಪ್, ಎಸಿಬಿಗೆ ನೀಡಿದ್ದ ದೂರಿನಲ್ಲಿ ತಿಳಿಸಿದ್ದರು.

‘ಜುಲೈ 16ರಂದು ಮನೆಗೆ ಬಂದಿದ್ದ ಪೊಲೀಸರು, ವಿಚಾರಣೆ ಮಾಡಬೇಕೆಂದು ಹೇಳಿ ಪತ್ನಿಯೊಂದಿಗೆ ಬಲವಂತವಾಗಿ ಠಾಣೆಗೆ ಕರೆದೊಯ್ದಿದ್ದರು. ಬಾಕಿ ಇರುವ ಕೆಲಸ ಪೂರ್ಣಗೊಳಿಸಲು ಕಾಲಾವಕಾಶ ನೀಡುವಂತೆ ಕೋರಿದ್ದೆ. ಆಗ ಪಿಎಸ್‌ಐ ನವೀನ್, ‘ಶ್ವೇತಾ ಸಿಂಗ್ ಅವರಿಗೆ ಕೂಡಲೇ ₹ 5 ಲಕ್ಷ ನೀಡಬೇಕು ಹಾಗೂ ₹ 10 ಲಕ್ಷ ಲಂಚವನ್ನು ನಮಗೆ ನೀಡಿದರೆ ಬಂಧಿಸುವುದಿಲ್ಲ’ ಎಂದಿದ್ದರು. ಸಂಬಂಧಿ ಚಂದ್ರನ್ ಬಳಿ ₹ 10 ಲಕ್ಷ ಪಡೆದು, ₹ 5 ಲಕ್ಷವನ್ನು ಶ್ವೇತಾ ಸಿಂಗ್ ಖಾತೆಗೆ ವರ್ಗಾವಣೆ ಮಾಡಿದ್ದೆ. ಉಳಿದ ₹ 5 ಲಕ್ಷವನ್ನು ಪಿಎಸ್‌ಐ ನವೀನ್ ಅವರಿಗೆ ಕೊಟ್ಟಿದೆ’ ಎಂದು ಸುದೀಪ್ ದೂರಿನಲ್ಲಿ ಉಲ್ಲೇಖಿಸಿದ್ದರು.

‘ಬಾಕಿ ₹ 5 ಲಕ್ಷ ತಂದುಕೊಡುವಂತೆ ಪೊಲೀಸರು ಹೇಳಿದ್ದರು. ಜುಲೈ 17ರಂದು ಠಾಣೆಗೆ ಹೋಗಿ ಹಣ ಹೊಂದಿಸಲು ಆಗಿಲ್ಲವೆಂದು ಹೇಳಿದ್ದೆ. ಜುಲೈ 19ರಂದು ಮೊಬೈಲ್‌ಗೆ ಕರೆಮಾಡಿ ಹಣ ತರುವಂತೆ ಪೊಲೀಸರು ಪುನಃ ಹೇಳಿದ್ದರು. ಠಾಣೆಗೆ ಹೋಗಿ ಪಿಎಸ್‌ಐ ನವೀನ್ ಅವರನ್ನು ಭೇಟಿಯಾದೆ. ‘ಆರಂಭದಲ್ಲಿ ಕೊಟ್ಟ ₹ 5 ಲಕ್ಷವನ್ನು ಮೇಡಂ (ಇನ್‌ಸ್ಪೆಕ್ಟರ್) ಮನೆಗೆ ಕೊಂಡೊಯ್ದರು. ನಮಗೆ ಒಂದು ರೂಪಾಯಿಯನ್ನೂ ಕೊಡಲಿಲ್ಲ. ಇವತ್ತು ₹ 2 ಲಕ್ಷ ಕೊಡು. ನಾಳೆ ₹ 2 ಲಕ್ಷ ತಂದು ಕೊಡು’ ಎಂದು ಪಿಎಸ್‌ಐ ಹೇಳಿದ್ದರು’ ಎಂದೂ ಸುದೀಪ್ ದೂರಿನಲ್ಲಿ ತಿಳಿಸಿದ್ದರು.

₹ 20 ಲಕ್ಷ ಮೌಲ್ಯದ ಅಫೀಮು ಜಪ್ತಿ

ಬೆಂಗಳೂರು: ರಾಜಸ್ಥಾನದಿಂದ ಅಫೀಮು ಖರೀದಿಸಿ ತಂದು ನಗರದಲ್ಲಿ ಮಾರುತ್ತಿದ್ದ ಇಬ್ಬರು ಆರೋಪಿಗಳನ್ನು ಪರಪ್ಪನ ಅಗ್ರಹಾರ ಪೊಲೀಸರು ಬಂಧಿಸಿದ್ದಾರೆ.

‘ರಾಜಸ್ಥಾನದ ಪಾಲಿ ಜಿಲ್ಲೆಯ ಅಮರ ರಾಮ್ (32) ಹಾಗೂ ಮೋತಿಲಾಲ್ (48) ಬಂಧಿತರು. ಅವರಿಂದ ₹ 20 ಲಕ್ಷ ಮೌಲ್ಯದ 1 ಕೆ.ಜಿ ಅಫೀಮು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ಆರೋಪಿಗಳು, ಆರಂಭದಲ್ಲಿ ಸಣ್ಣಪುಟ್ಟ ಕೆಲಸ ಮಾಡುತ್ತಿದ್ದರು. ಆರೋಪಿ ಅಮರ ರಾಮ್, ಎಲೆಕ್ಟ್ರಾನಿಕ್ ಸಿಟಿಯಲ್ಲಿ ನೆಲೆಸಿದ್ದ. ಇನ್ನೊಬ್ಬ ಆರೋಪಿ ಮೋತಿಲಾಲ್, ಚಿಕ್ಕಬಾಣಾವರದಲ್ಲಿ ವಾಸವಿದ್ದ.’

‘ಅಕ್ರಮವಾಗಿ ಹಣ ಗಳಿಸಲು ಮುಂದಾಗಿದ್ದ ಆರೋಪಿಗಳು, ಮಾದಕ ವಸ್ತು ಮಾರಾಟಕ್ಕೆ ಇಳಿದಿದ್ದರು. ರಾಜಸ್ಥಾನದಲ್ಲಿದ್ದ ಪೆಡ್ಲರ್ ಕಡೆಯಿಂದ ಅಫೀಮು ಖರೀದಿಸಿ ನಗರಕ್ಕೆ ತರುತ್ತಿದ್ದರು. ನಗರದ ಕೆಲ ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿರುವ ಯುವಕ, ಯುವತಿಯರು ಹಾಗೂ ಕೆಲ ಕಂಪನಿಗಳ ಉದ್ಯೋಗಿಗಳಿಗೆ ಮಾರುತ್ತಿದ್ದರು’ ಎಂದೂ ಪೊಲೀಸರು ತಿಳಿಸಿದರು.

‘ಎಲೆಕ್ಟ್ರಾನಿಕ್ ಸಿಟಿ 2ನೇ ಹಂತದ ಆನಂದರೆಡ್ಡಿ ಲೇಔಟ್‌ಗೆ ದ್ವಿಚಕ್ರ ವಾಹನದಲ್ಲಿ ಬಂದಿದ್ದ ಆರೋಪಿಗಳು, ಅಫೀಮು ಮಾರಲು ಯತ್ನಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಯಿತು’ ಎಂದೂ ಹೇಳಿದರು.

ಕಮಿಷನರ್ ದಿಢೀರ್ ಭೇಟಿ

ಬೆಂಗಳೂರು: ಜ್ಞಾನಭಾರತಿ ಠಾಣೆ ಹಾಗೂ ಉಲ್ಲಾಳ ಉಪನಗರದ ಪ್ರದೇಶಗಳಿಗೆ ಕಮಿಷನರ್ ಕಮಲ್ ಪಂಥ್ ಅವರು ಗುರುವಾರ ದಿಢೀರ್ ಭೇಟಿ ನೀಡಿದರು.ಉಲ್ಲಾಳ ಉಪನಗರ ಜನರ ಜೊತೆ ಮಾತುಕತೆ ನಡೆಸಿದ ಕಮಿಷನರ್, ಮಾದಕ ವಸ್ತು ಮಾರಾಟ ಹಾಗೂ ರೌಡಿಗಳ ಕೃತ್ಯದ ಬಗ್ಗೆ ತಿಳಿದುಕೊಂಡರು. ಉಲ್ಲಾಳದಲ್ಲಿ ಪೊಲೀಸ್ ಉಪ ಠಾಣೆ ತೆರೆಯಲಾಗುವುದೆಂದು ಹೇಳಿದರು.

ಜ್ಞಾನಭಾರತಿ ಠಾಣೆಗೆ ಹೋಗಿ, ಸಿಬ್ಬಂದಿ ಹಾಜರಾತಿ ಪರಿಶೀಲಿಸಿದರು. ತನಿಖಾ ಹಂತದಲ್ಲಿರುವ ಪ್ರಕರಣಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

ಡ್ರಗ್ಸ್; ವಿದೇಶಿ ಪ್ರಜೆ ಬಂಧನ

ಬೆಂಗಳೂರು: ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿ ಮಾದಕ ವಸ್ತು ಮಾರುತ್ತಿದ್ದ ಆರೋಪದಡಿ ವಿದೇಶಿ ಪ್ರಜೆ ಜೆರ್ರಿ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಆರೋಪಿ ಜೆರ್ರಿಯಿಂದ 50 ಗ್ರಾಂ ಎಂಡಿಎಂಎ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪೆಡ್ಲರ್ ಕಡೆಯಿಂದ ಮಾದಕ ವಸ್ತು ಖರೀದಿಸುತ್ತಿದ್ದ ಆರೋಪಿ, ಅದನ್ನು ಮಾರಾಟ ಮಾಡಿ ಹಣ ಗಳಿಸುತ್ತಿದ್ದ. ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಆರೋಪಿ ಬಳಿ ಡ್ರಗ್ಸ್ ಖರೀದಿಸುತ್ತಿದ್ದರು.’ ‘ಆರೋಪಿ ಡ್ರಗ್ಸ್ ಮಾರಾಟ ಮಾಡಲು ಬಂದಿದ್ದ ಬಗ್ಗೆ ಮಾಹಿತಿ ಸಿಕ್ಕಿತ್ತು. ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಗಿದೆ’ ಎಂದೂ ತಿಳಿಸಿವೆ.

ಸಿ.ಎಂ ಮನೆ ಎದುರು ವ್ಹೀಲಿಂಗ್; ಮೂವರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆರ್‌.ಟಿ.ನಗರದ ಮನೆ ಬಳಿ ಬೈಕ್ ವ್ಹೀಲಿಂಗ್ ಮಾಡುತ್ತಿದ್ದ ಆರೋಪದಡಿ ಮೂವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮುಖ್ಯಮಂತ್ರಿ ಮನೆ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಪೊಲೀಸರು ಭದ್ರತೆ ಕೈಗೊಂಡಿದ್ದಾರೆ. ಆರೋಪಿಗಳು ಬುಧವಾರ ತಡರಾತ್ರಿ ವ್ಹೀಲಿಂಗ್ ಮಾಡಿದ್ದರು. ಅದನ್ನು ಗಮನಿಸಿದ್ದ ಭದ್ರತಾ ಸಿಬ್ಬಂದಿ, ಆರೋಪಿಗಳನ್ನು ಹಿಡಿದಿದ್ದರು. ದ್ವಿಚಕ್ರವಾಹನಗಳನ್ನು ಜಪ್ತಿ ಮಾಡಿದ್ದರು.

‘ಜಪ್ತಿ ಮಾಡಲಾದ ವಾಹನಗಳ ಸಮೇತ ಆರೋಪಿಗಳನ್ನು ಆರ್‌.ಟಿ.ನಗರ ಠಾಣೆ ಪೊಲೀಸರ ವಶಕ್ಕೆ ಒಪ್ಪಿಸಲಾಗಿದೆ’ ಎಂದು ಭದ್ರತಾ ಸಿಬ್ಬಂದಿಯೊಬ್ಬರು ಹೇಳಿದರು.

ಮೆಜೆಸ್ಟಿಕ್‌ನಲ್ಲಿ ಸರಣಿ ಅಪಘಾತ; ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮೆಜೆಸ್ಟಿಕ್ ಕೇಂದ್ರ ಬಸ್ ನಿಲ್ದಾಣದ ಪ್ರವೇಶ ದ್ವಾರದಲ್ಲಿ ಬಸ್‌ಗಳ ನಡುವೆ ಸರಣಿ ಅಪಘಾತ ಸಂಭವಿಸಿದ್ದು, ಕೆಎಸ್‌ಆರ್‌ಟಿಸಿ ಚಾಲಕ ನಿಂಗಪ್ಪ (45) ಮೃತಪಟ್ಟಿದ್ದಾರೆ.

‘ಗುರುವಾರ ಬೆಳಿಗ್ಗೆ 4.30ರ ಸುಮಾರಿಗೆ ಈ ಅವಘಡ ಸಂಭವಿಸಿದೆ. ನಿರ್ಲಕ್ಷ್ಯದ ಚಾಲನೆ ಮಾಡಿ ಸಾವಿಗೆ ಕಾರಣರಾದ ಆರೋಪದಡಿ ಚಾಲಕ ಹನುಮಂತಪ್ಪ ಎಂಬುವರನ್ನು ಬಂಧಿಸಲಾಗಿದೆ’ ಎಂದು ಉಪ್ಪಾರಪೇಟೆ ಸಂಚಾರ ಪೊಲೀಸ್ ಠಾಣೆ ಮೂಲಗಳು ಹೇಳಿವೆ.

‘ಚಾಲಕ ನಿಂಗಪ್ಪ, ಅತ್ತಿಬೆಲೆಯಿಂದ ಬಸ್ ಚಲಾಯಿಸಿಕೊಂಡು ಮೆಜೆಸ್ಟಿಕ್ ನಿಲ್ದಾಣಕ್ಕೆ ಬಂದು ಪ್ರವೇಶ ದ್ವಾರದ ಬಳಿ ಪ್ರಯಾಣಿಕರನ್ನು ಇಳಿಸಿದ್ದರು. ನಂತರ, ಮೂತ್ರ ವಿಸರ್ಜನೆಗೆಂದು ಶೌಚಾಲಯ ದತ್ತ ನಡೆದುಕೊಂಡು ಹೊರಟಿದ್ದರು.’

‘ಅದೇ ಸಂದರ್ಭದಲ್ಲಿ ಗಂಗಾವತಿ ಡಿಪೊದ ಬಸ್, ಪ್ರವೇಶ ದ್ವಾರದಲ್ಲಿ ಬಂದಿತ್ತು. ಅದರ ಹಿಂದೆಯೇ ವೇಗವಾಗಿ ಐರಾವತ್ ಬಸ್ (ದಾವಣಗೆರೆ ಡಿಪೊ) ಚಲಾಯಿಸಿಕೊಂಡು ಬಂದಿದ್ದ ಆರೋಪಿ ಹನುಮಂತಪ್ಪ, ನಿಯಂತ್ರಣ ಕಳೆದುಕೊಂಡು ಗಂಗಾವತಿ ಡಿಪೊ ಬಸ್ ಹಿಂಭಾಗಕ್ಕೆ ಡಿಕ್ಕಿ ಹೊಡೆಸಿದ್ದರು. ಸ್ಟೇರಿಂಗ್ ಪಕ್ಕಕ್ಕೆ ಎಳೆದರೂ ನಿಯಂತ್ರಣಕ್ಕೆ ಸಿಗದ ಐರಾವತ್ ಬಸ್, ರಸ್ತೆಯಲ್ಲಿ ಹೊರಟಿದ್ದ ನಿಂಗಪ್ಪ ಅವರಿಗೆ ಗುದ್ದಿತ್ತು. ಆನೇಕಲ್ ಬಸ್ಸಿಗೂ ಡಿಕ್ಕಿ ಹೊಡೆದಿತ್ತು. ಅದೇ ಬಸ್ ಬಳಿ ನಡೆದುಕೊಂಡು ಹೊರಟಿದ್ದ ಜಾರ್ಖಂಡ್‌ನ ರಂಜಿತ್‌ಕುಮಾರ್ ಎಂಬುವರಿಗೂ ತೀವ್ರ ಗಾಯವಾಗಿದೆ’ ಎಂದೂ ಮೂಲಗಳು ತಿಳಿಸಿವೆ.

‘ತಲೆ ಹಾಗೂ ಕೈಗೆ ತೀವ್ರ ಪೆಟ್ಟು ಬಿದ್ದು ಚಾಲಕ ನಿಂಗಪ್ಪ ಮೃತಪಟ್ಟಿದ್ದಾರೆ. ಗಾಯಾಳು ರಂಜಿತ್‌ಕುಮಾರ್ ಅವರ ಎರಡು ಕಾಲುಗಳು ತುಂಡಾಗಿವೆ’ ಎಂದೂ ಮೂಲಗಳು ಹೇಳಿವೆ.

‘ಇಳಿಜಾರಿನ ರಸ್ತೆ; ಅಪಘಾತ ಹೆಚ್ಚಳ’

‘ಕೇಂದ್ರ ಬಸ್ ನಿಲ್ದಾಣದ ಪ್ರವೇಶ ದ್ವಾರದಲ್ಲಿ ಇಳಿಜಾರಿನ ರಸ್ತೆ ಇದೆ. ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಬಸ್‌ಗಳ ಚಾಲಕರು ವೇಗವಾಗಿ ಚಾಲನೆ ಮಾಡುತ್ತಾರೆ. ಇದೇ ಕಾರಣಕ್ಕೆ ಹಲವು ಬಾರಿ ಅಪಘಾತಗಳು ಸಂಭವಿಸುತ್ತಿವೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನಿತ್ಯವೂ ಸಾವಿರಾರು ಮಂದಿ ಬಂದು ಹೋಗುವ ನಿಲ್ದಾಣವಿದು. ನಿಧಾನವಾಗಿ ಬಸ್ ಚಲಾಯಿಸುವಂತೆ ಚಾಲಕರಿಗೆ ಹಲವು ಬಾರಿ ತಾಕೀತು ಮಾಡಲಾಗಿದೆ. ನಿಲ್ದಾಣದ ಅಧಿಕಾರಿಗಳಿಗೂ ಪತ್ರ ಬರೆಯಲಾಗಿದೆ’ ಎಂದೂ ತಿಳಿಸಿವೆ.

ಜೀವನ ಸಂಚಾರ...

ಮಹಿಳೆಯೊಬ್ಬರು ದ್ವಿಚಕ್ರವಾಹನಕ್ಕೆ ಜೋಡಿಸಿರುವ ಕಬ್ಬಿಣದ ತರಕಾರಿ ಬುಟ್ಟಿಯಲ್ಲಿಯೇ ಮಗನನ್ನು ಕೂರಿಸಿಕೊಂಡು ಸಾಗುತ್ತಿರುವ ದೃಶ್ಯ ಕುರುಬರ ಹಳ್ಳಿಯಲ್ಲಿ ಗುರುವಾರ ಕಂಡುಬಂತು - ಪ್ರಜಾವಾಣಿ ಚಿತ್ರ/ಎಂ.ಎಸ್. ಮಂಜುನಾಥ್

ಕಪ್ಪು ಹಣದ ಪ್ರಕರಣದಲ್ಲಿ ಅಪಪ್ರಚಾರ: ದೂರು

ಬೆಂಗಳೂರು: ಕಪ್ಪು ಹಣದ ಬಗ್ಗೆ ಮಾಹಿತಿ ನೀಡಿದರೂ ಬಹುಮಾನ ನೀಡಲಿಲ್ಲವೆಂಬ ಕಾರಣಕ್ಕೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ಬಗ್ಗೆ ಅಪಪ್ರಚಾರ ಮಾಡುತ್ತಿದ್ದ ಆರೋಪದಡಿ ರಾಕೇಶ್ ಶರ್ಮಾ ಎಂಬುವರ ವಿರುದ್ಧ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಶಾಂತಿನಗರದಲ್ಲಿರುವ ಇ.ಡಿ ಕಚೇರಿಯ ಸಿಬ್ಬಂದಿ ದೂರು ನೀಡಿದ್ದಾರೆ. ದೆಹಲಿಯ ರಾಕೇಶ್ ಶರ್ಮಾ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಬೇರೆಡೆ ಕೊಂದು ಗ್ರಾಮದಲ್ಲಿ ಹಾಕಿರುವ ಶಂಕೆ

ಚೌಡನಹಳ್ಳಿ: 38 ಮಂಗಗಳ ಸಾವು

ಪ್ರಜಾವಾಣಿ ವಾರ್ತೆ

ಬೇಲೂರು: ತಾಲ್ಲೂಕಿನ ಕುಶಾವರ ಗ್ರಾಮ ಪಂಚಾಯಿತಿಯ ಚೌಡನಹಳ್ಳಿಯಲ್ಲಿ ಬುಧವಾರ ರಾತ್ರಿ ಗೋಣಿಚೀಲದ ಮೂಟೆಯಲ್ಲಿ 38 ಮಂಗಗಳ ಮೃತದೇಹಗಳು ಕಂಡು ಬಂದಿವೆ. ಸ್ಥಳೀಯರು ಮೂಟೆಯನ್ನು ಬಿಚ್ಚಿದ್ದಾಗ ಜೀವಂತವಿದ್ದ 15 ಮಂಗಗಳು ಕೂಡಲೇ ಓಡಿ ಹೋದವು. ತೀವ್ರವಾಗಿ ಗಾಯಗೊಂಡಿದ್ದ ಮಂಗವೊಂದಕ್ಕೆ ಚಿಕಿತ್ಸೆ ನೀಡಲಾಗಿದೆ.

‘ಬುಧವಾರ ರಾತ್ರಿ 10.30ರ ವೇಳೆಯಲ್ಲಿ ಸ್ನೇಹಿತರೊಂದಿಗೆ ನಡೆದು ಹೋಗುವಾಗ ಗೋಣಿಚೀಲದ ಮೂಟೆಗಳನ್ನು ಗಮನಿಸಿ ಬಿಚ್ಚಿ ನೋಡಿದಾಗ ಮಂಗಗಳು ಕಂಡು ಬಂದವು. ಜೀವಂತವಾಗಿದ್ದ ಮಂಗಗಳು ಜೀವಭಯದಿಂದ ಓಡಿ ಹೋದವು. ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದೆವು’ ಎಂದು ಗ್ರಾಮದ ಆದೇಶ ‘ಪ್ರಜಾವಾಣಿ’ಗೆ ತಿಳಿಸಿದರು.

‘ತಗರೆ ಅರಣ್ಯದಲ್ಲಿ ಮಂಗಗಳ ಅಂತ್ಯಸಂಸ್ಕಾರ ಮಾಡಿದೆವು. ಗಾಯಾಳು ಮಂಗವೊಂದಕ್ಕೆ ಚಿಕಿತ್ಸೆ ಕೊಡಿಸಿದೆವು. ಮರಣೋತ್ತರ ಪರೀಕ್ಷೆ ನಡೆಸಿ, ದೇಹದ ಅಂಗಾಂಗ ಮಾದರಿಯನ್ನು ಮೈಸೂರಿನ ಪ್ರಾಣಿ ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ’ ಎಂದು ವಲಯ ಅರಣ್ಯಾಧಿಕಾರಿ ಯಶ್ಮಾ ಮಾಚಮ್ಮ ತಿಳಿಸಿದರು.

‘ವಿಷಪ್ರಾಷನ ಅಥವಾ ಬಲವಾದ ಆಯುಧದಿಂದ ಹಲ್ಲೆ ನಡೆಸಿ ಮಂಗಗಳನ್ನು ಕೊಂದಿರಬಹುದು. ಪ್ರಯೋಗಾಲಯದ ವರದಿ ಬಂದ ಮೇಲಷ್ಟೇ ನಿಖರ ಕಾರಣ ಗೊತ್ತಾಗುತ್ತದೆ’ ಎಂದು ಪಶುಪಾಲನೆ ಇಲಾಖೆಯ ಸಹಾಯಕ ನಿರ್ದೇಶಕ ಗಂಗಾಧರ್ ತಿಳಿಸಿದರು. ‘ಪ್ರಕರಣದ ತನಿಖೆ ಪ್ರಾರಂಭಿಸಿದ್ದು, ತಪ್ಪಿತಸ್ಥರನ್ನು ಹುಡುಕಿ ಕ್ರಮ ಕೈಗೊಳ್ಳಲಾಗುವುದು’ ಎಂದು ಸಿಪಿಐ ಶ್ರೀಕಾಂತ್ ಹೇಳಿದರು.

ಬೇಲೂರು ತಾಲ್ಲೂಕಿನ ಚೌಡನಹಳ್ಳಿ ಸಮೀಪ ಸತ್ತ ಮಂಗಗಳನ್ನು ಹಾಕಿರುವುದು

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.

ಸಂ: ಕಾಇಂ/ಗ್ರಾಕುನೀನೈವಿದಾವ/ಇಂ-2/ಜೆಜೆಎಂ ಟೆಂಡರ್:2021-22/463 ದಿ:29.07.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

2020-21 ನೇ ಸಾಲಿನಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಅನುಮೋದನೆಯಾದ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗೆ (ಮನೆ ಮನೆಗೆ ನಳ ಸಂಪರ್ಕ ಕಲ್ಪಿಸುವ) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಅರ್ಹ ಹಾಗೂ 'ಇ-ಪ್ರೊಕ್ಯೂರ್‌ಮೆಂಟ್'ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯು ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕಡೇ ದಿನಾಂಕ: 06.08.2021 ರ ಸಂಜೆ 5.00ರ ವರೆಗೆ ಇರುತ್ತದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯ ದೂರವಾಣಿ ಸಂಖ್ಯೆ:08192-262126 ಅಥವಾ www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈ ವಿಭಾಗ, ದಾವಣಗೆರೆ.

ವಾತಾಇ/ದಾವಿಜಿ/274/ಎಂಸಿಎ/2021-22

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ)

ಬೆಸ್ಕಾಂ, ವಿಚಾರಣೆ ಸಂಖ್ಯೆ ಬೆ.ವಿ.ಕಂ/ಉಪ್ರವ್ಯ (SG&EV)/ಬಿ.ಸಿ-53/2021-22/ ENQ-03 ದಿನಾಂಕ: 26.07.2021ರಂತೆ "ಬೆವಿಕಂನ 147 ಉಪ ವಿಭಾಗಗಳಲ್ಲಿ FTNC ಸೇವೆಗಳಿಗೆ ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಮಟ್ಟಿಗೆ 358 ಮಾನವ ಸಂಪನ್ಮೂಲವನ್ನು ಒದಗಿಸುವುದಕ್ಕೆ ಟೆಂಡರನ್ನು ಆಹ್ವಾನಿಸಿದೆ. ಬಿಡ್ ದಾಖಲೆಗಳ ಲಭ್ಯತೆ: 31.07.2021 ರಂದು 5:00 ಗಂಟೆಯ ನಂತರ. ಬಿಡ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 16.08.2021ರಂದು ಸಂಜೆ 5:00 ಗಂಟೆಯವರೆಗೆ. ಬಿಡ್ ದಾಖಲೆಗಳನ್ನು ತೆರೆಯುವ ದಿನಾಂಕ: 18.08.2021 ರಂದು ಸಂಜೆ 5:00 ಗಂಟೆಗೆ. ಇ-ಪೋರ್ಟಲ್‌ನಲ್ಲಿ ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07.08.2021 ರಂದು ಸಂಜೆ 5:00 ಗಂಟೆಯವರೆಗೆ. ಬಿಡ್ ಪೂರ್ವ ಸಭೆ: 09.08.2021 ರಂದು 11:00 ಗಂಟೆಗೆ ಸಭಾ ಕೊಠಡಿ, ನಿಗಮ ಕಾರ್ಯಾಲಯ ಬೆವಿಕಂನಲ್ಲಿ ಆಹ್ವಾನಿಸಿದೆ. ಬಿಡ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಬೆವಿಕಂ ಆಹ್ವಾನಿಸಿದೆ. ಸಂಬಂಧಿಸಿದ ವಿಚಾರಣೆ ಬಗ್ಗೆ ವಿವರವಾದ ಪ್ರಕಟಣೆಯುನ್ನು ವೆಬ್‌ಸೈಟ್ https://eproc.karnataka.gov.in ನಲ್ಲಿ ಪ್ರವೇಶಿಸಿ ಪಡೆಯಬಹುದು. ಇತರೆ ಯಾವುದೇ ವಿವರಗಳನ್ನು ಕೆಳ ಸಹಿದಾರರ ಕಚೇರಿಯಿಂದ ಅಥವಾ ಸಹಾಯವಾಣಿ ಸಂ: 080-25501216, 25501227ಗೆ ಸಂಪರ್ಕಿಸಬಹುದು.

ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು (ವಿ)
(ಎಸ್‌ಜಿ&ಇವಿ) ನಿಗಮ ಕಚೇರಿ,
ಬೆವಿಕಂ

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ.ಸಂ:ಕಾನಿಇಂ/ಲೋ.ಇ/ವಿ.ಜೆ.ಪಿ/ಪಿ.ಬಿ/8443/2021-22/1153

ದಿನಾಂಕ:28.07.2021

ಅಲ್ಪಾವಧಿ ಟೆಂಡರ್ ತಿದ್ದುಪಡಿ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್)

ಉಲ್ಲೇಖ:- ಈ ಕಛೇರಿ ಪ್ರಕಟಣೆ ಐ.ಎಸ್.ಟಿ. ನಂ. ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/8443/2021-22/1091 ದಿನಾಂಕ: 26-07-2021.

ಮೇಲಿನ ಉಲ್ಲೇಖದಲ್ಲಿ ಪ್ರಕಟಿಸಲಾದ ಕಾಮಗಾರಿಯ ಟೆಂಡರ ಪ್ರಕಟಣೆಯಲ್ಲಿ "ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಲೆಕ್ಕ ಶೀರ್ಷಿಕೆ 8443-ಠೇವಣಿ ವಂತಿಕೆ ಅಡಿಯಲ್ಲಿ ವಿಜಯಪುರ ನಗರದ ಎ.ಟಿ.ಆರ್-72-600 ಏರ್‌ಕ್ರಾಪ್ಟ ಹಗಲು ವ್ಹಿ.ಎಫ್.ಆರ್ ಕಾರ್ಯಾಚರಣೆಯ ವಿಮಾಣ ನಿಲ್ದಾಣ ನಿರ್ಮಾಣ. (ಹಂತ-2) (ಇಂಡೆಂಟ ನಂ. 137623)" ಬದಲಾಗಿ ಅರ್ಹ ಗುತ್ತಿಗೆದಾರರಿಂದ ಲೆಕ್ಕ ಶೀರ್ಷಿಕೆ 8443-ಠೇವಣಿ ವಂತಿಕೆ ಅಡಿಯಲ್ಲಿ ವಿಜಯಪುರ ನಗರದ ಎ.ಟಿ.ಆರ್-72-600 ಏರ್‌ಕ್ರಾಪ್ಟ ಹಗಲು ವ್ಹಿ.ಎಫ್.ಆರ್ ಕಾರ್ಯಾಚರಣೆಯ ವಿಮಾಣ ನಿಲ್ದಾಣ ನಿರ್ಮಾಣ. (ಹಂತ-2) (ಇಂಡೆಂಟ ನಂ. 137623) ಎಂದು ಪರಿಗಣಿಸುವುದು.

ಉಳಿದ ಶರತ್ತುಗಳಲ್ಲಿ ಯಾವ್ಯದೇ ಬದಲಾವಣೆ ಇರುವುದಿಲ್ಲ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/188/ಎಂಸಿಎ/2021-22

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ

ಕ್ರಮಾಂಕ:ಶಿಮನಪಾಶಿ:ಕಾವಿ-2:ಟೆಂಡರ್:17/2021-22 ದಿನಾಂಕ:27.07.2021

ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ-ಲಕೋಟೆ ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ www. eproc karnataka.gov.inನಲ್ಲಿ ಪಡೆದುಕೊಳ್ಳಬಹುದು.

1. ಪ್ರಿ ಬಿಡ್ ಮೀಟಿಂಗ್ ದಿನಾಂಕ : 23.08.2021 (ಬೆಳಿಗ್ಗೆ : 11.00 ಗಂಟೆಯನಂತರ) 2. ಇ-ಪ್ರೊಕ್ಯೂರ್‌ಮೆಂಟ್ ನಮೂನೆಗಳಿಗಾಗಿ ಆನ್‌ಲೈನ್‌ನಲ್ಲಿ ಇ-ಪೇಮೆಂಟ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 27.08.2021 (ಸಂಜೆ 4.00ರವರೆಗೆ) 3. ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ : 30.08.2021 ಸಂಜೆ 4.30 ಗಂಟೆಯನಂತರ 4. ಪ್ರೊಕ್ಯೂರ್‌ಮೆಂಟ್ ಮುಖಾಂತರ ಆರ್ಥಿಕ ಟೆಂಡರ್ ತೆರೆಯುವ ದಿನಾಂಕ : 01.09.2021 ಸಂಜೆ : 4.30 ಗಂಟೆಯನಂತರ. 5. ಹೆಚ್ಚಿನ ವಿವರಗಳನ್ನು ಇ-ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳಯಲ್ಲಿ ಪಡೆಯಬಹುದಾಗಿದೆ. 6. ಅನುದಾನ : ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ

ಕ್ರ.ಸಂ : 1 ಇಂಡೆಂಟ್ ಸಂಖ್ಯೆ : 117318 ಕಾಮಗಾರಿಯ ವಿವರ : (ವಾರ್ಡ್ ನಂ.23 ರ ವಿವಿಧ ರಸ್ತೆಗಳಿಗೆ ಬಾಕ್ಸ್ ಚರಂಡಿ, ಕವರ್ ಸ್ಲ್ಯಾಬ್, ಒಳಚರಂಡಿ ಮತ್ತು ರಸ್ತೆ ಅಭಿವೃದ್ಧಿ, ವಾರ್ಡ್ ನಂ.24ರ ಆಯ್ದ ಭಾಗದಲ್ಲಿ ರಸ್ತೆ ಮತ್ತು ಪಾರ್ಕ್ ಪಕ್ಕದ ರಸ್ತೆ, ಕೆ.ಹಚ್.ಬಿ ಕಾಲೋನಿ ರಸ್ತೆ ಮತ್ತು ಅಲ್ ಹರೀಂ ಬಡಾವಣೆಯ ರಸ್ತೆ ಅಭಿವೃದ್ಧಿ ಹಾಗೂ ಸಿ.ಸಿ ಬಾಕ್ಸ್ ಚರಂಡಿ ನಿರ್ಮಾಣ ಕಾಮಗಾರಿ

ವಾರ್ಡ್ ನಂ.25ರ ಚಾನಲ್ ಪಕ್ಕದಲ್ಲಿ ಸಿ.ಸಿ ರಸ್ತೆ ಮತ್ತು ಚೈನ್ ಲಿಂಕ್ ಕಾಂಪೌಂಡ್ ನಿರ್ಮಾಣ ಕಾಮಗಾರಿ, ವಾರ್ಡ್ ನಂ.26ರ ಅಶೋಕನಗರ ವ್ಯಾಪ್ತಿಯಲ್ಲಿ ಬರುವ ರಸ್ತೆ ಬದಿಯ ಬಾಕ್ಸ್ ಚರಂಡಿ ಮತ್ತು ಡೆಕ್ ಸ್ಲ್ಯಾಬ್ ನಿರ್ಮಾಣ ಕಾಮಗಾರಿ

ವಾರ್ಡ್ ನಂ.33ರ ಸವಾಯಿಪಾಳ್ಯದ ಮುಖ್ಯ ರಸ್ತೆ ಹಾಗೂ ಅಡ್ಡ ರಸ್ತೆಗಳ ಅಭಿವೃದ್ಧಿ ಬಾಕ್ಸ್ ಚರಂಡಿ ಮತ್ತು ಡೆಕ್ ಸ್ಲ್ಯಾಬ್ ನಿರ್ಮಾಣ ಕಾಮಗಾರಿ, ವಾರ್ಡ್ ನಂ.34ರ ರಾಮಯ್ಯ ಲೇಔಟ್ ಪಾರ್ಕ್ ಅಭಿವೃದ್ಧಿ, ವಾರ್ಡ್ ನಂ.34ರ ಮದಾರಿಪಾಳ್ಯ ಇಲಿಯಾಸ್ ಮನೆಯವರೆಗೆ ಬಾಕ್ಸ್ ಚರಂಡಿ ನಿರ್ಮಾಣ, ವಾರ್ಡ್ ನಂ.34ರ ನಂಜಪ್ಪ ಲೇಔಟ್ ನಲ್ಲಿ ಬಾಕ್ಸ್ ಚರಂಡಿ ಹಾಗೂ ಡೆಕ್ ಸ್ಲ್ಯಾಬ್ ನಿರ್ಮಾಣ, ವಾರ್ಡ್ ನಂ.34ರ ರಾಮಯ್ಯ ಲೇಔಟ್ ಹಾಗೂ ಹೇಮಶ್ರೀ ಲೇಔಟ್‌ಗಳಲ್ಲಿ ಬಾಕ್ಸ್ ಚರಂಡಿ ಹಾಗೂ ಡೆಕ್ ಸ್ಲ್ಯಾಬ್ ನಿರ್ಮಾಣ, ವಾರ್ಡ್ ನಂ.34ರ ವಿದ್ಯಾನಗರ ಪಕೀರ್ ಕಾಲೋನಿಯಲ್ಲಿ ಬಾಕ್ಸ್ ಚರಂಡಿ ಹಾಗೂ ಡೆಕ್ ಸ್ಲ್ಯಾಬ್ ನಿರ್ಮಾಣ

ವಾರ್ಡ್ ನಂ.29ರ ಓ.ಟಿ ರಸ್ತೆಯ ಮುಖ ಹಾಗೂ ಅಡ್ಡ ರಸ್ತೆಗಳ ಅಭಿವೃದ್ಧಿ, ಬಾಕ್ಸ್ ಚರಂಡಿ ಮತ್ತು ಡೆಕ್ ಸ್ಲ್ಯಾಬ್ ನಿರ್ಮಾಣ ಕಾಮಗಾರಿ, ವಾರ್ಡ್ ನಂ.30ರ ಸೀಗೆಹಟ್ಟಿಯ ತಿಮ್ಮಪ್ಪನ ಕೊಪ್ಲು ಮತ್ತು ಕುಂಬಾರ ಬೀದಿಯ ವಿವಿಧ ರಸ್ತೆಯಲ್ಲಿ ಬಾಕ್ಸ್ ಚರಂಡಿ, ಕವರ್ ಸ್ಲ್ಯಾಬ್ ಹಾಗೂ ಡೆಕ್ ಸ್ಲ್ಯಾಬ್ ನಿರ್ಮಾಣ ಹಾಗೂ ರಸ್ತೆಗಳ ಅಭಿವೃದ್ಧಿ ಕಾಮಗಾರಿ, ವಿವಿಧ ವೃತ್ತಗಳಿಗೆ ಹೈ ಮಾಸ್ಟ್ ಲೈಟ್ ಅಳವಡಿಸಿ ಅಭಿವೃದ್ಧಿಗೊಳಿಸುವ ಕಾಮಗಾರಿ, ಸೀಗೆಹಟ್ಟಿಯ ವಿವಿಧ ಭಾಗಗಳಲ್ಲಿ ಒಳಚರಂಡಿ ಕಾಮಗಾರಿ ಮತ್ತು ಸೀಗೆಹಟ್ಟಿಯ ಪಾರ್ಕ್ ಅಭಿವೃದ್ಧಿ ಕಾಮಗಾರಿ ಮೊತ್ತ (ರೂ.ಲಕ್ಷ ಗಳಲ್ಲಿ) : 478.75 ಇ.ಎಂ.ಡಿ (ರೂ.ಲಕ್ಷಗಳಲ್ಲಿ) : 7.20 ಕೆಲಸದ ಅವಧಿ : 11 ತಿಂಗಳು ಗುತ್ತಿಗೆದಾರರ ದರ್ಜೆ : Class I

ಸೂಚನೆ : ಟೆಂಡರ್‌ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು ಇ-ಪೋರ್ಟಲ್ ಮುಖಾಂತರ ಸೂಚಿಸಲಾಗುವುದು.

ಸಹಿ/-ಕಾರ್ಯಪಾಲಕ ಅಭಿಯಂತರರು (ವಿ-2)
ಶಿವಮೊಗ್ಗ ಮಹಾನಗರ ಪಾಲಿಕೆ
ಶಿವಮೊಗ್ಗ

ವಾ.ಸಾ.ಸಂ.ಇ./ಶಿ/ನಂ.143-07
ಝೇಂಕಾರ್/2021-22

ಮೇಕೆದಾಟು, ಮಹದಾಯಿ, ಕೃಷ್ಣಾ ಮೇಲ್ದಂಡೆ ಯೋಜನೆ • ಜೆಡಿಎಸ್ ಶಾಸಕರ ಪಾದಯಾತ್ರೆ, ಅನುಮತಿಗೆ ಮನವಿ

ಕೇಂದ್ರದಿಂದ ಅನ್ಯಾಯ: ರಾಷ್ಟ್ರಪತಿ, ಪ್ರಧಾನಿಗೆ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಅಣೆಕಟ್ಟು ನಿರ್ಮಾಣ ಮತ್ತು ಮಹದಾಯಿ, ಕೃಷ್ಣಾ ಮೇಲ್ದಂಡೆ ಯೋಜನೆಗೆ ಅನುಮತಿ ನೀಡುವಂತೆ ಕೇಂದ್ರ ಸರ್ಕಾರವನ್ನು ಆಗ್ರಹಿಸಿ ಪಾದಯಾತ್ರೆಯಲ್ಲಿ ರಾಜಭವನಕ್ಕೆ ಗುರುವಾರ ತೆರಳಿದ ಜೆಡಿಎಸ್ ಶಾಸಕರ ನಿಯೋಗ ರಾಜ್ಯಪಾಲರ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಿತು. ಮನವಿ ಪ್ರತಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೂ ಕಳುಹಿಸಿದೆ.

ವಿಧಾನಸೌಧದ ಜೆಡಿಎಸ್ ಶಾಸಕಾಂಗ ಪಕ್ಷದ ಕಚೇರಿಯಲ್ಲಿ ಸಭೆ ಸೇರಿದ ಶಾಸಕರು, ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮತ್ತು ರಾಜ್ಯ ಘಟಕದ ಅಧ್ಯಕ್ಷ ಎಚ್.ಕೆ. ಕುಮಾರಸ್ವಾಮಿ ನೇತೃತ್ವದಲ್ಲಿ ವಿಧಾನಸೌಧದ ಗಾಂಧಿ ಪ್ರತಿಮೆ ಬಳಿಯಿಂದ ರಾಜಭವನದವರೆಗೆ ಪಾದಯಾತ್ರೆಯಲ್ಲಿ ತೆರಳಿ ಮನವಿ ಸಲ್ಲಿಸಿದರು.

ರಾಜ್ಯಪಾಲರ ಭೇಟಿಗೂ ಮೊದಲು ಸುದ್ದಿಗಾರರ ಜೊತೆ ಮಾತನಾಡಿದ ಎಚ್.ಡಿ. ಕುಮಾರಸ್ವಾಮಿ, 'ನೀರಾವರಿ ಯೋಜನೆಗಳ ವಿಚಾರದಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ನಿರಂತರ ಅನ್ಯಾಯವಾಗುತ್ತಿದೆ' ಎಂದು ಆರೋಪಿಸಿದರು.

ಎಚ್.ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ ಜೆಡಿಎಸ್ ಶಾಸಕರು ಬೆಂಗಳೂರಿನಲ್ಲಿ ರಾಜಭವನಕ್ಕೆ ಪಾದಯಾತ್ರೆ ಕೈಗೊಂಡರು

'ಮೇಕೆದಾಟು ಬಳಿ ಸಮನಾಂತರ ಜಲಾಶಯ ನಿರ್ಮಾಣ ಮಾಡುವ ವಿಚಾರದಲ್ಲಿ ತಮಿಳುನಾಡಿನ ಒತ್ತಡಕ್ಕೆ ಮಣಿದು ಕೇಂದ್ರ ಸರ್ಕಾರ ಮಂಜೂರಾತಿ ನೀಡಿಲ್ಲ. ಮಹದಾಯಿ ನದಿ ನೀರು ಹಂಚಿಕೆ ವಿಷಯದಲ್ಲಿ ನ್ಯಾಯಮಂಡಳಿ ತೀರ್ಪು ನೀಡಿದರೂ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದೆ ಎಂಬ ನೆಪವೊಡ್ಡಿ ಅಧಿಸೂಚನೆ ಹೊರಡಿಸಿಲ್ಲ' ಎಂದು ಅವರು ದೂರಿದರು.

'ಪ್ರಾದೇಶಿಕ ನೆಲೆಗಟ್ಟಿನ ಆಧಾರಲ್ಲಿ ರಾಜ್ಯದ ಹಿತಕ್ಕಾಗಿ ನಾವು ಹೋರಾಟ ನಡೆಸುತ್ತೇವೆ. ಉತ್ತರ ಕರ್ನಾಟಕ ಭಾಗದಲ್ಲಿ ಪ್ರವಾಹ ಬಂದು ನೀರು ಸಮುದ್ರಕ್ಕೆ ಹೋಗುತ್ತಿದೆ. ನಮಗೆ ಹಂಚಿಕೆಯಾಗಿರುವ ನೀರಿನ ಪಾಲು ಸದ್ಬಳಕೆ ಮಾಡಿಕೊಳ್ಳಲು ಆಗುತ್ತಿಲ್ಲ. ಈ ವಿಚಾರದಲ್ಲಿ ಜನಜಾಗೃತಿ ಮೂಡಿಸುವ ಕೆಲಸವನ್ನು ಪಕ್ಷ ಮಾಡಲಿದೆ. ನಮ್ಮ ಮನವಿಗೆ ಕೇಂದ್ರ ಸರ್ಕಾರದ ಸ್ಪಂದನೆ ನೋಡಿಕೊಂಡು ಮುಂದಿನ ನಿಲುವು ತೆಗೆದುಕೊಳ್ಳುತ್ತೇವೆ' ಎಂದರು.

'ನೂತನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ನೀರಾವರಿ ಸಚಿವರಾಗಿ ಸೇವೆ ಸಲ್ಲಿಸಿದ ಅನುಭವವಿದೆ. ಹೀಗಾಗಿ, ಆದ್ಯತೆ ಮೇರೆಗೆ ಈ ಯೋಜನೆಗಳನ್ನು ಅನುಷ್ಠಾನಕ್ಕೆ ತರಬೇಕು' ಎಂದೂ ಒತ್ತಾಯಿಸಿದರು.

'ಮೇಕೆದಾಟು: ಪರ್ಯಾಯ ಮಾರ್ಗ ಅನುಸರಿಸಿ'

ಸಂಜಯ್ ಗುಬ್ಬಿ

ಮೈಸೂರು: 'ಮೇಕೆದಾಟು ಯೋಜನೆ ಜಾರಿಯಿಂದ ಕಾವೇರಿ ವನ್ಯಜೀವಿಧಾಮ ವ್ಯಾಪ್ತಿಯಲ್ಲಿ ನದಿ, ಅರಣ್ಯ ಸಂಪತ್ತು ನಾಶವಾಗಲಿದೆ. ಅಣೆಕಟ್ಟು ನಿರ್ಮಾಣ ಸ್ಥಳವನ್ನು ಶಿಂಷಾಗೆ ಬದಲಿಸಬೇಕು. ಪರ್ಯಾಯ ಮಾರ್ಗದ ಬಗ್ಗೆಯೂ ಆಲೋಚಿಸಬೇಕು' ಎಂದು ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ ಸಲಹೆ ನೀಡಿದರು.

ಚಾಮರಾಜೇಂದ್ರ ಮೃಗಾಲಯವು ವಿಶ್ವ ಹುಲಿ ದಿನದ ಪ್ರಯುಕ್ತ ಗುರುವಾರ ಏರ್ಪಡಿಸಿದ್ದ ವೆಬಿನಾರ್‌ನಲ್ಲಿ ಅವರು, 'ವನ್ಯಜೀವಿಧಾಮದ ಹೃದಯ ಭಾಗದಲ್ಲಿ ಮೇಕೆದಾಟು ಇದೆ. ಅಣೆಕಟ್ಟು ನಿರ್ಮಿಸಿದರೆ ಹಿನ್ನೀರಿನಲ್ಲಿ ಕಾವೇರಿ ನದಿ ಕಣಿವೆಯ ಅರಣ್ಯ ಪ್ರದೇಶ ಮುಳುಗಡೆಯಾಗಲಿದೆ' ಎಂದು ಆತಂಕ ವ್ಯಕ್ತಪಡಿಸಿದರು.

'ವನ್ಯಜೀವಿಧಾಮದಲ್ಲಿ ಮಾತ್ರ ಬೂದು ಬಣ್ಣದ ಅಳಿಲು (ಗ್ರಿಜಲ್ ಜೈಂಟ್ ಸ್ಕ್ವಿರಲ್), ತರಕರಡಿ, ಚಿಪ್ಪುಹಂದಿ ಇವೆ. ಬಿಳಿಗಿರಿರಂಗನಬೆಟ್ಟ, ಸತ್ಯಮಂಗಲ ಹಾಗೂ ಮಲೆ ಮಹದೇಶ್ವರ ಬೆಟ್ಟ ಅರಣ್ಯ ಪ್ರದೇಶಗಳಲ್ಲಿ ಹುಲಿ ಸಾಂದ್ರತೆ ಹೆಚ್ಚಾಗುತ್ತಿದ್ದು, ವನ್ಯಜೀವಿಧಾಮದಲ್ಲಿ ಹುಲಿಗಳು ಹೊಸ ವಾಸಸ್ಥಳಗಳನ್ನು ಕಂಡುಕೊಂಡಿವೆ. ನದಿ ಅರಣ್ಯದ ಅಪರೂಪದ ಸಸ್ಯ ಪ್ರಭೇದಗಳೂ ಅಲ್ಲಿವೆ. ಆ ಭೂ ಸ್ವರೂಪ ಉಳಿಸಿಕೊಳ್ಳುವುದೇ ಆದ್ಯತೆಯಾಗಬೇಕು' ಎಂದು ಪ್ರತಿಪಾದಿಸಿದರು.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
ಶರಾವತಿ ವಿದ್ಯುತ್ ಯೋಜನೆ
ಸಿಐಎನ್: U85110KA1970SGC001919

KARNATAKA POWER CORPORATION LTD.

ಸಂಖ್ಯೆ: ಇಇಸಿಕೆ/ಡಬ್ಲ್ಯೂ/667 ದಿನಾಂಕ: 29.07.2021

ಲಿಂಗನಮಕ್ಕಿ ಜಲಾಶಯದ ಪ್ರವಾಹದ ಎರಡನೇ ಮುನ್ನೆಚ್ಚರಿಕೆಯ ಸೂಚನೆ

ಶರಾವತಿ ಯೋಜನೆಯ ಲಿಂಗನಮಕ್ಕಿ ಜಲಾನಯನ ಪ್ರದೇಶದಲ್ಲಿ ಸತತವಾಗಿ ಮಳೆ ಬೀಳುತ್ತಿರುವುದರಿಂದ ಲಿಂಗನಮಕ್ಕಿ ಜಲಾಶಯಕ್ಕೆ ಭಾರಿ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಲಿಂಗನಮಕ್ಕಿ ಜಲಾಶಯದಲ್ಲಿ ನೀರಿನ ಮಟ್ಟವು ಸತತವಾಗಿ ಏರುತ್ತಿರುತ್ತದೆ. ಜಲಾಶಯದ ಗರಿಷ್ಠ ಮಟ್ಟವು 1819.00 ಅಡಿಗಳಾಗಿದ್ದು ಇಂದಿನ ಅಂದರೆ ದಿನಾಂಕ: 29.07.2021 ರಂದು ಬೆಳಿಗ್ಗೆ 8.00ಗಂಟೆಗೆ ಜಲಾಶಯದ ನೀರಿನ ಮಟ್ಟ 1806.20 ಅಡಿಗಳಾಗಿರುತ್ತದೆ. ಈ ದಿನದ ಲಿಂಗನಮಕ್ಕಿ ಜಲಾಶಯದ ಒಳ ಹರಿವು ಸುಮಾರು 18552 ಕ್ಯೂಸೆಕ್ಸ್‌ಗಳಾಗಿದ್ದು, ಇದೇ ರೀತಿಯಲ್ಲಿ ಜಲಾಶಯಕ್ಕೆ ಬರುವ ನೀರಿನ ಹರಿವು ಮುಂದುವರೆದ ಪಕ್ಷದಲ್ಲಿ ಜಲಾಶಯವು ಶೀಘ್ರದಲ್ಲಿ ಗರಿಷ್ಠ ಮಟ್ಟವನ್ನು ತಲುಪುವ ಸಾಧ್ಯತೆ ಇರುತ್ತದೆ. ಆದ್ದರಿಂದ ಅಣೆಕಟ್ಟೆಯ ಸುರಕ್ಷತಾ ದೃಷ್ಟಿಯಿಂದ, ಹೆಚ್ಚುವರಿ ನೀರನ್ನು ಜಲಾಶಯದಿಂದ ಯಾವುದೇ ಸಮಯದಲ್ಲಿ ಹೊರಬಿಡಲಾಗುವುದು.

ಆದ್ದರಿಂದ, ಅಣೆಕಟ್ಟೆಯ ಕೆಳದಂಡೆಯಲ್ಲಿ ಹಾಗೂ ನದಿಯ ಪಾತ್ರದುದ್ದಕ್ಕೂ ವಾಸಿಸುತ್ತಿರುವ ಸಾರ್ವಜನಿಕರು ತಮ್ಮ ಜನ, ಜಾನುವಾರು ವಗೈರೆಗಳೊಂದಿಗೆ ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಕೊಳ್ಳಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರು(ಕಾಮಗಾರಿ), ಕೆಪಿಸಿಎಲ್,
ಕಾರ್ಗಲ್ ಕಾಲೋನಿ- 577 421, ಸಾಗರ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ, ದೂರವಾಣಿ ಸಂಖ್ಯೆ: 08186-240344.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.

ಸಂ:ಕಾನಿಅ/ಗ್ರಾಕುನೀ&ನೈ/ವಿಬ/ಜೆಇ/ JJM /DMF/2021-22/701
ದಿನಾಂಕ:28.07.2021

ಅಲ್ಪಾವಧಿ ಇ-ಟೆಂಡರು ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ - 2000 ರಂತೆ)

ಕರ್ನಾಟಕ ರಾಜ್ಯದ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ ವ್ಯಾಪ್ತಿಯಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಮತ್ತು ಸಿರುಗುಪ್ಪ ತಾಲೂಕಿನ ಜಲ್ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡಿರುವ ಮನೆ ಮನೆಗೆ ಕಾರ್ಯಾತ್ಮಕ ನಳ ಸಂಪರ್ಕ ಒದಗಿಸುವ (Retrofitting FHTC) ಮತ್ತು Augmentation ಕಾಮಗಾರಿಗಳು ಮತ್ತು ಸಿರುಗುಪ್ಪ ತಾಲೂಕಿನ ಡಿ.ಎಂ.ಎಫ್ ಯೋಜನೆಯಡಿಯ ಪೈಪ್ ಲೈನ್ ಕಾಮಗಾರಿಗಳನ್ನು ಇ-ಸಂಗ್ರಹಣ ವೇದಿಕೆ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಇಲಾಖಾ ನಿಯಾಮವಳಿ ಮೇರೆಗೆ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ:29.07.2021 ರಿಂದ Download ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:06.08.2021 ರಂದು ಸಂಜೆ 4.00 ರವರೆಗೆ. ಸಲ್ಲಿಸಬಹುದಾಗಿರುತ್ತದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:07.08.2021 ಸಮಯ ಸಂಜೆ 5.00 ಗಂಟೆ ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆಯನ್ನು ತಾಂತ್ರಿಕ ಬಿಡ್‌ಲ್ಲಿ ಅರ್ಹತೆ ಹೊಂದಿದವರಿಗೆ ತಿಳಿಸಲಾಗುವುದು. ಹಾಗೂ ದಿನಾಂಕ 31.07.2021 ರಂದು ಪೂರ್ವಭಾವಿ ಸಭೆಯನ್ನು, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ, ಜಿಲ್ಲಾ ಪಂಚಾಯಿತಿ ಅವರಣ, ಬಳ್ಳಾರಿ ಕಛೇರಿಯಲ್ಲಿ ಕರೆಯಲಾಗಿದೆ, ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಇ-ಮೇಲ್: eerdwsd.bly@gmail.com ಹಾಗೂ ವೆಬ್ ಸೈಟ್ www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/206/ಎಂಸಿಎ/2021-22

ಕರಾಸಕೈಅನಿನಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560 010. ದೂರವಾಣಿ: 080-23407011-25, ಫ್ಯಾಕ್ಸ್:91-080-23143566/233889070, ಇ-ಮೈಲ್:kssidcho@karnataka.gov.in ವೆಬ್‌ಸೈಟ್:www.kssidc.co.in

ಸಂಖ್ಯೆ:ಕೈ.ವ:ಪೀಣ್ಯ-1:ಎ-180:ಬೀಗಮುದ್ರೆ:ಪೀಠೋ:ಯಂತೋ:ಹರಾಜು:2021 ದಿನಾಂಕ:28.07.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೈಗಾರಿಕಾ ವಸಾಹತು, ಪೀಣ್ಯ 1ನೇ ಹಂತದ, ಕಚ್ಚಾಸಾಮಗ್ರಿ ಮಳಿಗೆ ಸಂಖ್ಯೆ ಎ-180ರಲ್ಲಿ ದಾಸ್ತಾನು ಮಾಡಿರುವ ಹಳೆ ಯಂತ್ರೋಪಕರಣಗಳು ಮತ್ತು ಹಳೆ ಪೀಠೋಪಕರಣಗಳಾದ ಟೇಬಲ್, ಖುರ್ಚಿ, ಅಲ್ಮೇರಾ, ರ್‍ಯಾಕ್ ಮತ್ತು ಇತರೆ ವಸ್ತುಗಳನ್ನು ದಾಸ್ತಾನು ಮಾಡಲಾಗಿದೆ, ಸದರಿ ಯಂತ್ರೋಪಕರಣಗಳು ಮತ್ತು ಹಳೆ ಪೀಠೋಪಕರಣಗಳ ಅಂದಾಜು ಮೌಲ್ಯ ರೂ.1,39,500/- + ಜಿ.ಎಸ್.ಟಿ ಗಳಾಗಿರುತ್ತದೆ, ಈ ಹಳೇ ಯಂತ್ರೋಪಕರಣಗಳು ಹಾಗೂ ಹಳೆ ಪೀಠೋಪಕರಣಗಳನ್ನು ಎಲ್ಲಿ ಹೇಗಿದೆಯೋ ಹಾಗೆ ಮುಚ್ಚಿದ ಟೆಂಡರ್ (Close Tender) ಮೂಲಕ ವಿಲೇವಾರಿ ಮಾಡಲಾಗುವುದು ಆದುದರಿಂದ ಟೆಂಡರ್‌ನಲ್ಲಿ ಭಾಗವಹಿಸುವವರು ದಿನಾಂಕ: 05.08.2021 ರಂದು ಸಂಜೆ 05.00 ಗಂಟೆ ಒಳಗಾಗಿ ಸಹಾಯಕ ಪ್ರಧಾನ ವ್ಯವಸ್ಥಾಪಕರು (ಕೈ.ವ), ಬೆಂಗಳೂರು ವಿಭಾಗ, ಕ.ರಾ.ಸ.ಕೈ.ಅ.ನಿ.ನಿ., ಕೈಗಾರಿಕಾ ವಸಾಹತು, ರಾಜಾಜಿನಗರ ಬೆಂಗಳೂರು-560010 ಇಲ್ಲಿ ಇರಿಸಲಾದ ಟೆಂಡರ್ ಪೆಟ್ಟಿಗೆಯಲ್ಲಿ ಹಾಕುವುದು, Close Tender ನಲ್ಲಿ ಭಾಗವಹಿಸುವವರು ಕೈ.ವ ಪೀಣ್ಯ 1ನೇ ಹಂತದ ಕಚ್ಚಾ ಸಾಮಗ್ರಿ ಮಳಿಗೆ ಸಂಖ್ಯೆ ಎ-180ರಲ್ಲಿ ದಾಸ್ತಾನು ಮಾಡಿರುವ ಹಳೇ ಯಂತ್ರೋಪಕರಣಗಳು ಮತ್ತು ಹಳೆ ಪೀಠೋಪಕರಣಗಳನ್ನು ಕಛೇರಿಯ ಕೆಲಸದ ದಿನಗಳಲ್ಲಿ ಬೆಳಗ್ಗೆ 10.30 ರಿಂದ ಸಂಜೆ 5.00 ಗಂಟೆಯ ಸಮಯದಲ್ಲಿ ಖುದ್ದಾಗಿ ಬಂದು ಪರಿಶೀಲಿಸಬಹುದಾಗಿದೆ.

ಟೆಂಡರ್‌ನಲ್ಲಿ ಭಾಗವಹಿಸುವವರು ಮುಂಗಡ ಹಣವಾಗಿ ರೂ.10,000/- (ರೂಪಾಯಿ ಹತ್ತು ಸಾವಿರ ಮಾತ್ರ) ಗಳಿಗೆ ಕೆ.ಎಸ್.ಎಸ್.ಐ.ಡಿ.ಸಿ ಬೆಂಗಳೂರು ಹೆಸರಿಗೆ ಡಿಡಿಯನ್ನು ಟೆಂಡರ್ ಫಾರಂ ಜೊತೆಯಲ್ಲಿ ಲಗತ್ತಿಸಬೇಕಾಗುತ್ತದೆ, Close Tender ನಲ್ಲಿ ಸಫಲರಾದವರ ಡಿ.ಡಿ ಮೊತ್ತವನ್ನು ಟೆಂಡರ್ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಳ್ಳುವುದು, ಉಳಿದವರ ಡಿಡಿಯನ್ನು ಸ್ಥಳದಲ್ಲಿಯೇ ವಾಪಸ್ಸು ನೀಡಲಾಗುವುದು.

Close Tender ನಲ್ಲಿ ಸಫಲರಾದವರು ಬಾಕಿ ಟೆಂಡರ್ ಮೊತ್ತವನ್ನು ಪತ್ರ ನೀಡಿದ ಒಂದು ವಾರದೊಳಗಾಗಿ ಪೂರ್ತಿ ಮೊತ್ತ ಪಾವತಿ ಮಾಡಿ Tender ನಲ್ಲಿ ಸೂಚಿಸಿರುವ ಯಂತ್ರೋಪಕರಣಗಳು ಮತ್ತು ಹಳೆ ಪೀಠೋಪಕರಣಗಳನ್ನು ಒಂದು ವಾರದೊಳಗಾಗಿ ತಮ್ಮ ಸ್ವಂತ ವೆಚ್ಚದಿಂದ ಸ್ಥಳಾಂತರಿಸುವುದು, ಸ್ಥಳಾಂತರಿಸುವುದನ್ನು ತಡಮಾಡಿದಲ್ಲಿ ದಂಡವನ್ನು ಪಾವತಿ ಮಾಡಬೇಕಾಗುತ್ತದೆ.

ಯಾವುದೇ ಕಾರಣ ನೀಡದೇ ಅಂತಿಮ ಟೆಂಡರ್ ಮೊತ್ತವನ್ನು ಅಂಗಿಕರಿಸುವ ಅಥವಾ ತಿರಸ್ಕರಿಸುವ ಹಾಗೂ ಟೆಂಡರ್ ಕರೆಯುವ ಅಥವಾ ಮುಂದೂಡುವ ಹಕ್ಕನ್ನು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ಇವರುಗಳ ತೀರ್ಮಾನವೇ ಅಂತಿಮ ತೀರ್ಮಾನವಾಗಿದ್ದು ಇದಕ್ಕೆ ಭಾಗವಹಿಸುವ ಎಲ್ಲಾ ಟೆಂಡರ್‌ದಾರರು ಬದ್ದರಾಗಿರಬೇಕು. ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಕೆ.ಎಸ್.ಎಸ್.ಐ.ಡಿ.ಸಿ ವೆಬ್‌ಸೈಟ್ www.kssidc.co.in ರಲ್ಲಿ ಪ್ರಕಟಿಸಲಾಗಿದೆ.

ಸಹಿ/-
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಕೈವ)
ಬೆಂಗಳೂರು ವಿಭಾಗ.

ವಾಸಾಸಂಇ/ಬೆಂ.ನ/ಜೆಎ/975/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

₹ 36 ಲಕ್ಷ ಮೌಲ್ಯದ 26 ಬೈಕ್ ಜಪ್ತಿ • ಜನರ ವಾಹನಗಳ ದಾಖಲೆ ದುರುಪಯೋಗ

ವಿಮಾನದಲ್ಲಿ ಬಂದು ಬೈಕ್ ಕದಿಯುತ್ತಿದ್ದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಸ್ಥಾನದಿಂದ ವಿಮಾನದಲ್ಲಿ ನಗರಕ್ಕೆ ಬಂದು ಬೈಕ್ ಕಳವು ಮಾಡುತ್ತಿದ್ದ ಆರೋಪದಡಿ ಮೆಕ್ಯಾನಿಕ್ ವಿಕಾಸ್‌ಕುಮಾರ್ ಸೇರಿ ಮೂವರನ್ನು ಪಶ್ಚಿಮ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

'ಮನೆ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳು ಕಳವಾಗುತ್ತಿದ್ದು, ಪ್ರಕರಣಗಳು ದಾಖಲಾಗಿದ್ದವು. ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಚುರುಕಿನ ತನಿಖೆ ನಡೆಸಿ ಮೂವರನ್ನು ಬಂಧಿಸಿದ್ದಾರೆ' ಎಂದು ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

'ರಾಜಸ್ಥಾನದ ವಿಕಾಸ್‌ಕುಮಾರ್, ದಾವಲ್‌ದಾಸ್ ಹಾಗೂ ದಶರಥ್ ಬಂಧಿತರು. ₹ 36 ಲಕ್ಷ ಮೌಲ್ಯದ 26 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ. ಕಾಮಾಕ್ಷಿಪಾಳ್ಯ, ಚಂದ್ರಾಲೇಔಟ್, ವಿಜಯನಗರ, ಜ್ಞಾನಭಾರತಿ, ಅನ್ನಪೂರ್ಣೇಶ್ವರಿನಗರ ಹಾಗೂ ಶೇಷಾದ್ರಿಪುರ ಠಾಣೆ ವ್ಯಾಪ್ತಿಗಳಲ್ಲಿ ಆರೋಪಿಗಳು ಕೃತ್ಯ ಎಸಗಿದ್ದರು' ಎಂದೂ ತಿಳಿಸಿದರು.

ವಿಕಾಸ್ ಕುಮಾರ್

ದಶರಥ್

ದಾವಲ್‌ದಾಸ್

ಲಾಕ್‌ಡೌನ್‌ನಿಂದ ಕೆಲಸ ಹೋಗಿತ್ತು: 'ವಿಕಾಸ್‌ಕುಮಾರ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ. ನಾಗರಬಾವಿಯ ಗ್ಯಾರೇಜೊಂದರಲ್ಲಿ ಮೆಕ್ಯಾನಿಕ್ ಆಗಿದ್ದ. ಲಾಕ್‌ಡೌನ್‌ನಿಂದಾಗಿ ಕೆಲಸ ಹೋಗಿತ್ತು. ಬಳಿಕ ತನ್ನೂರಿಗೆ ತೆರಳಿದ್ದ. ನಗರದಲ್ಲಿ ನೆಲೆಸಿದ್ದ ದಾವಲ್‌ದಾಸ್ ಹಾಗೂ ದಶರಥ್ ಜೊತೆ ಒಡನಾಟವಿಟ್ಟುಕೊಂಡು ಬೈಕ್ ಕಳವು ಮಾಡಲಾರಂಭಿಸಿದ್ದ.'

'ವಿಮಾನದಲ್ಲಿ ನಗರಕ್ಕೆ ಬರುತ್ತಿದ್ದ ಆರೋಪಿ, ಸಹಚರರ ಜೊತೆ ಸೇರಿ ಸುತ್ತಾಡುತ್ತಿದ್ದ. ಮನೆ ಮುಂದೆ ನಿಲ್ಲಿಸುತ್ತಿದ್ದ ಬೈಕ್‌ಗಳನ್ನು ಗುರುತಿಸಿ ಲಾಕ್ ಮುರಿದು ಕದಿಯುತ್ತಿದ್ದ. ಕದ್ದ ವಾಹನಗಳನ್ನು ಅಂದ್ರಹಳ್ಳಿಯ ಖಾಲಿ ಜಾಗವೊಂದರಲ್ಲಿ ನಿಲ್ಲಿಸುತ್ತಿದ್ದ. ಕೆಲದಿನ ಬಿಟ್ಟು ಆರೋಪಿಗಳು ತೆಗೆದುಕೊಂಡು ಹೋಗುತ್ತಿದ್ದರು' ಎಂದೂ ಡಿಸಿಪಿ ಹೇಳಿದರು.

ಓಎಲ್‌ಎಕ್ಸ್ ದಾಖಲೆ ದುರುಪಯೋಗ: 'ಸಾರ್ವಜನಿಕರು ವಾಹನಗಳ ಮಾರಾಟಕ್ಕಾಗಿ ಓಎಲ್‌ಎಕ್ಸ್ ಜಾಲತಾಣದಲ್ಲಿ ದಾಖಲೆ ಸಮೇತ ಜಾಹೀರಾತು ನೀಡುತ್ತಿದ್ದರು. ಅಂಥವರ ದಾಖಲೆ ಕದಿಯುತ್ತಿದ್ದ ಆರೋಪಿಗಳು, ಕದ್ದ ವಾಹನಗಳಿಗೆ ನಕಲಿ ನೋಂದಣಿ ಪ್ರಮಾಣ ಪತ್ರ ಸೃಷ್ಟಿಸುತ್ತಿದ್ದರು. ಅದೇ ದಾಖಲೆ ಬಳಸಿ ಕಡಿಮೆ ಬೆಲೆಗೆ ವಾಹನ ಮಾರುತ್ತಿದ್ದರು' ಎಂದೂ ಅವರು ತಿಳಿಸಿದರು.

ರಾಜಸ್ಥಾನದಲ್ಲಿ ಮಾರಾಟ: 'ಕದ್ದ ವಾಹನಗಳನ್ನು ರಾಜಸ್ಥಾನದವರೆಗೂ ಚಲಾಯಿಸಿಕೊಂಡು ಹೋಗುತ್ತಿದ್ದ ಆರೋಪಿಗಳು, ಅಲ್ಲಿ ಕಡಿಮೆ ಬೆಲೆಗೆ ಮಾರಿದ್ದರು. ಬಂದ ಹಣವನ್ನು ಹಂಚಿಕೊಂಡು ಐಷಾರಾಮಿ ಜೀವನ ನಡೆಸುತ್ತಿದ್ದರು. ಪೊಲೀಸರ ತಂಡವೊಂದು ರಾಜಸ್ಥಾನಕ್ಕೆ ಹೋಗಿದ್ದು, ಆರೋಪಿಗಳ ಬಗ್ಗೆ ಮತ್ತಷ್ಟು ಮಾಹಿತಿ ಕಲೆಹಾಕುತ್ತಿದೆ' ಎಂದೂ ಡಿಸಿಪಿ ಹೇಳಿದರು.

ಬೈಕ್ ಮೇಲೆ 'ಪಿಎಸ್‌ಐ' ಎಂದು ಬರೆಸಿದ್ದ

'ಆರೋಪಿ ವಿಕಾಸ್‌ಕುಮಾರ್, ತನ್ನ ಬೈಕ್ ಮೇಲೆ ಸೈರನ್ ಅಳವಡಿಸಿದ್ದ. ಪೊಲೀಸ್ ಸಬ್ ಇನ್‌ಸ್ಪೆಕ್ಟರ್- ಕರ್ನಾಟಕ ಪೊಲೀಸ್ ಇಲಾಖೆ ಎಂದು ಬರೆಸಿದ್ದ. ಪೊಲೀಸ್ ಹೆಸರಿನಲ್ಲೂ ಆರೋಪಿ ಹಲವರನ್ನು ವಂಚಿಸಿರುವ ಮಾಹಿತಿ ಇದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

'ಇನ್‌ಸ್ಟಾಗ್ರಾಮ್ 'ರೀಲ್ಸ್'ನಲ್ಲೂ ಖಾತೆ ಹೊಂದಿರುವ ಆರೋಪಿ, ಯುವತಿಯರ ಜೊತೆ ನೃತ್ಯ ಮಾಡಿದ್ದ ದೃಶ್ಯಗಳನ್ನು ಅಪ್‌ಲೋಡ್ ಮಾಡಿದ್ದಾನೆ. ವಿಡಿಯೊ ಹಾಡುಗಳಿಗೂ ಹೆಜ್ಜೆ ಹಾಕಿದ್ದಾನೆ. ಕಳವು ಕೃತ್ಯದಿಂದ ಬಂದ ಹಣದಲ್ಲೇ ಆರೋಪಿ, ಆಲ್ಬಮ್ ಹಾಡು ಹಾಗೂ ಕಿರುಚಿತ್ರ ನಿರ್ಮಿಸುತ್ತಿದ್ದ ಮಾಹಿತಿಯೂ ಇದೆ' ಎಂದೂ ಮೂಲಗಳು ತಿಳಿಸಿವೆ.

ಸಂಪುಟ: ತಡೆಯಾಜ್ಞೆಯೇ ತೊಡಕು?

ಒಂದನೇ ಪುಟದಿಂದ

'ಎರಡು ವರ್ಷಗಳಲ್ಲಿ ವಿಧಾನಸಭೆ ಚುನಾವಣೆ ಬರಲಿದ್ದು, ಎಚ್ಚರಿಕೆ ವಹಿಸುವುದು ಸೂಕ್ತ ಎಂದು ಸಂಘದ ಪ್ರಮುಖರು ಸಲಹೆ ನೀಡಿದ್ದಾರೆ' ಎಂದು ಹೇಳಿದ್ದಾರೆ.

'ರಮೇಶ ಜಾರಕಿಹೊಳಿಯವರ ಸಿ.ಡಿ ಬಹಿರಂಗಗೊಂಡ ಬೆನ್ನಲ್ಲೇ ಬಿಜೆಪಿಗೆ ವಲಸೆ ಬಂದು ಸಚಿವರಾಗಿದ್ದ 6 ಮಂದಿ ಮಾಜಿ ಸಚಿವರು ತಮ್ಮ ವಿರುದ್ಧ ಮಾನಹಾನಿಕಾರಕ ಸುದ್ದಿಗಳನ್ನು ಪ್ರಕಟಿಸದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರು. ಇದಕ್ಕೂ ಮೊದಲೇ ಬಿಜೆಪಿಯ ಇನ್ನೂ ಕೆಲವು ಶಾಸಕರು ತಡೆಯಾಜ್ಞೆ ತಂದಿದ್ದಾರೆ. ಇಂತಹವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಬೇಕೇ ಬೇಡವೇ ಎಂಬ ಬಗ್ಗೆ ಪಕ್ಷ ಯಾವುದೇ ನಿರ್ಧಾರಕ್ಕೆ ಬಂದಿಲ್ಲ. ಇವರಲ್ಲಿ ಕೆಲವರನ್ನು ಕೈಬಿಟ್ಟರೆ ಸರ್ಕಾರದ ಮೇಲೆ ಪರಿಣಾಮ ಏನಾಗಬಹುದು ಎಂಬ ಚಿಂತನೆ ನಡೆದಿದೆ' ಎಂದು ಮುಖಂಡರೊಬ್ಬರು ತಿಳಿಸಿದರು.

ಸಂಪುಟ ರಚನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಯವರು ಬೆಂಗಳೂರಿನಲ್ಲಿ ಹಿರಿಯ ನಾಯಕರೊಂದಿಗೆ ಒಂದು ಸುತ್ತಿನ ಮಾತುಕತೆ ನಡೆಸಿದ್ದಾರೆ. ಕೇಂದ್ರ ನಾಯಕರ ಜತೆ ಚರ್ಚೆ ನಡೆಸಿ ಮುಂದಿನವಾರದ ಕೊನೆಯ ಒಳಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಬಹುದು ಎಂದು ಅವರು ಹೇಳಿದರು.

ಆಕಾಂಕ್ಷಿಗಳ ದಂಡು ದೆಹಲಿಗೆ: ಬೊಮ್ಮಾಯಿ ಸಂಪುಟ ಸೇರಿಕೊಳ್ಳುವ ಬಯಕೆಯೊಂದಿಗೆ ಗುರುವಾರ ದೆಹಲಿಗೆ ದೌಡಾಯಿಸಿರುವ ಅನೇಕ ಶಾಸಕರು, ತಮ್ಮ ಮನವಿ ಸಲ್ಲಿಸಲು ವರಿಷ್ಠರ ಭೇಟಿಗೆ ಸಮಯ ಕೋರಿದ್ದಾರೆ.

ಹಿರಿಯ ಶಾಸಕರಾದ ಉಮೇಶ ಕತ್ತಿ, ಆರ್.ಅಶೋಕ, ಅರವಿಂದ ಬೆಲ್ಲದ, ಸಿ.ಪಿ. ಯೋಗೇಶ್ವರ, ಮುನಿರತ್ನ, ಎಂ.ಪಿ. ಕುಮಾರಸ್ವಾಮಿ ಹಾಗೂ ವಿಧಾನ ಪರಿಷತ್ ಸದಸ್ಯೆ ತೇಜಸ್ವಿನಿ ಗೌಡ ಮತ್ತಿತರರು ಸಚಿವ ಸ್ಥಾನಕ್ಕೆ ಅವಕಾಶ ಕೋರುವ ನಿಟ್ಟಿನಲ್ಲಿ ಪ್ರಯತ್ನ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

'ಸಚಿವ ಸ್ಥಾನ ನೀಡಿದರೆ ಸಂತೋಷದಿಂದ ನಿರ್ವಹಿಸುವೆ. ಇಲ್ಲದಿದ್ದರೆ, ಕ್ಷೇತ್ರದ ಅಭಿವೃದ್ಧಿ ಕಾರ್ಯದಲ್ಲಿ ತೊಡಗುವೆ' ಎಂದು ಪ್ರತಿಕ್ರಿಯಿಸಿರುವ ಹುಕ್ಕೇರಿ ಶಾಸಕ ಉಮೇಶ ಕತ್ತಿ, 'ಸಕ್ಕರೆ ಕಾರ್ಖಾನೆ ಕೆಲಸದ ನಿಮಿತ್ತ ದೆಹಲಿಗೆ ಬಂದಿರುವೆ. ವರಿಷ್ಠರ ಭೇಟಿಗೆ ಅವಕಾಶ ಸಿಕ್ಕರೆ ಸಚಿವ ಸ್ಥಾನ ನೀಡುವಂತೆ ಮನವಿ ಸಲ್ಲಿಸುವೆ' ಎಂದರು.

ಆಕಾಂಕ್ಷಿಗಳ ಒತ್ತಡ ಆರಂಭ

ಒಂದನೇ ಪುಟದಿಂದ

ಸಚಿವ ಸ್ಥಾನಕ್ಕೆ ಸೈ: ಈಶ್ವರಪ್ಪ: ಶಿವಮೊಗ್ಗದಲ್ಲಿ ಮಾತನಾಡಿದ ಕೆ.ಎಸ್. ಈಶ್ವರಪ್ಪ ಅವರು, 'ಸಂಪುಟದಲ್ಲಿ ಯಾವುದೇ ಸ್ಥಾನ ನೀಡಿದರೂ ಒಪ್ಪಿಕೊಳ್ಳುತ್ತೇನೆ. ಶೆಟ್ಟರ್ ಅವರಂತೆ ಹೊರಗುಳಿಯುವ ಯೋಚನೆ ಮಾಡಿಲ್ಲ. ಒಂದು ವೇಳೆ ಪಕ್ಷದ ಸಂಘಟನೆಗೆ ಹೋಗಿ ಎಂದು ಸೂಚಿಸಿದರೂ ಅದಕ್ಕೆ ಸಿದ್ಧನಿದ್ದೇನೆ' ಎಂದರು.

ಸಿಎಂ ನಿರ್ಧಾರಕ್ಕೆ ಬದ್ಧ: ನಿರಾಣಿ

'ಸಚಿವ ಸಂಪುಟ ವಿಸ್ತರಣೆ ಮುಖ್ಯಮಂತ್ರಿಯ ಪರಮಾಧಿಕಾರ. ಮುಖ್ಯಮಂತ್ರಿ ತೆಗೆದುಕೊಳ್ಳುವ ಯಾವುದೇ ನಿರ್ಧಾರಕ್ಕೆ ನಾನು ಬದ್ಧ. ಸಂಪುಟ ವಿಸ್ತರಣೆ ಯಾವಾಗ ಮಾಡಬೇಕು, ಯಾರನ್ನು ಸಂಪುಟಕ್ಕೆ ತೆಗೆದುಕೊಳ್ಳಬೇಕು ಎಂಬುದು ಮುಖ್ಯಮಂತ್ರಿ ವಿವೇಚನೆಗೆ ಬಿಟ್ಟಿದ್ದು, ಅವರ ನಿರ್ಧಾರಕ್ಕೆ ನಾವೆಲ್ಲರೂ ಬದ್ಧರಾಗಿರಬೇಕು' ಎಂದು ಮುರುಗೇಶ ನಿರಾಣಿ ಬೆಂಗಳೂರಿನಲ್ಲಿ ಹೇಳಿದರು.

'ನಾನೂ ಸಚಿವ ಸ್ಥಾನದ ಆಕಾಂಕ್ಷಿ. ಕಳೆದ ಬಾರಿ ನೀಡಿರಲಿಲ್ಲ' ಎಂದು ಬಳ್ಳಾರಿ ನಗರದ ಬಿಜೆಪಿ ಶಾಸಕ ಸೋಮಶೇಖರ್ ರೆಡ್ಡಿ ಹೇಳಿದ್ದಾರೆ.

ಯಡಿಯೂರಪ್ಪ ಅವರ ಆಪ್ತ ಬಣದ ಶಾಸಕ ಎಂ.ಪಿ.ರೇಣುಕಾಚಾರ್ಯ ಬೆಂಗಳೂರಿನಲ್ಲಿ ಮಾತನಾಡಿ, 'ಈ ಬಾರಿಯ ಸಂಪುಟದಲ್ಲಿ ಮಧ್ಯ ಕರ್ನಾಟಕ ಅದರಲ್ಲೂ ದಾವಣಗೆರೆ ಜಿಲ್ಲೆಗೆ ಪ್ರಾತಿನಿಧ್ಯ ಸಿಗಲಿದೆ ಎಂಬ ವಿಶ್ವಾಸವಿದೆ' ಎಂದರು.

ಹಿರಿಯ ಶಾಸಕರಾದ ಮುರುಗೇಶ ನಿರಾಣಿ, ರೇಣುಕಾಚಾರ್ಯ, ರಾಜೂಗೌಡ ನಾಯಕ್, ಆರಗ ಜ್ಞಾನೇಂದ್ರ, ಕೋಟ ಶ್ರೀನಿವಾಸ ಪೂಜಾರಿ ಮತ್ತಿತರರು ಬೊಮ್ಮಾಯಿ ಅವರನ್ನು ಭೇಟಿ ಮಾಡಿದರು. ಇನ್ನೂ ಕೆಲವು ಶಾಸಕರು ಯಡಿಯೂರಪ್ಪ ಅವರ ಮೂಲಕ ಪ್ರಭಾವ ಬೀರುವ ಪ್ರಯತ್ನ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

ಉತ್ತರ ಕನ್ನಡದ ರಸ್ತೆಗಳ ದುರಸ್ತಿಗೆ ₹210 ಕೋಟಿ: ಬೊಮ್ಮಾಯಿ

ಒಂದನೇ ಪುಟದಿಂದ

'ಲೋಕೋಪಯೋಗಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗಳ ರಸ್ತೆಗಳ ದುರಸ್ತಿಗೆ ತಲಾ ₹ 100 ಕೋಟಿಯನ್ನು ತಕ್ಷಣ ಬಿಡುಗಡೆ ಮಾಡಲಾಗುವುದು. ಅರಬೈಲ್ ಘಟ್ಟದಲ್ಲಿ ರಾಷ್ಟ್ರೀಯ ಹೆದ್ದಾರಿ 63ರಲ್ಲಿ ಆಗಿರುವ ಭೂ ಕುಸಿತ ದುರಸ್ತಿಗೆ ₹ 6 ಕೋಟಿ, ಮಳೆ ನೀರು ಹರಿಯುವ ಚರಂಡಿ ದುರಸ್ತಿಗೆ ₹ 4 ಕೋಟಿ ಬಿಡುಗಡೆ ಮಾಡಲಾಗುವುದು' ಎಂದರು. 'ಈ ಬಗ್ಗೆ ತಕ್ಷಣವೇ ಅಂದಾಜು ಪಟ್ಟಿ ಕಳುಹಿಸಿಕೊಡಿ. ಈ ಹಣವನ್ನು ಬಳಸಿ ತುರ್ತು ಕಾಮಗಾರಿ ಮಾಡಿ ಗ್ರಾಮೀಣ ಭಾಗಗಳಿಗೆ ರಸ್ತೆ ಸಂಪರ್ಕ ಕೊಡಿ. ಅಕ್ಟೋಬರ್‌ನಿಂದ ಪೂರ್ಣ ಪ್ರಮಾಣದಲ್ಲಿ ಕಾಮಗಾರಿ ಮಾಡಬಹುದು. ಆಗ ವಿವರವಾದ ಅಂದಾಜು ಪಟ್ಟಿ ಸಲ್ಲಿಸಿ' ಎಂದು ಅಧಿಕಾರಿಗಳಿಗೆ ಸೂಚಿಸಿದರು.

'ಅರಬೈಲ್‌ನಲ್ಲಿ ರಾಷ್ಟ್ರೀಯ ಹೆದ್ದಾರಿ 63ರ ಪುನರ್ ನಿರ್ಮಾಣಕ್ಕೆ ₹ 35 ಕೋಟಿ ಬೇಕು ಎಂದು ಅಂದಾಜು ಮಾಡಲಾಗಿದೆ. ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ ಪ್ರಸ್ತಾಪ ಸಲ್ಲಿಸಲಾಗುವುದು' ಎಂದು ತಿಳಿಸಿದರು.

'ಭೂಕುಸಿತ ಅಧ್ಯಯನಕ್ಕೆ ತಜ್ಞರ ತಂಡ'

ಒಂದನೇ ಪುಟದಿಂದ

'ಸಂತ್ರಸ್ತರಿಗೆ ಅಗತ್ಯ ಪರಿಹಾರ ಒದಗಿಸಲು ಸರ್ಕಾರದಲ್ಲಿ ಹಣಕಾಸಿನ ಸಮಸ್ಯೆ ಇಲ್ಲ. ಹಾನಿಯ ಸಮಗ್ರ ಮಾಹಿತಿ ಪಡೆದ ಬಳಿಕ ಕೇಂದ್ರಕ್ಕೆ ಹೆಚ್ಚಿನ ನೆರವು ಕೇಳುವ ಬಗ್ಗೆ ನಿರ್ಧರಿಸುತ್ತೇವೆ' ಎಂದರು.

ಇದಕ್ಕೂ ಮೊದಲು ಅವರು, ಭೂಕುಸಿತದಿಂದ ಸಂಪೂರ್ಣವಾಗಿ ಮನೆ ಕುಸಿದಿದ್ದ ಪ್ರಕರಣಗಳಲ್ಲಿ ಹಲವು ಕುಟುಂಬಗಳಿಗೆ ಪರಿಹಾರ ವಿತರಿಸಿದರು. ಯಲ್ಲಾಪುರ ತಾಲ್ಲೂಕಿನ ಗುಳ್ಳಾಪುರದಲ್ಲಿ ಗಂಗಾವಳಿ ನದಿಯ ಪ್ರವಾಹದಲ್ಲಿ ಸೇತುವೆ ಕೊಚ್ಚಿಕೊಂಡು ಹೋಗಿದ್ದ ಪ್ರದೇಶ, ಶಿರೂರಿನಲ್ಲಿ ಮನೆಗಳು ಮುಳುಗಡೆಯಾಗಿರುವ ಪ್ರದೇಶವನ್ನು ವೀಕ್ಷಿಸಿದರು.

ಶಾಸಕರಾದ ಶಿವರಾಮ ಹೆಬ್ಬಾರ, ಸುನೀಲ ನಾಯ್ಕ, ವಿಧಾನಪರಿಷತ್ ಸದಸ್ಯ ಶಾಂತರಾಮ ಸಿದ್ದಿ, ಆಡಳಿತ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಕಾರ್ಯದರ್ಶಿ ಪ್ರಮೋದ ಹೆಗಡೆ, ಗ್ರಾಮ ಪಂಚಾಯಿತಿ ಸದಸ್ಯರು, ಅಧಿಕಾರಿಗಳಿದ್ದರು.

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನಿಯರ್‌ರ ಕಚೇರಿ,
ಲೋಕೋಪಯೋಗಿ, ಇಲಾಖೆ ವಿಭಾಗ ಬೀದರ

ಸಂ:ಕಾನಿಇಂ/ಲೋಇ/ವಿಬಿ/ತಾಶಾ-3/8443/2020-21 /1074 ದಿನಾಂಕ: 28.07.2021

:: ಪಬ್ಲಿಕ್-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕಟಣೆ ::

ಕರ್ನಾಟಕ ರಾಜ್ಯಪಾಲರ ಪರವಾಗಿ ವರ್ಕ್-ಇಂಡೆಂಟ್ KPWD/2020-21/BD/WORK_INDENT 135855 ಅಡಿ ಇರುವ ರೂ. 191.00 ಲಕ್ಷ ಮೊತ್ತದ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆ ವಿಭಾಗ ಬೀದರ ಇವರಿಂದ ಟೆಂಡರ್‌ಗಳನ್ನು ಕರೆಯಲಾಗಿದೆ.

ಪಬ್ಲಿಕ್-ಪ್ರೊಕ್ಯುರ್‌ಮೆಂಟ್ ಪೋರ್ಟಾಲ್‌ನ http://eproc.karnataka.gov.in ರಿಂದ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ದಿನಾಂಕ 17.08.2021 ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಸ್ವೀಕೃತ ಟೆಂಡರ್‌ಗಳನ್ನು ದಿನಾಂಕ 18.08.2021 ರಂದು ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಅಂತರ್ಜಾಲ ತಾಣ ಅಥವಾ ಈ ಕಚೇರಿಗೆ ಸಂಪರ್ಕಿಸಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ, ಇಲಾಖೆ ವಿಭಾಗ ಬೀದರ

ವಾ.ಸಾ.ಸಂ.ಇ/ಬೀದರ/102/ಎಂಸಿ&ಎ/2021-22

ನನ್ನ ಕನ್ನಡ ಮಣ್ಣು ಮರೆಯಲ್ಲ

ಪ್ರಜಾವಾಣಿ ನೋಡಿಯೊ

ಪೂರ್ಣ ಸಂದರ್ಶನದ ವಿಡಿಯೋ ನೋಡಲು ಸ್ಕ್ಯಾನ್ ಮಾಡಿ

'ಸಲಗ' ಚಿತ್ರದಲ್ಲಿ ಧನಂಜಯ್

'ಟಗರು' ಸಿನಿಮಾ ಬಿಡುಗಡೆಯಾಗಿ ಮೂರು ವರ್ಷ ಕಳೆದರೂ 'ಡಾಲಿ' ಪಾತ್ರದ ಹವಾ ಇನ್ನೂ ಕಡಿಮೆ ಆಗಿಲ್ಲ. ಹೀಗೆ 'ಡಾಲಿ ಧನಂಜಯ್' ಆದ ಧನಂಜಯ್, 'ಪುಷ್ಪ' ಸಿನಿಮಾ ಮುಖಾಂತರ ಪ್ಯಾನ್ ಇಂಡಿಯಾ ವೇದಿಕೆಗೆ ಕಾಲಿರಿಸಿದ್ದಾರೆ. ಆ.9ರಿಂದ ಚಿತ್ರೀಕರಣ ಆರಂಭಗೊಳ್ಳಲಿರುವ 'ಹೆಡ್‌ಬುಷ್'ನಲ್ಲಿ ಡಾನ್ ಜಯರಾಜ್ ಪಾತ್ರಕ್ಕೆ ಜೀವತುಂಬಲು ಸಿದ್ಧತೆ ನಡೆಸಿರುವ ಧನಂಜಯ್ ತೂಕ ಹೆಚ್ಚಿಸಿಕೊಳ್ಳುತ್ತಿದ್ದಾರೆ.

ಅಭಿಲಾಷ್ ಪಿ.ಎಸ್.

● 'ಟಗರು' ಬಂದು ಹಲವು ವರ್ಷಗಳೇ ಕಳೆದರೂ 'ಡಾಲಿ' ಹವಾ ನಿಂತಿಲ್ಲವಲ್ಲ?

'ಟಗರು' ಚಿತ್ರ ಬಿಡುಗಡೆಯಾಗಿ ಮೂರು ವರ್ಷಗಳಾದವು. ನನ್ನ ಸಿನಿ ಪಯಣದಲ್ಲಿ ದೊಡ್ಡ ಬ್ರೇಕ್ ನೀಡಿದ ಪಾತ್ರವದು. ಕೆಲವೊಂದು ಪಾತ್ರಗಳನ್ನು ಮತ್ತೆ ನಿರ್ಮಿಸಲು ಸಾಧ್ಯವಿಲ್ಲ. 'ಡಾಲಿ' ಪಾತ್ರವೂ ಅಷ್ಟೇ ಅನುಭವಿಸಿ, ಅಷ್ಟೇ ಗಾಢವಾಗಿ ಮಾಡಿದ್ದ ಪಾತ್ರವದು. ಸಿನಿಮಾ ರಂಗಕ್ಕೆ ಇಳಿಯುವ ಮೊದಲಿನ ನನ್ನಲ್ಲಿದ್ದ ಕೋಪ, ನಿರಾಶೆ,ಅನುಭವದ ಭಾವಗಳೆಲ್ಲವೂ 'ಡಾಲಿ' ಪಾತ್ರದ ಮುಖಾಂತರ ಹೊರಬಂದಿದ್ದವು. ಜೊತೆಗೆ ಸೂರಿ ಅವರು ಪಾತ್ರವನ್ನು ಆ ರೀತಿ ವಿನ್ಯಾಸ ಮಾಡಿದ್ದರು. ಸೂರಿ ಅವರು ಸೃಷ್ಟಿಸುವ ಎಷ್ಟೋ ಪಾತ್ರಗಳು ನಮ್ಮನ್ನು ಇನ್ನೂ ಕಾಡುತ್ತವೆ. ಕಲಾವಿದನಾಗಿ ಪ್ರತಿಯೊಂದು ಪಾತ್ರ ಮಾಡುವಾಗ ಹಸಿವಿರಬೇಕು. ಹಾಗೆಯೇ ಬಹಳ ಆನಂದದಿಂದ ಆ ಪಾತ್ರವನ್ನು ನಾನು ಮಾಡಿದ್ದೆ.

● ಶಿವಣ್ಣ–ಡಾಲಿ ಜೋಡಿ 'ಬೈರಾಗಿ' ಮುಖಾಂತರ ಮತ್ತೆ ಒಂದಾಗಿದೆ. ಇದರಲ್ಲಿ ನಿಮ್ಮ ಪಾತ್ರದ ಬಗ್ಗೆ?

ಈ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ಈ ಚಿತ್ರದಲ್ಲಿ ನನ್ನನ್ನು ಆಯ್ಕೆ ಮಾಡಿರುವುದಕ್ಕೆ ಶಿವಣ್ಣನಿಗೆ ಧನ್ಯವಾದ ಹೇಳಬೇಕು. 'ಟಗರು' ಆದ ಮೇಲೆ ಹಲವು ಕಥೆಗಳನ್ನು ಶಿವಣ್ಣ ಕೇಳಿದ್ದಾರೆ. ನನ್ನ ಹಾಗೂ ಶಿವಣ್ಣ ಜೋಡಿಯಲ್ಲಿ ಸಿನಿಮಾಗೆ ಹಲವರು ಪ್ರಯತ್ನಿಸಿದರು. ಆದರೆ 'ನನ್ನ ಹಾಗೂ ಧನಂಜಯ್ ಜೋಡಿ ಮತ್ತೆ ತೆರೆಮೇಲೆ ಬಂದರೆ ಬೇರೆ ರೀತಿ ಇರಬೇಕು. ಎರಡೂ ಪಾತ್ರಗಳೂ ಅಷ್ಟು ಚೆನ್ನಾಗಿರಬೇಕು' ಎಂಬ ಭಾವನೆ ಅವರಲ್ಲಿತ್ತು. 'ಬೈರಾಗಿ' ಕಥೆ ಅವರೆದುರು ಬಂದಾಗ, 'ಈ ಪಾತ್ರಕ್ಕೆ ನಾನು, ಡಾಲಿ ಚೆನ್ನಾಗಿರುತ್ತದೆ' ಎಂದು ಶಿವಣ್ಣ ಹೇಳಿದ್ದರು. ಶಿವಣ್ಣ ಅವರಿಂದ ಕಲಿಯುವುದು ಬಹಳಷ್ಟಿದೆ. ವಿಜಯ್ ಮಿಲ್ಟನ್ ನಿರ್ದೇಶನದ 'ಬೈರಾಗಿ'ಯಲ್ಲಿ ಎಲ್ಲ ಪಾತ್ರಗಳೂ ಅದ್ಭುತವಾಗಿವೆ. ಶಿವಣ್ಣನ ಸಿನಿಮಾದಲ್ಲಿ ಎಲ್ಲ ಪಾತ್ರಗಳಿಗೂ ಅದರದೇ ಆದ ಪ್ರಾಮುಖ್ಯತೆ ಇದೆ. ಶಿವಣ್ಣನೂ ಪ್ರತಿ ಪಾತ್ರಕ್ಕೆ ಈ 'ಸ್ಪೇಸ್', ಬೆಂಬಲವನ್ನು ನೀಡುತ್ತಾರೆ. ಟಗರು ಕಾಂಬಿನೇಷನ್ ಅನ್ನು ಜನ ನಿರೀಕ್ಷಿಸುತ್ತಾರೆ, ಆದರೆ ಬೈರಾಗಿ ಕಾಂಬಿನೇಷನ್ ಪ್ರೇಕ್ಷಕರಿಗೆ ಅನಿರೀಕ್ಷಿತ ಅನುಭವ ನೀಡಲಿದೆ. ಇಲ್ಲಿ ಟಗರು ಶಿವನೂ ಇರುವುದಿಲ್ಲ, ಡಾಲಿಯೂ ಇರುವುದಿಲ್ಲ ಆದರೆ ಕಾಡುವ ಪಾತ್ರಗಳಿರಲಿವೆ.

● 'ಸಲಗ'ದಲ್ಲಿ ಸೂಪರ್‌ಕಾಪ್ ಆಗಿದ್ದೀರಿ. ಖಳನಾಯಕನಿಂದ ಪೊಲೀಸ್ ಆದ ಅನುಭವ?

'ಡಾಲಿ'ಯಂತಹ ಪಾತ್ರವನ್ನೇ ಮಾಡುತ್ತಿರಲು ಸಾಧ್ಯವಿಲ್ಲ. ಕಲಾವಿದನಾಗಿ ಬೇರೆಬೇರೆ ಪಾತ್ರಗಳನ್ನು ಮಾಡುತ್ತಿರಬೇಕು. ಗ್ಯಾಂಗ್‌ಸ್ಟರ್ ಪಾತ್ರದಲ್ಲಿದ್ದಾಗ ಆ ಬದುಕನ್ನು ನೋಡಬಹುದು, ಅನುಭವಿಸಬಹುದು. ಪೊಲೀಸ್ ಅಧಿಕಾರಿಯಾಗಿ ಅವರ ದೃಷ್ಟಿಕೋನದಲ್ಲಿ ವ್ಯವಸ್ಥೆಯನ್ನು ನೋಡಬಹುದು. ಈ ಅವಕಾಶ 'ಸಲಗ'ದಲ್ಲಿ ದೊರಕಿದೆ. ದುನಿಯಾ ವಿಜಯ್ ಅವರ ನಿರ್ದೇಶನದ ಮೊದಲ ಸಿನಿಮಾ ಇದಾಗಿದ್ದು, ಪ್ರತಿಯೊಂದು ಪಾತ್ರವನ್ನು ಅದ್ಭುತವಾಗಿ ಸೃಷ್ಟಿಸಿದ್ದಾರೆ. ಈ ಚಿತ್ರದಲ್ಲಿ ಅವರು ನೋಡಿದ ಬದುಕಿನ ಪರಿಸರವನ್ನು ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ. ಅಪರಾಧ ಜಗತ್ತಿನ ಸಿನಿಮಾ ಆದರೂ, ಇವತ್ತಿನ ವ್ಯವಸ್ಥೆಯ ಬಗ್ಗೆ ಅದರಲ್ಲಿ ಉಲ್ಲೇಖವಿದೆ. ವಿಜಯ್ ಅವರು ಕರೆದು, 'ನೀನೊಬ್ಬ ಹೀರೋ. ಬರೀ ವಿಲನ್ ಅಲ್ಲ. ಅದು ಮತ್ತೆ ಸಲಗದಲ್ಲಿ ಸಾಬೀತಾಗುತ್ತದೆ' ಎಂದು ಹೇಳಿ ನಟನೆ ಮಾಡಿಸಿದ್ದರು.

● ಪ್ಯಾನ್ ಇಂಡಿಯಾ ಸಿನಿಮಾ 'ಪುಷ್ಪ'ದ ಅನುಭವ?

'ಪುಷ್ಪ' ಮೊದಲ ಭಾಗದ ಚಿತ್ರೀಕರಣ ಪೂರ್ಣಗೊಂಡಿದೆ. ಈ ಮಟ್ಟದ ಬಜೆಟ್ ಸಿನಿಮಾಗಳಲ್ಲಿ ಅನುಭವಕ್ಕಾಗಿ ಕೆಲಸ ಮಾಡಬೇಕು. ಸುಕುಮಾರ್ ಅವರಂತಹ ನಿರ್ದೇಶಕರು, ಅಲ್ಲು ಅರ್ಜುನ್ ಅವರಂತಹ ಪ್ಯಾನ್ ಇಂಡಿಯಾ ನಾಯಕ. ಪರಿಪೂರ್ಣ ದೃಶ್ಯದ ಚಿತ್ರೀಕರಣಕ್ಕೆ ಅವರು ಎಷ್ಟು ಕೆಲಸ ಮಾಡುತ್ತಾರೆ, ಅದಕ್ಕೆ ತೆಗೆದುಕೊಳ್ಳುವ ಸಮಯ ಹೀಗೆ 'ಪುಷ್ಪ'ದಲ್ಲಿ ಕಲಿಯುವಂತಹದು ನನಗೆ ಬಹಳಷ್ಟಿದೆ. ಹೀಗಾಗಿ ಈ ರೀತಿಯ ಪ್ರಾಜೆಕ್ಟ್‌ಗಳಿಗೆ ನನ್ನನ್ನು ನಾನು ತೊಡಗಿಸಿಕೊಳ್ಳುತ್ತೇನೆ. ನಾನೇ ನುಗ್ಗಿ ಇದರಲ್ಲಿ ಭಾಗವಹಿಸುತ್ತೇನೆ. ಪ್ರತಿದಿನವೂ ಕಲಿಯುತ್ತಿರಬೇಕು. ನಮ್ಮನ್ನು ಪರಿಶೋಧಿಸಲು ಸಿಕ್ಕ ವೇದಿಕೆ ಅದು. ಒಬ್ಬ ಕಲಾವಿದನನ್ನು ಅವರು ಸ್ವೀಕರಿಸುವ ಬಗೆ ಖುಷಿ ನೀಡಿತು. ಎಲ್ಲ ಭಾಷೆಯಲ್ಲಿ, ಹಲವು ನಿರ್ದೇಶಕರು ಜೊತೆ ಕೆಲಸ ಮಾಡುವುದು ಒಬ್ಬ ನಟನಾಗಿ ನನ್ನ ಬೆಳವಣಿಗೆಗೆ ಅವಶ್ಯ. ಹಾಗೆಂದು ನನ್ನ ಕನ್ನಡ, ನನ್ನ ಮಣ್ಣು ಮರೆಯುವುದಿಲ್ಲ.

● 'ಹೆಡ್‌ಬುಷ್'ಗೆ ಸಿದ್ಧತೆ ಹೇಗೆ ನಡೆಯುತ್ತಿದೆ?

ಮೊದಲ ಲಾಕ್‌ಡೌನ್ ಆದ ಕೂಡಲೇ ಭಾನುವಾರ ಸೇರಿದಂತೆ ಎಲ್ಲ ದಿನವೂ ನಾನು ಚಿತ್ರೀಕರಣದಲ್ಲಿ ಭಾಗಿಯಾಗಿದ್ದೆ. ಆಗಸ್ಟ್ 9ರಿಂದ ಡಾನ್ ಜಯರಾಜ್ ಜೀವನಕಥೆ ಆಧಾರಿತ 'ಹೆಡ್‌ಬುಷ್' ಚಿತ್ರೀಕರಣ ಆರಂಭವಾಗಲಿದೆ. ದೊಡ್ಡ ಬಜೆಟ್ ಸಿನಿಮಾ ಅದು. ಅಗ್ನಿ ಶ್ರೀಧರ್ ಅವರು 'ದಾದಾಗಿರಿಯ ಆ ದಿನಗಳು' ಓದಿದರೆ, ಅವರ ಜೊತೆ ಕುಳಿತು ಮಾತನಾಡಿದರೆ ಅವರ ಅನುಭವ ಹೇಳುತ್ತಾರೆ. ಶ್ರೀಧರ್ ಅವರ ಜೊತೆ ಕುಳಿತರೆ ಚರ್ಚೆ ಮುಗಿಯುವುದೇ ಇಲ್ಲ. ಅದೊಂದು ಬೇರೆ ಜಗತ್ತು. ನಾವು ಯಾವತ್ತೂ ಅದನ್ನು ನೋಡಲು ಸಾಧ್ಯವಿಲ್ಲ. ಕಥೆಗಳನ್ನು ಕೇಳುತ್ತಾ ಆ ಜಗತ್ತಿನ ಒಳಗೆ ಪ್ರವೇಶಿಸಬೇಕು. ಮಾನಸಿಕವಾಗಿ ಈ ಪಾತ್ರಕ್ಕೆ ಸಿದ್ಧತೆ ನಡೆಸುತ್ತಿದ್ದೇನೆ. ಜೊತೆಗೆ 'ಜಯರಾಜ್' ಪಾತ್ರಕ್ಕಾಗಿ ದಪ್ಪ ಆಗಬೇಕು.

● ಸಾಲು ಸಾಲು ಚಿತ್ರಗಳು ಬಿಡುಗಡೆಗೆ ಸಿದ್ಧವಾಗಿದೆ ಅಲ್ಲವೇ?

'ಸಲಗ' ಆ.20ಕ್ಕೆ ಬಿಡುಗಡೆಯಾಗಲಿದೆ. ಸೆ.24ಕ್ಕೆ ನನ್ನದೇ ನಿರ್ಮಾಣದ 'ಬಡವ ರಾಸ್ಕಲ್' ಬಿಡುಗಡೆಯಾಗಲಿದೆ. 'ರತ್ನನ್ ಪ್ರಪಂಚ', 'ತೋತಾಪುರಿ', ಕನ್ನಡ ಹಾಗೂ ಮಲಯಾಳಂನಲ್ಲಿ ತೆರೆ ಕಾಣಲಿರುವ '21 ಅವರ್ಸ್', ತಮಿಳಿನಲ್ಲಿ ಒಂದು ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ರಚಿತಾ ರಾಮ್ ಅವರ ಜೊತೆಗೆ ನಟಿಸಿರುವ 'ಮಾನ್ಸೂನ್ ರಾಗ' ನಮ್ಮ ಭಾಗದ ಚಿತ್ರೀಕರಣ ಮುಗಿದಿದೆ. ಏನಪ್ಪಾ ಇಷ್ಟೊಂದು ಸಿನಿಮಾಗಳು ಎಂದು ಎನಿಸಬಹುದು. ಇವುಗಳಲ್ಲಿ ಬಹುತೇಕ ಚಿತ್ರಗಳು ಕಳೆದ ವರ್ಷವೇ ಬಿಡುಗಡೆಯಾಗಬೇಕಿದ್ದವು. ಆದರೆ ಕೋವಿಡ್ ಕಾರಣದಿಂದ ವಿಳಂಬವಾಯಿತು. ಸತತವಾಗಿ ಬೇರೆಬೇರೆ ಪಾತ್ರಗಳಲ್ಲಿ ನಟಿಸಲು ಸಿಕ್ಕಿದ ಅವಕಾಶ ಎಂದೇ ಈ ಅವಧಿಯನ್ನು ನಾನು ನೋಡುತ್ತೇನೆ. ಯಾವ ಪಾತ್ರವನ್ನು ಜನ ಹೇಗೆ ಸ್ವೀಕರಿಸುತ್ತಾರೆ ಎನ್ನುವ ಕುತೂಹಲವಿದೆ. ❖

ಕಿರುತೆರೆ

ನಂದಿನಿ ವಿಠ್ಠಲ್

ಬಹುಮುಖಿ ನಂದಿನಿ

ಅಪ್ಪನ ಮಾರ್ಗದರ್ಶನ, ಅಮ್ಮನ ಸ್ಫೂರ್ತಿ, ಕುಟುಂಬದ ಬೆಂಬಲದೊಂದಿಗೆ ನಂದಿನಿ ವಿಠ್ಠಲ್ ಅವರ ತೆರೆಯ ಮೇಲಿನ ಪಯಣ ಆರಂಭವಾಯಿತು. ಕಿರುತೆರೆ, ಹಿರಿತೆರೆ, ಸಿನಿಕ್ಷೇತ್ರದ ಸಮೂಹದ ವೇದಿಕೆ ಸೇರಿ ಎಲ್ಲ ಕಡೆಗಳಲ್ಲೂ ತಮ್ಮದೇ ಛಾಪು ಮೂಡಿಸುತ್ತಾ ಮುನ್ನಡೆದಿದ್ದಾರೆ. ಅಪ್ಪ ವಿಠ್ಠಲ್ ಸಿ.ಎನ್. ಅವರನ್ನು ಗಾಢವಾಗಿ ನೆನಪಿಸಿಕೊಳ್ಳುತ್ತಲೇ ನಂದಿನಿ ಮಾತಿಗಿಳಿದರು.

ಶರತ್ ಹೆಗ್ಡೆ

'ಮುಕ್ತ ಮುಕ್ತ' ಧಾರಾವಾಹಿಯಲ್ಲಿ 'ದೇವಯಾನಿ'ಯ ಪಾತ್ರ ಹಲವರಿಗೆ ನೆನಪಿರಬಹುದು. ಹೌದು ಆ ದೇವಯಾನಿಯೇ ನಂದಿನಿ ವಿಠ್ಠಲ್.

ಕಿರುತೆರೆಯಿಂದ ಪುಟ್ಟ ಪುಟ್ಟ ಹೆಜ್ಜೆ ಇಟ್ಟು ಬೆಳೆಯುತ್ತಾ ಬಂದ ನಂದಿನಿ ಅವರು ಇದೀಗ ಬಹುಮುಖಿಯಾಗಿ ತೆರೆದುಕೊಂಡಿದ್ದಾರೆ. ಸಿನಿಮಾ, ಗಾಯನ, ಕಂಠದಾನ, ಸೇರಿದಂತೆ ಚಿತ್ರರಂಗದ ಹಲವು ಆಯಾಮಗಳಲ್ಲಿ ತೊಡಗಿಕೊಂಡಿದ್ದಾರೆ.

ಪಿ. ಶೇಷಾದ್ರಿ ಅವರ ಗರಡಿಯಲ್ಲಿ ಪಳಗಿದವರು ಅವರು. 'ಕಣ್ಣಾ ಮುಚ್ಚಾಲೆ' (ದೂರದರ್ಶನ ಚಂದನ ವಾಹಿನಿಯಲ್ಲಿ ಪ್ರಸಾರ) ಧಾರಾವಾಹಿಯಲ್ಲಿ ತಂದೆ ವಿಠ್ಠಲ್ ಸಿ.ಎನ್., ತಾಯಿ ಇಂದ್ರಾಣಿ ಜತೆ ತಾವೂ ಬಣ್ಣ ಹಚ್ಚಿದರು. ಮಗಳ ಆಸಕ್ತಿಯನ್ನು ನೋಡಿ ತಂದೆ ತಾಯಿ ಇಬ್ಬರೂ ಪ್ರೋತ್ಸಾಹಿಸಿದರು. 'ವಾಸ್ತವ್ಯ, ಮೌನರಾಗ (ಚಿಂಟು ಪಾತ್ರ) ಧಾರಾವಾಹಿಗಳು ಸಾಕಷ್ಟು ಹೆಸರು ತಂದುಕೊಟ್ಟವು' ಎಂದು ನೆನಪಿಸಿಕೊಂಡರು ನಂದಿನಿ.

'ಅಮೃತವರ್ಷಿಣಿ', 'ಮುಂಬೆಳಕು', 'ಮುಂಜಾವು' ಹೀಗೆ ಹಲವು ಧಾರಾವಾಹಿಗಳಲ್ಲಿ ಅವರದ್ದು ಪ್ರಧಾನ ಭೂಮಿಕೆಯೇ ಇದೆ.

ಅಂದಹಾಗೆ ನಂದಿನಿ ಅವರು ಚಿತ್ರಸಾಹಿತಿ ವಿಜಯ ನಾರಸಿಂಹ (ತಾಯಿ ಇಂದ್ರಾಣಿ ಅವರ ಚಿಕ್ಕಪ್ಪ) ಅವರ ಮೊಮ್ಮಗಳು.

ನಂದಿನಿ ಅವರ ಬಗ್ಗೆ ಮಾತನಾಡುವಾಗ ಅವರು ನೆನಪಿಸುವುದು ಇತ್ತೀಚೆಗೆ ನಿಧನರಾದ ತಮ್ಮ ತಂದೆ ವಿಠ್ಠಲ್ ಸಿ.ಎನ್. ಅವರನ್ನೇ.

'ತಂದೆಯವರಲ್ಲಿ ಛಲ ಇತ್ತು. ಈ ಕ್ಷೇತ್ರದ ಅಸ್ಥಿರತೆಯ ಅರಿವೂ ಇತ್ತು. ಅವೆರಡನ್ನೂ ನಿಭಾಯಿಸಿಕೊಂಡು ಹೋಗುವುದನ್ನು ಕಲಿಸಿದರು. ಅವರು ಅರವಿಂದ್ ಮಿಲ್ಸ್‌ನಲ್ಲಿ ಮಾನವ ಸಂಪನ್ಮೂಲ ಅಧಿಕಾರಿ ಆಗಿದ್ದರು. ಜತೆಗೆ ಕಿರುತೆರೆ ಕಲಾವಿದ. ಕಣ್ಣಾ ಮುಚ್ಚಾಲೆ, ಯದ್ವಾ ತದ್ವಾ, ಸಿಲ್ಲಿ ಲಲ್ಲಿ ಧಾರಾವಾಹಿಗಳಲ್ಲಿ ಬಣ್ಣ ಹಚ್ಚಿದ್ದಾರೆ. ಜನ ನನ್ನಲ್ಲಿ ಅವರನ್ನು ಕಾಣುತ್ತಿದ್ದಾರೆ. ತಂದೆಯವರ ಮಾತೃಭಾಷೆ ತೆಲುಗು. ಆದರೆ, ಕನ್ನಡ ಭಾಷೆ, ಸಾಹಿತ್ಯದ ಮೇಲೆ ಅತೀವ ಪ್ರೀತಿ. ಹಾಗಾಗಿ ಅವರೂ ಕನ್ನಡದ ಕಿರುತೆರೆಯಲ್ಲಿ ಸಾಕಷ್ಟು ಗುರುತಿಸಿಕೊಂಡರು. ಅದು ನನ್ನ ಬದುಕಿಗೆ ಪ್ಲಸ್ ಆಗುತ್ತಲೇ ಹೋಯಿತು. ಆದರೆ, ಕೋವಿಡ್ ಪರಿಸ್ಥಿತಿ ನಮ್ಮ ಕುಟುಂಬದಲ್ಲಿ ದುಃಖದ ಕಥೆಯನ್ನೇ ಬರೆಯಿತು' ಎಂದು ಭಾವುಕರಾದರು ಅವರು.

'ತಾಯಿ ಕೂಡಾ ಸ್ಕ್ರಿಪ್ಟ್, ಕಥೆ ಬರೆಯುತ್ತಾರೆ. ಅವರೂ ಬೆಂಬಲ ಕೊಟ್ಟಿದ್ದಾರೆ. ಪತಿ ವಲ್ಲೀಶ್ ಹಾಗೂ ಕುಟುಂಬದವರು ನನ್ನ ಆಸಕ್ತಿಗೆ ಬೆಂಬಲವಾಗಿ ನಿಂತಿದ್ದಾರೆ' ಎಂದು ಖುಷಿಯಿಂದ ನುಡಿದರು ನಂದಿನಿ.

ಟಿ.ಎಸ್.ನಾಗಾಭರಣ, ಟಿ.ಎನ್. ಸೀತಾರಾಂ, ಪಿ. ಶೇಷಾದ್ರಿ ಅವರ ಜತೆ ಕೆಲಸ ಮಾಡುವಾಗ ತುಂಬಾ ಕಲಿತಿದ್ದೇನೆ. ಇವರೆಲ್ಲಾ ಒಂದೊಂದು ಶಾಲೆಗಳಿದ್ದಂತೆ. ಮೂರೂ ವಿಭಿನ್ನ ಕೋರ್ಸ್ ಮಾಡಿದ ಅನುಭವ. ಉದಾಹರಣೆಗೆ 'ಮೂಕಜ್ಜಿಯ ಕನಸುಗಳು' ಇಂಥ ಸಾಕಷ್ಟು ಹೊಸ ಅನುಭವ ಕೊಟ್ಟ ಸಿನಿಮಾ ಎನ್ನುತ್ತಾರೆ ನಂದಿನಿ.

ಪಾತ್ರಗಳ ಆಯ್ಕೆಯಲ್ಲಿ ಚೂಸಿ...

'ಹೌದು ನನಗೆ ನೆಗೆಟಿವ್ ಪಾತ್ರಗಳು ಬೇಡ. ಏಕೆಂದರೆ ಬಹುತೇಕ ಧಾರಾವಾಹಿಗಳಲ್ಲಿ ಹೆಣ್ಣು ಅಂದರೆ ಮನೆ ಒಡೆಯುವವರು, ಕೆಟ್ಟವರು ಎಂಬ ಭಾವ ಬರುವಂತಹ ಪಾತ್ರಗಳನ್ನೇ ನೋಡಬಹುದು. ಅಂಥ ಚಿತ್ರಣ ಏಕೆ ಬೇಕು ಹೇಳಿ? ವಾಸ್ತವವಾಗಿ ಮನೆಯನ್ನು ಒಂದಾಗಿಸುವವಳೂ ಹೆಣ್ಣೇ ಅಲ್ಲವೇ? ಹಾಗಾಗಿ ಅಂಥ ಪಾತ್ರಗಳನ್ನು ಮಾತ್ರ ಒಪ್ಪಿಕೊಳ್ಳುತ್ತೇನೆ. ಪಾತ್ರಗಳ ಆಯ್ಕೆ ನನಗೆ ಖುಷಿ ಮತ್ತು ತೃಪ್ತಿ ತರಬೇಕು ಅಷ್ಟೆ. ಈ ವಿಷಯದಲ್ಲಿ ಯಾವ ಒತ್ತಡಕ್ಕೂ ಮಣಿಯುವುದಿಲ್ಲ' ಎನ್ನುತ್ತಾರೆ.

ಸದ್ಯ ಕೈಯಲ್ಲಿರುವ ಚಿತ್ರಗಳು

'ಕೆಇಬಿ ಕೆಂಪಣ್ಣ', 'ಟೆಂಪರ್', 'ಲಾಸ್ಟ್ ಸೀನ್'... ಚಿತ್ರಗಳು ನಂದಿನಿ ಕೈಯಲ್ಲಿವೆ. ಜೊತೆಗೆ ಕೆಲವು ಆಡಿಯೊ ಬುಕ್‌ಗಳಿಗಾಗಿ ಕೆಲಸ ಮಾಡುತ್ತಿದ್ದಾರೆ. ಜೊತೆಗೆ ನಿರ್ಮಾಪಕರು, ತಂತ್ರಜ್ಞರು, ಕಲಾವಿದರು ಸೇರಿದಂತೆ ಚಿತ್ರ ಕ್ಷೇತ್ರದ ಎಲ್ಲರನ್ನೂ ಸೇರಿಸುವ ವೇದಿಕೆ 'ಸ್ಟೇಜ್ 18 – 18'ನಲ್ಲಿ ತೊಡಗಿಕೊಂಡು ಬ್ಯುಸಿ ಆಗಿದ್ದಾರೆ.

ಒಳ್ಳೆಯ ಚಿತ್ರಗಳನ್ನು ಕೊಡಬೇಕು. ಅತ್ಯುತ್ತಮ ಪಾತ್ರಗಳಲ್ಲಿ ಅಭಿನಯಿಸಬೇಕು ಎಂಬ ಕನಸಿನೊಂದಿಗೆ ಮುಂದುವರಿದಿದ್ದಾರೆ ನಂದಿನಿ. ❖

'ಲಂಕೆ'ಗೆ ಸೂಫಿ ಶೈಲಿಯ ಹಾಡು

'ಲೂಸ್ ಮಾದ' ಯೋಗೀಶ್ ನಾಯಕರಾಗಿ ನಟಿಸಿರುವ 'ಲಂಕೆ' ಚಿತ್ರದ 'ನಯನಕ್ಕೆ ನಯನ ಸೇರೋ ಕ್ಷಣ' ಎಂಬ ಹಾಡು ಆನಂದ್ ಆಡಿಯೊ ಮೂಲಕ ಬಿಡುಗಡೆಯಾಗಿದೆ.

ನಿರ್ದೇಶಕ ರಾಮಪ್ರಸಾದ್ ಎಂ.ಡಿ. ಮಾತನಾಡಿ, 'ಸ್ವಲ್ಪ ದುಃಖ ಹಾಗೂ ಹೆಚ್ಚಿನ ಸಂತೋಷವನ್ನು ಹಾಡಿನ ಮೂಲಕ ಹೇಳಬೇಕೆಂದುಕೊಂಡೆ. ಗೀತರಚನೆಕಾರ ಗೌಸ್ ಪೀರ್ ಈ ಸುಂದರ ಗೀತೆ ಬರೆದುಕೊಟ್ಟರು. ಅಷ್ಟೇ ಮಧುರವಾಗಿ ಕಾರ್ತಿಕ್ ಶರ್ಮ ಈ ಹಾಡಿಗೆ ಸಂಗೀತ ನೀಡಿದ್ದಾರೆ. ಧನಂಜಯ್ ಅವರ ನೃತ್ಯ ನಿರ್ದೇಶನದಲ್ಲಿ ಯೋಗಿ ಹಾಗೂ ಕೃಷಿ ತಾಪಂಡ ಅದ್ಭುತವಾಗಿ ನಟಿಸಿದ್ದಾರೆ. ವರಮಹಾಲಕ್ಷ್ಮೀ ಹಬ್ಬದಂದು ಚಿತ್ರವನ್ನು ತೆರೆಗೆ ತರುವ ಸಿದ್ಧತೆ ನಡೆಯುತ್ತಿದೆ' ಎಂದು ಹೇಳಿದರು.

ನಾಯಕ ಯೋಗೀಶ್ ಸಹ ಈ ಹಾಡಿನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಂಗೀತ ನಿರ್ದೇಶಕ ಕಾರ್ತಿಕ್ ಶರ್ಮ ಹಾಗೂ ನೃತ್ಯ ನಿರ್ದೇಶಕರ ಕಾರ್ಯವೈಖರಿಯನ್ನು ಮುಕ್ತಕಂಠದಿಂದ ಶ್ಲಾಘಿಸಿದರು.

ತುಂಬಾ ದಿನಗಳ ನಂತರ ಎಲ್ಲರನ್ನೂ ನೋಡಿ ಸಂತಸವಾಗುತ್ತಿದೆ ಎಂದು ಮಾತು ಆರಂಭಿಸಿದ, ನಾಯಕಿ ಕೃಷಿ ತಾಪಂಡ ಈ ಹಾಡು ಹಾಗೂ ಚಿತ್ರದ ಬಗ್ಗೆ ತಮ್ಮ ಅನುಭವದ ಮಾತುಗಳನ್ನಾಡಿದರು.

ಚಿತ್ರದ ನಾಲ್ಕು ಹಾಡುಗಳು ಬೇರೆ ಬೇರೆ ಶೈಲಿಯಲ್ಲಿವೆ. ಈ ಹಾಡು ಸೂಫಿ ಹಾಗೂ ಖವಾಲಿ ಶೈಲಿಯಲ್ಲಿದೆ. ಗೌಸ್‌ಪೀರ್ ಅವರ ಸಾಹಿತ್ಯ ಸೊಗಸಾಗಿದೆ. ಈ ಹಾಡನ್ನು ಧನುಷ್ ಜಗದೀಶ್ ಹಾಗೂ ರಕ್ಷಿತಾ ಸುರೇಶ್ ಹಾಡಿದ್ದಾರೆ ಎಂದು ಸಂಗೀತ ನಿರ್ದೇಶಕ ಕಾರ್ತಿಕ ಶರ್ಮ ಮಾಹಿತಿ ನೀಡಿದರು.

ಪಟೇಲ್ ಶ್ರೀನಿವಾಸ್, ಸುರೇಖಾ ರಾಮ್ ಪ್ರಸಾದ್ ಚಿತ್ರದ ನಿರ್ಮಾಪಕರು. ಇತ್ತೀಚೆಗೆ ನಿಧನರಾದ ಸಂಚಾರಿ ವಿಜಯ್ ಸಹ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ❖

ಕೃಷಿ ತಾಪಂಡ, ಯೋಗೀಶ್

ಆಗಸ್ಟ್‌ನಲ್ಲಿ ಬರಲಿದ್ದಾನೆ 'ಹಿಟ್ಲರ್'

ಹಿಟ್ಲರ್ ಚಿತ್ರದಲ್ಲಿ ಸಸ್ಯ ಮತ್ತು ಲೋಹಿತ್

ಹೊಸ ಪ್ರತಿಭೆಗಳ ಚಿತ್ರ 'ಹಿಟ್ಲರ್' ಆಗಸ್ಟ್‌ನಲ್ಲಿ ಬಿಡುಗಡೆ ಆಗಲಿದೆ. ಗಾನಶಿವ ಮೂವೀಸ್ ಈ ಚಿತ್ರ ನಿರ್ಮಿಸುತ್ತಿದೆ. ಮಮತಾ ಲೋಹಿತ್ ನಿರ್ಮಾಪಕರು.

ಸಿನಿಮಾಕ್ಕೆ ಸೆನ್ಸಾರ್ ಮಂಡಳಿಯಿಂದ ಯು/ಎ ಪ್ರಮಾಣಪತ್ರ ಸಿಕ್ಕಿದೆ. ಚಿತ್ರದ ಸಂಭಾಷಣೆಯ ತುಣುಕೊಂದನ್ನು ಯುಟ್ಯೂಬ್‌ನಲ್ಲಿ ಪ್ರಸಾರ ಮಾಡಲಾಗಿತ್ತು. ಅದಕ್ಕೆ ಮೆಚ್ಚುಗೆಯೂ ವ್ಯಕ್ತವಾಗಿತ್ತು. ಇತ್ತೀಚೆಗೆ ನಟ ಶಿವರಾಜ್‌ಕುಮಾರ್ ಅವರು ಚಿತ್ರದ ತುಣುಕುಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಭೂಗತಲೋಕಕ್ಕೆ ಬಂದ ಅನಾಥ ಹುಡುಗನೊಬ್ಬ ಮುಂದೆ ಸರಿದಾರಿಗೆ ಬರಲು ಯತ್ನಿಸುತ್ತಾನೆ. ಆಗ ಎದುರಾಗುವ ತೊಡಕುಗಳು ಏನು ಮತ್ತು ಅದನ್ನು ಅವನು ಹೇಗೆ ನಿಭಾಯಿಸುತ್ತಾನೆ ಎಂಬುದು ಚಿತ್ರದ ಸಾರಾಂಶ. ಕಿನ್ನಾಳರಾಜ್ ಅವರ ಕಥೆ, ಚಿತ್ರಕಥೆ, ಸಂಭಾಷಣೆ ಹಾಗೂ ನಿರ್ದೇಶನ ಇದೆ.

ನಾಯಕಿ ಸಸ್ಯ, ಮನಮೋಹರ್ ರೈ, ಬಲರಾಜವಾಡಿ, ವೈಭವ್ ನಾಗರಾಜ್, ವಿಜಯ್ ಚಂಡೂರ್, ಶಶಿಕುಮಾರ್, ವೇದಹಾಸನ್, ಗಣೇಶ್‌ರಾವ್ ಮುಂತಾದವರು ತಾರಾಗಣದಲ್ಲಿದ್ದಾರೆ. ಸಂಗೀತ ಆಕಾಶ್‌ಪರ್ವ, ಛಾಯಾಗ್ರಹಣ ಜಿ.ವಿ.ನಾಗರಾಜ್ ಕಿನ್ನಾಳ, ಸಂಕಲನ ಗಣೇಶ್ ತೋರಗಲ್, ಸಾಹಸ ಚಂದ್ರುಬಂಡೆ ಅವರದ್ದು.

'ರೈಡರ್' ಚಿತ್ರೀಕರಣ ಪುನರಾರಂಭ

ಇತ್ತೀಚೆಗೆ ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದ ನಟ ನಿಖಿಲ್ ಕುಮಾರಸ್ವಾಮಿ, ಇದೀಗ ಮತ್ತೆ ಬಣ್ಣಹಚ್ಚಿದ್ದಾರೆ. ಕೋವಿಡ್–19 ಲಾಕ್‌ಡೌನ್ ಪರಿಣಾಮವಾಗಿ ಸ್ಥಗಿತಗೊಂಡಿದ್ದ 'ರೈಡರ್' ಚಿತ್ರದ ಚಿತ್ರೀಕರಣ ಪುನರಾರಂಭಗೊಂಡಿದೆ.

ಬೆಂಗಳೂರಿನಲ್ಲೇ ಕೊನೆಯ ಹಂತದ ಚಿತ್ರೀಕರಣ ಇತ್ತೀಚೆಗೆ ಆರಂಭವಾಗಿದ್ದು, ಇನ್ನೊಂದು ವಾರದಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಮೈಸೂರು ಸುತ್ತಮುತ್ತ ಒಂದು ಹಾಡನ್ನು ಶೂಟಿಂಗ್ ಮಾಡಲು ಚಿತ್ರತಂಡ ಸಿದ್ಧತೆ ಮಾಡಿಕೊಂಡಿದೆ. ಸ್ಪೋರ್ಟ್ಸ್ ಡ್ರಾಮಾ ಚಿತ್ರ ಇದಾಗಿದ್ದು, ತೆಲುಗಿನ ವಿಜಯ್ ಕುಮಾರ್ ಕೊಂಡ ಇದಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ತೆಲುಗಿನ 'ಒಕ್ಕಾ ಲೈಲಾ ಕೋಸಂ' ಮತ್ತು 'ಗುಂಡೆ ಜಾರಿ ಗಲ್ಲಂಥೈಂಡಾ' ಸಿನಿಮಾಗಳನ್ನು ನಿರ್ದೇಶಿಸಿದ ಖ್ಯಾತಿ ಅವರದ್ದು.

ಚಿತ್ರದಲ್ಲಿ ನಿಖಿಲ್ ಅವರದ್ದು ಬ್ಯಾಸ್ಕೆಟ್‌ಬಾಲ್ ಆಟಗಾರನ ಪಾತ್ರ. ಕಾಶ್ಮೀರ ಪರದೇಶಿ ಇದರ ನಾಯಕಿ. ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿದ್ದಾರೆ. ಶ್ರೀಶ ಕೂದುವಳ್ಳಿ ಅವರ ಛಾಯಾಗ್ರಹಣವಿದೆ. ಸಂಪದ, ದತ್ತಣ್ಣ, ಅಚ್ಯುತ್‌ಕುಮಾರ್, ಚಿಕ್ಕಣ್ಣ, ಶಿವರಾಜ್ ಕೆ.ಆರ್. ಪೇಟೆ ತಾರಾಗಣದಲ್ಲಿದ್ದಾರೆ. ರಾಜಕೀಯದಿಂದ ಕೊಂಚ ಬಿಡುವು ಪಡೆದಿರುವ ನಿಖಿಲ್ ಇತ್ತೀಚೆಗೆ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಮುಂದಿನ ಪ್ರಾಜೆಕ್ಟ್ ಘೋಷಿಸಿದ್ದರು. ಕೆವಿಎನ್ ಪ್ರೊಡಕ್ಷನ್ ಹೌಸ್ ಬ್ಯಾನರ್ ಅಡಿಯಲ್ಲಿ ಹೊಸ ಚಿತ್ರ ತೆರೆಕಾಣಲಿದೆ ಎಂದು ಘೋಷಿಸಿದ್ದರು. ರೈಡರ್ ಬಳಿಕ ಇದರ ಚಿತ್ರೀಕರಣ ಆರಂಭವಾಗಲಿದೆ. ❖

ನಿಖಿಲ್ ಕುಮಾರಸ್ವಾಮಿ

ಸಿನಿ ಸಂಕ್ಷಿಪ್ತ

ತೆರೆಯ ಮೇಲೆ ಬರಲು ಸಿದ್ಧ ಚಿ.ತು. ಸಂಘ

ಶರಣ್– ಚಿಕ್ಕಣ್ಣ ಅಭಿನಯದ 'ಅಧ್ಯಕ್ಷ' ಚಿತ್ರದ ಕಥೆಯಲ್ಲಿ ಕಾಣುವ ಚಿ.ತು. ಸಂಘ, ಈಗ ಹೊಸ ಚಿತ್ರವೊಂದರ ಶೀರ್ಷಿಕೆಯಾಗಿಬಿಟ್ಟಿದೆ.

'ಚಿ.ತು. ಸಂಘ'ದಲ್ಲಿ ರೂಪಾ, ಚೇತನ್ ಕುಮಾರ್

'ಚಿ.ತು. ಸಂಘ' ತೆರೆಗೆ ಬರಲು ಸಿದ್ಧವಾಗಿದೆ. ಈ ಚಿತ್ರಕ್ಕೆ ಪ್ರಾದೇಶಿಕ ಸೆನ್ಸಾರ್ ಮಂಡಳಿ ಯು/ಎ ಪ್ರಮಾಣಪತ್ರ ನೀಡಿದೆ. ಚೇತನ್ ಕುಮಾರ್ ಈ ಚಿತ್ರದ ನಾಯಕ, ನಿರ್ದೇಶಕ. ರೂಪಾ ನಾಯಕಿ. ಶಿವಣ್ಣ ನಂದಿಹಳ್ಳಿ, ಲಕ್ಷ್ಮೀಕಾಂತಯ್ಯ ಮತ್ತು ಪಾರ್ವತಿ ಹೊಳೆನರಸೀಪುರ ಅವರು ಈ ಚಿತ್ರದ ನಿರ್ಮಾಪಕರು. ಚಿತ್ರದ ಹಾಡುಗಳು ಲಹರಿ ಮ್ಯೂಸಿಕ್ ಮೂಲಕ ಬಿಡುಗಡೆಯಾಗಿವೆ. ❖

ಒಟಿಟಿ

ಚಿತ್ರ: ಲವ್ ಇನ್ ದಿ ಟೈಮ್ಸ್ ಆಫ್ ಕೊರೊನಾ (ಹಿಂದಿ)

ತಾರಾಗಣ: ದೀಪಾನಿತ ಶರ್ಮಾ, ನತಶಾ ರಸ್ತೋಗಿ, ಆದಿಲ್ ಹುಸೈನ್, ಶಿಬಾನಿ ದಾಂಡೇಕರ್, ಶೇಖರ್ ರಾವ್‌ಜಿಯಾನಿ

ನಿರ್ದೇಶನ: ಇಂದ್ರಾಣಿ ರೇ ಪ್ರಸಾರ: ವೂಟ್ ಸೆಲೆಕ್ಟ್

ಕೊರೊನಾ, ಲಾಕ್‌ಡೌನ್ ಹಾಗೂ ಅದರ ಪರಿಣಾಮದ ಸುತ್ತಮುತ್ತಲಿನ ಕಥಾವಸ್ತುವಿಗೆ ಹೊಸ ಸೇರ್ಪಡೆ 'ಲವ್ ಇನ್ ದಿ ಟೈಮ್ಸ್ ಆಫ್ ಕೊರೊನಾ'. 'ಶಾರ್ಟ್ ಹಲೊ', 'ಡಿನ್ನರ್ ಇನ್ ಲಾಕ್‌ಡೌನ್' ಹಾಗೂ 'ಟಿ ಆ್ಯಂಡ್ ಎ ರೋಸ್' ಹೀಗೆ ಮೂರು ಕಿರುಚಿತ್ರಗಳ ಸಂಗ್ರಹ ಇದು. ಕೋವಿಡ್ ಸಂದರ್ಭದಲ್ಲಿ ಮೂವರು ಮಹಿಳೆಯರ ಜೀವನದ ಮೇಲಾದ ಪರಿಣಾಮವನ್ನು ತೆರೆಯ ಮೇಲೆ ತಂದಿದೆ. ಇಲ್ಲಿನ ಮೂರು ಪಾತ್ರಗಳು ಹೊಸ ಜಗತ್ತಿಗೆ ಹೊಂದಿಕೊಳ್ಳುವಲ್ಲಿ ಅನುಭವಿಸುವ ಕಷ್ಟ, ಪ್ರೀತಿಪಾತ್ರರನ್ನು ಸಂಪರ್ಕಿಸಲು ಸಾಧ್ಯವಾಗದ ಅನುಭವ ಬಿಚ್ಚಿಟ್ಟಿದೆ. ❖



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ–ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ವ್ಯಕ್ತಿಯೊಬ್ಬ ನನ್ನನ್ನು ದೂಷಿಸಿದ ಕೂಡಲೇ ನಾನು ಸಿಟ್ಟಿನಿಂದ ಪ್ರತಿಕ್ರಿಯಿಸುತ್ತೇನೆ. ಆಗ ಆತ ನನ್ನಲ್ಲಿ ಉಂಟುಮಾಡಿದ ಅಲ್ಪ ಕಂಪನವು ನನ್ನನ್ನು ಒಬ್ಬ ಗುಲಾಮನನ್ನಾಗಿ ಮಾಡಿರುತ್ತದೆ.

–ಸ್ವಾಮಿ ವಿವೇಕಾನಂದ

ಆರ್ಥಿಕ ಉತ್ತೇಜನ ಸಾಲದು ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಬೇಕು

ಕೊರೊನಾ ವೈರಾಣುವಿನ ಏಟಿನಿಂದ ಅರ್ಥವ್ಯವಸ್ಥೆಯನ್ನು ಪಾರು ಮಾಡಲು ಕೇಂದ್ರ ಸರ್ಕಾರವು ಹಂತ ಹಂತವಾಗಿ ಘೋಷಿಸಿರುವ ಉತ್ತೇಜನಾ ಕ್ರಮಗಳನ್ನು ಪರಿಶೀಲನೆಗೆ ಒಳಪಡಿಸಿರುವ ಸಂಸತ್ತಿನ ಸ್ಥಾಯಿ ಸಮಿತಿಯೊಂದು, 'ಕ್ರಮಗಳು ಅಗತ್ಯಕ್ಕೆ ಅನುಗುಣವಾಗಿ ಇಲ್ಲ' ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದೆ. ಕೊರೊನಾ ಎರಡನೆಯ ಅಲೆಗೆ ಮೊದಲು ಆರ್ಥಿಕತೆಯಲ್ಲಿ ಕಾಣಿಸುತ್ತಿದ್ದ ಚಲನಶೀಲ ಸ್ಥಿತಿ, ನಂತರದಲ್ಲಿ ಆಗಿರುವ ಬದಲಾವಣೆಗಳನ್ನು ಗಮನಿಸಿದರೆ ಸಮಿತಿಯ ಅಭಿಪ್ರಾಯವು ಸರಿಯಾಗಿಯೇ ಇದೆ ಎಂದು ಅನಿಸುತ್ತದೆ. ಸರ್ಕಾರ ಘೋಷಿಸಿದ ಉತ್ತೇಜನಾ ಕ್ರಮಗಳು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಂಎಸ್ಎಂಇ) ವಲಯದ ಉದ್ದಿಮೆಗಳ ಮೇಲೆ ಮಾಡಿರುವ ಪರಿಣಾಮ ಏನು ಎಂಬ ಬಗ್ಗೆ ಕೈಗಾರಿಕೆಗಳಿಗೆ ಸಂಬಂಧಿಸಿದ ಸಂಸತ್ ಸ್ಥಾಯಿ ಸಮಿತಿಯು ಅಧ್ಯಯನ ನಡೆಸಿದೆ. ಸರ್ಕಾರದ ಕ್ರಮಗಳು ಉದ್ದಿಮೆಗಳಿಗೆ ಸಾಲವನ್ನು ಕೊಡುವುದರತ್ತ ಹೆಚ್ಚು ಗಮನ ನೀಡಿವೆ. ಆದರೆ, ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ತಕ್ಷಣಕ್ಕೆ ಸೃಷ್ಟಿಸುವತ್ತ ಈ ಕ್ರಮಗಳು ಸೂಕ್ತ ಗಮನ ನೀಡಿಲ್ಲ ಎನ್ನುವ ಅಭಿಪ್ರಾಯ ಸಮಿತಿಯದ್ದು. ಕೊರೊನಾ ವೈರಾಣು ಹರಡುವುದನ್ನು ತಡೆಯುವ ಉದ್ದೇಶದಿಂದ ಜಾರಿಗೆ ತಂದ ಲಾಕ್‌ಡೌನ್ ಪರಿಣಾಮವಾಗಿ, ಮಾರುಕಟ್ಟೆಗಳು ಬಾಗಿಲು ಹಾಕಿದವು. ಉತ್ಪಾದನಾ ವಲಯದ ಉದ್ದಿಮೆಗಳಿಗೆ ತಮ್ಮ ಉತ್ಪನ್ನಗಳನ್ನು ಮಾರಲು ಅವಕಾಶ ತೀರಾ ಕ್ಷೀಣಿಸಿತು. ಇದರಿಂದಾಗಿ ಸಂಘಟಿತ ಹಾಗೂ ಅಸಂಘಟಿತ ವಲಯಗಳ ಲಕ್ಷಾಂತರ ಜನ ಉದ್ಯೋಗ ಕಳೆದುಕೊಂಡರು. ಉದ್ಯೋಗ ಕಳೆದುಕೊಂಡವರ ಕೊಳ್ಳುವ ಶಕ್ತಿ ಉಡುಗಿಹೋಯಿತು. ಮಾರುಕಟ್ಟೆಯಲ್ಲಿ ವಸ್ತುಗಳಿಗೆ, ಸೇವೆಗಳಿಗೆ ಬೇಡಿಕೆ ಕುಸಿಯಿತು. ನೆರೆಹೊರೆಯವರು ಕೆಲಸ ಕಳೆದುಕೊಳ್ಳುತ್ತಿದ್ದುದನ್ನು ನೋಡಿದ, ಅರ್ಥವ್ಯವಸ್ಥೆ ಅಸ್ಥಿರಗೊಂಡ ಸ್ಥಿತಿಯನ್ನು ಅನುಭವಿಸಿದ ಇತರ ಅನೇಕರು ತಮ್ಮ ಖರ್ಚುಗಳನ್ನು ಗಮನಾರ್ಹವಾಗಿ ತಗ್ಗಿಸಿದರು. ಇದರಿಂದಾಗಿ ಬೇಡಿಕೆಯ ಮೇಲೆ ಪರಿಣಾಮ ಉಂಟಾಯಿತು. ವೇತನ ಕಡಿತ, ಆದಾಯ ಕುಸಿತದ ಬಿಸಿ ಅನುಭವಿಸಿದವರು ತೀರಾ ಅಗತ್ಯವಲ್ಲದ ವಸ್ತುಗಳ ಖರೀದಿಯನ್ನು ಸಹಜವಾಗಿಯೇ ಕಡಿಮೆ ಮಾಡಿದರು. ಇದು ಕೂಡ ಮಾರುಕಟ್ಟೆಯ ಚೈತನ್ಯವನ್ನು ಕುಗ್ಗಿಸಿತು. ದೇಶದ ಅರ್ಥವ್ಯವಸ್ಥೆ ಇಂದು ಎದುರಿಸುತ್ತಿರುವ ಸಮಸ್ಯೆಯ ಸ್ಥೂಲ ವಿವರಣೆ ಇದು. ಸಮಸ್ಯೆಯು ಇಷ್ಟೇ ಅಲ್ಲ; ಸಮಸ್ಯೆಯು 'ಬೇಡಿಕೆ'ಗೆ ಸೀಮಿತವಾಗಿಲ್ಲ.

ಜನರ ಕೈಯಲ್ಲಿ ಹಣ ಹೆಚ್ಚು ಚಲಾವಣೆ ಆಗುವಂತೆ ಮಾಡಬೇಕಾದ ಕೆಲಸ ಜರೂರಾಗಿ ಆಗಬೇಕಾಗಿದೆ

ತಯಾರಿಕೆ ಹಾಗೂ ಪೂರೈಕೆಯಲ್ಲಿಯೂ ತೀವ್ರ ಬಿಕ್ಕಟ್ಟುಗಳು ಖಂಡಿತ ಇವೆ. ಆದರೆ, ಬೇಡಿಕೆಯನ್ನು ಹೆಚ್ಚಿಸುವ ಮೂಲಕ ತಯಾರಿಕೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಕಂಡುಕೊಳ್ಳಬಹುದು ಎಂಬ ಅಭಿಪ್ರಾಯವನ್ನು ಅರ್ಥಶಾಸ್ತ್ರಜ್ಞರಲ್ಲಿ ಹಲವರು ವ್ಯಕ್ತಪಡಿಸಿದ್ದಾರೆ. ಇದು ಸಾಧ್ಯವಾಗಬೇಕು ಎಂದಾದರೆ, ಆರ್ಥಿಕವಾಗಿ ದುರ್ಬಲರಾದವರಿಗೆ ನೇರ ನಗದು ವರ್ಗಾವಣೆಯಂತಹ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. 'ಜ್ಯಾಮ್' (ಜನಧನ ಖಾತೆ – ಆಧಾರ್ ಸಂಖ್ಯೆ – ಮೊಬೈಲ್ ಸಂಖ್ಯೆ ಒಂದಕ್ಕೊಂದು ಜೋಡಣೆ ಆಗಿರುವುದು) ಸೌಲಭ್ಯ ಸರ್ಕಾರದ ಬಳಿ ಇರುವ ಕಾರಣ, ಆರ್ಥಿಕವಾಗಿ ದುರ್ಬಲರಾಗಿರುವವರನ್ನು ಗುರುತಿಸಿ, ಅವರಿಗೆ ಹಣಕಾಸಿನ ನೆರವು ನೀಡುವುದು ತಾಂತ್ರಿಕವಾಗಿ ಅಸಾಧ್ಯದ ಕೆಲಸ ಅಲ್ಲ.

ಲಾಕ್‌ಡೌನ್ ಮತ್ತು ಸಾಂಕ್ರಾಮಿಕದ ಪರಿಣಾಮವಾಗಿ ಎಂಎಸ್ಎಂಇ ವಲಯಕ್ಕೆ ಆಗಿರುವ ನಷ್ಟ ಎಷ್ಟು ಎಂಬುದನ್ನು ತಾನು ಲೆಕ್ಕಹಾಕಿಲ್ಲ ಎಂದು ಕೇಂದ್ರ ಸರ್ಕಾರವು ಸಮಿತಿಗೆ ಹೇಳಿದೆ ಎಂದು ವರದಿಯಾಗಿದೆ. ಸಮಿತಿಯು ಈ ನಷ್ಟದ ಪ್ರಮಾಣ ಎಷ್ಟು ಎಂಬುದನ್ನು ಅಂದಾಜಿಸುವಂತೆ ಕೇಂದ್ರಕ್ಕೆ ಸೂಚಿಸಿದೆ. ಎಂಎಸ್ಎಂಇ ವಲಯಕ್ಕೆ ನೀಡಲಾಗಿರುವ ಸಾಲದ ಪೈಕಿ ಶೇಕಡ 25ರಷ್ಟು ಮರುಪಾವತಿ ಆಗದಿರಬಹುದು ಎಂಬ ಭೀತಿಯನ್ನು ಈ ಉದ್ಯಮ ವಲಯವನ್ನು ಪ್ರತಿನಿಧಿಸುವ ಸಂಘಟನೆಗಳು ಸಮಿತಿಗೆ ತಿಳಿಸಿವೆ. ಈ ಪ್ರಮಾಣದ ಸಾಲ ಮರುಪಾವತಿ ಆಗದಿದ್ದರೆ ಬ್ಯಾಂಕ್‌ಗಳ ಮೇಲೆ ಸೃಷ್ಟಿಯಾಗುವ ಒತ್ತಡ ಯಾವ ಬಗೆಯದು, ಬಂಡವಾಳ ಮಾರುಕಟ್ಟೆಗಳು ಯಾವ ಬಗೆಯಲ್ಲಿ ಪ್ರತಿಕ್ರಿಯೆ ನೀಡಬಹುದು ಎಂಬುದನ್ನೆಲ್ಲ ಸಂಬಂಧಪಟ್ಟ ಸಚಿವಾಲಯಗಳು ಪರಿಶೀಲಿಸುವುದು ಒಳಿತು. ಕೇಂದ್ರ ಸರ್ಕಾರವು ಘೋಷಿಸಿರುವ ತುರ್ತು ಸಾಲ ಖಾತರಿ ಯೋಜನೆಯ ಪ್ರಯೋಜನವು ಸಣ್ಣ ಪ್ರಮಾಣದ ಉದ್ಯಮಗಳಿಗೆ ಸರಿಯಾಗಿ ಸಿಗುವಂತೆಯೂ ಸರ್ಕಾರಗಳು ನಿಗಾ ವಹಿಸಬೇಕು. ಬೃಹತ್ ಉದ್ಯಮಗಳಿಗೆ ಬಂಡವಾಳವನ್ನು ಮಾರುಕಟ್ಟೆಯಿಂದ ತರುವ ಸಾಮರ್ಥ್ಯ ಇರುತ್ತದೆ. ಆದರೆ ಸಣ್ಣ ಉದ್ಯಮಗಳಿಗೆ ಅಂತಹ ಶಕ್ತಿ ಸಾಮಾನ್ಯವಾಗಿ ಇರುವುದಿಲ್ಲ. ಈಗಿನ ಸ್ಥಿತಿಯಲ್ಲಿ ಸಣ್ಣ ಉದ್ದಿಮೆಗಳು ದುಡಿಯುವ ಬಂಡವಾಳಕ್ಕೂ ಬ್ಯಾಂಕ್‌ಗಳನ್ನೇ ನೆಚ್ಚಿಕೊಂಡಿರುವ ಸಾಧ್ಯತೆ ಇದೆ. ಸಣ್ಣ ಉದ್ದಿಮೆಗಳಿಗೆ ಸಾಲ ತ್ವರಿತವಾಗಿ ಸಿಗುವಂತೆ ಮಾಡುವ, ಆ ಸಾಲವು ಅನುತ್ಪಾದಕ ಆಗದಂತೆ, ಬ್ಯಾಂಕ್‌ಗಳಿಗೆ ಹೊರೆ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿಯೂ ಸರ್ಕಾರದ ಮೇಲೆ ಇದೆ. ಮಾರುಕಟ್ಟೆಯಲ್ಲಿ ಉತ್ಪನ್ನಗಳಿಗೆ, ಸೇವೆಗಳಿಗೆ ಬೇಡಿಕೆ ಹೆಚ್ಚು ಮಾಡುವುದು ಬಹುಶಃ ಈ ಸಮಸ್ಯೆಗೆ ಒಂದು ದೊಡ್ಡ ಉತ್ತರ ಆಗಬಹುದು. ಭಾರತವು ಮುಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಒಪ್ಪಿಕೊಂಡು ಮೂರು ದಶಕಗಳು ಕಳೆದಿವೆ. ಈ ವ್ಯವಸ್ಥೆಯಲ್ಲಿ ಜನ ಬಡವರಾಗಿದ್ದರೆ, ಅವರಿಗೆ ಕೊಳ್ಳುವ ಶಕ್ತಿ ಇಲ್ಲದಿದ್ದರೆ ಸರ್ಕಾರಗಳು ಶ್ರೀಮಂತವಾಗಿ ಉಳಿಯಲು ಸಾಧ್ಯವಿಲ್ಲ. ಸರ್ಕಾರಗಳ ಬಳಿ ಶ್ರೀಮಂತಿಕೆ ಇಲ್ಲದಿದ್ದರೆ ಅಭಿವೃದ್ಧಿ ಕಾರ್ಯಗಳು ವೇಗ ಕಳೆದುಕೊಳ್ಳುತ್ತವೆ. ಹಾಗಾಗಿ, ಜನರ ಕೈಯಲ್ಲಿ ಹಣ ಹೆಚ್ಚು ಚಲಾವಣೆ ಆಗುವಂತೆ ಮಾಡಬೇಕಿರುವುದು ಈ ಹೊತ್ತಿನ ಜರೂರುಗಳಲ್ಲಿ ಒಂದು.

ದಿನದ ಟ್ವೀಟ್

ನಿರ್ಣಾಯಕ ಕಾರ್ಯ

ತಾಪಮಾನವು 1.5 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗದಂತೆ ನೋಡಿಕೊಳ್ಳಬೇಕು ಎಂದು ವಿಜ್ಞಾನವು ಬಹಳ ಹಿಂದೆಯೇ ನಮ್ಮನ್ನು ಎಚ್ಚರಿಸಿದೆ. ಅದನ್ನು ಸ್ವಲ್ಪ ಮೀರಿ ಮುಂದುವರಿದರೂ ಮನುಕುಲಕ್ಕೆ ಆಪತ್ತು ಎದುರಾಗಬಹುದು. ತಾಪಮಾನ ಏರಿಕೆಯಾಗದಂತೆ ನೋಡಿಕೊಳ್ಳುವುದು ಈಗಲೂ ಸಾಧ್ಯ ಮತ್ತು ಅದೊಂದು ನಿರ್ಣಾಯಕವಾದ ಕಾರ್ಯ. ಆದರೆ, ದಿಟ್ಟ ಮತ್ತು ನಿಶ್ಚಿತ ಹವಾಮಾನ ಕಾರ್ಯತಂತ್ರದ ಮೂಲಕ ಮಾತ್ರ ಅದು ಸಾಧ್ಯ.

ಆ್ಯಂಟೊನಿಯೊ ಗುಟೆರಸ್, ವಿಶ್ವಸಂಸ್ಥೆ ಮಹಾಪ್ರಧಾನ ಕಾರ್ಯದರ್ಶಿ

ಕಿಡಿನುಡಿ

ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವಲ್ಲಿ ನಮ್ಮ ಪಾತ್ರವೂ ಇದೆ. ಹಳಬರು ಜಾಗ ಖಾಲಿ ಮಾಡಿ, ಹೊಸಬರಿಗೆ ಅವಕಾಶ ಮಾಡಿಕೊಡಬೇಕು. ಹಿಂದೆ ಸಚಿವ ಸಂಪುಟದಲ್ಲಿ ಬಳ್ಳಾರಿ ಜಿಲ್ಲೆಯ ಮೂವರು ಮಂತ್ರಿಗಳಿದ್ದರು. ಯಡಿಯೂರಪ್ಪ ಸಂಪುಟದಲ್ಲಿ ಒಬ್ಬರಿಗೂ ಸ್ಥಾನ ಸಿಕ್ಕಿರಲಿಲ್ಲ. ಜಿಲ್ಲೆಗೆ ಸಂಪುಟದಲ್ಲಿ ಪ್ರಾತಿನಿಧ್ಯ ನೀಡದೇ ಇದ್ದುದರಿಂದ ಪಕ್ಷ ಸಂಘಟನೆಗೆ ಹಿನ್ನಡೆಯಾಗಿದೆ.

ಜಿ.ಸೋಮಶೇಖರ ರೆಡ್ಡಿ, ಬಿಜೆಪಿ ಶಾಸಕ, ಬಳ್ಳಾರಿ ನಗರ

25 ವರ್ಷಗಳ ಹಿಂದೆ

ಮಂಗಳವಾರ, 30-7-1996

• ಕಾವೇರಿ: 3 ತಿಂಗಳಲ್ಲಿ ಇತ್ಯರ್ಥ– ಪ್ರಧಾನಿ ದೇವೇಗೌಡ

ಬೆಂಗಳೂರು, ಜುಲೈ 29– ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಿಗೆ ಒಪ್ಪಿಗೆ ಆಗುವ ರೀತಿಯಲ್ಲಿ ಕಾವೇರಿ ಜಲ ವಿವಾದವನ್ನು ಇನ್ನು ಮೂರು ತಿಂಗಳಲ್ಲಿ ಬಗೆಹರಿಸುವ ಭರವಸೆಯನ್ನು ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರಿಗೆ ಇಂದು ಇಲ್ಲಿ ನೀಡಿದರು.

ರಾಜಭವನದಲ್ಲಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್, ಕಾನೂನು ಸಚಿವ ಎಂ.ಸಿ. ನಾಣಯ್ಯ ಹಾಗೂ ಭಾರಿ ನೀರಾವರಿ ಸಚಿವ ಕೆ.ಎನ್. ನಾಗೇಗೌಡ ಅವರೊಂದಿಗೆ, ಮಾತುಕತೆ ನಡೆಸಿದ ಸಂದರ್ಭದಲ್ಲಿ ಈ ಆಶ್ವಾಸನೆ ನೀಡಿದರು ಎಂದು ಉನ್ನತ ಮೂಲಗಳು ತಿಳಿಸಿವೆ.

'ಕಾವೇರಿ ಜಲ ವಿವಾದ ಬೀದಿಗಿಳಿದು ಬಗೆಹರಿಸುವ ವಿಚಾರ ಅಲ್ಲ. ಎರಡು ರಾಜ್ಯಗಳಿಗೂ ಒಪ್ಪಿಗೆ ಆಗುವ ರೀತಿಯಲ್ಲಿ ಇತ್ಯರ್ಥಪಡಿಸಬೇಕಾಗಿದೆ' ಎಂದು ಪ್ರಧಾನಿ ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ ಮೇಕೆದಾಟು ವಿದ್ಯುತ್ ಯೋಜನೆಯೂ ಪ್ರಸ್ತಾಪಕ್ಕೆ ಬಂದಿತು ಎಂದು ಹೇಳಲಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 30-7-1971

• ಸರ್ಕಾರಿ ಉದ್ಯಮಗಳ ಸಮಸ್ಯೆ ನಿವಾರಣೆಗೆ ಕೇಂದ್ರ ಸಚಿವರ ಸಮಿತಿ

ನವದೆಹಲಿ, ಜುಲೈ 29– ಸರ್ಕಾರಿ ಕ್ಷೇತ್ರದ ಉದ್ಯಮಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಪರಿಶೀಲಿಸಲು ಸಂಪುಟ ಸಚಿವರ ಸಮನ್ವಯ ಸಮಿತಿಯೊಂದನ್ನು ರಚಿಸಬೇಕೆಂದು ಯೋಜನಾ ಆಯೋಗವು ಪ್ರಧಾನಿಗೆ ಮನವಿ ಮಾಡಿಕೊಂಡಿದೆ.

ಯೋಜನಾ ಖಾತೆಯ ಸ್ಟೇಟ್ ಸಚಿವ ಶ್ರೀ ಮೋಹನ್ ಧಾರಿಯಾ ಅವರು ಇಂದು ರಾಜ್ಯಸಭೆಯಲ್ಲಿ ಶ್ರೀ ಎ.ಜಿ. ಕುಲಕರ್ಣಿ ಮತ್ತು ಶ್ರೀ ಬಿಪಿನ್ ಪಾಲ್‌ದಾಸ್ ಅವರ ಪ್ರಶ್ನೆಗಳಿಗೆ ಉತ್ತರವೀಯುತ್ತಾ ಈ ವಿಷಯವನ್ನು ತಿಳಿಸಿದರು.

• ವಿದ್ಯುತ್ ಬಳಕೆ ಸುರಕ್ಷತೆ ತನಿಖೆ ಮೂರು ವರ್ಷಕ್ಕೊಮ್ಮೆ

ಬೆಂಗಳೂರು, ಜುಲೈ 29–ಮೈಸೂರು ರಾಜ್ಯದಲ್ಲಿರುವ ಸುಮಾರು ಒಂಬತ್ತು ಲಕ್ಷ ವಿದ್ಯುತ್ ಬಳಕೆದಾರರ ಆವರಣಗಳ ವಿದ್ಯುತ್ ಪೂರೈಕೆ ಮತ್ತು ವೈರಿಂಗ್ ವ್ಯವಸ್ಥೆಯನ್ನು ಮೂರು ವರ್ಷಗಳಿಗೊಮ್ಮೆ ಪರೀಕ್ಷಿಸಿ, ಸರಿಪಡಿಸುವ ಕ್ರಮವನ್ನು ಕಡ್ಡಾಯವಾಗಿ ಜಾರಿಗೆ ತರುವ ಬಗ್ಗೆ ವಿದ್ಯುಚ್ಛಕ್ತಿ ಮಂಡಳಿಯು ಆಲೋಚಿಸುತ್ತಿದೆ.

ಉನ್ನತ ಶಿಕ್ಷಣವು ಅವನತ ಸಮಾಜದ ಬಾಲಂಗೋಚಿಯಾಗುವ ಪ್ರಪಾತದೆಡೆಗೆ ಸಾಗುತ್ತಿದೆ

ಸುಣ್ಣ ನುಂಗುತ್ತಿರುವ ಗೋಡೆಗಳು

ವಿಶ್ಲೇಷಣೆ

ಸಬಿತಾ ಬನ್ನಾಡಿ

ಆತ ಕೊಠಡಿಯಿಂದ ಹೊರಬಂದು 'ಹೀ ಈಸ್ ಅಮೇಜಿಂಗ್. ಎಷ್ಟು ವಿಷಯ ತಿಳ್ಕೊಂಡಿದಾನೆ ಗೊತ್ತಾ? ಐ ವಾಸ್ ವೇರಿ ಹ್ಯಾಪಿ ವಿತ್ ಹಿಮ್' ಅಂತೆಲ್ಲ ಬಡಬಡಿಸುತ್ತಿದ್ದ. ವಾಸ್ತವದಲ್ಲಿ ಆಗಿದ್ದೇನೆಂದರೆ, ಮುಚ್ಚಿದ ಕೊಠಡಿಯೊಳಗೆ, ಬಂದವನು ಇವನಿಗೆ ಚೆನ್ನಾಗಿ ತದುಕಿದ್ದ. ಈತನೊಬ್ಬ ಯೂನಿವರ್ಸಿಟಿ ಪ್ರೊಫೆಸರ್ ಆಗಿದ್ದು ಆತ ಈತನ ಪಿಎಚ್.ಡಿ ವಿದ್ಯಾರ್ಥಿನಿಯ ಗಂಡನಾಗಿದ್ದ. ತಿಂದಿದ್ದು ಒದೆಯಾದರೂ ಹೊರಗೆ ತಾನು ಬಹಳ ಗಹನವಾದ ಚರ್ಚೆಯಲ್ಲಿದ್ದೆ ಅಂತ ಪೋಸ್ ಕೊಡುವ ಇವನದ್ದು ಒಂಥರಾ ದುಃಸ್ಥಿತಿಯಾದರೆ, ಇವನ ಮಾರ್ಗದರ್ಶನದಲ್ಲಿ ಓದುವ ಅವಳದ್ದು ಇನ್ನೊಂಥರ ದುಃಸ್ಥಿತಿ.

ಇವನ ಅಸಭ್ಯ ವರ್ತನೆ, ಹಣ ಮತ್ತು ಮಾನ ಎರಡಕ್ಕೂ ಕುತ್ತು ತರುವಂತಹ ಇವನ ಬೇಡಿಕೆ ಇತ್ಯಾದಿಗಳಿಂದ ರೋಸಿಹೋದ ಅವಳು ಹೀಗೆ 'ಗುರು'ವಿಗೆ ಬುದ್ಧಿ ಕಲಿಸಲು ಹೊರಟಿದ್ದಳು. ಅವಳ ಹಾಗೆ ಗಂಡನ ಬೆಂಬಲವೂ ಇಲ್ಲದ, ಬಡತನದಿಂದ ಬಂದ, ಸಾಮಾಜಿಕ ಭದ್ರತೆಯಿಲ್ಲದ ಹುಡುಗ, ಹುಡುಗಿಯರದು ಬೇರೆಯದೇ ಗೋಳು.

ಇಲ್ಲಿ ಎರಡು ಅಂಶಗಳಿವೆ. ಒಂದು, ತನ್ನ ಮಾನಹಾನಿಯನ್ನು ಮುಚ್ಚಿಟ್ಟು ಅಲ್ಲೂ ತಾನು ಬಹಳ ದೊಡ್ಡವನು ಎಂದು ತೋರಿಸಿಕೊಳ್ಳುವ ನಿರ್ಲಜ್ಜ ನಡೆ. ಇನ್ನೊಂದು, ಇಂತಹ ಮಹಾನುಭಾವರು ಬಹಳ ದೊಡ್ಡವರು ಅಂತ ತಿಳಿದು ಅವರ ಮಾರ್ಗದರ್ಶನದಲ್ಲಿ ಓದಲು ಬಂದು, ಅವರ ಒಳ ವ್ಯವಹಾರಗಳಿಂದ ರೋಸಿಹೋದವರೂ ಪ್ರಕಟವಾಗಿ ಏನನ್ನೂ ಮಾಡಲಾಗದೆ ವ್ಯಕ್ತಿ ಮಟ್ಟದಲ್ಲೇ ಎಲ್ಲವನ್ನೂ ಮುಚ್ಚಿಟ್ಟು 'ಸರಿ'ಪಡಿಸಿಕೊಳ್ಳಬೇಕಾದ ಅಸಹಾಯ ಅವ್ಯವಸ್ಥೆ. ಮೀಟೂ ಚಳವಳಿಯಲ್ಲಿ ಬೇರೆ ಬೇರೆ ರಂಗದವರ ಮುಚ್ಚಿಟ್ಟ ಈ 'ಸರ್ಪದ ಬುಟ್ಟಿ'ಯಿಂದ ಹೊರಬಂದ 'ದೊಡ್ಡವರ' ಸುದ್ದಿ ಕೆಲವರನ್ನು ಬೆಚ್ಚಿಬೀಳಿಸಿತು. ಆದರೆ ಆಗಲೂ ಶೈಕ್ಷಣಿಕ ರಂಗದ ಇಂತಹ ಅಸಂಖ್ಯ ಪ್ರಕರಣಗಳು ಹೊರಬರಲೇ ಇಲ್ಲ. ಇದು ವಿಶ್ವವಿದ್ಯಾಲಯಗಳ ಜಗುಲಿಯಲ್ಲಿ ಗುಸಗುಸ ಪಿಸಪಿಸಕ್ಕೆ ಮಾತ್ರ ಇಂದಿಗೂ ಸೀಮಿತವಾಗಿದೆ.

ಅದು ಯಾಕೆ ಹಾಗೆ ಎಂದು ಈಗಲೂ ಕೆಲವರು ಮುಗ್ಧ ಪ್ರಶ್ನೆ ಹಾಕಬಹುದು. ತಕ್ಷಣ ಕಂಪ್ಲೇಂಟ್ ಕೊಡಬೇಕೆಂಬ ಬಿಟ್ಟಿ ಸಲಹೆಯನ್ನೋ ಅಥವಾ ಪಿಎಚ್.ಡಿ ಬಿಸಾಕಿ ಬರಬಹುದಲ್ಲಾ ಅಂತ ಸಿಟ್ಟಿನಿಂದಲೋ ಹೇಳಬಹುದು. ಆದರೆ ಪ್ರಶ್ನೆ ಇರುವುದು, ದೂರು ನೀಡಿ ಸಾಕ್ಷ್ಯ ಹೇಗೆ ಒದಗಿಸಬೇಕು? ಎಲ್ಲಾ ಮಾಡಿಯೂ ನ್ಯಾಯ ಸಿಗುವ ಖಾತರಿ ಇದೆಯೇ? ಯಾರ ಜೊತೆ ಯಾರು ನಿಲ್ಲುತ್ತಾರೆ? ಇವೆಲ್ಲದರ ಜೊತೆಗೆ ಪಿಎಚ್.ಡಿಯನ್ನು ಯಾಕೆ ಬಿಸಾಕಬೇಕು? ಅದು ಅವರ ಹಕ್ಕಲ್ಲವೇ ಎಂದು ನಾವೇಕೆ ಯೋಚಿಸುತ್ತಿಲ್ಲ? ಇದೆಲ್ಲ ಹೀಗೇ ಒಳಗೊಳಗೇ ನಡೆಯುವುದಕ್ಕೆ ನಿದರ್ಶನವಾಗಿ ಮೀಟೂ ಪ್ರಕರಣವನ್ನೇ ನೆನಪಿಸಿಕೊಳ್ಳಬಹುದು. ಅವಕಾಶಕ್ಕಾಗಿ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಹಾಸಿಗೆಗೆ ಕರೆಯುವ ತನಕವೂ ಮುಂದುವರಿಯುವ ನಿರ್ದೇಶಕರು, ನಿರ್ಮಾಪಕರು, ನಟರು ಇದ್ದಾರೆ ಎಂದು ಬಾಯಿಬಿಟ್ಟ ಹಲವು ಪ್ರತಿಭಾವಂತ ಹೆಣ್ಣುಮಕ್ಕಳ ವೃತ್ತಿಜೀವನಕ್ಕೆ ಕಲ್ಲು ಬಿತ್ತು ಮಾತ್ರವಲ್ಲ ಕೆಟ್ಟ ಟ್ರೋಲ್ ಎದುರಿಸಬೇಕಾಯಿತು.

ಯಾಕೆ ಹೆಣ್ಣುಮಕ್ಕಳು ಹೀಗೆ ವ್ಯಕ್ತಿ ಮಟ್ಟದ ಪರಿಹಾರಕ್ಕೆ ಮುಂದಡಿಯಿಡಬೇಕಾದ ಅನಿವಾರ್ಯ ಅಥವಾ ಸಹಿಸಿಕೊಳ್ಳಬೇಕಾದ ಮೂಗುಬ್ಬಸದ ದಾರಿಯನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ ಎಂಬುದು ಇದರಿಂದ ದೃಢ ಪಡುತ್ತದೆ. ಕನ್ನಡದ ನಟಿ ಶ್ರುತಿ ಹರಿಹರನ್ ಅವರಿಗೆ ಸಿನಿಮಾ ಇಂಡಸ್ಟ್ರಿಯು ಸದ್ದಿಲ್ಲದೇ ಬಹುಮಟ್ಟಿಗೆ ಅವಕಾಶ ನಿರಾಕರಿಸಿರುವ ಜೀವಂತ ಉದಾಹರಣೆ ನಮ್ಮ ಮುಂದಿದೆ. ಅಂದರೆ, ಸಾಮಾಜಿಕ ಸ್ಥಿತಿ ಹೇಗಿದೆಯೆಂದರೆ, ಸಂತ್ರಸ್ತರನ್ನೇ ಅಪರಾಧಿಗಳನ್ನಾಗಿಸಿ, ಅಪರಾಧಿಗಳನ್ನು ನಾಯಕರನ್ನಾಗಿಸುವ ವ್ಯವಹಾರವಿಲ್ಲಿ ಸಲೀಸು. ಇದು ರಾಜಕಾರಣದಿಂದ ಹಿಡಿದು ಕಾವಿಧಾರಿಗಳ ತನಕ 'ತೆರೆದ ಗುಟ್ಟು'.

ಗುರುಪೂರ್ಣಿಮೆ ನಮ್ಮ ಸಂಸ್ಕೃತಿ ಎಂದು ಹುಸಿ ಮಾತು ಆಡುವ ನಮ್ಮಲ್ಲಿಂದು ಶಿಕ್ಷಣದ ಗುಣಮಟ್ಟ ಯಾವ ಪಾತಾಳಕ್ಕೆ ತಲುಪಿದೆ ಎಂಬ ಬಗೆಗೆ ಯಾರಿಗೂ ಚಿಂತೆ ಇಲ್ಲ. ಗುಣಮಟ್ಟ ಉಳಿಸಿಕೊಂಡ ಕೆಲವು ವಿಶ್ವವಿದ್ಯಾಲಯಗಳನ್ನು ಬೆಂಬತ್ತಿ ಹಳ್ಳಹಿಡಿಸುವ ಕಾಯಕವೇ ಶೌರ್ಯವಾಗಿರುವಾಗ ಭರವಸೆ ಎಲ್ಲಿದೆ?

ಹೀಗೆಲ್ಲ ಇರುವಾಗ ಮಹಿಳಾ ಪ್ರೊಫೆಸರ್ ಒಬ್ಬರು ತನ್ನ ಪಿಎಚ್.ಡಿ ವಿದ್ಯಾರ್ಥಿಯಿಂದ, ಬಾಹ್ಯ ಮೌಲ್ಯಮಾಪಕರಿಗೆ ಕೊಡುವುದಕ್ಕಾಗಿ ಹದಿನಾರು ಸಾವಿರದ ಎಂಟುನೂರು ರೂಪಾಯಿಗೆ ಬೇಡಿಕೆ ಇಟ್ಟು, ಅದರಲ್ಲಿ ಐದು ಸಾವಿರವನ್ನು ಸ್ವೀಕರಿಸುವಾಗ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದು ಮೂರು ವರ್ಷ ಜೈಲುಶಿಕ್ಷೆಗೆ ಗುರಿಯಾಗಿದ್ದಾರೆ ಎಂಬ ಸುದ್ದಿ ಬಂತು. ಈ ಸುದ್ದಿಗಿಂತ ಇದಕ್ಕೆ ಬಂದ ಪ್ರತಿಕ್ರಿಯೆ ಈ ಸಮಾಜದ ಕನ್ನಡಿಯಂತೆ ಪ್ರತಿಫಲಿಸಿತು.

ಇದಕ್ಕಾಗಿ ಕೆಲವರು ಸಮಾಧಾನ ಪಟ್ಟುಕೊಂಡರೆ, ಇನ್ನು ಕೆಲವರು, ಹಣ್ಣು ತಿಂದವರಿಗೆ ಶಿಕ್ಷೆ ಆಗಲಿಲ್ಲ ಸಿಪ್ಪೆ ತಿಂದವರಿಗೆ ಶಿಕ್ಷೆಯೇ? ಎಂದರು. ಇನ್ನೂ ಕೆಲವರಿಗಿದು, ಎಂತೆಂಥಾ ಪ್ರಕರಣ ಬಿಟ್ಟು ಜುಜುಬಿ ಐದು ಸಾವಿರ ರೂಪಾಯಿ ಪ್ರಕರಣದಲ್ಲಿ ಶಿಕ್ಷೆ ಆಗಿದೆಯಲ್ಲಾ ಎನಿಸಿತು. ಇದೆಲ್ಲದರಾಚೆಗೆ ಬಂದ ಪ್ರತಿಕ್ರಿಯೆ ಎಂದರೆ, ಲಂಚ ತಿನ್ನುವುದೂ ಗೊತ್ತಿಲ್ಲದ ಪೆದ್ದು ಎನ್ನುವುದು. ಈ ಎಲ್ಲಾ ಪ್ರತಿಕ್ರಿಯೆಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ.



ಕಾಲುವೆಗಳು, ಕಟ್ಟಡಗಳು, ರಸ್ತೆಗಳು, ಅರಣ್ಯಗಳು, ನೂರಾರು ಎಕರೆ ಜಮೀನುಗಳು, ಸಾವಿರ, ಲಕ್ಷ ಕೋಟಿಗಳನ್ನೇ ನುಂಗಿ ಜೀರ್ಣಿಸಿಕೊಳ್ಳುತ್ತಿರುವುದು ಕಣ್ಣೆದುರೇ ನಡೆಯುವಾಗ 'ಪಾಪ! ಐದು ಸಾವಿರಕ್ಕೆ ಮೂರು ವರ್ಷ ಜೈಲೇ?' ಎಂದು ಕರುಣೆ ಉಕ್ಕಿಸುವಂತೆ ಈ ತೀರ್ಪು ಹಲವರಿಗೆ ಕಂಡರೆ ಅದು ನಿಂದ ನೆಲದ ದೋಷವೇ ಇರಬೇಕು. ಕದಿಯುವುದು, ಕದ್ದು ಸಿಕ್ಕಿ ಹಾಕಿಕೊಳ್ಳದೇ ಇರುವುದು ಮಾತ್ರವಲ್ಲ, ಅವರೇ ಕೆಲವೊಮ್ಮೆ ಆಳುವವರೂ ಆಗುವುದಕ್ಕೆ ದೊಡ್ಡ ಇತಿಹಾಸವೇ ಇದೆ.

ಮೆಡೋಸ್ ಟೇಲರ್ ಎಂಬ ಬ್ರಿಟಿಷ್ ಅಧಿಕಾರಿ ಬರೆದ ಕೃತಿಯ ಕನ್ನಡ ಅನುವಾದ 'ಠಕ್ಕನೊಬ್ಬನ ಆತ್ಮಚರಿತ್ರೆ'ಯಲ್ಲಿ, 18-19ನೇ ಶತಮಾನದಲ್ಲಿ ಭಾರತದಲ್ಲಿ ವ್ಯಾಪಾರಿಗಳನ್ನು ದೋಚಿ ಕೊಲೆ ಮಾಡುತ್ತಿದ್ದ ಠಕ್ಕರು ಇದನ್ನು ಮನೆಮಂದಿಗೂ ಗೊತ್ತಾಗದಂತೆ ನಿಭಾಯಿಸುತ್ತಿದ್ದುದೂ ಅಲ್ಲದೆ, ಕೆಲವರು ಆ ಹಣದಲ್ಲೇ ಸೈನ್ಯ ಕಟ್ಟಿ ಸಣ್ಣಪುಟ್ಟ ರಾಜರೆನಿಸಿಕೊಂಡ ವಿವರವಿದೆ. ಕ್ರಿ.ಶ.ಸು.920ರ 'ವಡ್ಡಾರಾಧನೆ'ಯಲ್ಲಿ ಕಳ್ಳತನದಲ್ಲಿನ ಹಲವು ತಂತ್ರಗಳಲ್ಲಿ ಪರಿಣತಿ ಪಡೆಯುವ ತಸ್ಕರಶಾಸ್ತ್ರದ ಉಲ್ಲೇಖ ಬರುತ್ತದೆ. ಈ ಶಾಸ್ತ್ರ ಕಲಿತವನನ್ನು ತಳವಾರಿಕೆಯಲ್ಲಿ ತರಬೇತಿ ಪಡೆದವನು ಹಿಡಿದರೂ ಸಾಬೀತು ಪಡಿಸಲಾಗದ ವ್ಯಂಗ್ಯ 'ವಿದ್ಯುತ್‌ಚೋರನೆಂಬ ರಿಸಿಯ ಕತೆ'ಯಲ್ಲಿ ಬರುತ್ತದೆ. ಋಷಿಗಳು ಚೋರರೇ, ಚೋರರು ಋಷಿಗಳೇ ಎಂಬ ಕಲಸುಮೇಲೋಗರದ ಸಾಮಾಜಿಕ ಸನ್ನಿವೇಶಕ್ಕೆ ಪ್ರತಿಮೆಯಂತೆ ಇವುಗಳನ್ನು ನೋಡಬಹುದು ಎಂಬುದಕ್ಕೆ ನಮ್ಮ ಸುತ್ತಲಿನ ಜಗತ್ತೇ ಸಾಕ್ಷಿ.

ಮುಖವಾಡಗಳಲ್ಲಿರುವ ನಾನಾ ಚೋರರಿಗೆ ಸಿಗುತ್ತಿರುವ ಮನ್ನಣೆಯು ಹುಟ್ಟಿಸುವ ಮೋಹದಿಂದ ಗಂಡು, ಹೆಣ್ಣು, ಆ ಜಾತಿ ಈ ಜಾತಿ ಎಂಬ ಭೇದವಿಲ್ಲದೆ ಎಲ್ಲರೂ ಪ್ರಭಾವಿತರೇ. ಇಂದಿನ ಮಾರುಕಟ್ಟೆ ಪ್ರಣೀತ ಆರ್ಥಿಕತೆ ಮತ್ತು ಅದನ್ನು ಬೆಂಬಲಿಸುವ ಹಲವಾರು ರೀತಿಯ ಮಾಧ್ಯಮಗಳು ಹೇಗಾದರೂ ಸರಿಯೇ, ಕುಬೇರರೆನಿಸಿಕೊಂಡರೆ ಸಾಕು ಬೀಸಣಿಗೆ ಹಿಡಿದು, ನಡುಬಗ್ಗಿಸಿ ಹಾಜರಾಗುತ್ತಿರುವಾಗ ಮತ್ತು ಅಂತಹವರೇ ಕಾಣದಂತೆ ಅಧಿಕಾರ ಸೂತ್ರ ಹಿಡಿಯುವಾಗ, ಇದೇ ಬದುಕಿನ ಯಶಸ್ಸು ಎನಿಸಿಕೊಂಡಿರುವಾಗ ಇದಕ್ಕೆ ಉಫೇ ಉಫೇ ಎನ್ನದಿರಲಾದೀತೇ?

ಈ ಸುಳ್ಳಿನ ದಾರಿಯಿಂದ ಬಿಡುಗಡೆಗಾಗಿ ಎಲ್ಲ ಅಧಿಕಾರ ಕೇಂದ್ರಗಳನ್ನು ವರ್ಜಿಸಿ ಸ್ವಯಂ ಬುದ್ಧರಾಗುವ ತಿಳಿವನ್ನು ತೋರಿದ ಬುದ್ಧನಾಗಲೀ, ಶ್ರೀಮಂತಿಕೆಯ ಸಾಂಸ್ಥಿಕತೆಯನ್ನು ನಿರಾಕರಿಸಿದ ಶರಣರಾಗಲೀ ಇಂತಹವರ ಕೈಯಲ್ಲಿ ಉರುಳಿಸುವ ದಾಳಗಳಾಗಿದ್ದಾರೆ. ಹೀಗಿರುವಲ್ಲಿ ಸಾಮಾಜಿಕ ಉನ್ನತಿಯ ಪ್ರತೀಕಗಳಾಗಬೇಕಾದ ವಿಶ್ವವಿದ್ಯಾಲಯಗಳಲ್ಲಿ ಪ್ರಾಜ್ಞರನ್ನು ಬೆಪ್ಪರಂತೆಯೂ ಬೆಪ್ಪರನ್ನು ಪ್ರಾಜ್ಞರಂತೆಯೂ ನಡೆಸಿಕೊಳ್ಳುವ ಸನ್ನಿವೇಶ ಎದುರಾಗಿರುವುದು ಮತ್ತದರ ಪರಿಣಾಮ ವಿದ್ಯಾರ್ಥಿಗಳ ಮೇಲಾಗುವುದು ಸಾಮಾಜಿಕ ರೋಗದ ಉಲ್ಬಣಾವಸ್ಥೆಯ ದ್ಯೋತಕ ಅಷ್ಟೇ.

ಲೇಖಕಿ: ಪ್ರಾಧ್ಯಾಪಕಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತರೀಕೆರೆ

ಚುರುಮುರಿ

ಯಾಕೋ ನಿದ್ದೆ ಬರ್ತಿಲ್ಲ!

• ಬಿ.ಎನ್.ಮಲ್ಲೇಶ್

'ಹಲೋ... ನಮಸ್ಕಾರ ಸಾಹೇಬ್ರೆ, 'ನಾನು' ಮಾತಾಡೋದು...'

'ಗೊತ್ತಾಯ್ತು, ಯಾಕೆ ಇನ್ನೂ ನಿದ್ದೆ ಬಂದಿಲ್ವ? ರಾತ್ರಿ ಹನ್ನೊಂದಾಯ್ತು, ಏನ್ಸಮಾಚಾರ?

'ಏನಿಲ್ಲ ಸಾಹೇಬ್ರೆ, ಬೆಳಿಗ್ಗೆ ಮನೆದೇವರಿಗೆ ಹೋಗಿದ್ದೆ, ಆಮೇಲೆ ಸ್ನೇಹಿತ್ರು, ಸಂಬಂಧಿಕರೆಲ್ಲ ಮನೆಗೆ ಬಂದಿದ್ರು. ಜನವೋ ಜನ, ಹಾರ ತುರಾಯಿ ಬೇಡ ಅಂದ್ರೂ ಕೇಳಲ್ಲ...'

'ಸ್ವಲ್ಪ ದಿನ ಅದೆಲ್ಲ ಇರುತ್ತೆ, ಸರಿ ಬೇರೆ ಏನ್ಸಮಾಚಾರ? ಯರ‍್ಯಾರ‍್ನ ಮಂತ್ರಿ ಮಾಡ್ತೀರಿ?'

'ಅಯ್ಯೋ ಅದೆಲ್ಲ ನಿಮಗೆ, ಹೈಕಮಾಂಡ್‌ಗೆ ಬಿಟ್ಟದ್ದು ಸಾಹೇಬ್ರೆ. ನೀವು ಹೇಳಿದಂಗೆ ಕೇಳೋದಷ್ಟೇ ನನ್ನ ಕೆಲಸ'.

'ಹಂಗಂತ ಹೊರಗೆಲ್ಲಾದ್ರು ಹೇಳಿಬಿಟ್ಟೀರಿ, ಟಿ.ವಿ.ಯೋರು ಅದ್ನೇ ದೊಡ್ಡ ಸುದ್ದಿ ಮಾಡಿಬಿಡ್ತಾರೆ'.

'ಇಲ್ಲ ಸಾಹೇಬ್ರೆ... ಅದೆಲ್ಲ ಗೊತ್ತಿದೆ. ಆಮೇಲೆ ನಮ್ಮ ಯತ್ನಾಳು, ವಿಶ್ವನಾಥು ಬೆಳಗ್ಗಿಂದ ಫೋನ್ ಮಾಡ್ತದಾರೆ. ವಿಶ್ ಮಾಡೋಕಿರಬೇಕು. ಫೋನು ರಿಸೀವ್ ಮಾಡ್ಲಾ ಸಾಹೇಬ್ರೆ?'

'ಪರವಾಗಿಲ್ಲ, ರಿಸೀವ್ ಮಾಡಿ ಮಾತಾಡಿ... ಆದ್ರೆ ಹುಷಾರಾಗಿರಿ ಅಷ್ಟೆ'.

'ಸರಿ ಸಾಹೇಬ್ರೆ, ಆಮೇಲೆ ನಾಳೆ ಕೆಲವು ಮಠಗಳಿಗೆ ಹೋಗೋಣ ಅಂತಿದೀನಿ, ಹೋಗ್ಲಾ ಸಾಹೇಬ್ರೆ?'

'ಕೆಲವು ಮಠ ಯಾಕೆ? ಎಲ್ಲ ಮಠಗಳಿಗೂ ಹೋಗಿ ಸ್ವಾಮಿಗಳ ಆಶೀರ್ವಾದ ತಗಳಿ. ಆಪತ್ಕಾಲದಲ್ಲಿ ಬೇಕಾಗ್ತಾರೆ.'

'ಆಮೇಲೆ ಸಿದ್ದರಾಮಯ್ಯ, ಕುಮಾರಣ್ಣ, ಡಿಕೆಶಿ ಅವರತ್ರ ಹೆಂಗೆ ಸಾಹೇಬ್ರೆ?'

'ಅವರೆಲ್ಲ ನಮ್ಮ ಸ್ನೇಹಿತ್ರು ಕಣ್ರಿ, ಸುಮ್ನೆ ಹೊರಗೆ ಬೈಕಂಡ್ ತಿರುಗಾಡ್ತಾರೆ, ಫ್ರೆಂಡ್‌ಶಿಪ್ ಇಟ್ಕಳ್ಳಿ'.

'ಅರ್ಥ ಆಯ್ತು, ಸರಿ ಮಲಗ್ಲಾ ಸಾಹೇಬ್ರೆ? ಯಾಕೋ ನಿದ್ದೆ ಬರ್ತಿಲ್ಲ'.

'ಅದು ಹಾಗೇನೇ, ನಿಮಗೆ ಹೊಸದಲ್ವ. ನಂಗೆ ಎಂಟು ಸಲ ಹಾಗೆ ನಿದ್ದೆ ಬಂದಿರ್ಲಿಲ್ಲ'.

'ಹೌದಾ? ಎಂಟು ಸಲಾನಾ?'

'ಹೌದು, ನಾಲ್ಕು ಸಲ ಮುಖ್ಯಮಂತ್ರಿ ಆದಾಗ, ನಾಲ್ಕು ಸಲ ಮುಖ್ಯಮಂತ್ರಿ ಸ್ಥಾನದಿಂದ ಇಳಿದಾಗ...!'

'ಸರಿ ಗುಡ್‌ನೈಟ್ ಸಾಹೇಬ್ರೆ, ಬೆಳಿಗ್ಗೆ ಎಷ್ಟ್ ಗಂಟೆಗೆ ಏಳಲಿ?'

ಸಂಗತ

ಜಾಲತಾಣದ ಜಗುಲಿಯಲ್ಲಿ ಜಾದೂ

ಸಾಮಾಜಿಕ ಜಾಲತಾಣಗಳು ಉತ್ಪಾದಕ–ಗ್ರಾಹಕನ ನಡುವೆ ಸೇತುವಾಗುತ್ತಿವೆ

• ಡಾ. ಮುರಳೀಧರ ಕಿರಣಕೆರೆ

ಕಾಗದವೊಂದನ್ನು ಕಳುಹಿಸಲು ಕೊರಿಯರ್ ಕಚೇರಿಗೆ ಹೋದವನಿಗೆ ಆ ದೃಶ್ಯ ಕಂಡು ಆಶ್ಚರ್ಯದ ಜೊತೆಗೆ ಕುತೂಹಲ. ವಿಳಾಸ ಅಂಟಿಸಿಕೊಂಡ ವಿವಿಧ ಗಾತ್ರದ ಆ ಹತ್ತಾರು ರಟ್ಟಿನ ಪೆಟ್ಟಿಗೆಗಳು ಈ ಪುಟ್ಟ ಪಟ್ಟಣದಿಂದ ಹೊರಟಿದ್ದಾದರೂ ಎಲ್ಲಿಗೆ? ರಸೀತಿ ಹಾಕಿಸುತ್ತಿದ್ದ ಪರಿಚಿತ ಯುವತಿಯನ್ನು ವಿಚಾರಿಸಿದೆ. ಅವಳ ವಿವರಣೆ ಕೇಳುತ್ತಿದ್ದಂತೆ ಗೃಹೋದ್ಯಮದ ಈ ಪರಿ ಕಂಡು ನಿಜಕ್ಕೂ ಅಚ್ಚರಿಯಾಗಿತ್ತು!

ಕೊರೊನಾ ಕಾಲದಲ್ಲಿ ಖಾಲಿ ಕೂರಬಾರದೆಂಬ ಸಂಕಲ್ಪದೊಂದಿಗೆ ಸಾಮಾಜಿಕ ಮಾಧ್ಯಮವನ್ನೇ ವೇದಿಕೆಯಾಗಿಸಿಕೊಂಡ ಆಕೆ, ಹೀಗೊಂದು ಸ್ವಂತ ಉದ್ಯೋಗವನ್ನು ಆರಂಭಿಸಿದ್ದಳು. ಬಗೆ ಬಗೆಯ ಚಟ್ನಿಪುಡಿ, ಉಪ್ಪಿನಕಾಯಿ, ಚಿಪ್ಸ್, ಪುಳಿಯೋಗರೆ ಮಿಕ್ಸ್, ಜೇನುತುಪ್ಪ, ಜೋನಿಬೆಲ್ಲ, ಹಪ್ಪಳ, ಸಂಡಿಗೆ, ಸಾರಿನ ಪುಡಿ, ಗೆಜ್ಜೆವಸ್ತ್ರ ಅಂತೆಲ್ಲಾ ತನ್ನ ಗ್ರಾಹಕರಿಗೆ ಕೊರಿಯರ್ ಮೂಲಕ ಕಳುಹಿಸುತ್ತಾ ಆರ್ಥಿಕ ಸ್ವಾವಲಂಬನೆ ಸಾಧಿಸಿದ್ದಳು.

ಅವಳು ಮಾಡಿದ್ದು ಇಷ್ಟೆ. ಮನೆಯಲ್ಲೇ ತಯಾರಿಸಿದ, ಉತ್ತಮ ಗುಣಮಟ್ಟದ ಪದಾರ್ಥಗಳನ್ನು ಸ್ಪರ್ಧಾತ್ಮಕ ದರದಲ್ಲಿ ಬಳಕೆದಾರರ ಮನೆ ಬಾಗಿಲಿಗೆ ತಲುಪಿಸುವ ಬಗ್ಗೆ ತನ್ನೆಲ್ಲ ವಾಟ್ಸ್‌ಆ್ಯಪ್ ಗುಂಪುಗಳು, ಫೇಸ್‌ಬುಕ್‌ನಲ್ಲಿ ಮಾಹಿತಿ ನೀಡಿದ್ದಳು. ಬೇಡಿಕೆ ಬಂದಂತೆ ಸಾಮಗ್ರಿಗಳನ್ನು ರವಾನಿಸಿ ಸಕಾಲಿಕ ಸೇವೆಯಿಂದ ಗ್ರಾಹಕರ ಮನಗೆದ್ದಳು. ಆರು ತಿಂಗಳ ಹಿಂದೆ ಸ್ನೇಹಿತರಿಗೆ, ಪರಿಚಿತರಿಗೆ ಗೃಹಬಳಕೆಯ ಪದಾರ್ಥಗಳನ್ನು ಕಳುಹಿಸುತ್ತಾ ಸಣ್ಣದಾಗಿ ಕಂಡುಕೊಂಡ ದುಡಿಮೆಯ ಹಾದಿಯಲ್ಲಿ ಈಗ ಬಿಡುವಿರದಷ್ಟು ದಟ್ಟಣೆ!

ಪಟ್ಟಣದಲ್ಲಿನ ಉದ್ಯೋಗವನ್ನು ಕೋವಿಡ್ ಕಾರಣದಿಂದ ಕಳೆದುಕೊಂಡು ಹುಟ್ಟೂರಿಗೆ ಮರಳಿರುವ ಆ ಯುವಕ ಸಣ್ಣ ಬಂಡವಾಳದೊಂದಿಗೆ ಪಾಲಿಹೌಸ್ ಮಾಡಿಕೊಂಡು ತರಾವರಿ ತರಕಾರಿಗಳನ್ನು ಬೆಳೆಯುತ್ತಿದ್ದಾನೆ. ಸಾಮಾಜಿಕ ಜಾಲತಾಣದಲ್ಲಿ ತನ್ನ ಸಾವಯವ ತರಕಾರಿಗಳ ಬಗ್ಗೆ ಮಾಹಿತಿ ಹಾಕಿಕೊಂಡು ಆಸಕ್ತ ಗ್ರಾಹಕರ ಮನೆ ಬಾಗಿಲಿಗೆ ತಂದುಕೊಡುತ್ತಾನೆ. ಹೀರೇಕಾಯಿ, ಬೀನ್ಸ್, ಹಸಿಮೆಣಸು, ಬೆಂಡೆಕಾಯಿ, ಪಾಲಕ್, ಹರಿವೆ, ಕೊತ್ತಂಬರಿಗೆ ನನ್ನ ಮಡದಿ, ಅವಳ ಗೆಳತಿಯರು ಸೇರಿದಂತೆ ಹಲವರು ಸಂತೃಪ್ತ ಗ್ರಾಹಕರು! ವಾರವಿಟ್ಟರೂ ತರಕಾರಿಗಳ ತಾಜಾತನ ಕುಂದದು ಎಂಬ ಪ್ರಶಂಸೆಯ ನುಡಿ ಬಾಯಿಂದ ಬಾಯಿಗೆ ಹರಡಿ ಬಳಕೆದಾರರ ಬಳಗ ಬೆಳೆಯುತ್ತಲೇ ಇದೆ!

ಹೌದು, ಸಾಂಕ್ರಾಮಿಕದಿಂದಾಗಿ ಜೀವನೋಪಾಯಗಳೇ ನೆಲ ಕಚ್ಚಿ ಮುಂದೆ ಹೇಗೆಂಬ ಹತಾಶೆಯ ನಡುವೆ ಇಂತಹ ನೂರಾರು ಯಶೋಗಾಥೆಗಳು ಅಲ್ಲಲ್ಲಿ ಬಿಚ್ಚಿಕೊಳ್ಳುತ್ತಾ ಭವಿಷ್ಯದ ಬಗ್ಗೆ ಹೊಸ ಭರವಸೆ ಮೂಡಿಸುತ್ತಿವೆ. ಸಾಮಾಜಿಕ ಮಾಧ್ಯಮ, ಜಾಲತಾಣಗಳನ್ನು ರಚನಾತ್ಮಕವಾಗಿ ಬಳಸಿಕೊಂಡು ಗುಣಮಟ್ಟದ ಪದಾರ್ಥಗಳನ್ನು ಸ್ಪರ್ಧಾತ್ಮಕ ದರದಲ್ಲಿ ಸಮಯಕ್ಕೆ ಸರಿಯಾಗಿ ಗ್ರಾಹಕರ ಮನೆ ಬಾಗಿಲಿಗೆ ತಲುಪಿಸುವ ಮೂಲಕ ಹಲವರು ಬದುಕಿನ ಮಾರ್ಗ ಕಂಡುಕೊಂಡಿದ್ದಾರೆ. ಕೊರೊನಾ ಕಗ್ಗತ್ತಲಿನಲ್ಲಿ ಮೂಡುತ್ತಿರುವ ಈ ಬೆಳ್ಳಿಗೆರೆಗಳು ನಿಜಕ್ಕೂ ಸ್ಫೂರ್ತಿದಾಯಕ.

ಈ ನ್ಯೂ ನಾರ್ಮಲ್ ಕಾಲದಲ್ಲಿ ಆರೋಗ್ಯದ ಕುರಿತು ಎಲ್ಲಿಲ್ಲದ ಕಾಳಜಿ. ರೋಗನಿರೋಧಕ ಸಾಮರ್ಥ್ಯ ಹೆಚ್ಚಿಸಿಕೊಳ್ಳುವ ದಿಕ್ಕಿನತ್ತ ನೆಟ್ಟಿರುವ ನೋಟ, ಅದರತ್ತಲೇ ಓಟ. ಕಳೆನಾಶಕ, ಪೀಡೆನಾಶಕ ರಾಸಾಯನಿಕಮುಕ್ತ ಆಹಾರವೇ ಎಲ್ಲರ ಆದ್ಯತೆ. ಈ ಖಾತರಿ ನೀಡುವವರ ವಸ್ತುಗಳಿಗೆ ಸಹಜವಾಗಿಯೇ ಉತ್ತಮ ಬೇಡಿಕೆಯಿದೆ. ವ್ಯಾಪಾರ, ವ್ಯವಹಾರಗಳ ರೂಢಿಗತ ಶೈಲಿಯನ್ನು ಬದಿಗೊತ್ತಿ 'ಡೋರ್ ಸರ್ವಿಸ್' ಕಡೆಗೆ ಹೊರಳಬೇಕಿರುವ ಈ ಹೊತ್ತಿನಲ್ಲಿ, ಸಾಮಾಜಿಕ ಜಾಲತಾಣಗಳು ಮಧ್ಯವರ್ತಿಯನ್ನು ಬದಿಗೊತ್ತಿ ಉತ್ಪಾದಕ-ಗ್ರಾಹಕನ ನಡುವೆ ಸೇತುವೆಯಾಗುತ್ತಿರುವ ವಿದ್ಯಮಾನ ಎದ್ದು ಕಾಣುತ್ತಿದೆ.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಮಾಹಿತಿಯಂತೆ, ಕೊರೊನಾ ಎರಡನೇ ಅಲೆಯಿಂದ ರಾಜ್ಯದಲ್ಲಿ ಅಂದಾಜು 30 ಲಕ್ಷ ಮಂದಿ ಉದ್ಯೋಗ ಕಳೆದುಕೊಂಡಿದ್ದಾರೆ. ತಮ್ಮ ಹಳ್ಳಿಗಳಿಗೆ ಮರಳಿ ಭವಿಷ್ಯದ ಚಿಂತೆಯಿಂದ ತಲೆ ಮೇಲೆ ಕೈ ಹೊತ್ತು ಕುಳಿತ ಬಹುತೇಕರಿಗೆ ಸದ್ಯಕ್ಕೆ ಸರ್ಕಾರದ ಉದ್ಯೋಗ ಖಾತರಿ ಯೋಜನೆಯೊಂದೇ ಆಧಾರ. ತಮ್ಮ ವಿದ್ಯಾರ್ಹತೆ, ಪದವಿಗಳನ್ನು ಬದಿಗಿಟ್ಟು ದೊಡ್ಡ ಸಂಖ್ಯೆಯಲ್ಲಿ ಯುವಕರು ಈ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾರೆ. ಇದೆಲ್ಲಾ ತಾತ್ಕಾಲಿಕ ಪರಿಹಾರವೆಂಬ ಅರಿವೂ ಇದೆ. ಹೆದ್ದಾರಿಯ ಹಾದಿಯಲ್ಲಿ ಕೂಗಳತೆಯ ದೂರಕ್ಕೆಲ್ಲಾ ಸಣ್ಣ ಹೋಟೆಲ್‌ಗಳು, ಗುಟ್ಕಾ, ಸಿಗರೇಟ್ ದುಕಾನುಗಳು ಎದ್ದಿವೆ. ಪೈಪೋಟಿಯ ಪುಡಿಗಾಸಿನ ಈ ಆದಾಯ ಹೊಟ್ಟೆ ಹೊರೆಯಲು ಸಾಲದೆಂಬ ಚಿಂತೆ ಕಾಡುತ್ತಿದೆ.

ಹೌದು, ಸಂಕಷ್ಟದ ಈ ಸಮಯದಲ್ಲಿ ಕೋವಿಡ್ ಸಂತ್ರಸ್ತರಿಗೆ ತರಬೇತಿ, ಮಾಹಿತಿ, ಮಾರ್ಗದರ್ಶನದ ಮೂಲಕ ಮತ್ತೆ ಬದುಕು ಕಟ್ಟಿಕೊಳ್ಳಲು ಬೆಂಬಲವಾಗಿ ನಿಲ್ಲುವ ಹೊಣೆ ಎಲ್ಲರ ಮೇಲಿದೆ. ಹಾಗೆಯೇ ಸಾಮಾಜಿಕ ಮಾಧ್ಯಮಗಳನ್ನು ಸಕಾರಾತ್ಮಕವಾಗಿ ದುಡಿಸಿಕೊಳ್ಳುವ ಕೌಶಲವನ್ನೂ ಕಲಿಸಬೇಕಿದೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಸ್ವಯಂ ಉದ್ಯೋಗ ಕೈಗೊಳ್ಳುವ ಯುವಕ, ಯುವತಿಯರಿಗೆ ವಸತಿಸಹಿತ ಉಚಿತ ತರಬೇತಿಯನ್ನು ನೀಡುತ್ತಿರುವುದು ಇಲ್ಲಿ ಉಲ್ಲೇಖಾರ್ಹ.

ನಮ್ಮ ಯುವ ಸಂಪನ್ಮೂಲವನ್ನು ಸಂಪತ್ತು ಸೃಷ್ಟಿಗಾಗಿ ಅಣಿಗೊಳಿಸುವ ಕೇಂದ್ರ ಸರ್ಕಾರದ ಕೌಶಲಾಭಿವೃದ್ಧಿ (ಸ್ಕಿಲ್ ಇಂಡಿಯಾ), ಆತ್ಮನಿರ್ಭರ ಭಾರತದಂತಹ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಈ ಸಂಧಿಕಾಲದ ಜರೂರು ಕೂಡ. ಸಂಘ-ಸಂಸ್ಥೆಗಳು ಈ ದಿಸೆಯಲ್ಲಿ ಸರ್ಕಾರದೊಂದಿಗೆ ಕೈ ಜೋಡಿಸುವುದು ಅಪೇಕ್ಷಣೀಯ.

ವಾಚಕರ ವಾಣಿ

ಸರ್ಕಾರಿ ಸೌಲಭ್ಯ: ಪಡಿಪಾಟಲು ತಪ್ಪಿಸಿ

ನೂತನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶ್ರೀಸಾಮಾನ್ಯರಿಗೆ ಅನುಕೂಲಕರವಾದ ವಿಧವಾ ಮತ್ತು ಅಂಗವಿಕಲರ ಮಾಸಾಶನದ ಮೊತ್ತವನ್ನು ಹೆಚ್ಚಿಸಿರುವುದು ಶ್ಲಾಘನೀಯ. ಆದರೆ ಈ ಸೌಲಭ್ಯ ಪಡೆಯಲು ಅರ್ಹ ಫಲಾನುಭವಿಗಳು ಪಡುವ ಯಾತನೆಯ ನಿಯಂತ್ರಣಕ್ಕೂ ಸರ್ಕಾರ ಕ್ರಮ ಕೈಗೊಳ್ಳಬೇಕಿದೆ. ಇದಕ್ಕಾಗಿ ಅವರು ಕನಿಷ್ಠ 4-5 ಸಾವಿರ ರೂಪಾಯಿ ಖರ್ಚು ಮಾಡಬೇಕಾದ ಪರಿಸ್ಥಿತಿ ಇದೆ.

ಜೀವನ ನಿರ್ವಹಣೆಯೇ ಕಷ್ಟವಾಗಿರುವ ಇಂತಹ ಸಂದರ್ಭದಲ್ಲಿ ಅರ್ಹರು ಈ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಜೀವನೋಪಾಯಕ್ಕಾಗಿ ಸರ್ಕಾರದ ಸೌಲಭ್ಯಗಳನ್ನೇ ಅವಲಂಬಿಸಿರುವ ಇಂತಹವರಿಂದಲೂ ವಸೂಲಾತಿ ನಿರೀಕ್ಷಿಸುವವರಿಗೆ ಅಗತ್ಯವಾಗಿ ಕಡಿವಾಣ ಹಾಕಬೇಕಾಗಿದೆ.

ತಿಮ್ಮೇಶ ಮುಸ್ಟೂರು, ಜಗಳೂರು

ಪ್ರಜಾಪ್ರಭುತ್ವದ ಅಪಹಾಸ್ಯ

ಸಂಸತ್ತಿನ ಮುಂಗಾರು ಅಧಿವೇಶನವನ್ನು ಪ್ರತಿದಿನವೂ ಮುಂದೂಡುತ್ತಿರುವುದು ಶೋಚನೀಯ. ಸಭೆಯಲ್ಲಿ ಯಾವ ವಿಷಯದ ಮೇಲೂ ಅರ್ಥಪೂರ್ಣವಾದ ಚರ್ಚೆಗಳು ನಡೆಯದೆ ಸದಸ್ಯರು ಸಂಸತ್ತಿನ ಸಮಯ, ಹಣವನ್ನು ವ್ಯರ್ಥ ಮಾಡುತ್ತಿರುವುದು ಪ್ರಜಾಪ್ರಭುತ್ವವನ್ನು ಅಪಹಾಸ್ಯ ಮಾಡುವಂತಿದೆ. ಇನ್ನಾದರೂ ಆಡಳಿತಾರೂಢ ಮತ್ತು ವಿರೋಧ ಪಕ್ಷಗಳ ಜನಪ್ರತಿನಿಧಿಗಳು ಸದನದಲ್ಲಿ ಸಂಯಮದಿಂದ ನಡೆದುಕೊಂಡು ಅರ್ಥಪೂರ್ಣ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಚನ್ನಕೇಶವ ಜಿ.ಕೆ., ತರೀಕೆರೆ

ಮತದಾರರ ಶಕ್ತಿ ಮತ್ತು ಮಠಾಧೀಶರ ಪ್ರಭಾವ

ರಾಜಕಾರಣಿಗಳು ಅಧಿಕಾರಕ್ಕಾಗಿ ಹಪಹಪಿಸುವುದು ಇತ್ತೀಚೆಗೆ ಸಾಮಾನ್ಯ ಎಂಬಂತಾಗಿದ್ದು, ಜನ ಇದಕ್ಕೆ ಒಗ್ಗಿಹೋಗಿದ್ದಾರೆ. ಇಂತಹ ಸಂದರ್ಭದಲ್ಲಿ, ಮಠಾಧೀಶರು ತಮ್ಮ ಶಿಷ್ಯಂದಿರಲ್ಲಿ ನೈತಿಕ ಪ್ರಜ್ಞೆ, ಸಹಿಷ್ಣುತೆ, ನಿಸ್ವಾರ್ಥ ಮನೋಭಾವ, ಶಾಂತಿ, ಸಮಾಧಾನ ಮೈಗೂಡಿಸಿಕೊಳ್ಳಲು ಅಗತ್ಯವಾದ ಉಪದೇಶ ಮಾಡಿ ಸಮಾಜವನ್ನು ಮರ್ಯಾದೆಯಿಂದ ಬದುಕುವಂತೆ ಪ್ರೇರೇಪಿಸಬೇಕು. ಆದರೆ ಈಗ ಮಠಾಧೀಶರ ಜುಟ್ಟಿಗೂ ರಾಜಕಾರಣಿಗಳು ಕೈಹಾಕಿದ್ದಾರೆ. ಆಗಾಗ ಅನುದಾನ ಬಿಡುಗಡೆ ಮಾಡಿ ಅವರನ್ನು ತಮ್ಮ ಹಂಗಿಗೆ ಸಿಕ್ಕಿಸುತ್ತಿದ್ದಾರೆ. ಇದನ್ನು ಅರಿಯದೆ ಅಧಿಕಾರಸ್ಥ ಶಿಷ್ಯರ ನಡೆನುಡಿಯ ಮೋಡಿಗೊಳಗಾಗಿ, ತಮ್ಮಲ್ಲಿ ತೋರುತ್ತಿರುವ ಭಯ ಭಕ್ತಿಯು ತಮ್ಮ ಮೇಲಿನ ಅಭಿಮಾನ, ಪೂಜ್ಯಭಾವನೆಯಿಂದ ಎಂದು ತಿಳಿದು, ಅವರ ಗುಣಾವಗುಣಗಳನ್ನು ಪರಿಗಣಿಸದೆ, ಶರಣು ಬಂದರೆಂದು ಅವರನ್ನು ಸಂರಕ್ಷಿಸಲು ಮಠಾಧೀಶರು ಮುಂದಾಗುವುದು ಅಚ್ಚರಿದಾಯಕ.

ಒಂದು ರಾಜ್ಯದ ಮುಖ್ಯಮಂತ್ರಿ ಸ್ಥಾನ ಕೊಡಿಸುವಷ್ಟು ಅಥವಾ ಉಳಿಸುವಷ್ಟು ತಪಸ್ವಿಗಳು ತಾವಲ್ಲ ಎಂಬುದನ್ನು ಮಠಾಧೀಶರು ಅರಿಯಬೇಕು. ಇದು ತ್ರೇತಾಯುಗ ಅಥವಾ ದ್ವಾಪರ ಯುಗ ಅಲ್ಲ. ಇದು ಕಲಿಯುಗ. ಅಂದಿನ ಕಾಲದ ವಿಶ್ವಾಮಿತ್ರ, ವಸಿಷ್ಠರಂತೆ ತಮ್ಮ ತಪಶ್ಶಕ್ತಿಯಿಂದ ಒಂದು ಹುಲ್ಲುಕಡ್ಡಿಯನ್ನೂ ಈಗಿನವರು ಸುಡಲಾಗುವುದಿಲ್ಲ. ಪಕ್ಷ ಹಾಳಾಗಲಿ ಎಂದು ಶಾಪ ಕೊಟ್ಟು, ತಮ್ಮ ಶಕ್ತಿಯೇನು ಎಂದು ಜನರೆದುರು ತಮ್ಮನ್ನು ಪರೀಕ್ಷೆಗೆ ಒಡ್ಡಿಕೊಳ್ಳುವ ಕೆಲಸಕ್ಕೆ ಮುಂದಾಗುವುದು ತರವಲ್ಲ. ಮಠಾಧೀಶರು ಲೌಕಿಕದಲ್ಲಿ ತಾವರೆ ಎಲೆಯ ಮೇಲಿನ ನೀರಿನಂತೆ ನಿರ್ಲಿಪ್ತರಾಗಿರುವುದು ಅಗತ್ಯ.

ಮತದಾರರ ಶಕ್ತಿಯನ್ನು ಸಾವಿರ ಮಠಾಧೀಶರ ಪ್ರಭಾವ ಗೆಲ್ಲಲಾರದು ಎನ್ನುವುದನ್ನು ಇತ್ತೀಚಿನ ಘಟನೆಗಳಿಂದ ರಾಜಕಾರಣಿಗಳು ಅರಿಯುವುದು ಮುಖ್ಯ. ಜನರೇ ತಮ್ಮ ದೇವರು ಎಂದು ತಿಳಿದು ಜನಸೇವೆಗೆ ಬದ್ಧರಾಗಿ ತಮ್ಮ ಸ್ಥಾನಮಾನ ಉಳಿಸಿಕೊಳ್ಳಲಿ.

ಸತ್ಯಬೋಧ, ಬೆಂಗಳೂರು

ಬೀಜ ಬಿತ್ತುವವರು ಎಲ್ಲಿದ್ದಾರೆ?

'ಇದೆಂಥಾ ಪ್ರಜಾಪ್ರಭುತ್ವ ಸ್ವಾಮಿ?' ಎಂಬ ಲೇಖನದಲ್ಲಿ (ಪ್ರ.ವಾ., ಜುಲೈ 28) ರವೀಂದ್ರ ಭಟ್ಟ ಅವರು, 'ರಾಜಕಾರಣಿಗಳ ಬಗ್ಗೆಯೇ ಜನರಿಗೆ ಭ್ರಮನಿರಸನವಾಗಿದೆ. ಭರವಸೆಯ ನಾಯಕನೊಬ್ಬ ಈಗ ಹುಟ್ಟಿಬರಬೇಕಿದೆ. ಅದಕ್ಕೆ ಅಖಾಡ ಸಿದ್ಧವಾಗಿದೆ. ಆದರೆ ಆಶಾಕಿರಣ ಗೋಚರಿಸುತ್ತಿಲ್ಲ. ನೆಲ ಹದವಾಗಿದೆ. ಬೀಜ ಬಿತ್ತುವವರಿಲ್ಲ' ಎಂದು ಹೇಳಿದ್ದಾರೆ.

ನಮ್ಮ ರಾಜ್ಯದಲ್ಲಷ್ಟೇ ಅಲ್ಲ, ಎಲ್ಲ ರಾಜ್ಯಗಳವರೂ ತಮ್ಮತಮ್ಮ ಪಕ್ಷದ ವರಿಷ್ಠ ಮಂಡಳಿ ಎಂಬ ಒಂದು ಅನಿಷ್ಟದ ಆದೇಶಗಳಿಗೆ ಬದ್ಧರಾಗಿದ್ದಾರೆ. ಹೀಗಾಗಿಯೇ ನಮ್ಮ ರಾಜ್ಯದಲ್ಲಿ ಇರುವಂತೆಯೇ ಬೇರೆಲ್ಲ ರಾಜ್ಯಗಳಲ್ಲೂ ವರಿಷ್ಠರೇ ಮೂಗುತೂರಿಸುವವರು. ಈ ಅನಿಷ್ಟ ಪದ್ಧತಿಯನ್ನು ತೊಡೆದುಹಾಕುವವರೆಗೆ ನಮ್ಮಲ್ಲಿ ನೈಜ ಪ್ರಜಾಪ್ರಭುತ್ವ ಬರಲಾರದು. ಆಯ್ಕೆಯಾದ ಜನಪ್ರತಿನಿಧಿಗಳು ತಮ್ಮ ಪಕ್ಷದ ನಾಯಕನನ್ನು ಆಯ್ಕೆ ಮಾಡಬೇಕು. ಇಲ್ಲಿ ತಲೆಕೆಳಗು. ಆಯ್ಕೆಗೊಂಡವರು ಹೌದಪ್ಪಗಳು ಮಾತ್ರ. ಆ ವರಿಷ್ಠರು ಆಯ್ಕೆಗೊಂಡ ಮಂದಿಯೇ? ಯಾರಿಂದ? ಈ ದೇಶದ ಯಾವ ಪಕ್ಷಗಳಲ್ಲಿಯೂ ನಾಯಕಸ್ಥಾನ ಸ್ಪರ್ಧಾತ್ಮಕವಾಗಿ ಗಳಿಸಿದುದಾಗಿಲ್ಲ.

ಎಲ್ಲ ಪಕ್ಷಗಳವರೂ ಒಮ್ಮತದ ಆಯ್ಕೆ ಎನ್ನುವ ನೆಪ ಹೇಳುತ್ತಾರೆ. ಈ ಒಮ್ಮತಕ್ಕೆ ಮುನ್ನವಾದರೂ ಕನಿಷ್ಠ ಇಬ್ಬರು ಸ್ಪರ್ಧಿಗಳು ಇರಬೇಕಲ್ಲ; ಇರುತ್ತಾರೆ. ಒಬ್ಬನನ್ನು ಹೇಗೋ ಏನೋ ಆಮಿಷವೊಡ್ಡಿ ಪುಸಲಾಯಿಸಿ ಹಿಂದೆಗೆಯುವಂತೆ ಮಾಡಿ, ಒಮ್ಮತ ಸಾಧನೆ ಎಂದು ಬೀಗುವ ಪರಿಪಾಟ ಎಲ್ಲ ಪಕ್ಷಗಳಲ್ಲೂ ಇದೆ. ಜಾತಿ, ಮತ, ವೋಟ್ ಬ್ಯಾಂಕ್, ಹಣ, ಹೆಂಡ, ಇನ್ನೂ ಏನೇನೋ ಯಾವ್ಯಾವುದೋ ಅಪಸವ್ಯಗಳ ಪ್ರಭಾವ ಬೇರೆ. ಈ ಉಪಕರಣಗಳಿಲ್ಲದೆ ಚುನಾವಣೆಗಳು ಈ ದೇಶದಲ್ಲಿ ಅಸಾಧ್ಯ.

'ಪ್ರಜಾಪ್ರಭುತ್ವ ಎಲ್ಲಿದೆ ಸ್ವಾಮಿ?' ಎಂದು ಕಲ್ಪನೆಯ ಆದರ್ಶದ ನೆಲೆಯಲ್ಲಿ ಸುಮ್ಮನೆ ತೊಳಲುವುದಕ್ಕಿಂತ, ಆಯ್ಕೆ ಮಾಡುವುದಷ್ಟೇ ನಮಗೆ, ಅಂದರೆ ಪ್ರಜೆಗಳಿಗೆ ಇರುವ ಅವಕಾಶ. ಐದು ವರ್ಷಗಳವರೆಗೆ ಕಮಕ್ ಕಿಮಕ್ ಎನ್ನದೇ ಸುಮ್ಮಗಿರುತ್ತ ಮತ್ತೊಮ್ಮೆ ಆಯ್ಕೆಯ ಅವಕಾಶಕ್ಕಾಗಿ ಕಾಯುವುದೇ ನಮ್ಮಲ್ಲಿನ ಪ್ರಜಾಪ್ರಭುತ್ವ. ಪ್ರಜೆಗಳೂ ಈಗಾಗಲೇ ಈ ದುರವಸ್ಥೆಯ ಪದ್ಧತಿಗೆ ಅನಿವಾರ್ಯವಾಗಿ ತಮ್ಮನ್ನು ಹೊಂದಿಸಿಕೊಂಡಿದ್ದಾರೆ. ಹೀಗಿರುವಾಗ ಎಲ್ಲಿಯ ನೆಲ, ಏನು ಹದ, ಯಾವುದು ಬೀಜ? ಬಿತ್ತುವವರು ಎಲ್ಲಿದ್ದಾರೆ?

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಡಿಜಿಟಲ್ ಕರೆನ್ಸಿ: ಹಣದ ಚಹರೆ ಬದಲಿಗೆ ಚಿಂತನೆ

ಹಣದ ಬಗ್ಗೆ ನಮ್ಮಲ್ಲಿರುವ ಪರಿಕಲ್ಪನೆಯನ್ನು ಸಂಪೂರ್ಣವಾಗಿ ಬದಲಾಯಿಸುವ ಚಿಂತನೆಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಹೊಂದಿದೆ. ಕೇಂದ್ರೀಯ ಬ್ಯಾಂಕ್‌ನ ಡಿಜಿಟಲ್ ಕರೆನ್ಸಿ (ಸಿಬಿಡಿಸಿ) ಅಥವಾ ಡಿಜಿಟಲ್ ಕರೆನ್ಸಿಯು ಜಾರಿಗೆ ಬಂದರೆ ಹಣದ ಬಗ್ಗೆ ನಮಗೆ ಈವರೆಗೆ ಇದ್ದ ತಿಳಿವಳಿಕೆಯೇ ಬದಲಾಗಲಿದೆ. ಪ್ರತಿ ಕೇಂದ್ರೀಯ ಬ್ಯಾಂಕ್ ಹೊಂದಿರಲೇಬೇಕಾದ ಅಸ್ತ್ರವಾಗಿ ಡಿಜಿಟಲ್ ಕರೆನ್ಸಿಯು ರೂಪುಗೊಳ್ಳಲಿದೆ ಎಂದು ಆರ್‌ಬಿಐನ ಉಪ ಗವರ್ನರ್ ರವಿ ಶಂಕರ್ ಅವರು ಇತ್ತೀಚೆಗೆ ಹೇಳಿದ್ದಾರೆ

ಹೊಸ ಪರಿಕಲ್ಪನೆ

ಕೇಂದ್ರೀಯ ಬ್ಯಾಂಕ್‌ನ ಡಿಜಿಟಲ್ ಕರೆನ್ಸಿ ಅಥವಾ ಡಿಜಿಟಲ್ ಕರೆನ್ಸಿ ಅಥವಾ ವರ್ಚುವಲ್ ಕರೆನ್ಸಿ ಎಂಬುದು ಯಾವುದೇ ದೇಶದ ಕೇಂದ್ರೀಯ ಬ್ಯಾಂಕ್ ನೀಡುವ ಕಾನೂನುಬದ್ಧ ಹಣ ಆಗಿರುತ್ತದೆ. ಇದು ಡಿಜಿಟಲ್ ರೂಪದಲ್ಲಿ ಇರುತ್ತದೆ ಎಂಬುದೇ ಈಗ ಇರುವ ಹಣಕ್ಕಿಂತ (ಕರೆನ್ಸಿ) ಡಿಜಿಟಲ್ ಕರೆನ್ಸಿಗೆ ಇರುವ ವ್ಯತ್ಯಾಸ. 'ಈಗ ಇರುವ ಹಣ (ಅಂದರೆ ನೋಟು) ಮತ್ತು ಡಿಜಿಟಲ್ ಕರೆನ್ಸಿ ನಡುವೆ ವಿನಿಮಯವೂ ಸಾಧ್ಯವಿದೆ' ಎಂದು ಆರ್‌ಬಿಐ ಉಪ ಗವರ್ನರ್ ರವಿಶಂಕರ್ ಅವರು ಮಾಹಿತಿ ಕೊಟ್ಟಿದ್ದಾರೆ.

ಬಿಟ್‌ಕಾಯಿನ್‌ನಂತಹ ಕ್ರಿಪ್ಟೊ ಕರೆನ್ಸಿಗಳು ಹಲವಾರು ಈಗಾಗಲೇ ಚಾಲ್ತಿಯಲ್ಲಿ ಇವೆ. ಈ ಎಲ್ಲವೂ ಯಾವುದಾದರೂ ಆನ್‌ಲೈನ್ ನೆಟ್‌ವರ್ಕ್‌ಗಳ ಮೂಲಕ ಕಾರ್ಯನಿರ್ವಹಿಸುವ ವ್ಯವಸ್ಥೆ. ಈ ಡಿಜಿಟಲ್ ಕರೆನ್ಸಿಗೆ ಯಾವುದೇ ಸರ್ಕಾರದ ಖಾತರಿ ಇಲ್ಲ. ಹಾಗಾಗಿ, ಜನರು ವಂಚನೆಗೆ ಒಳಗಾಗುವ ಸಾಧ್ಯತೆ ಅತ್ಯಂತ ಹೆಚ್ಚು. ಆದರೆ, ದೇಶದ ಕೇಂದ್ರೀಯ ಬ್ಯಾಂಕ್ ನೀಡುವ ಡಿಜಿಟಲ್ ಕರೆನ್ಸಿಯಲ್ಲಿ ಜನರು ವಂಚನೆಗೆ ಒಳಗಾಗಲು ಅವಕಾಶ ಇಲ್ಲ. ಇದಕ್ಕೆ ಸರ್ಕಾರದ ಖಾತರಿ ಇರುತ್ತದೆ.

ಇದು ಹೊಸ ಪರಿಕಲ್ಪನೆ ಆಗಿರುವುದರಿಂದ ಇದನ್ನು ಹೇಗೆ ಜಾರಿಗೊಳಿಸಬೇಕು ಎಂಬ ಬಗ್ಗೆ ಆರ್‌ಬಿಐಗೆ ಸ್ಪಷ್ಟತೆ ಇಲ್ಲ. ಹಂತ ಹಂತವಾಗಿಯೇ ಜಾರಿ ಸಾಧ್ಯ ಎಂದು ರವಿಶಂಕರ್ ಹೇಳಿದ್ದಾರೆ. ಬೇರೆ ಬೇರೆ ದೇಶಗಳಲ್ಲಿ ಯಾವ ರೀತಿಯಲ್ಲಿ ಇದನ್ನು ಜಾರಿಗೊಳಿಸಲಾಗುತ್ತಿದೆ ಎಂಬುದರ ಮೇಲೆ ಆರ್‌ಬಿಐ ಕಣ್ಣಿಟ್ಟಿದೆ. ಭಾರತದಲ್ಲಿ ಜಾರಿ ಮಾಡುವಾಗ ಯಾವೆಲ್ಲ ಅಂಶಗಳ ಬಗ್ಗೆ ಗಮನ ಹರಿಸಬೇಕು ಎಂಬ ಬಗ್ಗೆಯೂ ಚಿಂತನೆ ನಡೆದಿದೆ.

ಡಿಜಿಟಲ್ ಕರೆನ್ಸಿಯನ್ನು ಚಿಲ್ಲರೆ ವ್ಯವಹಾರಕ್ಕೆ ಮಾತ್ರ ಬಳಸಬೇಕೇ, ಸಗಟು ವಹಿವಾಟಿಗೂ ಬಳಸಬಹುದೇ ಎಂಬ ಬಗ್ಗೆ ಚಿಂತನೆ ನಡೆದಿದೆ. ಡಿಜಿಟಲ್ ಕರೆನ್ಸಿ ಹಂಚಿಕೆಯು ವಿಕೇಂದ್ರೀಕೃತವಾಗಿ ಇರಬೇಕೇ ಅಥವಾ ಕೇಂದ್ರೀಕೃತವಾಗಿ ಇರಬೇಕೇ, ಹಣದ ದೃಢೀಕರಣ ವ್ಯವಸ್ಥೆ ಹೇಗೆ ಮುಂತಾದ ವಿಚಾರಗಳು ಕೂಡ ಇನ್ನೂ ಸ್ಪಷ್ಟವಾಗಿಲ್ಲ. ಆರ್‌ಬಿಐ ಮಾತ್ರ ಡಿಜಿಟಲ್ ಕರೆನ್ಸಿ ನೀಡಬೇಕೇ ಅಥವಾ ಬ್ಯಾಂಕುಗಳ ಮೂಲಕವೂ ವಿತರಿಸಬಹುದೇ ಎಂಬ ಪ್ರಶ್ನೆಯೂ ಇದೆ. ಡಿಜಿಟಲ್ ಎಂದ ಕೂಡಲೇ ಬಳಕೆದಾರರ ಗುರುತು ರಹಸ್ಯವಾಗಿರುತ್ತದೆ. ಡಿಜಿಟಲ್ ಕರೆನ್ಸಿ ಬಳಕೆದಾರರ ಗುರುತನ್ನು ಯಾವ ಪ್ರಮಾಣದಲ್ಲಿ ಬಹಿರಂಗಪಡಿಸಬೇಕು ಎಂಬ ಬಗ್ಗೆಯೂ ಚಿಂತನೆ ನಡೆದಿದೆ.

ಡಿಜಿಟಲ್ ಕರೆನ್ಸಿ: ಚೀನಾ ಮುಂದು

ಡಿಜಿಟಲ್ ಕರೆನ್ಸಿಗಳು ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಪ್ರಸಿದ್ಧಿಗೆ ಬರುತ್ತಿವೆ. ಜಾಗತಿಕವಾಗಿ 81 ದೇಶಗಳು ಡಿಜಿಟಲ್ ಕರೆನ್ಸಿಯ ಅನುಷ್ಠಾನದ ದಿಕ್ಕಿನಲ್ಲಿವೆ ಎಂದು ವರದಿಗಳು ತಿಳಿಸಿವೆ. ಚೀನಾ ಮತ್ತು ದಕ್ಷಿಣ ಕೊರಿಯಾ ಸೇರಿದಂತೆ 14 ಆರ್ಥಿಕ ಬಲಾಢ್ಯ ದೇಶಗಳು ಈಗಾಗಲೇ ಪ್ರಾಯೋಗಿಕ ಪರೀಕ್ಷೆ ನಡೆಸಿವೆ. 16 ದೇಶಗಳಲ್ಲಿ ಇಂತಹ ಕರೆನ್ಸಿಗಳು ಅಭಿವೃದ್ಧಿ ಹಂತದಲ್ಲಿವೆ. 32 ದೇಶಗಳಲ್ಲಿ ಇವು ಸಂಶೋಧನೆಯ ಹಂತದಲ್ಲಿವೆ.

ಡಿಜಿಟಲ್ ಕರೆನ್ಸಿ ವಿಚಾರದಲ್ಲಿ ಚೀನಾ ಎಲ್ಲ ದೇಶಗಳಿಗಿಂತ ಮುಂದಿದೆ. ಡಿಜಿಟಲ್ ಯುವಾನ್ ಪ್ರಾಯೋಗಿಕ ಪರೀಕ್ಷೆಯಲ್ಲಿ ಸುಮಾರು ₹37 ಲಕ್ಷ ಕೋಟಿ (5.5 ಬಿಲಿಯನ್ ಡಾಲರ್) ಮೌಲ್ಯದ ವಹಿವಾಟು ನಡೆದಿದೆ ಎಂದು ವರದಿಗಳು ಹೇಳಿವೆ. ಮುಂದಿನ ವರ್ಷ ಡಿಜಿಟಲ್ ಯುವಾನ್ ಅನ್ನು ಪರಿಚಯಿಸುವ ಯೋಜನೆಯನ್ನು ಚೀನಾ ಹೊಂದಿದೆ ಎಂಬುದಾಗಿ ವರದಿಯಾಗಿದೆ.

ಬ್ರಿಟನ್, ಅಮೆರಿಕ, ಈಕ್ವೆಡಾರ್, ಟುನೀಶಿಯಾ, ಸೆನೆಗಲ್, ಸ್ವೀಡನ್, ಎಸ್ಟೋನಿಯಾ, ರಷ್ಯಾ, ಜಪಾನ್, ವೆನೆಜುವೆಲಾ ಮತ್ತು ಇಸ್ರೇಲ್‌ನಂತಹ ದೇಶಗಳು ಡಿಜಿಟಲ್ ಕರೆನ್ಸಿಯ ಹಾದಿಯಲ್ಲಿವೆ. ಉಕ್ರೇನ್, ದಕ್ಷಿಣ ಕೊರಿಯಾ, ಐಸ್‌ಲ್ಯಾಂಡ್ ಮತ್ತು ಥಾಯ್ಲೆಂಡ್‌ಗಳಲ್ಲಿ ಪ್ರಾಯೋಗಿಕ ಯತ್ನಗಳು ನಡೆಯುತ್ತಿದ್ದರೆ, ಕೆನಡಾ, ಬ್ರೆಜಿಲ್ ಮತ್ತು ಕಾಂಬೋಡಿಯಾದಲ್ಲಿ ಈ ಪರಿಕಲ್ಪನೆ ಇಟ್ಟುಕೊಂಡು ಕೆಲಸಗಳು ನಡೆಯುತ್ತಿವೆ. ಬಹಮಾಸ್‌ನ ಕಾರ್ಡ್ ಆಧಾರಿತ 'ಸ್ಯಾಂಡ್ ಡಾಲರ್' ಅನ್ನು ಈಗಾಗಲೇ ಎರಡು ದ್ವೀಪಗಳಲ್ಲಿ ಪರೀಕ್ಷಿಸಲಾಗಿದೆ ಎಂದು ವರದಿಗಳು ತಿಳಿಸಿವೆ. ಆದರೆ ಯಾವ ದೇಶವೂ ಇದನ್ನು ಸಂಪೂರ್ಣವಾಗಿ ಜಾರಿಗೆ ತಂದಿಲ್ಲ.

ಚೀನಾ ದೇಶವು ತನ್ನ ಡಿಜಿಟಲ್ ಕರೆನ್ಸಿಯನ್ನು 'ಡಿಜಿಟಲ್ ಯುವಾನ್' ಎಂದು ಕರೆದಿದ್ದು, ತನ್ನ ಹಣಕಾಸು ವ್ಯವಸ್ಥೆಯನ್ನು ಬದಲಾಯಿಸುವ ಪ್ರಯೋಗಗಳಿಗೆ ಮುಂದಾಗಿದೆ. ಅಮೆರಿಕವು ಇದನ್ನು 'ಡಿಜಿಟಲ್ ಡಾಲರ್' ಎಂದೂ, ಐರೋಪ್ಯ ಒಕ್ಕೂಟವು 'ಡಿಜಿಟಲ್ ಯುರೋ' ಎಂದೂ, ರಷ್ಯಾ ದೇಶವು 'ಡಿಜಿಟಲ್ ರೂಬಲ್' ಎಂದು ಕರೆದಿವೆ.

ಜಾಗತಿಕವಾಗಿ ಶೇ 10ರಷ್ಟು ಕೇಂದ್ರೀಯ ಬ್ಯಾಂಕುಗಳು 3 ವರ್ಷಗಳಲ್ಲಿ ಮತ್ತು ಶೇ 20ರಷ್ಟು ಕೇಂದ್ರೀಯ ಬ್ಯಾಂಕ್‌ಗಳು ಮುಂದಿನ 6 ವರ್ಷಗಳಲ್ಲಿ ಸಿಬಿಡಿಸಿ ಅನುಷ್ಠಾನಗೊಳಿಸಲಿವೆ ಎಂದು ಬ್ಯಾಂಕ್ ಫಾರ್ ಇಂಟರ್‌ನ್ಯಾಷನಲ್ ಸೆಟ್ಲ್‌ಮೆಂಟ್ಸ್ ತಿಳಿಸಿದೆ.

ಅನುಕೂಲಗಳು

- ಇದು ಡಿಜಿಟಲ್ ಸ್ವರೂಪದಲ್ಲಿ ಇರುವ ಕಾರಣ, ಕರೆನ್ಸಿ ನೋಟುಗಳನ್ನು ಮುದ್ರಿಸುವ ಅವಶ್ಯಕತೆ ಇಲ್ಲ. ಇದರಿಂದ ಮುದ್ರಣ, ಸಂಗ್ರಹ, ಸಾಗಣೆ ಮತ್ತು ವಿತರಣೆ ವೆಚ್ಚವನ್ನು ಪೂರ್ಣ ಪ್ರಮಾಣದಲ್ಲಿ ಉಳಿಸಬಹುದಾಗಿದೆ. ಇದು ಡಿಜಿಟಲ್ ಕರೆನ್ಸಿಯ ಪ್ರಧಾನ ಅನುಕೂಲಗಳಲ್ಲಿ ಒಂದು
- ಡಿಜಿಟಲ್ ಕರೆನ್ಸಿಯನ್ನು ಕರೆನ್ಸಿ ನೋಟಿನಂತೆಯೇ ಬ್ಯಾಂಕ್ ಮೂಲಕ ವಿತರಣೆ ಮಾಡಲಾಗುತ್ತದೆ. ಡಿಜಿಟಲ್ ಕರೆನ್ಸಿ ಖಾತೆಯಿಂದಲೇ ಎಲ್ಲವನ್ನೂ ನಿರ್ವಹಣೆ ಮಾಡಬಹುದು. ಡಿಜಿಟಲ್ ಕರೆನ್ಸಿ ವಹಿವಾಟನ್ನು ಬ್ಯಾಂಕ್ ಖಾತೆಯ ಮೂಲಕ ನಿರ್ವಹಿಸುವ ಅವಶ್ಯಕತೆ ಇಲ್ಲ. ಈ ವಹಿವಾಟಿಗೆ ಬ್ಯಾಂಕ್ ಖಾತೆ ಸ್ಟೇಟ್‌ಮೆಂಟ್ ಪಡೆಯುವ ಅವಶ್ಯಕತೆ ಇಲ್ಲ. ಕರೆನ್ಸಿ ನೋಟು ವ್ಯವಹಾರದಂತೆಯೇ ಇದನ್ನು ನಿರ್ವಹಣೆ ಮಾಡಬಹುದು
- ಡಿಜಿಟಲ್ ಕರೆನ್ಸಿಯನ್ನು ವಿದೇಶಿ ವಿನಿಮಯಕ್ಕೆ ಸುಲಭವಾಗಿ, ಸರಳವಾಗಿ ಮತ್ತು ತಕ್ಷಣವೇ ಬಳಸಿಕೊಳ್ಳಬಹುದು. ವಿದೇಶಿ ವಿನಿಮಯಕ್ಕಾಗಿ ಕಮಿಷನ್ ನೀಡುವ ಅವಶ್ಯಕತೆ ಇಲ್ಲ. ವಿನಿಮಯದ ಕ್ಷಣದಲ್ಲಿನ ದರದ ಮೌಲ್ಯದಲ್ಲಿಯೇ ವಿನಿಮಯ ಮಾಡಿಕೊಳ್ಳಬಹುದು
- ಇದನ್ನು ಬ್ಯಾಂಕ್ ಖಾತೆಗಳಲ್ಲಿಯೂ ಠೇವಣಿ ರೂಪದಲ್ಲಿ ಇಡಬಹುದು. ಬ್ಯಾಂಕ್ ದಿವಾಳಿಯಾಗುತ್ತಿದೆ, ವಂಚನೆ ನಡೆದಿದೆ ಎನ್ನಬಹುದಾದ ಸಂದರ್ಭದಲ್ಲಿ ಅಷ್ಟೂ ಹಣವನ್ನು ಸುಲಭವಾಗಿ ವಾಪಸ್ ಪಡೆಯಬಹುದು. ಬ್ಯಾಂಕ್‌ನಲ್ಲಿ ನಗದು ನೋಟು ಲಭ್ಯವಿಲ್ಲ ಎಂಬ ಆತಂಕವಿರುವುದಿಲ್ಲ
- ಕರೆನ್ಸಿ ನೋಟುಗಳ ವ್ಯವಹಾರದ ಅವಶ್ಯಕತೆಯನ್ನು ಡಿಜಿಟಲ್ ಕರೆನ್ಸಿ ಕಡಿಮೆ ಮಾಡುತ್ತದೆ. ಹಣಕಾಸು ವ್ಯವಹಾರಗಳ ಲೆಕ್ಕಪತ್ರ ನಿರ್ವಹಣೆ ಸುಲಭವಾಗುತ್ತದೆ ಮತ್ತು ಸರಳವಾಗುತ್ತದೆ

ಅನನುಕೂಲಗಳು

ಡಿಜಿಟಲ್ ಕರೆನ್ಸಿಯಿಂದಾಗಬಹುದಾದ ಅನುಕೂಲಗಳಂತೆಯೇ ಅನನುಕೂಲಗಳು ಆರ್‌ಬಿಐ ಗುರುತಿಸಿದೆ. ಹೀಗೆ ಗುರುತಿಸಲಾದ ಅನನುಕೂಲಗಳಲ್ಲಿ ಕೆಲವು ಅಪಾಯಕಾರಿಯೂ ಹೌದು ಎಂದು ಆರ್‌ಬಿಐ ಅಭಿಪ್ರಾಯಪಟ್ಟಿದೆ.

- ಡಿಜಿಟಲ್ ಕರೆನ್ಸಿಯನ್ನು ದೇಶವ್ಯಾಪಿ ಬಳಕೆಗೆ ತರಲು ತಂತ್ರಜ್ಞಾನದ ಅಳವಡಿಕೆ ಅತ್ಯಂತ ಮುಖ್ಯ. ಇದಕ್ಕಾಗಿ ದೇಶದ ಎಲ್ಲೆಡೆ ವೇಗದ ಇಂಟರ್ನೆಟ್ ಸೇವೆ ಲಭ್ಯವಿರಬೇಕು. ಅತಿಹೆಚ್ಚು ಜನರು ಸ್ಮಾರ್ಟ್‌ಫೋನ್‌ಗಳನ್ನು ಬಳಸಬೇಕು. ಡಿಜಿಟಲ್ ಕರೆನ್ಸಿ ಬಳಕೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಈ ಯಾವ ಸಿದ್ಧತೆಗಳನ್ನೂ ಮಾಡಿಕೊಳ್ಳದೆ ಡಿಜಿಟಲ್ ಕರೆನ್ಸಿಯನ್ನು ಬಿಡುಗಡೆ ಮಾಡಿದರೆ, ಅದು ಯಶಸ್ವಿಯಾಗುವ ಸಾಧ್ಯತೆ ಕಡಿಮೆ
- ಡಿಜಿಟಲ್ ಕರೆನ್ಸಿಯನ್ನು ನಿರ್ವಹಣೆ ಮಾಡಲು ನಮ್ಮ ಬ್ಯಾಂಕಿಂಗ್ ವ್ಯವಸ್ಥೆಯನ್ನೂ ಮೇಲ್ದರ್ಜೆಗೆ ಏರಿಸುವುದು ಅನಿವಾರ್ಯ. ಕರೆನ್ಸಿ ನೋಟು ಬ್ಯಾಂಕಿಂಗ್ ಮತ್ತು ಡಿಜಿಟಲ್ ಕರೆನ್ಸಿ ಬ್ಯಾಂಕಿಂಗ್ ವ್ಯವಸ್ಥೆಗಳು ಸಮಾನಾಂತರವಾಗಿ ಕಾರ್ಯನಿರ್ವಹಿಸಬೇಕು. ಈ ವ್ಯವಸ್ಥೆಯನ್ನು ರೂಪಿಸಲು ಸಾಕಷ್ಟು ಬಂಡವಾಳ ಹೂಡಿಕೆಯ ಅವಶ್ಯಕತೆ ಇದೆ. ಇದು ಬ್ಯಾಂಕಿಂಗ್ ವ್ಯವಸ್ಥೆಗೆ ಆರಂಭಿಕ ಹೊರೆಯಾಗುವ ಸಾಧ್ಯತೆ ಇದೆ. ಡಿಜಿಟಲ್ ಕರೆನ್ಸಿ ಜಾರಿಗೆ ತಂದರೆ, ಈ ಸ್ವರೂಪದ ಬಂಡವಾಳ ಹೂಡಿಕೆ ಅನಿವಾರ್ಯ. ಅದರ ಹೊರೆ ಗ್ರಾಹಕರಿಗೆ ವರ್ಗವಾಗುವ ಸಾಧ್ಯತೆಯೂ ಇದೆ
- ಆನ್‌ಲೈನ್ ಬ್ಯಾಂಕಿಂಗ್‌ನಲ್ಲಿ ಇರುವ ಹ್ಯಾಕಿಂಗ್‌ನಂತಹ ಸೈಬರ್ ಅಪರಾಧಗಳ ಅಪಾಯ ಡಿಜಿಟಲ್ ಕರೆನ್ಸಿಯಲ್ಲಿಯೂ ಇದೆ
- ಡಿಜಿಟಲ್ ಕರೆನ್ಸಿಯನ್ನು ವಿದೇಶಿ ವಿನಿಮಯಕ್ಕೆ ನೇರವಾಗಿ ಬಳಸುವುದಾದರೆ, ವಿನಿಮಯ ಮಾಡಿಕೊಳ್ಳಬೇಕಿರುವ ವಿದೇಶಿ ಕರೆನ್ಸಿಯೂ ಸಹ ಡಿಜಿಟಲ್ ಸ್ವರೂಪದಲ್ಲಿ ಇರಬೇಕು. ಆಗ ಮಾತ್ರ ವಿದೇಶಿ ವಿನಿಮಯಕ್ಕೆ ಇದನ್ನು ಬಳಸಬಹುದು. ಇಲ್ಲದಿದ್ದರೆ ಸಾಂಪ್ರದಾಯಿಕ ರೂಪದಲ್ಲೇ ವಿನಿಮಯ ಮಾಡಿಕೊಳ್ಳಬೇಕಾಗುತ್ತದೆ

ಆಧಾರ: ಆರ್‌ಬಿಐನ 'ಸೆಂಟ್ರಲ್ ಬ್ಯಾಂಕ್ ಡಿಜಿಟಲ್ ಕರೆನ್ಸಿ: ಇಸ್ ದ ಫ್ಯೂಚರ್ ಆಫ್ ಮನಿ' ವರದಿ, ಟೆಕ್‌ಕ್ರಂಚ್, ಸ್ಟ್ರಾಲ್

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಮತ್ತು ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

ಐದು ಭಾಷೆಗಳಲ್ಲಿ ಕನ್ನಡಕ್ಕಿಲ್ಲ ಸ್ಥಾನ

ಪ್ರಾದೇಶಿಕ ಭಾಷೆಗಳಲ್ಲಿ ಎಂಜಿನಿಯರಿಂಗ್ ಕೋರ್ಸ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 14 ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಕೋರ್ಸ್ ಲಭ್ಯ
- ನೂತನ ಶಿಕ್ಷಣ ನೀತಿಯಡಿ ಹಲವು ಯೋಜನೆ ಘೋಷಿಸಿದ ಪ್ರಧಾನಿ
- ಸಂಜ್ಞಾ ಭಾಷೆಗೆ ಭಾಷಾ ವಿಷಯದ ಮಾನ್ಯತೆ ನೀಡಲು ನಿರ್ಧಾರ

ನವದೆಹಲಿ: ದೇಶದ ಎಂಟು ರಾಜ್ಯಗಳ 14 ಕಾಲೇಜುಗಳು ಐದು ಪ್ರಾದೇಶಿಕ ಭಾಷೆಗಳಲ್ಲಿ ಎಂಜಿನಿಯರಿಂಗ್ ಕೋರ್ಸ್ ಬೋಧನೆ ಮಾಡಲಿವೆ. ತಮಿಳು, ತೆಲುಗು, ಹಿಂದಿ, ಮರಾಠಿ ಮತ್ತು ಬಂಗಾಳಿ ಭಾಷೆಯಲ್ಲಿ ಈ ಕಾಲೇಜುಗಳು ಎಂಜಿನಿಯರಿಂಗ್ ಕೋರ್ಸ್ ನಡೆಸಲಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾಗಿ ಒಂದು ವರ್ಷ ಪೂರ್ಣಗೊಂಡ ಸಂದರ್ಭದಲ್ಲಿ ಅವರು ದೇಶವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಈ ಮಾಹಿತಿ ನೀಡಿದ್ದಾರೆ. 'ಎಂಜಿನಿಯರಿಂಗ್ ಕೋರ್ಸ್‌ಗಳ ಪಠ್ಯಗಳನ್ನು ಭಾರತದ 11 ಪ್ರಾದೇಶಿಕ ಭಾಷೆಗಳಿಗೆ ಭಾಷಾಂತರಿಸುವ ಟೂಲ್ ಅನ್ನು ಸರ್ಕಾರವು ಅಭಿವೃದ್ಧಿಪಡಿಸಿದೆ' ಎಂದು ಪ್ರಧಾನಿ ಮೋದಿ ಮಾಹಿತಿ ನೀಡಿದ್ದಾರೆ.

ಇದೇ ಭಾಷಣದಲ್ಲಿ ಅವರು ನೂತನ ಶಿಕ್ಷಣ ನೀತಿಯ ಹೊಸ ಯೋಜನೆಗಳನ್ನು ಪ್ರಕಟಿಸಿದರು. ಮೊದಲ ಹಂತದ ಶಾಲಾ ಶಿಕ್ಷಣ ಪ್ರವೇಶಕ್ಕೆ ಪೂರ್ವಭಾವಿಯಾಗಿ ಮಕ್ಕಳಿಗೆ ಆಟ ಆಧಾರಿತ ಮೂರು ತಿಂಗಳ ಕೋರ್ಸ್, 'ವಿದ್ಯಾ ಪ್ರವೇಶ್' ಅನ್ನು ಪ್ರಧಾನಿ ಘೋಷಿಸಿದರು.

ಶೈಕ್ಷಣಿಕ ಅಂಕಗಳ 'ಶೈಕ್ಷಣಿಕ ಬ್ಯಾಂಕ್' ಅನ್ನು ಪ್ರಧಾನಿ ಘೋಷಿಸಿದರು. 'ಕೋರ್ಸ್ ಮಧ್ಯದಲ್ಲಿ ವಿದ್ಯಾರ್ಥಿಯು ತನ್ನ ಇಚ್ಛೆಯ ವಿಷಯಗಳನ್ನು ಬದಲಿಸಲು ನೂತನ ಶಿಕ್ಷಣ ನೀತಿಯಲ್ಲಿ ಅವಕಾಶವಿದೆ. ಹೀಗೆ ವಿಷಯ ಮತ್ತು ಕೋರ್ಸ್ ಬದಲಿಸಿದಾಗ ವಿದ್ಯಾರ್ಥಿಯ ಶೈಕ್ಷಣಿಕ ಮೌಲ್ಯಮಾಪನವನ್ನು ನಡೆಸಲು ಶೈಕ್ಷಣಿಕ ಬ್ಯಾಂಕ್ ನೆರವಾಗಲಿದೆ. ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಇದನ್ನು ರೂಪಿಸಲಾಗಿದೆ. ಇದು ಶಿಕ್ಷಣ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆ ತರಲಿದೆ. ಅಲ್ಲದೆ, ವಿದ್ಯಾರ್ಥಿ ತನ್ನ ಇಚ್ಛೆಯ ವಿಷಯವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಈ ವ್ಯವಸ್ಥೆ ನೀಡಲಿದೆ' ಎಂದು ಮೋದಿ ವಿವರಿಸಿದ್ದಾರೆ.

ವಿದ್ಯಾರ್ಥಿಗಳ ಪರೀಕ್ಷೆಯ ವ್ಯವಸ್ಥೆಯನ್ನು ಬದಲಿಸುವ 'ಕಲಿಕಾಮಟ್ಟ ವಿಶ್ಲೇಷಣೆಗಾಗಿ ವ್ಯವಸ್ಥಿತ ಮೌಲ್ಯಮಾಪನ-ಸಫಲ್' ವ್ಯವಸ್ಥೆಯನ್ನೂ ಪ್ರಧಾನಿ ಘೋಷಿಸಿದರು.

'ನೂತನ ಶಿಕ್ಷಣ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು. ಇದಕ್ಕೆ ಶಿಕ್ಷಕರನ್ನು ಸಿದ್ಧಪಡಿಸಲು ಎನ್‌ಸಿಇಆರ್‌ಟಿ 'ನಿಶಿತಾ 2.0' ಎಂಬ ತರಬೇತಿ ಕಾರ್ಯಕ್ರಮವನ್ನು ಸಿದ್ಧಪಡಿಸಿದೆ. ಶಿಕ್ಷಕರಿಗೆ ಬೇಕಿರುವ ತರಬೇತಿ ಇದರಲ್ಲಿ ದೊರೆಯಲಿದೆ. ತರಬೇತಿ ಪಡೆದ ಶಿಕ್ಷಕರು ತಮ್ಮ ಶಿಕ್ಷಣ ಇಲಾಖೆಗೆ, ತಮ್ಮ ಅಗತ್ಯಗಳ ಬಗ್ಗೆ ಸಲಹೆಗಳನ್ನು ನೀಡಲು ಸಾಧ್ಯವಾಗುತ್ತದೆ' ಎಂದು ಪ್ರಧಾನಿ ವಿವರಿಸಿದ್ದಾರೆ.

'ಮುಂದಿನ ದಿನಗಳಲ್ಲಿ ದೇಶದ ಆರ್ಥಿಕತೆಯಲ್ಲಿ ಕೃತಕ ಬುದ್ಧಿಮತ್ತೆ ಮಹತ್ವದ ಪಾತ್ರ ವಹಿಸಲಿದೆ. ವಿದ್ಯಾರ್ಥಿಗಳನ್ನು ಅಂತಹ ವಾತಾವರಣಕ್ಕೆ ಸಿದ್ಧಪಡಿಸುವ ಕೃತಕ ಬುದ್ಧಿಮತ್ತೆ ಕಾರ್ಯಕ್ರಮವನ್ನು ಆರಂಭಿಸಲಾಗುತ್ತದೆ. ಇದಕ್ಕಾಗಿ ರಾಷ್ಟ್ರೀಯ ಡಿಜಿಟಲ್ ಶಿಕ್ಷಣ ವ್ಯವಸ್ಥೆ ಮತ್ತು ರಾಷ್ಟ್ರೀಯ ಶಿಕ್ಷಣ ತಂತ್ರಜ್ಞಾನ ಫೋರಂಗಳು ಡಿಜಿಟಲ್ ಮತ್ತು ತಾಂತ್ರಿಕ ಯೋಜನೆಯನ್ನು ರೂಪಿಸಲಿವೆ' ಎಂದು ಪ್ರಧಾನಿ ಹೇಳಿದ್ದಾರೆ.

'ಸಂಜ್ಞಾ ಭಾಷೆಗೆ ಭಾಷಾ ವಿಷಯದ ಮಾನ್ಯತೆ ನೀಡಲಾಗಿದೆ. ಸಾಮಾನ್ಯ ವಿದ್ಯಾರ್ಥಿಗಳಿಗೂ ಸಂಜ್ಞಾ ಭಾಷೆಯನ್ನು, ಒಂದು ಭಾಷೆಯಾಗಿ ಕಲಿಸಲು ಅವಕಾಶವಿದೆ. ದೇಶದಲ್ಲಿ 3 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ತಮ್ಮ ಕಲಿಕೆಗಾಗಿ ಸಂಜ್ಞಾಭಾಷೆಯನ್ನು ಅವಲಂಬಿಸಿದ್ದಾರೆ. ಈ ಹೊಸ ವ್ಯವಸ್ಥೆಯು ಭಾರತೀಯ ಸಂಜ್ಞಾ ಭಾಷೆಗೆ ಉತ್ತೇಜನ ನೀಡಲಿದೆ. ಇದರಿಂದ ಅಂಗವಿಕಲ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ' ಎಂದು ಅವರು ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಟೋಕಿಯೊದಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾರತಕ್ಕೆ ಮೊದಲ ಪದಕ ಗೆದ್ದುಕೊಟ್ಟಿದ್ದಾರೆ'. ಈ ಮಾಹಿತಿ ಇರುವ ಪೋಸ್ಟರ್ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಹಿಂದಿ ಸುದ್ದಿವಾಹಿನಿ ಆಜ್‌ತಕ್‌ನ ಖಬರ್‌ದಾರ್ ಕಾರ್ಯಕ್ರಮ ನಡೆಸಿಕೊಡುವ ನಿರೂಪಕಿ ಶ್ವೇತಾ ಸಿಂಗ್ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಇರುವ ಪೋಸ್ಟರ್‌ನಲ್ಲಿ ಮೋದಿ ಪದಕ ಗೆದ್ದಿರುವ ಉಲ್ಲೇಖವಿದೆ. ಮೊದಲ ಪದಕ ಗೆದ್ದ ಮೀರಾಬಾಯಿ ಚಾನು ಅವರ ಬದಲಾಗಿ ಮೋದಿ ಅವರಿಗೆ ಪದಕ ಬಂದಿದೆ ಎಂದು ಬಿತ್ತರಿಸಿರುವ ಚಾನೆಲ್ ವಿರುದ್ಧ ಸಾಮಾಜಿಕ ಜಾಲತಾಣ ಬಳಕೆದಾರರು ಕಿಡಿಕಾರಿದ್ದಾರೆ.

ಆಜ್‌ತಕ್ ವಾಹಿನಿಯದ್ದು ಎಂದು ಹೇಳಲಾದ ಪೋಸ್ಟರ್‌ಗಾಗಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ತಂಡವು ಹುಡುಕಾಡಿದಾಗ ಅಂತಹ ಯಾವುದೇ ಪೋಸ್ಟರ್ ಕಂಡುಬಂದಿಲ್ಲ. 2019ರಲ್ಲಿ ಶ್ವೇತಾ ಸಿಂಗ್ ಹಾಗೂ ಮೋದಿ ಅವರ ಚಿತ್ರ ಬಳಸಿ ಪ್ರಕಟಿಸಿದ್ದ ಪೋಸ್ಟರ್ ದೊರಕಿದ್ದು, ಅದರಲ್ಲಿ ಇರುವ ಮಾಹಿತಿಯನ್ನು ತಿರುಚಿ, ಪ್ರಧಾನಿ ಪದಕ ಗೆದ್ದಿದ್ದಾರೆ ಎಂಬರ್ಥ ನೀಡುವಂತೆ ಕಿಡಿಗೇಡಿಗಳು ಬದಲಿಸಿದ್ದಾರೆ. 'ಐಸಿಸಿ ಕ್ರಿಕೆಟ್ ವಿಶ್ವಕಪ್‌ನಲ್ಲಿ ಮೋದಿ ಗೆಲ್ಲುತ್ತಾರಾ?' ಎಂಬುದಾಗಿ ಮೂಲ ಪೋಸ್ಟರ್‌ನಲ್ಲಿ ಉಲ್ಲೇಖವಾಗಿತ್ತು.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಪ್ರಕೃತಿ, ಸೌಂದರ್ಯದ ಗುರು

ಬಾಂದಳದ ಬಾಗು, ರವಿಕಿರಣಗಳ ನೀಳ್‌ಕೋಲು |
ಇಂದುಮಣಿನುಣ್ಪು, ತಾರೆಗಳ ಕಣ್ಮಿನಿಗು ||
ಚೆಂದದಂಗಾಂಗಭಾವದಿ ಮೊದಲ ಪಾಠವಿವು |
ಸೌಂದರ್ಯಗುರು ಪ್ರಕೃತಿ – ಮಂಕುತಿಮ್ಮ || 444 ||

ಪದ-ಅರ್ಥ: ಬಾಂದಳ = ಆಕಾಶ, ಇಂದುಮಣಿ = ಚಂದ್ರ, ನುಣ್ಪು = ನುಣುಪು, ಕಣ್ಮಿನಿಗು = ಕಣ್ಣಿನ ಮಿನುಗುವಿಕೆ, ಚೆಂದದಂಗಾಂಗಭಾವದಿ = ಚೆಂದದ + ಅಂಗಾಂಗ + ಭಾವದಿ.

ವಾಚ್ಯಾರ್ಥ: ಬಾಗಿದಂತೆ ತೋರುವ ಆಕಾಶ, ಸೂರ್ಯನ ನೀಳವಾದ ಕಿರಣಗಳು, ಚಂದ್ರನ ತಂಪಾದ ನುಣುಪಾದ ಹೊಳಪು, ತಾರೆಗಳ ಕಣ್ಣು ಮಿಟುಕಾಟ, ಚೆಂದದ ಅಂಗಾಂಗಭಾವದಿಂದ ಇವು ನಮಗೆ ದೊರೆಯುವ ಮೊದಲ ಪಾಠಗಳು. ಈ ಎಲ್ಲ ಸೌಂದರ್ಯಕ್ಕೆ ಪ್ರಕೃತಿಯೇ ಗುರು.

ವಿವರಣೆ: ಪ್ರಕೃತಿ ಎಂದರೆ ಸ್ವಭಾವ. ಅದು ತನ್ನಷ್ಟಕ್ಕೇ ಆದದ್ದು, ಯಾರಿಂದಲೂ ಮಾಡಲ್ಪಟ್ಟಿದ್ದಲ್ಲ. ಅದೇ ನಿಸರ್ಗ ಅಥವಾ ಸೃಷ್ಟಿ. ಭೂಮಿ, ವಾಯು, ಬೆಂಕಿ, ನೀರು ಮತ್ತು ಆಕಾಶ ಈ ಪಂಚಭೂತಗಳಿಂದಾದ್ದು ನಿಸರ್ಗ. ನಾನಾ ಪ್ರಾಣಿಗಳ ಹುಟ್ಟು ಕೂಡ ಅವೇ ಪಂಚಭೂತಗಳಿಂದಾದ್ದರಿಂದ ಅವೂ ಪ್ರಕೃತಿಯ ಉತ್ಪನ್ನಗಳೇ. ಮನುಷ್ಯನೂ ಪ್ರಕೃತಿಯ ಒಂದು ಭಾಗವೇ. ಅವನ ಬುದ್ಧಿ ಅವನ ಅಂಶವಾದ್ದರಿಂದ ಅದೂ ಪ್ರಕೃತಿಯ ಅಧೀನ ಮಾತ್ರವಲ್ಲ, ಅದರ ಪರಿಣಾಮಕ್ಕೆ ಪಕ್ಕಾಗುವಂಥದ್ದು. ಹೀಗಾಗಿ ಪ್ರಕೃತಿ ಅಥವಾ ನಿಸರ್ಗ ಮನುಷ್ಯನ ಮನಸ್ಸು, ಚಿಂತನೆಗಳ ಮೇಲೆ ಬಲವಾದ ಪರಿಣಾಮವನ್ನುಂಟು ಮಾಡುತ್ತದೆ. ಪ್ರಕೃತಿ ಮನುಷ್ಯನನ್ನು ಆಕರ್ಷಿಸುವುದು ತನ್ನ ವಿರಾಟ್, ವೈವಿಧ್ಯಮಯವಾದ ಸೌಂದರ್ಯದಿಂದ. ನಿಸರ್ಗದ ವರ್ಣಮಯ ನರ್ತನ ಮೊದಲು ಅವನ ಚಿಂತನವನ್ನು ಸೆಳೆಯುತ್ತದೆ. ಆಕಾಶದ ಬಾಗು, ಬೆಳಗಿನ ಹಾಗೂ ಸೂರ್ಯಾಸ್ತದ ನೇರಕಿರಣಗಳ ಸುಂದರತೆ, ಹುಣ್ಣಿಮೆಯ ಚಂದ್ರನ ತಂಪು, ಅಮಾವಾಸ್ಯೆಯ ದಿನ ತಮ್ಮದೇ ಸಾಮ್ರಾಜ್ಯ ಕಟ್ಟಿಕೊಂಡಿರುವ ತಾರೆಗಳ ಕಣ್ಣು ಮಿಟುಕುವಿಕೆ ಇವೆಲ್ಲ ಪ್ರಕೃತಿಯ ಅಂಗಾಂಗ ಭಾವಗಳು. ಅವುಗಳಿಂದ ಆಕರ್ಷಿತನಾಗದ ಮನುಷ್ಯರಿರುವುದು ಸಾಧ್ಯವೇ? ಕುವೆಂಪುರವರು ಹೇಳುವಂತೆ, 'ಪ್ರಕೃತಿ ಹೊರಹೊರಗೆ ಮೃಣ್ಮಯಿಯಾಗಿ ತೋರುವವಳು, ವೈಜ್ಞಾನಿಕವಾದ ನೋಟಕ್ಕೆ ನಿಯಮಮಯಿಯಾಗಿ ತೋರುವವಳು, ವೇದಾಂತಿಯ ದೃಷ್ಟಿಗೆ ಚಿನ್ಮಯೀ ಶಕ್ತಿಯಾಗಿ ತೋರುವವಳು, ಕವಿಪ್ರಜ್ಞೆಗೆ ಆ ಸತ್ಯ ಮುಖಗಳ ಯಾವುದನ್ನೂ ಅಲ್ಲಗಳೆಯದ ಮತ್ತು ಆ ಎಲ್ಲ ಸತ್ಯಮುಖಗಳನ್ನು ಒಳಗೊಳ್ಳುವ ಬ್ರಹ್ಮಮಯಿಯಾಗಿ, ಆನಂದಮಯಿಯಾಗಿ ಗೋಚರಿಸುತ್ತಾಳೆ'. ಒಂದು ರೀತಿಯಲ್ಲಿ ನೋಡಿದರೆ ಮನುಷ್ಯನ ಸೌಂದರ್ಯಪ್ರಜ್ಞೆಗೆ ನಿಸರ್ಗವೇ ಮೊದಲ ಗುರು. ವಸಂತಮಾಸದ ಸೌಂದರ್ಯ ಹೇಗೆ ಸಂಗೀತ ಕಚೇರಿಯನ್ನು ಸೃಷ್ಟಿಸುತ್ತದೆಂಬುದನ್ನು ಕುಮಾರವ್ಯಾಸ ಅದ್ಭುತವಾಗಿ ಚಿತ್ರಿಸುತ್ತಾನೆ. ಮನ್ಮಥ ಚಕ್ರವರ್ತಿಗೆ ದುಂಬಿಗಳೇ ಗಾಯಕರು, ಮೋಹಕ ಧ್ವನಿಯ ಕೋಗಿಲೆಯೇ ಹಾಡು ಹೇಳುವ ಪಾಠಕ, ಬಂಧುರದ ಗಿಳಿಗಳೇ ಪಂಡಿತರು, ಚಿಗುರಿದ ಮಾಮರ ಮನ್ಮಥನ ಆನೆ, ತಾವರೆಗಳೇ ಶ್ವೇತಛತ್ರ, ಪುಷ್ಪ ಮಂಜರಿಗಳೇ ಅವನ ಬೀಸಣಿಗೆ. ಪ್ರಕೃತಿ ಮನುಷ್ಯನಿಗೆ ಸೌಂದರ್ಯದ ಗುರು ಎನ್ನುವುದಕ್ಕೆ ಬೇರೆ ಪುರಾವೆ ಬೇಕೇ? ❖

ದಿನ ಭವಿಷ್ಯ

ಶುಕ್ರವಾರ ಜುಲೈ 30, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಗ್ರೀಷ್ಮ ಋತು ಆಷಾಢ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪುಷ್ಯ ಸಪ್ತಮೀ ಗಂ. 60-00 (ದಿನಪೂರ್ತಿ) ಶುಕ್ರವಾರ ನಿತ್ಯ ನಕ್ಷತ್ರ ರೇವತಿ ಗಂ. 24-30 (ಹ. 4-00) ಧೃತಿ ನಾಮ ಯೋಗ ಗಂ. 41-57 ಭದ್ರೆ ಕರಣ ಗಂ. 28-46 ವಿಷಾಭಾವಃ ಅಮೃತ ಗಂ. 18-54 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-07 ಸೂರ್ಯಾಸ್ತ: 6-45 ಅದೃಷ್ಟ ಸಂಖ್ಯೆ 3 9

ಮೇಷ: ವಿದ್ಯುತ್ ಹಾಗೂ ಅಗ್ನಿ ಕ್ಷೇತ್ರದಲ್ಲಿ ದುಡಿಯುವವರು ಹೆಚ್ಚಿನ ಜಾಗೃತೆ ವಹಿಸಬೇಕಾದೀತು. ಮಹಿಳೆಯರು ಶುಭ ಸಮಾರಂಭಗಳಲ್ಲಿ ಭಾಗಿ. ಆಪ್ತರಿಂದ ಧನ ಸಹಾಯ ದೊರೆತು ವ್ಯವಹಾರದಲ್ಲಿ ಅನುಕೂಲವಾಗಲಿದೆ.

ವೃಷಭ: ಆಸ್ತಿ ಸಂಬಂಧ ಭಿನ್ನಾಭಿಪ್ರಾಯಗಳು ತಲೆದೋರುವ ಸಾಧ್ಯತೆ ಕಂಡುಬರುತ್ತಿದೆ. ಮಿತ್ರರ ಸಹಕಾರದಿಂದಾಗಿ ಕೈಗೊಂಡ ಕೆಲಸ ಕಾರ್ಯಗಳು ಸುಗಮವಾಗಿ ನೆರವೇರಲಿವೆ. ಮಹಿಳೆಯರಿಗೆ ರಾಜಕೀಯದಲ್ಲಿ ಯಶಸ್ಸು.

ಮಿಥುನ: ಹಿರಿಯರ ಮಾತುಗಳನ್ನು ಗೌರವಿಸುವುದರಿಂದ ಅನುಕೂಲವಾಗಲಿದೆ. ಹಣಕಾಸು ವ್ಯವಹಾರದಲ್ಲಿ ಹೆಚ್ಚಿನ ಜಾಗರೂಕತೆ ಅಗತ್ಯ. ಕೃಷಿ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳುವಿರಿ.

ಕರ್ಕಾಟಕ: ಮಹಿಳೆಯರು ಹೆಚ್ಚು ಹೆಚ್ಚು ಸಾಮಾಜಿಕ ಕ್ಷೇತ್ರಗಳಲ್ಲಿ ತೊಡಗಿಕೊಳ್ಳುವಿರಿ. ವೃತ್ತಿಯಲ್ಲಿ ಬದಲಾವಣೆ ಮಾಡಿಕೊಳ್ಳುವ ಸಾಧ್ಯತೆ ಕಂಡುಬರುತ್ತಿದೆ. ವೈವಾಹಿಕ ಜೀವನದಲ್ಲಿ ಸಂತೃಪ್ತಿಯನ್ನು ಕಾಣುವಿರಿ.

ಸಿಂಹ: ಕುಟುಂಬದಲ್ಲಿ ನೆಮ್ಮದಿಯ ವಾತಾವರಣ ಲಭಿಸಿ ಧಾರ್ಮಿಕ ಕ್ಷೇತ್ರಗಳ ದರ್ಶನ ಮಾಡುವ ಸಾಧ್ಯತೆ ಕಂಡುಬರುವುದು. ದೂರಾಲೋಚನೆಯಿಂದ ಕಾರ್ಯಗಳಲ್ಲಿ ಯಶಸ್ಸನ್ನು ಹೊಂದುವಿರಿ.

ಕನ್ಯಾ: ಆರೋಗ್ಯದಲ್ಲಿ ವ್ಯತ್ಯಯ ಕಂಡುಬರುವ ಸಾಧ್ಯತೆ. ಸಹೋದರರಿಂದ ಸಹಕಾರ ದೊರಕಲಿದೆ. ಮಹಿಳಾ ಉದ್ಯೋಗಿಗಳಿಗೆ ಕಚೇರಿಯಲ್ಲಿ ಕಿರಿಕಿರಿ ಉಂಟಾಗುವುದು. ಒರಟು ತನದಿಂದಾಗಿ ಕಳಂಕ ಎದುರಾಗುವ ಸಾಧ್ಯತೆ.

ತುಲಾ: ಆಸ್ತಿ ವಿವಾದಗಳು ಬಗೆ ಹರಿದು ನೆಮ್ಮದಿ ಮೂಡಿಬರಲಿದೆ. ಅನಿರೀಕ್ಷಿತ ಧನಾಗಮನ, ಆಯುಧಗಳನ್ನು ಬಳಸುವಾಗ ಅತ್ಯಂತ ಜಾಗರೂಕರಾಗಿರುವುದು ಅವಶ್ಯ. ಮಹಿಳೆಯರು ರಾಜಕೀಯದಿಂದ ದೂರವಿರುವುದು ಉತ್ತಮ.

ವೃಶ್ಚಿಕ: ಆಕಸ್ಮಿಕ ಧನಲಾಭವಾಗುವ ಸಾಧ್ಯತೆ ಕಂಡುಬರುತ್ತಿದೆ. ಸಹೋದರರೊಂದಿಗೆ ಕಲಹದ ಬದಲಾಗಿ ಹೊಂದಾಣಿಕೆಯಿಂದ ವ್ಯವಹರಿಸುವುದು ಒಳಿತು. ಹಿರಿಯರ ಆರೋಗ್ಯದಲ್ಲಿ ಸುಧಾರಣೆ.

ಧನು: ಧಾರ್ಮಿಕ ಸಮಾರಂಭಗಳಲ್ಲಿ ಭಾಗವಹಿಸಲಿದ್ದೀರಿ. ವ್ಯವಹಾರದಲ್ಲಿ ಪ್ರಗತಿಯೊಂದಿಗೆ ಆದಾಯದಲ್ಲಿ ಹೆಚ್ಚಳವಾಗಲಿದೆ. ದಾಂಪತ್ಯದಲ್ಲಿ ಭಿನ್ನಾಭಿಪ್ರಾಯ ತಲೆದೋರುವ ಸಾಧ್ಯತೆ.

ಮಕರ: ಉದ್ಯೋಗ ಕ್ಷೇತ್ರದಲ್ಲಿ ಪ್ರಶಂಸೆಗೆ ಪಾತ್ರರಾಗುವಿರಿ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಪ್ರೋತ್ಸಾಹದೊಂದಿಗೆ ಪ್ರಗತಿ ಕಂಡುಬರುವುದು. ಪ್ರಯಾಣದ ವಿಷಯದಲ್ಲಿ ಎಚ್ಚರಿಕೆ ವಹಿಸುವುದು ಅಗತ್ಯ.

ಕುಂಭ: ಅಮೂಲ್ಯ ವಸ್ತುಗಳನ್ನು ಸಂಗ್ರಹಿಸಲಿದ್ದೀರಿ. ವೃತ್ತಿಯಲ್ಲಿ ಹೆಚ್ಚಿನ ಶ್ರಮವಹಿಸಿ ಅಧಿಕವಾದ ಆದಾಯವನ್ನು ಹೊಂದಲಿದ್ದೀರಿ. ಬಂಧುಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ತೊಲಗಿಸಲು ಮಧ್ಯಸ್ಥಿಕೆ ವಹಿಸಬೇಕಾದೀತು.

ಮೀನ: ಸಮಾಜ ಸೇವೆಯಲ್ಲಿ ತೊಡಗಿಕೊಳ್ಳುವ ಸಾಧ್ಯತೆ. ಮಕ್ಕಳ ಆರೋಗ್ಯದಲ್ಲಿ ವ್ಯತ್ಯಯವಾದೀತು. ಆರ್ಥಿಕ ಸಂಪನ್ಮೂಲಗಳು ಅಭಿವೃದ್ಧಿಯಾಗುವುದು. ಮಾತಿನ ಬಗ್ಗೆ ಹಿಡಿತ ಅಗತ್ಯ.

ನಿಮ್ಮ ಜನ್ಮದಿನ 30-ಜುಲೈ ಇಂದು ಅತ್ಯಂತ ಶುಭದಾಯಕವಾಗಿದ್ದು, ವ್ಯವಹಾರದಲ್ಲಿ ಹೆಚ್ಚಿನ ಪ್ರಗತಿ ಕಾಣದಿದ್ದರೂ ಯಥಾಸ್ಥಿತಿಯನ್ನು ಕಾಣಬಹುದಾಗಿದೆ. ಹೊಸ ವ್ಯವಹಾರದ ಬಗ್ಗೆ ಚಿಂತನೆ ನಡೆಸಲಿದ್ದೀರಿ. ವಿದ್ಯಾರ್ಥಿಗಳಿಗೆ ವ್ಯಾಸಂಗದಿಂದ ವಿಮುಖರಾಗುವ ಆಲೋಚನೆ ಮೂಡುವ ಸಾಧ್ಯತೆ. ಆರೋಗ್ಯದಲ್ಲಿ ಸಾಧಾರಣೆ.

ಪದಬಂಧ 4673

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಆನೆಯೊಳಗೆ ಪಾದವನ್ನಿಟ್ಟು ತಪ್ಪು ಹೊರಿಸು! (4)
3.ನಿಷ್ಪ್ರಯೋಜಕ ಮಾತು (4)
5.ತಾರ ನುಡಿಸಿದ ತಂತಿ ವಾದ್ಯ (3)
7.ಇದು ಬೇರೆಯವರ ದುಡ್ಡು (4)
9.ತಂಟೆಕೋರನಿಲ್ಲಿ ತಿರುಗಿದ್ದಾನಲ್ಲಾ? (2)
10.ಬಿಡಲು ಯೋಗ್ಯವಾದುದು (2)
11.ಯಜ್ಞೋಪವೀತ ಇಲ್ಲಿದೆ (4)
13.ಸಂತನಿಂದ ಮುಂದುವರೆದ ವಂಶ (3)
16.ಮತಿ ಇಟ್ಟು ಕೊಂಡು ನೀಡಿದ ಒಪ್ಪಿಗೆ (4)
17.ಅಳತೆಗೆ ಮೀರಿದ ಸ್ಥಿತಿ (4)

ಮೇಲಿಂದ ಕೆಳಕ್ಕೆ

1.ಆಲದ ಮರಕ್ಕೊರಗಿರುವ ಸೋಮಾರಿ (3)
2.ನಮ್ಮ ನಾಡ ಹಬ್ಬ (3)
3.ಕೊನೆಗೆ ಹಾರವಿಟ್ಟು ಮಾಡಿದ ವ್ಯಾಪಾರ (4)
4.ಹದಿನೈದು ದಿನಗಳ ಅವಧಿ (2)
6.ನಕ್ಷತ್ರಗಳ ಗುಂಪು (4)
7.ಉತ್ತರದವರು ಪಡೆದುಕೊಂಡ ವೇತನ (3)
8.ಅದೇ ತಾನೆ ಕಡೆದ ಬೆಣ್ಣೆ (4)
12.ಬ್ರಹ್ಮನ ಇನ್ನೊಂದು ಹೆಸರು (4)
13. ಗತಿಯಲ್ಲಿ ಕೊನೆಗೊಂಡಿರುವ ವಿಷಯ (3)
14. ಈತ ತಿರುಪೆ ಬೇಡುವವನು (3)
15. ಕುದುರೆಯಿಲ್ಲಿ ತಿರುಗಿ ನಿಂತಿದೆ (2)



4672ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಿದ್ಧಾಂತ 2.ಆವರಣ 4.ಗರ್ಭಗುಡಿ 6.ವಸಂತ 7.ಡಕ 9.ಕಣಕ 11.ರಗ 13.ಅಲೆತ 14.ಟಕ್ಕುತನ 16.ತಾಯಿಮನೆ 17.ಅರಳೆ

ಮೇಲಿಂದ ಕೆಳಕ್ಕೆ: 1.ಸಿರಿಗನ್ನಡ 2.ಆಪ್ತ 3.ರಕ್ತಸಂಚಾರ 5.ಡಿನ್ನಕ 8.ಕಡಲೆಕಾಯಿ 10.ಕರಟ 12.ಗಮನಸೆಳೆ 15.ಸೋನೆ

ಸುಡೊಕು 5059

	2			3		4		6
4		1	5		2		8	
				4			5	1
	9				4	6		
6		2		8				5
		4	2			3		
				2				9
	1	3	8		5			
9	4		6		3	8		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5058 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

ಪರಸ್ಪರ ಅಂತರ ಕಾಯ್ದುಕೊಳ್ಳಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com or Scan QR code to access booking form

9ನೇ ವರ್ಷದ ಪುಣ್ಯಸ್ಮರಣೆ



ಕೆ ಎಸ್ ಮೊದಲಿಯಾರ್
(ದಿವಂಗತ ಕುಟ್ಟಿಯಪ್ಪರವರ ಪುತ್ರ)
ನಿಧನ : 31.07.2012

ನೀವು ನಮ್ಮನ್ನಗಲಿ ಇಂದಿಗೆ ಒಂಬತ್ತು ವರ್ಷಗಳು ಕಳೆದವು. ನಿಮ್ಮ ನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗುಳಿದಿದೆ. ಅನುದಿನವೂ, ಅನುಕ್ಷಣವೂ ನಿಮ್ಮ ಸ್ಮರಣೆಯೇ ನಮಗೆ ದಿವ್ಯ ಚೇತನವಾಗಿದೆ.

ಸದಾ ನಿಮ್ಮನ್ನು ಸ್ಮರಿಸುವ : ಪತ್ನಿ ಚಂದ್ರಮ್ಮ ಮಕ್ಕಳು ಹಾಗೂ ಕುಟುಂಬವರ್ಗದವರು

ಸವಿನೆನಪು

ಜನನ : 11.01.1981 ನಿಧನ : 30.07.2007

ನಾಗವೇಣಿ ಎನ್ ವಿ

ತಾವರೆಯ ಮೇಲಿನ ಹನಿ ಮುತ್ತಾಗಿ ನಮ್ಮೆಲ್ಲರ ಬದುಕಿನ ಹನಿ ಸಿಂಚನವಾಗಿ ಬೆಳಗಿದ ತಾರೆ
ಇಂತಿ ನಿನ್ನ ನೆನಪಿನಲ್ಲಿ
ಎನ್.ಪಿ. ವೆಂಕಟಸ್ವಾಮಿ ಮತ್ತು ಕುಟುಂಬದವರು
(ಮಾಜಿ ಅಧ್ಯಕ್ಷರು, ಪಿ.ಎಲ್.ಡಿ. ಬ್ಯಾಂಕ್)
ನಾಗಮಂಗಲ, ದೇವನಹಳ್ಳಿ ತಾಲ್ಲೂಕು.

LOOKING FOR JOB OPPORTUNITY

Refer Classifieds on Wednesday

17ನೇ ವರ್ಷದ ಚಿರಸ್ಮರಣೆ

ಶ್ರೀ ಸಿದ್ಧಲಿಂಗಯ್ಯ ಬಿ.ಇ
ಸೂಪರಿಂಟೆಂಡೆಂಟ್ ಇಂಜಿನಿಯರ್ ಪಿ.ಡಬ್ಲ್ಯು.ಡಿ (ನಿವೃತ್ತ)
ಜನನ: 20-05-1938 ನಿಧನ: 30-07-2004

ನೀವು ನಮ್ಮನಗಲಿ ಇಂದಿಗೆ 17 ವರ್ಷಗಳಾಯಿತು ಸದಾ ನಿಮ್ಮ ಸವಿ ನೆನಪಿನಲ್ಲಿರುವ

ಇಂತಿ ದುಃಖತಪ್ತರು

ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಮತ್ತು ಕುಟುಂಬ ವರ್ಗದವರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಬೈಕ್ ರೈಡರ್ಸ್ ಬೇಕಾಗಿದ್ದಾರೆ, ಸಂಪಾದಿಸಿ ತಿಂಗಳಿಗೆ 30000 ಹಾಗೂ ಬೈಕ್ ಚಲಾಯಿಸಿ ನಿಮ್ಮ ಬಿಡುವಿನ ಸಮಯದಲ್ಲಿ ಖಚಿತಾ ಸಂಪಾದನೆ ಅಧಿಕ ಇನ್ಸೆಂಟಿವ್ ವಿಮೆ ಹಾಗೂ ಅಧಿಕ ಪ್ರಯೋಜನಗಳು ಕೂಡಲೇ ಕರೆ ಮಾಡಿ : 080-41434143

Marketing & Sales

REQUIRED MARKETING MANAGER/ OFFICER for Indias well known solar water heater manufacturing company for their Karnataka operations. Candidates with any graduation having experience in similar field may apply. Email to hr@sudarshansaur.com

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

Wanted

ಖಾಸಗಿ ಬ್ಯಾಂಕ್ ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ 15000-28000 ಸಂಪರ್ಕಿಸಿರಿ 9980814578, 9980812378.

ಬಂದ ದಿನವೇ ಕೆಲಸ (ಮಾರ್ಕೆಟಿಂಗ್‌ಅಲ್ಲ) MNC ಕಂಪನಿಗಳಿಗೆ Primary,SSLC, PUC, ITI, any Degree Pass/Fail. ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI/ PFನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ.15,000 86,000. 7259685221, 7760116548

ಮನೆಯಿಂದಲೆ ಕುಳಿತು ಡಾಟಾ ಎಂಟ್ರಿ ಫಾರಂಫಿಲ್ಲಿಂಗ್ ಬರವಣಿಗೆ Offline. Weekly ಪೇಮೆಂಟ್ಸ್ 3000- 5000. ಸಂಪರ್ಕಿಸಿ: 7624918246, 7259848246.

General

ಇಂದೇ ಬೇಕಾಗಿದ್ದಾರೆ ಬೆಂಗಳೂರಿನ ಸುಪ್ರಸಿದ್ಧ ಕಂಪನಿಯಲ್ಲಿ ಆಫೀಸ್ ಕೆಲಸಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ (SSLC to Any Degree Pass/Fail) ಸಂಬಳ 18,000/-ರಿಂದ 65,000/- ದವರೆಗೆ ವಸತಿಯೂಟದೊಂದಿಗೆ ಇಂದೇ ಸಂಪರ್ಕಿಸಿ: ಸುಪ್ರಿಯಾ- 9538032277, 9538075599

100%ಬಂದ ದಿನವೇ ಕೆಲಸ (ಮಾರ್ಕೆಟಿಂಗ್‌ಅಲ್ಲ) ಬೆಂಗಳೂರಿನ Private Limitedಕಂಪನಿಗಳಲ್ಲಿ ಕೆಲಸಮಾಡಲು7th,SSLC,PUC, Degree,Diploma, ITI,BE(Pass/fail) ಆದಂತಹವರು 1684ಯುವಕರು ಪರ್ಮನೆಂಟ್ ಹುದ್ದೆಗಳಿಗೆ ತಕ್ಷಣ ಬೇಕಾಗಿದ್ದಾರೆ(ವಿದ್ಯರ್ಹತೆಯಿಲ್ಲದವರೂ) ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 13,615-24,815/- ಸಂಪರ್ಕಿಸಿ:9900917474, 9900476464

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ಯುವಕ/ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ7th, SSLC,PUC,ITI Degree Pass/Fail ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/PFನೊಂದಿಗೆ ಸಂಬಳ:16,500ರಿಂದ 45000/-ದವರೆಗೆ. 9538250222, 9538191333

ತಕ್ಷಣ ಬೇಕಾಗಿದ್ದಾರೆ ಬೆಂಗಳೂರು&ಕರ್ನಾಟಕದಾದ್ಯಂತ ಕಂಪನಿಗಳಿಗೆ, ಆಫೀಸ್‌ಗಳಿಗೆ,ಬ್ಯಾಂಕ್‌ಗಳಿಗೆ,ಶೋರೂಂಗಳಿಗೆಯಾವುದೇ ವಿದ್ಯಾರ್ಹತೆಯಿರುವ ವಿದ್ಯಾರ್ಹತೆಯಿಲದವರಿಗೂ ವಸತಿಯೂಟದೊಂದಿಗೆ ಸಂಬಳ+OT,17,200/- 47000/-.8884412822, 9986083666

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800- 45000/-. 9980295449, 9902839010

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ವಿಡಿಯೋಕಾನ್, TVS, ಟಯೋಟ, ಬ್ರಿಟಾನಿಯಾ ಕಂಪನಿಗಳಿಗೆ SSLC, PUC, ITI ನವರು ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿ ಸಂಬಳ: 16,600-56,000/- ವಸತಿಯೂಟವಿದೆ. 9611715755

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್‌ಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9141634619

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8088330330

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★ಉಚಿತ ಭವಿಷ್ಯ★ ಖಚಿತ ಪರಿಹಾರ:ನಿಮ್ಮ ಸಮಸ್ಯೆಗಳು ಯಾವುದೇ ಇರಲಿ ಸ್ತ್ರೀವಶೀಕರಣ, ಪುರುಷವಶೀಕರಣ ಲೈಂಗಿಕ ಸಮಸ್ಯೆ,ನಿಮ್ಮ ಯಾವುದೇ ಸಮಸ್ಯೆಗಳಿದ್ದರು 100% ಶಾಶ್ವತ ಪರಿಹಾರ.ಮಂತ್ರಾಲಯ. ಪಂಡಿತ್.ಸಾಗರ್ ಶರ್ಮ.8217374106

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★ಶ್ರೀಸಾಯಿಗುರು ಜ್ಯೋತಿಷ್ಯ★ ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಸಂತಾನಭಾಗ್ಯ, ಇನ್ಯಾವುದೇ ಎಲ್ಲಿಯೂ ಪರಿಹಾರ ಕಾಣದ ಎಷ್ಟೇಕಠಿಣವಾದ ಗುಪ್ತಸಮಸ್ಯೆಗಳಿಗೆ100% ಪರಿಹಾರ. 7829724990

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ನಿಮ್ಮ ನಿಗೂಢ ಹಾಗೂ ಕಠಿಣ ಸಮಸ್ಯೆಗಳಿಗೆ ಕೇವಲ 1 ಗಂಟೆಯಲ್ಲಿ ಪರಿಹಾರ ಇದು ಚಮತ್ಕಾರ ಅಲ್ಲ. ಸಿದ್ಧಿಸಾಧಕರ ಸಾಧನೆ: 9148244231

ಸ್ತ್ರೀವಶೀಕರಣ, ಪುರುಷವಶೀಕರಣ ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

ವ್ಯಾಪಾರ

Business Offers

General

ಬಿಸಿನೆಸ್ ಡೆವಲಪ್ಮೆಂಟ್ ಹಾಗೂ ಉದ್ಯೋಗ ಅವಕಾಶಕ್ಕಾಗಿ ಸಂಪರ್ಕಿಸಿ: 8884859668 8904075423 7411795258

ವೈವಾಹಿಕ

Brides Wanted

Brahmin

TAMIL IYER IT executive MNC, Oct 77,5'7', Vegetarian seeks suitable girl from brahmin community- all sects contact Whatsapp no +1(818)9279760 or 9884075992

ಪ್ರವಾಸ

Travel

ವಿಮಾನ/ A/C ಬಸ್ಸಿನಲ್ಲಿ 03.08.2021, 14.09.2021, 7ದಿನಗಳು ಅಹಮದಾಬಾದ್ ಪಟೇಲ್ ಪ್ರತಿಮೆ, ದ್ವಾರಕಾ,ಸೋಮನಾಥ್, ನಿಷ್ಕಳಂಕ ಮಹಾದೇವ. 22.08.2021, 23.09.2021, 8/12 ದಿನಗಳು ಕಾಶಿ,ಗಯಾ, ಅಲಹಾಬಾದ್. 12.09.2021, 24.09.2021, 14ದಿನಗಳು. ಚಾರ್ಧಾಮ್‌ಯಾತ್ರೆ ಅನಿತಾ ಟ್ರಾವಲ್ಸ್, ಶೇಷಾದ್ರಿಪುರ, ಬೆಂಗಳೂರು-20. 7760884305, 8660701232

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION SPECIAL

We are coming out with special offer for Admission Notice, Education Success Congratulation Ads

DH Classifieds More value, more impact

For details contact: Jerry: 9731810277 Vishal: 9845114560 Tanveer: 9886213331

E-mail: dhclassifieds@deccanherald.co.in

ಲಕ್ಷ್ಮೀ: ಅಂತರಂಗದ ಶ್ರೀ

• ಎಸ್. ಸೂರ್ಯಪ್ರಕಾಶ ಪಂಡಿತ್

ನಮ್ಮ ವ್ಯಕ್ತಿತ್ವಕ್ಕೆ ಬೇಕಾದ ಎಲ್ಲ ವಿಧದ ಏಳಿಗೆಯನ್ನೂ ಸಂಪತ್ತನ್ನೂ ಲಕ್ಷ್ಮಿಯಲ್ಲೇ ಕಾಣಲಾಗಿದೆ. ಇಂದು ಜಗತ್ತಿಗೇ ಬೇಕಾದ ಸಂಪತ್ತು ಎಂದರೆ ಅದು ಆರೋಗ್ಯವೇ ಹೌದು. ಅದಕ್ಕೂ ಒಡತಿ ಲಕ್ಷ್ಮೀಯೇ ಹೌದು.

ಇಂದು ಆಷಾಢ ಶುಕ್ರವಾರ

ಆಷಾಢಮಾಸದ ಶುಕ್ರವಾರಗಳಂದು ಲಕ್ಷ್ಮಿಯನ್ನು ಪೂಜಿಸುವ ವಾಡಿಕೆಯುಂಟು. ಕೆಲವರ ಪಾಲಿಗೆ ಆಷಾಢದಲ್ಲಿ ಯಾವುದೇ ಶುಭಕಾರ್ಯಗಳನ್ನು ನಡೆಸಲು ಹಿಂಜರಿಕೆ. ಆದರೆ ಲಕ್ಷ್ಮಿಪೂಜೆಯನ್ನು ಮಾತ್ರ ಎಲ್ಲರೂ ಧೈರ್ಯವಾಗಿಯೇ ಆಚರಿಸಬಹುದೆನ್ನಿ! ಏಕೆಂದರೆ ಎಲ್ಲರಿಗೂ ಲಕ್ಷ್ಮಿಯ ಅನುಗ್ರಹ ಬೇಕೇ ಬೇಕು, ಅಲ್ಲವೆ?

ನಮ್ಮಲ್ಲಿ ಲಕ್ಷ್ಮೀ ಎಂದ ಕೂಡಲೇ ಗಮನ ಒಂದೇ ಕಡೆಗೆ ಹೋಗುತ್ತದೆ; ಅದೇ ದುಡ್ಡು, ಸಂಪತ್ತು. ಆದರೆ ಲಕ್ಷ್ಮೀ ಎಂದರೆ ಅಷ್ಟು ಮಾತ್ರವೇ ಅಲ್ಲ, ಜೀವನಕ್ಕೆ ಒದಗುವ ಎಲ್ಲ ಬಗೆಯ ಸಂಪತ್ತು ಕೂಡ ಅವಳ ಸ್ವರೂಪವೇ ಹೌದು. ಲಕ್ಷ್ಮೀತತ್ತ್ವವನ್ನು ಈ ಶ್ಲೋಕವೊಂದು ಸೊಗಸಾಗಿ ನಿರೂಪಿಸುತ್ತದೆ:

ವಕ್ತ್ರಾಬ್ಜೇ ಭಾಗ್ಯಲಕ್ಷ್ಮೀಃ ಕರತಲಕಮಲೇ ಸರ್ವದಾ ಧ್ಯಾನಲಕ್ಷ್ಮೀಃ
ದೋರ್ದಂಡೇ ವೀರಲಕ್ಷ್ಮೀಃ ಹೃದಯಸರಸಿಜೇ ಭೂತಕಾರುಣ್ಯಲಕ್ಷ್ಮೀಃ
ಖಡ್ಗಾಗ್ರೇ ಶೌರ್ಯಲಕ್ಷ್ಮೀಃ ನಿಖಿಲಗುಣಗಣಾಡಂಬರೇ ಕೀರ್ತಿಲಕ್ಷ್ಮೀಃ
ಸರ್ವಾಂಗೇ ಸೌಮ್ಯಲಕ್ಷ್ಮೀಃ ಸಪದಿ ಭವತು ಮೇ ಧರ್ಮಮೋಕ್ಷಾರ್ಥಸಿದ್ಧ್ಯೈ

'ನನ್ನ ಮುಖಕಮಲವನ್ನು ಭಾಗ್ಯಲಕ್ಷ್ಮಿಯೂ ಕರಕಮಲದಲ್ಲಿ ಧಾನ್ಯಲಕ್ಷ್ಮಿಯೂ ತೋಳುಗಳಲ್ಲಿ ವೀರಲಕ್ಷ್ಮಿಯೂ ಹೃದಯಕಮಲದಲ್ಲಿ ಭೂತದಯಾಲಕ್ಷ್ಮಿಯೂ ಖಡ್ಗದ ತುದಿಯಲ್ಲಿ ಶೌರ್ಯಲಕ್ಷ್ಮಿಯೂ ಎಲ್ಲ ಗುಣಗಳನ್ನು ಅಭಿವ್ಯಕ್ತಿಸುವಾಗ ಕೀರ್ತಿಲಕ್ಷ್ಮಿಯೂ ಎಲ್ಲ ಅಂಗಗಳಲ್ಲಿಯೂ ಸೌಮ್ಯಲಕ್ಷ್ಮಿಯೂ ನನಗೆ ಒಡನೆ ಒದಗಲಿ; ಅಲ್ಲೆಲ್ಲ ಸದಾ ನೆಲಸುವಂತಾಗಲಿ; ಅವುಗಳಿಂದ ಧರ್ಮವೂ ಮೋಕ್ಷವೂ ಸಿದ್ಧಿಸಲಿ' ಎಂಬುದು ಈ ಶ್ಲೋಕದ ತಾತ್ಪರ್ಯ.

ನಮ್ಮ ವ್ಯಕ್ತಿತ್ವಕ್ಕೆ ಬೇಕಾದ ಎಲ್ಲ ವಿಧದ ಏಳಿಗೆಯನ್ನೂ ಸಂಪತ್ತನ್ನೂ ಲಕ್ಷ್ಮಿಯಲ್ಲಿ ಕಂಡಿರುವುದು ಇಲ್ಲಿ ಎದ್ದುಕಾಣುವ ವಿವರ. ಇಹಕ್ಕೂ ಪರಕ್ಕೂ ಬೇಕಾದ ಸಂಪತ್ತೆಲ್ಲವನ್ನೂ ನೀಡುವವಳು ಅವಳೇ ಎಂಬುದು ಇಲ್ಲಿಯ ನಿಲವು. ನಮ್ಮ ಎಲ್ಲ ಬಯಕೆಗಳನ್ನು, ಎಂದರೆ ಕಾಮವನ್ನು, ಪೂರೈಸಿಕೊಳ್ಳಲು ಬೇಕಾಗುವ ಸಾಧನಗಳೆಲ್ಲವನ್ನೂ, ಎಂದರೆ ಅರ್ಥವನ್ನು ದಯಪಾಲಿಸುವವಳು ಅವಳೇ; ಅದನ್ನು ಸರಿಯಾದ ದಾರಿಯಲ್ಲಿ ವಿನಿಯೋಗಿಸಿಕೊಳ್ಳುವಂಥ ಬುದ್ಧಿಯನ್ನು, ಎಂದರೆ ಧರ್ಮವನ್ನು ಎಚ್ಚರಿಸುವವಳೂ ಅವಳೇ. ಹೀಗೆ ಅವಳು ಲೌಕಿಕ ಸುಖ–ಸಂತೋಷಗಳಿಗೆ ಮಾತ್ರವೇ ಒಡತಿಯಲ್ಲ; ಅವಳು ಅಲೌಕಿಕ ಆನಂದ, ಎಂದರೆ ಮೋಕ್ಷಕ್ಕೂ ಕಾರಣಳು. ಹೀಗಾಗಿ ನಾವು ಮೊದಲಿಗೆ ಲಕ್ಷ್ಮೀತತ್ತ್ವವನ್ನು ನಮ್ಮ ಸಂಕುಚಿತ ವ್ಯಾಖ್ಯಾನದಿಂದ ಬಿಡುಗಡೆಗೊಳಿಸಬೇಕಾಗಿದೆ!

ಅಷ್ಟಲಕ್ಷ್ಮಿಗಳು ಎಂಬ ಎಣಿಕೆಯೂ ಉಂಟು; ಧನಲಕ್ಷ್ಮೀ, ಧಾನ್ಯಲಕ್ಷ್ಮೀ, ಸಂತಾನಲಕ್ಷ್ಮೀ, ವಿದ್ಯಾಲಕ್ಷ್ಮೀ, ಶೌರ್ಯಲಕ್ಷ್ಮೀ, ಕೀರ್ತಿಲಕ್ಷ್ಮೀ, ಸೌಮ್ಯಲಕ್ಷ್ಮೀ ಮತ್ತು ವಿಜಯಲಕ್ಷ್ಮೀ. ಇಲ್ಲೂ ಕೂಡ ಲಕ್ಷ್ಮೀತತ್ತ್ವದ ವೈಶಾಲ್ಯವೇ ಅಡಗಿರುವಂಥದ್ದು. ವಿದ್ಯೆಗೂ ಅವಳೇ ದೇವತೆ; ಕೀರ್ತಿಗೂ ಅವಳೇ ದೇವತೆ. ಹೀಗೆಲ್ಲ ಸೂಚಿಸುವುದರಲ್ಲೂ ಸ್ವಾರಸ್ಯವುಂಟು. ನಾವು ಕೇವಲ 'ಹಣ'ವನ್ನು ಮಾತ್ರವೇ ಸಂಪತ್ತು, ಲಕ್ಷ್ಮೀ ಎಂದು ತಿಳಿದುಕೊಂಡಿರುತ್ತೇವೆ. ಆದರೆ ನಮ್ಮ ವಿದ್ಯೆ, ಶೌರ್ಯ, ಕೀರ್ತಿ, ನೆಮ್ಮದಿ – ಇವೆಲ್ಲವೂ ಸಂಪತ್ತುಗಳೇ ಹೌದು. ಸಂತಾನವನ್ನೂ ಲಕ್ಷ್ಮೀ ಎಂದೇ ಇಲ್ಲಿ ಸಮೀಕರಿಸಲಾಗಿದೆ. ನಮ್ಮ ಒಳ್ಳೆಯ ಮಕ್ಕಳು ನಮಗೆ ಸಂಪತ್ತು ಅಲ್ಲದೆ ಮತ್ತೇನು?

'ಲಕ್ಷ್ಮೀ' ಎಂದರೆ ಎಲ್ಲವನ್ನೂ ಯಾವಾಗಲೂ ನೋಡುತ್ತಿರುವವಳು ಎಂದು ಅರ್ಥಮಾಡುತ್ತಾರೆ, ವಿದ್ವಾಂಸರು (ಲಕ್ಷಯತಿ ಸರ್ವಂ ಸದಾ ಇತಿ ಲಕ್ಷ್ಮೀಃ). ನಮ್ಮ ಜೀವನದ ಪ್ರತಿ ಕ್ಷಣವೂ ಲಕ್ಷ್ಮಿಯ ನೋಟದ ವ್ಯಾಪ್ತಿಯಲ್ಲೇ ಇದೆ ಎಂದಾಯಿತು. ಹೀಗಾಗಿ ಪ್ರತಿ ಕ್ಷಣವೂ ನಾವು ಎಚ್ಚರದಿಂದ ಹೆಜ್ಜೆ ಇಡಬೇಕು; ಧರ್ಮಮಾರ್ಗದಲ್ಲಿ ನಡೆಯಬೇಕು; ಈ ಮಾರ್ಗದಲ್ಲಿ ನಮ್ಮ ವಿದ್ಯೆ–ವಿನಯಗಳನ್ನೂ ಮನೆ–ಮಕ್ಕಳನ್ನೂ ದೇಹ–ಬುದ್ಧಿಗಳನ್ನೂ ಸರಿಯಾದ ದಿಕ್ಕಿನಲ್ಲಿ ಮುನ್ನಡೆಸಬೇಕು. ಆಗ ಅವಳ ನೋಟ ನಮ್ಮ ಕಡೆಗೆ ಪ್ರಸನ್ನವಾಗುತ್ತದೆ; ಅವಳ ನೋಟದಿಂದ ನಮ್ಮ ಜೀವನವೇ ಸಂತೋಷ–ನೆಮ್ಮದಿಗಳ ಸಂಪತ್ತಿನಿಂದ ತುಂಬುತ್ತದೆ. ಹೀಗಾಗಿ ನಮ್ಮ ಅಂತರಂಗದಲ್ಲಿ ಲಕ್ಷ್ಮೀತತ್ತ್ವ ನೆಲೆಗೊಂಡರೆ ಆಗ ನಮ್ಮ ಬಾಹ್ಯಪ್ರಪಂಚದ ಎಲ್ಲ ಕಡೆಗಳಲ್ಲೂ ಅವಳೇ ಕಾಣಿಸಿಕೊಳ್ಳುತ್ತಾಳೆ. ಇಂದು ಜಗತ್ತಿಗೇ ಬೇಕಾದ ಸಂಪತ್ತು ಎಂದರೆ ಅದು ಆರೋಗ್ಯವೇ ಹೌದು. ಅದಕ್ಕೂ ಒಡತಿ ಲಕ್ಷ್ಮೀಯೇ ಹೌದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,709
ಇಂದಿನ ಅಂತ್ಯ	15,778
▲	69
ದಿನದ ಗರಿಷ್ಠ	15,817

ವಿನಿಮಯ ದರ

$ ಡಾಲರ್	74.29
£ ಪೌಂಡ್	103.65
€ ಯುರೊ	88.22
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹475
12 ಮೊಟ್ಟೆಗೆ	₹65

ಮೈಸೂರು

100 ಮೊಟ್ಟೆಗೆ	₹475

ಮೌಲ್ಯದ ಲೆಕ್ಕದಲ್ಲಿ ಶೇ 23ರಷ್ಟು ಹೆಚ್ಚಳ: ವಿಶ್ವ ಚಿನ್ನ ಸಮಿತಿ ವರದಿ

ಚಿನ್ನಕ್ಕೆ ಬೇಡಿಕೆ ಶೇ 19ರಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದಲ್ಲಿ ಚಿನ್ನದ ಬೇಡಿಕೆಯು ಏಪ್ರಿಲ್–ಜೂನ್ ತ್ರೈಮಾಸಿಕ ಅವಧಿಯಲ್ಲಿ ಶೇಕಡ 19.2ರಷ್ಟು ಏರಿಕೆ ಆಗಿದ್ದು, 76.1 ಟನ್‌ಗೆ ತಲುಪಿದೆ ಎಂದು ವಿಶ್ವ ಚಿನ್ನ ಸಮಿತಿ (ಡಬ್ಲ್ಯುಜಿಸಿ) ಹೇಳಿದೆ.

ಡಬ್ಲ್ಯುಜಿಸಿ ಸಿದ್ಧಪಡಿಸಿರುವ 2021ರ ಚಿನ್ನದ ಬೇಡಿಕೆಯ ಕುರಿತ ಎರಡನೇ ತ್ರೈಮಾಸಿಕದ ವರದಿಯ ಪ್ರಕಾರ, 2020ರ ಕ್ಯಾಲೆಂಡರ್ ವರ್ಷದ ಎರಡನೇ ತ್ರೈಮಾಸಿಕದಲ್ಲಿ 63.8 ಟನ್‌ಗಳಷ್ಟು ಚಿನ್ನಕ್ಕೆ ಬೇಡಿಕೆ ಇತ್ತು.

ಮೌಲ್ಯದ ಲೆಕ್ಕದಲ್ಲಿ ಚಿನ್ನದ ಬೇಡಿಕೆಯು ಶೇ 23ರಷ್ಟು ಹೆಚ್ಚಾಗಿದ್ದು ₹ 26,600 ಕೋಟಿಗಳಿಂದ ₹ 32,810 ಕೋಟಿಗಳಿಗೆ ಏರಿಕೆ ಆಗಿದೆ.

ಚಿನ್ನ ಆಮದು

120 ಟನ್ 2021ರ ಎರಡನೇ ತ್ರೈಮಾಸಿಕ

10.9 ಟನ್ 2020ರ ಎರಡನೇ ತ್ರೈಮಾಸಿಕ

2021ರ ಮೊದಲಾರ್ಧದಲ್ಲಿ ಚಿನ್ನದ ಬೇಡಿಕೆಯು 157.6 ಟನ್‌ಗಳಷ್ಟಾಗಿದೆ. 2019ರ ಮೊದಲಾರ್ಧದಲ್ಲಿ ಇದ್ದ ಬೇಡಿಕೆಗೆ ಹೋಲಿಸಿದರೆ ಶೇ 46ರಷ್ಟು ಇಳಿಕೆ ಆಗಿದೆ.

2021ರ ಎರಡನೇ ತ್ರೈಮಾಸಿಕದ ವೇಳೆಗೆ ಕೋವಿಡ್ ಸೋಂಕು ಹೆಚ್ಚಾಗಿದ್ದರಿಂದ ಸ್ಥಳೀಯ ಮಟ್ಟದಲ್ಲಿ ಲಾಕ್‌ಡೌನ್ ಜಾರಿಗೊಂಡಿತು. ಕಳೆದ ವರ್ಷ ಅನಿರೀಕ್ಷಿತವಾಗಿ ದೇಶದಾದ್ಯಂತ ಲಾಕ್‌ಡೌನ್ ಜಾರಿಯಾಗಿದ್ದರಿಂದ ಆಗಿದ್ದ ಪರಿಣಾಮಕ್ಕೆ ಹೋಲಿಸಿದರೆ ಈ ಬಾರಿ ವ್ಯಾಪಾರಸ್ಥರು ಮೊದಲೇ ಸಿದ್ಧತೆ ನಡೆಸಿದ್ದರಿಂದ ಹೆಚ್ಚಿನ ದುಷ್ಪರಿಣಾಮ ಉಂಟಾಗಲಿಲ್ಲ.

ಎರಡನೇ ತ್ರೈಮಾಸಿಕದಲ್ಲಿ ಬೇಡಿಕೆಯು ಶೇ 19.2ರಷ್ಟು ಹೆಚ್ಚಾಗಿದೆಯಾದರೂ ಅಕ್ಷಯ ತೃತೀಯ ಮತ್ತು ಮದುವೆ ಸಮಾರಂಭಗಳ ಮೇಲೆ ಕೋವಿಡ್ ತೀವ್ರ ಪರಿಣಾಮ ಬೀರಿದ್ದರಿಂದ ಬೇಡಿಕೆ ಹೆಚ್ಚು ತಗ್ಗುವಂತಾಯಿತು ಎಂದು ಡಬ್ಲ್ಯುಜಿಸಿನ ಭಾರತದ ಪ್ರಾದೇಶಿಕ ಸಿಇಒ ಸೋಮಸುಂದರಂ ಪಿಆರ್ ತಿಳಿಸಿದ್ದಾರೆ.

ಚಿನ್ನಾಭರಣ ಬೇಡಿಕೆಯು ಶೇ 29ರಷ್ಟು ಹೆಚ್ಚಾಗಿ ₹ 18,350 ಕೋಟಿಗಳಿಂದ ₹ 23,750 ಕೋಟಿಗಳಿಗೆ ಏರಿಕೆ ಕಂಡಿದೆ.

ಒಟ್ಟಾರೆ ಚಿನ್ನದ ಮೇಲಿನ ಹೂಡಿಕೆಯು ಶೇ 6ರಷ್ಟು ಹೆಚ್ಚಾಗಿದ್ದು 21 ಟನ್‌ಗಳಿಗೆ ತಲುಪಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 19.8 ಟನ್‌ಗಳಷ್ಟಿತ್ತು.

ಚಿನ್ನದ ಹೂಡಿಕೆಗಳಿಗೆ ಬೇಡಿಕೆಯು ಮೌಲ್ಯದ ಲೆಕ್ಕದಲ್ಲಿ ₹ 8,250 ಕೋಟಿಗಳಿಂದ ₹ 9,060 ಕೋಟಿಗಳಿಗೆ ಹೆಚ್ಚಾಗಿದೆ.

ಸಂಕ್ಷಿಪ್ತ ಸುದ್ದಿ

ಟಾಟಾ ತೆಕ್ಕೆಗೆ ತೇಜಸ್ ನೆಟ್‌ವರ್ಕ್ಸ್

ನವದೆಹಲಿ (ಪಿಟಿಐ): ದೂರಸಂಪರ್ಕ ವಲಯದ ಕಂಪನಿ ತೇಜಸ್ ನೆಟ್‌ವರ್ಕ್ಸ್‌ನ ಬಹುಪಾಲು ಷೇರುಗಳನ್ನು ಟಾಟಾ ಸನ್ಸ್‌ನ ಅಂಗಸಂಸ್ಥೆಯೊಂದು ಖರೀದಿಸಲಿದೆ. ಹಂತ ಹಂತವಾಗಿ ನಡೆಯಲಿರುವ ಈ ಪ್ರಕ್ರಿಯೆಯು ಒಟ್ಟು ₹ 1,890 ಕೋಟಿ ಮೌಲ್ಯದ್ದು ಎಂದು ತೇಜಸ್ ನೆಟ್‌ವರ್ಕ್ಸ್ ತಿಳಿಸಿದೆ.

ಟಾಟಾ ಸನ್ಸ್‌ನ ಅಂಗಸಂಸ್ಥೆ ಆಗಿರುವ ಪ್ಯಾನಾಟೋನ್ ಫಿನ್‌ವೆಸ್ಟ್ ಕಂಪನಿಯ ಜೊತೆ ತೇಜಸ್ ನೆಟ್‌ವರ್ಕ್ಸ್ ಒಪ್ಪಂದಕ್ಕೆ ಸಹಿ ಹಾಕಿದೆ. 'ಈ ಪಾಲುದಾರಿಕೆಯಿಂದಾಗಿ ನಮಗೆ ಅಗತ್ಯ ಪ್ರಮಾಣದ ಹಣಕಾಸಿನ ಸಂಪನ್ಮೂಲ ಲಭ್ಯವಾಗಲಿದೆ' ಎಂದು ತೇಜಸ್ ನೆಟ್‌ವರ್ಕ್ಸ್‌ನ ಅಧ್ಯಕ್ಷ ವಿ. ಬಾಲಕೃಷ್ಣನ್ ಹೇಳಿದ್ದಾರೆ.

ತೇಜಸ್ ನೆಟ್‌ವರ್ಕ್ಸ್ ಕಂಪನಿಯು ದೂರಸಂಪರ್ಕ ಸೇವಾ ವಲಯದ ಕಂಪನಿಗಳಿಗೆ, ಅಂತರ್ಜಾಲ ಸೇವೆ ಒದಗಿಸುವವರಿಗೆ ನೆಟ್‌ವರ್ಕ್ ಸಂಬಂಧಿತ ಉತ್ಪನ್ನಗಳನ್ನು ಪೂರೈಸುತ್ತದೆ.

46.1 ಲಕ್ಷ ಗ್ರಾಹಕರನ್ನು ಕಳೆದುಕೊಂಡ ಏರ್‌ಟೆಲ್

ನವದೆಹಲಿ (ಪಿಟಿಐ): ಭಾರ್ತಿ ಏರ್‌ಟೆಲ್ ಕಂಪನಿಯು ಮೇ ತಿಂಗಳಿನಲ್ಲಿ 46.1 ಲಕ್ಷ ಮೊಬೈಲ್ ಬಳಕೆದಾರರನ್ನು ಕಳೆದುಕೊಂಡಿದ್ದರೆ ರಿಲಯನ್ಸ್ ಜಿಯೊ ಕಂಪನಿಯು ಇದೇ ಅವಧಿಯಲ್ಲಿ 35.54 ಲಕ್ಷ ಬಳಕೆದಾರರನ್ನು ಗಳಿಸಿಕೊಂಡಿದೆ.

ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ಈ ಮಾಹಿತಿ ನೀಡಿದೆ. ಮೇ ತಿಂಗಳಿನಲ್ಲಿ ಭಾರತದ ಮೊಬೈಲ್ ಮಾರುಕಟ್ಟೆಯು 62.7 ಲಕ್ಷ ಬಳಕೆದಾರರನ್ನು ಕಳೆದುಕೊಂಡಿದೆ. ಇದರಿಂದ ಒಟ್ಟಾರೆ ಬಳಕೆದಾರರ ಸಂಖ್ಯೆಯು 117.6 ಕೋಟಿಗೆ ಇಳಿಕೆ ಕಂಡಿದೆ.

ಮೇ ತಿಂಗಳಿನಲ್ಲಿ ಜಿಯೊಗೆ ಹೊಸದಾಗಿ 35.54 ಲಕ್ಷ ಮೊಬೈಲ್ ಬಳಕೆದಾರರು ಸೇರ್ಪಡೆ ಆಗಿದ್ದು, ಒಟ್ಟು ಬಳಕೆದಾರರ ಸಂಖ್ಯೆ 43.12 ಕೋಟಿಗೆ ಏರಿಕೆ ಆಗಿದೆ. ವೊಡಾಫೋನ್ ಐಡಿಯಾ ಕಂಪನಿಯು ಸಹ 42.8 ಲಕ್ಷ ಬಳಕೆದಾರರನ್ನು ಕಳೆದುಕೊಂಡಿದ್ದು ಒಟ್ಟು ಬಳಕೆದಾರರ ಸಂಖ್ಯೆ 27.7 ಕೋಟಿಗೆ ತಗ್ಗಿದೆ.

ಎಂಆರ್‌ಪಿಎಲ್: ₹ 85 ಕೋಟಿ ನಷ್ಟ

ಮಂಗಳೂರು: ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್) ಪ್ರಸಕ್ತ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ₹ 85.80 ಕೋಟಿ ನಷ್ಟ ಅನುಭವಿಸಿದೆ. ಮಾರ್ಚ್ 31ಕ್ಕೆ ಕೊನೆಗೊಂಡ ಕಳೆದ ಆರ್ಥಿಕ ವರ್ಷದಲ್ಲಿ ಸಂಸ್ಥೆಯು ₹ 238.46 ಕೋಟಿ ನಷ್ಟ ಅನುಭವಿಸಿತ್ತು.

'ಮೊದಲ ತ್ರೈಮಾಸಿಕದಲ್ಲಿ ಸಂಸ್ಥೆಯು ಒಟ್ಟು ₹ 15,148.19 ಕೋಟಿ ವಹಿವಾಟು ನಡೆಸಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ₹ 6,408.47 ಕೋಟಿ ವಹಿವಾಟು ನಡೆಸಿತ್ತು. ಕಳೆದ ವರ್ಷದ ಮೊದಲ ತ್ರೈಮಾಸಿಕದಲ್ಲಿ ಕಂಪನಿಯು ₹526.58 ಕೋಟಿ ನಷ್ಟ ಅನುಭವಿಸಿತ್ತು. ಕಳೆದ ವರ್ಷಕ್ಕೆ ಹೋಲಿಸಿದಲ್ಲಿ, ಸಂಸ್ಥೆಯ ನಷ್ಟದ ಪ್ರಮಾಣ ಈ ವರ್ಷ ತಗ್ಗಿದೆ' ಎಂದು ಕಂಪನಿಯ ಹಣಕಾಸು ನಿರ್ದೇಶಕ ಪೋಮಿಲಾ ಜಸ್ಪಾಲ್ ತಿಳಿಸಿದ್ದಾರೆ.

ಎನ್‌ಎಸ್‌ಇ: 4 ತಿಂಗಳಲ್ಲಿ 50 ಲಕ್ಷ ಹೊಸ ಹೂಡಿಕೆದಾರರು

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದ ಮೊದಲ ನಾಲ್ಕು ತಿಂಗಳ ಅವಧಿಯಲ್ಲಿ ತನ್ನಲ್ಲಿ ನೋಂದಾಯಿತ ಆಗಿರುವ ಹೊಸ ಹೂಡಿಕೆದಾರರ ಸಂಖ್ಯೆಯು 50 ಲಕ್ಷವನ್ನು ದಾಟಿದೆ ಎಂದು ರಾಷ್ಟ್ರೀಯ ಷೇರುಪೇಟೆ (ಎನ್‌ಎಸ್‌ಇ) ತಿಳಿಸಿದೆ.

2019ರ ಏಪ್ರಿಲ್–ಜುಲೈ ಅವಧಿಯಲ್ಲಿ 8.5 ಲಕ್ಷ ಹೊಸ ಹೂಡಿಕೆದಾರರು, 2020ರ ಏಪ್ರಿಲ್–ಜುಲೈ ಅವಧಿಯಲ್ಲಿ 20 ಲಕ್ಷ ಹೊಸ ಹೂಡಿಕೆದಾರರು ನೋಂದಣಿ ಮಾಡಿಸಿಕೊಂಡಿದ್ದರು. ಈ ವರ್ಷದ ಇದೇ ಅವಧಿಯಲ್ಲಿ 51.3 ಲಕ್ಷ ಹೂಡಿಕೆದಾರರು ಹೊಸದಾಗಿ ನೋಂದಣಿ ಮಾಡಿಸಿಕೊಂಡಿದ್ದಾರೆ. ಎನ್‌ಎಸ್‌ಇಯಲ್ಲಿ ಈಗ 4.5 ಕೋಟಿ ನೋಂದಾಯಿತ ಹೂಡಿಕೆದಾರರು ಇದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	380
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-43000
ಹಳತು	42500-52000
ಪುತ್ತೂರು	
ಕೋಕ	10500-26000
ಹೊಸತು	31000-45000
ಕುಮಟ	
ಚಿಪ್ಪು	30200-35699
ಕೋಕ	19819-31776
ಹಳೆಚಾಲಿ	44509-44509
ಹೊಸಚಾಲಿ	37299-41369
ಚಿತ್ರದುರ್ಗ	
ಆಪಿ	42119-42559
ಬೆಟ್ಟೆ	35629-36099
ಕೆಂಪುಗೋಟು	29600-30000
ರಾಶಿ	41639-42069
ಸಿದ್ದಾಪುರ	
ಬಿಳಿಗೋಟು	28199-34889
ಚಾಲಿ	35899-40499
ಕೋಕ	25599-32319
ಕೆಂಪುಗೋಟು	28099-30809
ರಾಶಿ	38699-41128
ತಟ್ಟಿಬೆಟ್ಟೆ	36099-38899
ಶಿರಸಿ	
ಬೆಟ್ಟೆ	30599-39899
ಬಿಳಿಗೋಟು	28500-36562
ಚಾಲಿ	37599-41061
ರಾಶಿ	37719-41699
ಯಲ್ಲಾಪುರ	
ಬಿಳಿಗೋಟು	28899-34629
ಚಾಲಿ	36676-40899
ಕೋಕ	20899-31899
ಕೆಂಪುಗೋಟು	28099-33066
ರಾಶಿ	39169-43899
ತಟ್ಟಿಬೆಟ್ಟೆ	34299-38369
ಶಿವಮೊಗ್ಗ (ಎಪಿಎಂಸಿ)	
ಬೆಟ್ಟೆ	44099-46399
ಗೊರಬಲು	16810-34869
ರಾಶಿ	37519-42399
ಸರಕು	48069-73499
ಸಾಗರ	
ಬಿಳಿಗೋಟು	25169-32600
ಚಾಲಿ	35699-38439
ಕೋಕ	29199-35100
ಕೆಂಪುಗೋಟು	27519-37409
ರಾಶಿ	37889-43299
ಸಿಪ್ಪೆಗೋಟು	10690-22319
ರಾಮನಗರ ರೇಷ್ಮೆ	
ಮಿಶ್ರತಳಿ	219-452
ದ್ವಿತಳಿ	253-538

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14000	13300	12900	203.05ಸೆಂಟ್ಸ್
ಎಸಿ	5830	5000	5100	
ಆರ್‌ಪಿ	6325	6200	6100	ಲಂಡನ್
ಆರ್‌ಸಿ	3485	3500	3550	1929 ಡಾಲರ್ಸ್

ಟಾಟಾ ಏಸ್ ಗೋಲ್ಡ್ ಪೆಟ್ರೋಲ್ ಸಿಎಕ್ಸ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಮೋಟರ್ಸ್ ಕಂಪನಿಯು ಸಣ್ಣ ವಾಣಿಜ್ಯ ವಾಹನ (ಎಸ್‌ಸಿವಿ) 'ಏಸ್ ಗೋಲ್ಡ್ ಪೆಟ್ರೋಲ್ ಸಿಎಕ್ಸ್' ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆ ₹ 3.99 ಲಕ್ಷದಿಂದ ಆರಂಭವಾಗುತ್ತದೆ.

ಫ್ಲ್ಯಾಟ್ ಬೆಡ್ ವೇರಿಯಂಟ್ ಬೆಲೆ ₹ 3.99 ಲಕ್ಷ ಮತ್ತು ಹಾಲ್ಫ್‌ಡೆಕ್ ಲೋಡ್ ಬಾಡಿ ವೇರಿಯೆಂಟ್ ಬೆಲೆ ₹ 4.10 ಲಕ್ಷ ಇದೆ. ಗ್ರಾಹಕರು ಈ ಮಾದರಿಯನ್ನು ಖರೀದಿಸಲು ಹಣಕಾಸಿನ ನೆರವು ಒದಗಿಸಲು ಕಂಪನಿಯು ಎಸ್‌ಬಿಐ ಜೊತೆ ಪಾಲುದಾರಿಕೆ ಮಾಡಿಕೊಂಡಿದೆ.

'ಟಾಟಾ ಏಸ್ ವಾಹನ ಇಲ್ಲಿಯ ವರೆಗೆ 23 ಲಕ್ಷಕ್ಕೂ ಅಧಿಕ ಭಾರತೀಯರ ಜೀವನೋಪಾಯವಾಗಿದೆ. ಕೇಂದ್ರ ಸರ್ಕಾರದ ಆತ್ಮನಿರ್ಭರ ಭಾರತ ಮಿಷನ್‌ಗೆ ಅನುಗುಣವಾಗಿ, ಕಂಪನಿಯು ಏಸ್‌ನ ಹೊಸ ಆವೃತ್ತಿ ಬಿಡುಗಡೆ ಮಾಡಿದೆ' ಎಂದು ಕಂಪನಿಯ ಉಪಾಧ್ಯಕ್ಷ ವಿನಯ್ ಪಾಠಕ್ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

29-7-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9150-9200
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1490)
ಒಂದು ವಾರದ ಡೆಲಿವರಿ	1485 (1485)
ಸೋಯಾ ಕಚ್ಚಾ	1370 (1370)
ಪಾಮ್ ವಾರದ ಡೆಲಿವರಿ	1273 (1260)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1400)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 48,200 (47,500)

ಬೆಳ್ಳಿ ಕೆ.ಜಿ 67,900 (66,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಿಕ್ಷಾ ಗುದ್ದಿಸಿ ಕೊಲೆ • ಆಟೊ ಚಾಲಕ, ಆತನ ಸಹಚರನ ಬಂಧನ • ಎಸ್‌ಐಟಿ ತನಿಖೆಗೆ ಹೈಕೋರ್ಟ್ ಆದೇಶ

ಜಾರ್ಖಂಡ್: ನ್ಯಾಯಾಧೀಶನ ಹತ್ಯೆ

ರಾಂಚಿ (ಪಿಟಿಐ): ಜಾರ್ಖಂಡ್‌ನ ಧನಬಾದ್ ಜಿಲ್ಲಾ ಸೆಷನ್ಸ್ ನ್ಯಾಯಾಧೀಶ ಉತ್ತಮ್ ಆನಂದ್ ಅವರ ಸಾವಿನ ತನಿಖೆಗೆ ಜಾರ್ಖಂಡ್ ಹೈಕೋರ್ಟ್ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದೆ. ಬುಧವಾರ ಬೆಳಿಗ್ಗೆ ಅಪಘಾತದಲ್ಲಿ ಅವರು ಮೃತಪಟ್ಟಿದ್ದರು. ಅದು ಪೂರ್ವಯೋಜಿತ ಕೊಲೆ ಎಂಬ ಅನುಮಾನ ವ್ಯಕ್ತವಾಗಿರುವ ಕಾರಣ ಎಸ್‌ಐಟಿ ತನಿಖೆಗೆ ಆದೇಶಿಸಲಾಗಿದೆ. ಅಪಘಾತಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಲಾಗಿದೆ.

ಉತ್ತಮ್ ಆನಂದ್ ಅವರು ಧನಬಾದ್ ಪಟ್ಟಣದ ಜಡ್ಜಸ್ ಕಾಲೊನಿಯಲ್ಲಿ ಬುಧವಾರ ಬೆಳಿಗ್ಗೆ 5 ಗಂಟೆಯಲ್ಲಿ ಜಾಗಿಂಗ್ ಹೊರಟಿದ್ದರು. ಆಗ ವಾಹನವೊಂದು ಡಿಕ್ಕಿ ಹೊಡೆದು, ಪರಾರಿಯಾಗಿತ್ತು. ರಕ್ತದ ಮಡುವಿನಲ್ಲಿ ಬಿದ್ದಿದ್ದ ಅವರನ್ನು ದಾರಿಹೋಕರೊಬ್ಬರು ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಆಸ್ಪತ್ರೆ ತಲುಪುವ ಮುನ್ನವೇ ಅವರು ಮೃತಪಟ್ಟಿದ್ದರು ಎಂದು ವೈದ್ಯರು ಘೋಷಿಸಿದ್ದರು.

ಬೆಳಿಗ್ಗೆ 7 ಗಂಟೆಯಾದರೂ ಉತ್ತಮ್ ಆನಂದ್ ಅವರು ಮನೆಗೆ ಬರದೇ ಇದ್ದ ಕಾರಣ, ಅವರ ಪತ್ನಿ ಪೊಲೀಸರಿಗೆ ತಮ್ಮ ಪತಿ ಕಾಣೆಯಾಗಿದ್ದಾರೆ ಎಂದು ದೂರು ನೀಡಿದ್ದರು. ಬೆಳಿಗ್ಗೆ 10ರ ವೇಳೆಗೆ ಅಪಘಾತದಲ್ಲಿ ಅವರು ಮೃತಪಟ್ಟಿರುವುದು ಪತ್ತೆಯಾಯಿತು. ಆದರೆ ಸಂಜೆ 5ರ ಹೊತ್ತಿಗೆ ಅಪಘಾತದ ವಿಡಿಯೊ ವೈರಲ್ ಆಗಿತ್ತು.

ನಿರ್ಜನವಾಗಿದ್ದ ರಸ್ತೆಯಲ್ಲಿ ಉತ್ತಮ್ ಆನಂದ್ ಅವರು ಜಾಗಿಂಗ್ ಮಾಡುತ್ತಿದ್ದರು. ಅದೇ ರಸ್ತೆಯಲ್ಲಿ ಬಂದ ಆಟೊರಿಕ್ಷಾವೊಂದು ಉತ್ತಮ್ ಆನಂದ್ ಅವರಿಗೆ ಡಿಕ್ಕಿ ಹೊಡೆಯಿತು. ನಂತರ ಅಲ್ಲಿಂದ ಪರಾರಿಯಾಯಿತು.

ಈ ವಿಡಿಯೊ ವೈರಲ್ ಆದ ನಂತರ ಆನಂದ್ ಅವರ ಪತ್ನಿ ಕೊಲೆ ದೂರು ದಾಖಲಿಸಿದರು. ಆದರೆ ಪೊಲೀಸರು ಕೊಲೆ ಪ್ರಕರಣ ದಾಖಲಿಸಲು ನಿರಾಕರಿಸಿದರು.

ಗುರುವಾರ ಬೆಳಿಗ್ಗೆ ಜಾರ್ಖಂಡ್ ವಕೀಲರ ಸಂಘವು ಜಾರ್ಖಂಡ್ ಹೈಕೋರ್ಟ್‌ನ ಗಮನಕ್ಕೆ ಈ ವಿಷಯವನ್ನು ತಂದಿತು. ಅದೇ ಸಮಯದಲ್ಲಿ ಸುಪ್ರೀಂ ಕೋರ್ಟ್ ವಕೀಲರ ಸಂಘವೂ ಈ ವಿಚಾರವನ್ನು, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರಿದ್ದ ಪೀಠದ ಗಮನಕ್ಕೆ ತಂದಿತು. ಆ ವೇಳೆಗೆ ಧನಬಾದ್ ಪೊಲೀಸರು ಕೊಲೆ ಪ್ರಕರಣವನ್ನು ದಾಖಲಿಸಿದ್ದರು. ಎಫ್‌ಐಆರ್ ದಾಖಲಿಸಲು ವಿಳಂಬ ಮಾಡಿದ ಕಾರಣಕ್ಕೆ ಧನಬಾದ್ ಪೊಲೀಸರನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿತ್ತು.

ಅಪಘಾತ ನಡೆಸಿದ್ದ ಆಟೊಚಾಲಕ ಮತ್ತು ಆತನ ಸಹಚರನನ್ನು ಪೊಲೀಸರು ಬಂಧಿಸಿದ್ದಾರೆ. ಆಟೊರಿಕ್ಷಾವನ್ನು ವಶಕ್ಕೆ ಪಡೆದಿದ್ದಾರೆ.

ಜಾಮೀನು ನೀಡದ್ದಕ್ಕೆ ಹತ್ಯೆ?

ಉತ್ತಮ್ ಆನಂದ್ ಅವರ ಸಾವು ಪೂರ್ವಯೋಜಿತ ಕೊಲೆ ಎಂದು ಜಾರ್ಖಂಡ್ ವಕೀಲರ ಸಂಘ ಅನುಮಾನ ವ್ಯಕ್ತಪಡಿಸಿದೆ. 'ಹಲವು ಅಪರಾಧ ಪ್ರಕರಣಗಳಲ್ಲಿ ಅವರು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಿದ್ದರು. ಈಚೆಗೆ ಇಬ್ಬರು ದೊಡ್ಡ ಗ್ಯಾಂಗ್‌ಸ್ಟರ್‌ಗಳ ಜಾಮೀನು ಅರ್ಜಿಯನ್ನು ಅವರು ತಿರಸ್ಕರಿಸಿದ್ದರು. ಜಾಮೀನು ನೀಡದಿದ್ದ ಕಾರಣಕ್ಕೇ ಅವರನ್ನು ಕೊಲೆ ಮಾಡಿರುವ ಸಾಧ್ಯತೆ ಇದೆ' ಎಂದು ಜಾರ್ಖಂಡ್ ಹೈಕೋರ್ಟ್‌ಗೆ ಬರೆದ ಪತ್ರದಲ್ಲಿ ಸಂಘವು ಅನುಮಾನ ವ್ಯಕ್ತಪಡಿಸಿದೆ.

ಈ ಪತ್ರ ಮತ್ತು ವೈರಲ್ ಆದ ವಿಡಿಯೊ ಆಧಾರದಲ್ಲಿ ಎಸ್‌ಐಟಿ ತನಿಖೆಗೆ ಹೈಕೋರ್ಟ್ ಆದೇಶಿಸಿದೆ.

ಸುಪ್ರೀಂ ಕೋರ್ಟ್‌ನಲ್ಲಿಯೂ ಇದೇ ಅಭಿಪ್ರಾಯ ವ್ಯಕ್ತವಾಗಿದ್ದು, ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರು ಜಾರ್ಖಂಡ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ರವಿ ರಂಜನ್ ಅವರಿಗೆ ಕರೆ ಮಾಡಿ ಪ್ರಕರಣದ ಬಗ್ಗೆ ಮಾಹಿತಿ ಪಡೆದಿದ್ದಾರೆ. ತನಿಖೆ ಸರಿಯಾಗಿ ನಡೆಯಬೇಕು ಎಂದು ಹೇಳಿದ್ದಾರೆ. 'ನ್ಯಾಯಾಲಯವೇ ತನಿಖೆಯ ಮೇಲ್ವಿಚಾರಣೆ ನಡೆಸಲಿದೆ' ಎಂದು ರವಿ ರಂಜನ್ ಅವರು ಮಾಹಿತಿ ನೀಡಿದ್ದಾರೆ.

'ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಇದು ಅಪಘಾತವೋ ಅಥವಾ ಕೊಲೆಯೋ ಎಂಬುದನ್ನು ಪತ್ತೆ ಮಾಡಿ. ಕೊಲೆಯೇ ಆಗಿದ್ದರೆ ಸಂಚು ರೂಪಿಸಿದವರು ಯಾರು ಎಂಬುದನ್ನು ಪತ್ತೆ ಮಾಡಿ' ಎಂದು ಜಾರ್ಖಂಡ್ ಪೊಲೀಸ್ ಮಹಾ ನಿರ್ದೇಶಕರಿಗೆ ಜಾರ್ಖಂಡ್ ಹೈಕೋರ್ಟ್ ಸೂಚನೆ ನೀಡಿದೆ.

> ಇದು ನ್ಯಾಯಾಂಗದ ಮೇಲೆ ನಡೆದ ಹೀನ ದಾಳಿ. ಜಾಮೀನು ನೀಡದೇ ಇದ್ದ ಕಾರಣಕ್ಕೆ ಹತ್ಯೆ ನಡೆದಿರುವ ಅನುಮಾನವಿದೆ. ಸಿಬಿಐ ತನಿಖೆಗೆ ಒಪ್ಪಿಸಬೇಕು
>
> **ವಿಕಾಸ್ ಸಿಂಗ್,** ಸುಪ್ರೀಂ ಕೋರ್ಟ್ ವಕೀಲರ ಸಂಘದ ಅಧ್ಯಕ್ಷ

> ಎಸ್‌ಐಟಿ ತನಿಖೆ ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿಲ್ಲ ಎಂದು ನ್ಯಾಯಾಲಯಕ್ಕೆ ಭಾಸವಾದರೆ, ತಕ್ಷಣವೇ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲಾಗುತ್ತದೆ
>
> **ರವಿ ರಂಜನ್,** ಜಾರ್ಖಂಡ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ

ಪ್ರಜಾವಾಣಿ ಸೆಲೆಬ್ರಿಟಿ

ಶನಿವಾರದ ವಿಶೇಷ LIVE
ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ದಿಗ್ಗಜ
ಪಂ.ಗಣಪತಿ ಭಟ್ ಹಾಸಣಗಿ
ಜೊತೆಗೆ
ಮುಖಾಮುಖಿ
ಶನಿವಾರ, 31.07.2021
ಬೆಳಿಗ್ಗೆ 11 ರಿಂದ 12
Prajavani.net Prajavani Prajavani

ಪ್ರಜಾವಾಣಿ
ಸಿನಿ ಸಿಪ್ ಚಪ್ಪರಿಸಿದಷ್ಟೂ ನೆನಪು..



ಶಂಕರ್ ಸಂಕಲ್ಪ
ಸಿನಿಮಾ ತೆರೆಮೇಲೆ ಕಾಣದ ಅಪರೂಪದ ನೆನಪು ಸಹೃದಯರಿಗೆ ಗುಟುಕಿನ ರೂಪದಲ್ಲಿ...

14 ಹುಲಿ ಮೀಸಲು ಅರಣ್ಯ ಪ್ರದೇಶಗಳಿಗೆ ಸಿಎ/ ಟಿಎಸ್ ಮಾನ್ಯತೆ

ನವದೆಹಲಿ: ಅಂತರರಾಷ್ಟ್ರೀಯ ಹುಲಿ ದಿನಾಚರಣೆಯ ಅಂಗವಾಗಿ ದೇಶದ 14 ಹುಲಿ ಮೀಸಲು ಅರಣ್ಯ ಪ್ರದೇಶಗಳಿಗೆ ಕೇಂದ್ರ ಸರ್ಕಾರ ಗುರುವಾರ ಸಿಎ/ ಟಿಎಸ್ (ಕನ್ಸರ್ವೇಶನ್ ಅಶ್ಯೂರ್ಡ್/ಟೈಗರ್ ಸ್ಟಾಂಡರ್ಡ್) ಮಾನ್ಯತೆ ನೀಡಿದೆ.

ಕರ್ನಾಟಕದ ಬಂಡೀಪುರ, ಕೇರಳದ ಪರಂಬಿಕುಲಂ, ಮಾನಸ, ಕಾಂಜಿರಂಗ, ಅಸ್ಸಾಂನ ಒರಾಂಗ್, ಸತ್ಪುರ, ಕನ್ಹ, ಪಶ್ಚಿಮ ಬಂಗಾಳದ ಸುಂದರ್‌ಬನ್ ಮತ್ತು ಮಧ್ಯಪ್ರದೇಶದ ಪನ್ನಾ ಹುಲಿ ಮೀಸಲು ಅರಣ್ಯ ಪ್ರದೇಶಗಳನ್ನು ಈ ಮಾನ್ಯತೆಗೆ ಪರಿಗಣಿಸಲಾಗಿದೆ.

'ಹುಲಿಗಳ ಸಂಖ್ಯೆ ಸಮತೋಲಿತ ಪರಿಸರ ವ್ಯವಸ್ಥೆಯ ಸೂಚಕವಾಗಿದೆ. ಹುಲಿ ದಿನದ ಈ ಸಂದರ್ಭದಲ್ಲಿ ನಾವು ಹುಲಿ ರಕ್ಷಣೆಗೆ ಆದ್ಯತೆ ನೀಡುವುದರ ಮೂಲಕ ನಮ್ಮ ಕಾಡುಗಳನ್ನು ಉಳಿಸಲು ಕ್ರಮ ತೆಗೆದುಕೊಳ್ಳುತ್ತಿದ್ದೇವೆ' ಎಂದು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ತಿಳಿಸಿದ್ದಾರೆ.

ಏಳು ಹುಲಿ ಸಂರಕ್ಷಿತ ದೇಶಗಳ 125 ತಾಣಗಳಲ್ಲಿ ಸಿಎ/ ಟಿಎಸ್ ಮಾನ್ಯತೆಯನ್ನು ಜಾರಿಗೆ ತರಲಾಗುತ್ತಿದೆ. ಭಾರತದಲ್ಲಿ ಗರಿಷ್ಠ ಪ್ರಮಾಣದಲ್ಲಿ ಅಂದರೆ 94 ತಾಣಗಳು ಈ ಮಾನ್ಯತೆಗೆ ಒಳಪಟ್ಟಿವೆ. ಡಬ್ಲ್ಯುಡಬ್ಲ್ಯುಎಫ್ ಇಂಡಿಯಾದ ಪ್ರಕಾರ, ಈ ವರ್ಷ 20 ಹುಲಿ ಮೀಸಲು ಅರಣ್ಯ ಪ್ರದೇಶಗಳ ಮೌಲ್ಯಮಾಪನ ಪೂರ್ಣಗೊಂಡಿದೆ.

ಸ್ಥಾಯಿಸಮಿತಿ ಸಭೆಯಲ್ಲಿ ಅವಹೇಳನ: ಬಿಜೆಪಿ ಸಂಸದ ದುಬೆ ಆರೋಪ

'ಬಿಹಾರಿ ಗೂಂಡಾ' ವಾಕ್ಸಮರ

ಪ್ರಜಾವಾಣಿ ವಾರ್ತೆ

ನವದೆಹಲಿ: ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರು ತಮ್ಮನ್ನು 'ಬಿಹಾರಿ ಗೂಂಡಾ' ಎಂದು ಸಂಬೋಧಿಸಿದ್ದಾರೆ ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು ಗುರುವಾರ ಆರೋಪಿಸಿದ್ದಾರೆ. ಮಾಹಿತಿ ತಂತ್ರಜ್ಞಾನ ಕುರಿತ ಸಂಸದೀಯ ಸ್ಥಾಯಿ ಸಮಿತಿಯ ಬುಧವಾರ ನಿಗದಿಯಾಗಿದ್ದ ಸಭೆಯಲ್ಲಿ ಈ ಘಟನೆ ನಡೆದಿದೆ ಎಂದು ಅವರು ಹೇಳಿದ್ದಾರೆ. ಆದರೆ, ಈ ಸಭೆಯಲ್ಲಿ ದುಬೆ ಅವರು ಭಾಗಿಯಾಗಿರಲೇ ಇಲ್ಲ ಎಂದು ಮಹುವಾ ತಿರುಗೇಟು ನೀಡಿದ್ದಾರೆ.

'ಸಂಸದನಾಗಿ ನನ್ನ 13 ವರ್ಷಗಳ ಅನುಭವದಲ್ಲಿ ಟಿಎಂಸಿ ಪಕ್ಷದ ಒಬ್ಬ ಮಹಿಳೆ ನನ್ನನ್ನು ಹೀಗೆ ಕರೆದಿದ್ದಾರೆ. ನನ್ನ ಜೀವನದಲ್ಲಿ ಎಂದೂ ಇಂತಹ ಘಟನೆ ನಡೆದಿರಲಿಲ್ಲ' ಎಂದು ದುಬೆ ಅವರು ಲೋಕಸಭೆಯಲ್ಲಿ ಗುರುವಾರ ಈ ವಿಚಾರ ಪ್ರಸ್ತಾಪಿಸಿದ್ದಾರೆ. ತಮ್ಮ ವಿರುದ್ಧ ಬಳಸಲಾಗಿದೆ ಎಂದು ದುಬೆ ಹೇಳಿಕೊಂಡ ಪದವನ್ನು ನಂತರ ಕಡತದಿಂದ ತೆಗೆದುಹಾಕಲಾಯಿತು.

ಟಿಎಂಸಿ ಸಂಸದರು ಉತ್ತರ ಭಾರತೀಯರನ್ನು ಅವಮಾನ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ದುಬೆ ಆರೋಪಿಸಿದರು. 'ನಾವು ಮಾಡಿದ ತಪ್ಪಾದರೂ ಏನು. ಈ ದೇಶವನ್ನು ಅಭಿವೃದ್ಧಿಪಡಿಸಲು ಯತ್ನಿಸಿದ್ದೇ ನಮ್ಮ ತಪ್ಪು. ಹಿಂದಿ ಮಾತನಾಡುವ ಉತ್ತರ ಪ್ರದೇಶದ ಅಥವಾ ಮಧ್ಯಪ್ರದೇಶದ ಜನರ ರೀತಿಯಲ್ಲೇ ನಾವೂ ಕಾರ್ಮಿಕರಾಗಿ ಈ ದೇಶದ ಅಭಿವೃದ್ಧಿಗೆ ಕೆಲಸ ಮಾಡಿದ್ದೇವೆ, ಶ್ರಮಿಸಿದ್ದೇವೆ' ಎಂದು ದುಬೆ ಹೇಳಿದರು.

ಇದಕ್ಕೆ ಮಹುವಾ ಪ್ರತಿಕ್ರಿಯೆ ನೀಡಿದ್ದಾರೆ. 'ನನಗೆ ಅಚ್ಚರಿಯಾಗಿದೆ. ಕೋರಂ ಕೊರತೆಯ ಕಾರಣ ಸಂಸದೀಯ ಸಮಿತಿ ಸಭೆ ನಡೆಯಲಿಲ್ಲ. ಹಾಜರಿಲ್ಲದ ಸದಸ್ಯರನ್ನು ನಾನು ಅವಹೇಳನ ಮಾಡುವುದು ಹೇಗೆ ಸಾಧ್ಯ. ಹಾಜರಾತಿ ಕಡತವನ್ನು ಪರಿಶೀಲಿಸಿ' ಎಂದಿದ್ದಾರೆ.

ಪೆಗಾಸಸ್ ಗೂಢಚರ್ಯೆ ಪ್ರಕರಣ ಸಂಬಂಧ ಅಧಿಕಾರಿಗಳನ್ನು ವಿಚಾರಣೆ ನಡೆಸಬೇಕಿದ್ದ ಮಾಹಿತಿ ತಂತ್ರಜ್ಞಾನ ಕುರಿತ ಸಂಸದೀಯ ಸ್ಥಾಯಿ ಸಮಿತಿ ಸಭೆಯು ಕೋರಂ ಕೊರತೆಯಿಂದ ಬುಧವಾರ ನಡೆಯಲಿಲ್ಲ. 'ನಡೆಯದ ಸಭೆಯ ಬಗ್ಗೆ ನಾನು ಹೇಗೆ ವಿವರಿಸಲಿ. ಯಾರೂ ಇಲ್ಲದ ಸಭೆಯಲ್ಲಿ ಯಾರೋ ಏನೋ ಆರೋಪ ಮಾಡಿದರು ಎಂದರೆ, ನಾನು ಹೇಗೆ ಉತ್ತರಿಸಲಿ' ಎಂದು ಸಮಿತಿಯ ಅಧ್ಯಕ್ಷ, ಕಾಂಗ್ರೆಸ್ ಸಂಸದ ತರೂರ್ ಪ್ರಶ್ನಿಸಿದ್ದಾರೆ.

ಕೆಲವು ಶಕ್ತಿಗಳು ಸಮಿತಿಯ ಕಾರ್ಯವನ್ನು ಹಳಿತಪ್ಪಿಸಲು ಇಲ್ಲಸಲ್ಲದ ವಿಷಯಗಳನ್ನು ಪ್ರಸ್ತಾಪಿಸುತ್ತಿವೆ ಎಂದು ತರೂರ್ ಆರೋಪಿಸಿದ್ದಾರೆ.

ಸಭೆಯ ಕೊಠಡಿಯಲ್ಲಿ ಹಾಜರಿದ್ದ ಸಮಿತಿಯ ಬಿಜೆಪಿ ಸದಸ್ಯರು ಪ್ರತಿಭಟನಾರ್ಥವಾಗಿ ಹಾಜರಾತಿ ಕಡತಕ್ಕೆ ಸಹಿ ಹಾಕಿರಲಿಲ್ಲ.

ದುಬೆ ಅವರು ತಮ್ಮ ವಿರುದ್ಧ ಮಂಡಿಸಿರುವ ನಿಲುವಳಿ ಮಂಡನೆ ಬಗ್ಗೆ ಪ್ರಶ್ನಿಸಿದಾಗ, ಇದಕ್ಕೆ ಯಾವುದೇ ಸಿಂಧುತ್ವವಿಲ್ಲ ಎಂದು ತರೂರ್ ಉತ್ತರಿಸಿದರು. 'ಗೊತ್ತುವಳಿ ಮಂಡನೆಗೆ ಒಪ್ಪಿಗೆ ಪಡೆಯಬೇಕು ಮತ್ತು 25 ಸದಸ್ಯರು ಅದನ್ನು ಬೆಂಬಲಿಸಬೇಕು' ಎಂದಿದ್ದಾರೆ.

ತರೂರ್ ಹೇಳಿಕೆಗೆ ತಿರುಗೇಟು ನೀಡಿರುವ ದುಬೆ, 'ತರೂರ್‌ಗೆ ನಿಯಮಗಳ ಬಗ್ಗೆ ತಿಳಿದಿಲ್ಲ. ಅವರು ಹತಾಶೆಗೆ ಒಳಗಾಗಿದ್ದಾರೆ. ಅವರು ಲೋಕಸಭೆಯಲ್ಲಿ ಅಧೀರ್ ರಂಜನ್ ಚೌಧರಿ ಸ್ಥಾನದಲ್ಲಿ ಕುಳಿತುಕೊಳ್ಳುವ ಬಯಕೆ ಹೊಂದಿದ್ದಾರೆ' ಎಂದಿದ್ದಾರೆ.

ದುಬೆ ಮತ್ತು ತರೂರ್ ಇಬ್ಬರೂ ಈ ಹಿಂದೆ ಪರಸ್ಪರರ ವಿರುದ್ಧ ಖಾಸಗಿ ನಿಲುವಳಿ ಮಂಡಿಸಿದ್ದರು. ಬಿಜೆಪಿ ಸದಸ್ಯರ ಪ್ರಾಬಲ್ಯ ಹೊಂದಿರುವ ಸ್ಥಾಯಿಸಮಿತಿಯು ಆಗಾಗ್ಗೆ ಘರ್ಷಣೆಗಳಿಗೆ ಸಾಕ್ಷಿಯಾಗುತ್ತಿದೆ.

ಪ್ರತಿಪಕ್ಷ ಸದಸ್ಯರು ಗುರುವಾರ ರಾಜ್ಯಸಭೆಯಲ್ಲಿ ಸಭಾಪತಿ ಪೀಠದ ಎದುರು ಪ್ರತಿಭಟನೆ ನಡೆಸಿದರು

ಮೂರನೇ ತ್ರೈಮಾಸಿಕದಲ್ಲಿ 'ಇಒಎಸ್–03' ಉಪಗ್ರಹ ಉಡಾವಣೆ

ನವದೆಹಲಿ (ಪಿಟಿಐ): ಪ್ರವಾಹ, ಚಂಡಮಾರುತ ಸೇರಿ ಪ್ರಾಕೃತಿಕ ವಿಕೋಪಗಳನ್ನು ಮುಂದಾಗಿ ಗ್ರಹಿಸಲು ಭೂಚಲನೆಯ ಗತಿ ಅವಲೋಕಿಸುವ 'ಇಒಎಸ್–03' ಉಪಗ್ರಹವನ್ನು 2021ನೇ ಮೂರನೇ ತ್ರೈಮಾಸಿಕದಲ್ಲಿ ಉಡಾವಣೆ ಮಾಡಲಾಗುತ್ತದೆ.

ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಗುರುವಾರ ರಾಜ್ಯಸಭೆಯಲ್ಲಿ ಈ ಮಾಹಿತಿ ನೀಡಿದ್ದು, ಇಒಎಸ್–03 ಉಪಗ್ರಹವು ದೇಶದ ಭೌಗೋಳಿಕ ವ್ಯಾಪ್ತಿಯನ್ನು ದೈನಿಕ 4–5 ಬಾರಿ ಸೆರೆಹಿಡಿಯುವ ಸಾಮರ್ಥ್ಯವನ್ನು ಹೊಂದಿದೆ ಎಂದರು.

ಪ್ರಾಕೃತಿಕ ವಿಕೋಪಗಳನ್ನು ಹೊರತುಪಡಿಸಿ ಉಪಗ್ರಹವು ಜಲಮೂಲಗಳು, ಬೆಳೆ, ಅರಣ್ಯ ಪ್ರದೇಶಗಳ ನಾಶ, ಬೆಳವಣಿಗೆಗಳನ್ನು ಗಮನಿಸಿ, ಮಾಹಿತಿಗಳನ್ನು ಕಳೆಹಾಕಲಿದೆ ಎಂದು ತಿಳಿಸಿದರು.

ಜತೆಗೆ ದೇಶಿಯವಾಗಿ ಅಭಿವೃದ್ಧಿಪಡಿಸಲಾದ ಸಣ್ಣ ಉಪಗ್ರಹ ಉಡಾವಣಾ ವಾಹಕದ (ಎಸ್‌ಎಸ್‌ಎಲ್‌ವಿ) ಪ್ರಯೋಗ 2021ರ ನಾಲ್ಕನೇ ತ್ರೈಮಾಸಿಕದಲ್ಲಿ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ನಡೆಯಲಿದೆ ಎಂದು ತಿಳಿಸಿದರು.

ಹಳಿಗೆ ಬಾರದ ಕಲಾಪ

ಸಂಸತ್ ಕಲಾಪವನ್ನು ಹಳಿಗೆ ತರಲು ನಡೆಸಿದ ಯತ್ನಗಳು ಗುರುವಾರವೂ ವಿಫಲವಾಗಿವೆ. ಪೆಗಾಸಸ್ ಕುರಿತು ಚರ್ಚೆ ನಡೆಸುವಂತೆ ಪ್ರತಿಪಕ್ಷಗಳು ಇಟ್ಟಿರುವ ಬೇಡಿಕೆಯನ್ನು ಒಪ್ಪಿಕೊಳ್ಳಲು ಸರ್ಕಾರ ನಿರಾಕರಿಸಿದ್ದರಿಂದ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಯಾವುದೇ ಚರ್ಚೆ ನಡೆಯಲಿಲ್ಲ. ಗದ್ದಲದ ಮಧ್ಯೆಯೇ ಮೂರು ಮಸೂದೆಗಳಿಗೆ ಸರ್ಕಾರ ಅಂಗೀಕಾರ ಪಡೆಯಿತು.

ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ರಾಜ್ಯಸಭೆ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಶುಕ್ರವಾರ ಭೇಟಿ ಮಾಡಿ ಗೊಂದಲ ಪರಿಹರಿಸಲು ಯತ್ನಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಲೋಕಸಭೆಯ ಪ್ರತಿಪಕ್ಷ ನಾಯಕರು ಪೆಗಾಸಸ್ ಕುರಿತು ಚರ್ಚಿಸಲು ಒತ್ತಾಯಿಸಿ ಸಂಸದರ ಸಹಿ ಹೊಂದಿರುವ ಪತ್ರದೊಂದಿಗೆ ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿ ಮಾಡಲು ಉದ್ದೇಶಿಸಿದ್ದಾರೆ.

ಪೆಗಾಸಸ್ ಕುರಿತು ಚರ್ಚೆಯ ಬೇಡಿಕೆಯಿಂದ ಯಾವುದೇ ಕಾರಣಕ್ಕೆ ಹಿಂದೆ ಸರಿಯುವುದಿಲ್ಲ ಎಂದು ಕಾಂಗ್ರೆಸ್ ನಿರ್ಧರಿಸಿದೆ. ರಾಜನಾಥ್ ಜೊತೆ ಸಭೆ ನಡೆದಲ್ಲಿ, ಪ್ರತಿಪಕ್ಷದ ನಿಲುವನ್ನು ಮನವರಿಕೆ ಮಾಡಿಕೊಡುವ ಹೊಣೆಯನ್ನು ಖರ್ಗೆ ಅವರಿಗೆ ವಹಿಸಲಾಗಿದೆ.

ರಾಜ್ಯಸಭೆಯಲ್ಲಿ ಸದನ ನಾಯಕ ಪೀಯೂಷ್ ಗೋಯಲ್ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ಅವರನ್ನು ಖರ್ಗೆ ಅವರು ಎರಡು ಬಾರಿ ಭೇಟಿಯಾದ ಬಗ್ಗೆ ಕಾಂಗ್ರೆಸ್ ರಾಜ್ಯಸಭಾ ಮುಖ್ಯ ಸಚೇತಕ ಜೈರಾಮ್ ರಮೇಶ್ ಅವರನ್ನು ಕೇಳಿದಾಗ, 'ಅವರು ಏನೂ ಹೇಳಲಿಲ್ಲ, ಚಹಾ ಸೇವಿಸಿದರು ಮತ್ತು ಹೊರಟುಹೋದರು' ಎಂದರು.

ದಿನವಿಡೀ ಉಭಯ ಸದನಗಳನ್ನು ಪ್ರತಿಭಟನೆಯ ಕಾರಣ ಅನೇಕ ಬಾರಿ ಮುಂದೂಡಲಾಯಿತು. ಘೋಷಣೆ ಕೂಗಿದ ವಿಪಕ್ಷಗಳ ಸಂಸದರ ಮೇಲೆ ಜ್ಯೋತಿರಾದಿತ್ಯ ಸಿಂಧಿಯಾ ಹರಿಹಾಯ್ದರು. ಲೋಕಸಭೆಯಲ್ಲಿ ಆರು ಮತ್ತು ರಾಜ್ಯಸಭೆಯಲ್ಲಿ ಮೂರು – ಒಟ್ಟು ಒಂಬತ್ತು ಮಸೂದೆಗಳಿಗೆ ಸರ್ಕಾರವು ಚರ್ಚೆಯಿಲ್ಲದೇ ಅಂಗೀಕಾರ ಪಡೆಯಿತು.

ಟ್ವಿಟರ್‌ನಲ್ಲಿ ಮೋದಿಗೆ ಈಗ 7 ಕೋಟಿ ಫಾಲೋವರ್‌ಗಳು!

ನವದೆಹಲಿ: ಪ್ರಧಾನಿ ನರೇಂದ್ರ ಮೋದಿಯವರು ಟ್ವಿಟ್ಟರ್‌ನಲ್ಲಿ ಈಗ 7 ಕೋಟಿಗೂ ಹೆಚ್ಚು ಫಾಲೋವರ್‌ಗಳನ್ನು ಹೊಂದಿದ್ದಾರೆ. ಈ ಮೂಲಕ ಅವರು ಸಾಮಾಜಿಕ ಮಾಧ್ಯಮದಲ್ಲಿ ಅತೀ ಹೆಚ್ಚು ಅನುಯಾಯಿಗಳನ್ನು ಹೊಂದಿದ ವಿಶ್ವದ ಸಕ್ರಿಯ ರಾಜಕಾರಣಿ ಎನಿಸಿಕೊಂಡಿದ್ದಾರೆ.

ಅಮೆರಿಕ ಅಧ್ಯಕ್ಷರಾಗಿದ್ದ ಬರಾಕ್ ಒಬಾಮ ಅವರನ್ನು 12.98 ಕೋಟಿ ಮಂದಿ ಫಾಲೋ ಮಾಡುತ್ತಿದ್ದಾರೆ.

ಮೋದಿ ಅವರು 2009ರಲ್ಲಿ ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದಾಗ ಟ್ವಿಟರ್ ಪ್ರವೇಶಿಸಿದ್ದರು. ಒಂದು ವರ್ಷದಲ್ಲಿ ಅವರು ಒಂದು ಲಕ್ಷ ಫಾಲೋವರ್‌ಗಳನ್ನು ಗಳಿಸಿದ್ದರು. ಜುಲೈ 2020ರ ಹೊತ್ತಿಗೆ ಮೋದಿ ಅವರ ಟ್ವಿಟರ್ ಖಾತೆಯನ್ನು 6 ಕೋಟಿ ಮಂದಿ ಫಾಲೋ ಮಾಡಿದ್ದರು. 2020ರ ಜುಲೈನಿಂದ 2021ರ ಜುಲೈ ನಡುವಿನ ಈ ಒಂದು ವರ್ಷದ ಅವಧಿಯಲ್ಲಿ ಅವರು ಒಂದು ಕೋಟಿ ಫಾಲೋವರ್‌ಗಳನ್ನು ಪಡೆದುಕೊಂಡಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಟ್ವಿಟರ್‌ನಲ್ಲಿ 8.3 ಕೋಟಿ ಅನುಯಾಯಿಗಳಿದ್ದರು. ಆದರೆ, ಅವರ ಖಾತೆ ಈಗ ನಿಷ್ಕ್ರಿಯವಾಗಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಟ್ವಿಟರ್‌ನಲ್ಲಿ 2.63 ಕೋಟಿ ಫಾಲೋವರ್‌ಗಳನ್ನು ಹೊಂದಿದ್ದಾರೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು 1.94 ಕೋಟಿ ಮಂದಿ ಫಾಲೋ ಮಾಡುತ್ತಿದ್ದಾರೆ.

ಮೋದಿ ಅವರು ತಮ್ಮ ಖಾತೆಯಿಂದ 2,350 ಮಂದಿಯನ್ನು ಫಾಲೋ ಮಾಡುತ್ತಿದ್ದಾರೆ. ಈ ವರೆಗೆ 30 ಸಾವಿರಕ್ಕೂ ಮಿಗಿಲಾದ ಪೋಸ್ಟ್‌ಗಳನ್ನು ಪ್ರಕಟಿಸಿದ್ದಾರೆ.

ಟ್ವಿಟರ್‌ನಲ್ಲಿ ಅತ್ಯಂತ ಸಕ್ರಿಯರಾಗಿರುವ ಮೋದಿ, ನಿಯಮಿತವಾಗಿ ಹಲವು ಬೆಳವಣಿಗೆಗಳನ್ನು ಅದರಲ್ಲಿ ಹಂಚಿಕೊಳ್ಳುತ್ತಿರುತ್ತಾರೆ. ಗುರುವಾರ, 'ಅಂತರರಾಷ್ಟ್ರೀಯ ಹುಲಿ ದಿನ'ದಂದು ಅವರು ಭಾರತದ ಹುಲಿ ಸಂರಕ್ಷಣಾ ಕಾರ್ಯತಂತ್ರದ ಬಗ್ಗೆ ಬರೆದುಕೊಂಡಿದ್ದರು.

ಬುಧವಾರ ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರನ್ನು ಹೊಗಳಿ ಟ್ವೀಟ್ ಮಾಡಿದ್ದರು.

ಪ್ರಶಾಂತ್ ಕಿಶೋರ್ ಕಾಂಗ್ರೆಸ್‌ನತ್ತ?

ನವದೆಹಲಿ (ಪಿಟಿಐ): ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಅವರನ್ನು ಪಕ್ಷಕ್ಕೆ ಸೇರಿಸಿಕೊಂಡರೆ ಆಗುವ ಸಾಧಕ–ಬಾಧಕಗಳ ಕುರಿತು ಪಕ್ಷದ ಹಿರಿಯ ನಾಯಕರ ಜತೆ ಮಾತುಕತೆ ನಡೆಸಿದ್ದಾರೆ ಎಂದು ಮೂಲಗಳು ಗುರುವಾರ ತಿಳಿಸಿವೆ.

ಕಾಂಗ್ರೆಸ್ ಹಿರಿಯ ಮುಖಂಡರಾದ ಎ.ಕೆ. ಆಂಟನಿ, ಮಲ್ಲಿಕಾರ್ಜುನ ಖರ್ಗೆ, ಕಮಲ್ ನಾಥ್, ಅಂಬಿಕಾ ಸೋನಿ, ಹರೀಶ್ ರಾವತ್, ಕೆ.ಸಿ. ವೇಣುಗೋಪಾಲ್ ಮತ್ತು ಇತರರು ಈ ಸಂಬಂಧ ಜುಲೈ 22ರಂದು ಗಾಂಧಿ ನಿವಾಸದಲ್ಲಿ ನಡೆದಿದ್ದ ಸಭೆಯಲ್ಲಿ ಭಾಗವಹಿಸಿದ್ದರು.

ಪ್ರಶಾಂತ್ ಅವರನ್ನು ಪಕ್ಷಕ್ಕೆ ಸೇರಿಸಿಕೊಂಡರೆ ಆಗುವ ಸಾಧಕ–ಬಾಧಕಗಳು ಹಾಗೂ ಪ್ರಶಾಂತ್ ಅವರಿಗೆ ಯಾವ ಜವಾಬ್ದಾರಿಯನ್ನು ನೀಡಬೇಕು ಎಂಬುದು ಸಭೆಯ ಮುಖ್ಯ ಕಾರ್ಯಸೂಚಿಯಾಗಿತ್ತು ಎಂದು ಮೂಲಗಳು ಹೇಳಿವೆ.

ಸಭೆಯಲ್ಲಿ ಭಾಗವಹಿಸಿದ್ದ ಬಹುತೇಕ ಕಾಂಗ್ರೆಸ್ ಮುಖಂಡರು ಪ್ರಶಾಂತ್ ಕಿಶೋರ್ ಅವರು ಕಾಂಗ್ರೆಸ್‌ಗೆ ಸೇರಿದರೆ ಪಕ್ಷಕ್ಕೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ರಕ್ಷಣಾ ಕಾರ್ಯ

ಜಮ್ಮು–ಕಾಶ್ಮೀರದ ರಾಜೌರಿ ಜಿಲ್ಲೆಯಲ್ಲಿ ಗುರುವಾರ ಪ್ರವಾಹದ ನಡುವೆಯೇ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದ ಸೇನಾ ಸಿಬ್ಬಂದಿ ಮೂವರು ನಾಗರಿಕರನ್ನು ರಕ್ಷಿಸಿದರು –ಪಿಟಿಐ ಚಿತ್ರ

'ಪಿಪಿಪಿ ಮೂಲಕ ₹30 ಸಾವಿರ ಕೋಟಿ ವರಮಾನ'

ನವದೆಹಲಿ (ಪಿಟಿಐ): ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ (ಎಎಐ) 2020–21ರ ಅವಧಿಯಲ್ಲಿ ಪಿಪಿಪಿ (ಖಾಸಗಿ ಮತ್ತು ಸರ್ಕಾರಿ ಸಹಭಾಗಿತ್ವ) ವಿಮಾನ ನಿಲ್ದಾಣಗಳ ಮೂಲಕ ಸುಮಾರು ₹30,069 ಕೋಟಿ ವರಮಾನ ಗಳಿಸಿದೆ ಎಂದು ಕೇಂದ್ರ ಸರ್ಕಾರ ಬುಧವಾರ ತಿಳಿಸಿದೆ.

ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿರುವ ನಾಗರಿಕ ವಿಮಾನಯಾನ ಖಾತೆ ರಾಜ್ಯ ಸಚಿವ ವಿ.ಕೆ.ಸಿಂಗ್, '2020-21ರ ಅವಧಿಯಲ್ಲಿ ಎಎಐ ನಡೆಸುತ್ತಿರುವ ವಿಮಾನ ನಿಲ್ದಾಣಗಳಿಂದ ಖಾತರಿ ಶುಲ್ಕ, ಆದಾಯ ತೆರಿಗೆ ಮತ್ತು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಕೇಂದ್ರ ಸರ್ಕಾರ ಸುಮಾರು ₹ 846 ಕೋಟಿ ಸ್ವೀಕರಿಸಿದೆ' ಎಂದು ಹೇಳಿದ್ದಾರೆ.

ದೆಹಲಿ, ಬೆಂಗಳೂರು, ಮುಂಬೈ, ಹೈದರಾಬಾದ್ ಮತ್ತು ನಾಗ್ಪುರ ವಿಮಾನ ನಿಲ್ದಾಣಗಳ ಕಾರ್ಯಾಚರಣೆ, ನಿರ್ವಹಣೆಯನ್ನು ಪಿಪಿಪಿ ಮಾದರಿಯಲ್ಲಿ ನಿಭಾಯಿಸಲಾಗುತ್ತಿದೆ.

ಗೋವಾ ಮುಖ್ಯಮಂತ್ರಿ ಹೇಳಿಕೆಗೆ ಆಕ್ಷೇಪ

ಸಂತ್ರಸ್ತೆಯರು ಕಡಲ ತಡಿಯಲ್ಲಿ ಏಕಿದ್ದರು?

ಪಣಜಿ (ಪಿಟಿಐ): ಅತ್ಯಾಚಾರಕ್ಕೆ ಒಳಗಾದ 14 ವರ್ಷ ವಯಸ್ಸಿನ ಇಬ್ಬರು ಬಾಲಕಿಯರು ಕಡಲ ಕಿನಾರೆಯಲ್ಲಿ ತಡರಾತ್ರಿ ಇದ್ದದ್ದು ಏಕೆ ಎಂದು ಗೋವಾ ಮುಖ್ಯಮಂತ್ರಿ ಪ್ರಶ್ನಿಸಿದ್ದಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.

ಗೋವಾದ ಕಡಲ ತೀರವೊಂದರಲ್ಲಿ ಇಬ್ಬರು ಬಾಲಕಿಯರ ಮೇಲೆ ಭಾನುವಾರ ನಡೆದಿರುವ ಸಾಮೂಹಿಕ ಅತ್ಯಾಚಾರಕ್ಕೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ ಬುಧವಾರ ಚರ್ಚೆ ನಡೆದ ಸಂದರ್ಭದಲ್ಲಿ ಸಾವಂತ್ ನೀಡಿದ್ದ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ. '14 ವರ್ಷ ವಯಸ್ಸಿನ ತಮ್ಮ ಮಕ್ಕಳು ರಾತ್ರಿಪೂರ್ತಿ ಸಮುದ್ರ ತೀರದಲ್ಲಿ ಇರುತ್ತಾರೆ ಎಂದರೆ ಮಕ್ಕಳ ಪೋಷಕರು ಆತ್ಮಶೋಧನೆ ಮಾಡಿಕೊಳ್ಳಬೇಕಾಗುತ್ತದೆ. ಮಕ್ಕಳು ಮಾತು ಕೇಳುವುದಿಲ್ಲ ಎಂದ ಮಾತ್ರಕ್ಕೆ ಸರ್ಕಾರ ಮತ್ತು ಪೊಲೀಸರ ಮೇಲೆ ಜವಾಬ್ದಾರಿ ಹೊರಿಸಲು ಆಗುವುದಿಲ್ಲ' ಎಂದಿದ್ದರು.

ಪೋಷಕರು ತಮ್ಮ ಮಕ್ಕಳ ಸುರಕ್ಷತೆಯ ಜವಾಬ್ದಾರಿಯನ್ನು ಹೊತ್ತಿರಬೇಕು. ಅಪ್ರಾಪ್ತರನ್ನು ತಡ ರಾತ್ರಿ ಹೊರಗೆ ಬಿಡಬಾರದು ಎಂದು ಗೃಹ ಸಚಿವರೂ ಆಗಿರುವ ಅವರು ಹೇಳಿದ್ದರು.

ಈ ಹೇಳಿಕೆಗೆ ವಿಪಕ್ಷಗಳಿಂದ ಭಾರಿ ವಿರೋಧ ವ್ಯಕ್ತವಾಗಿದೆ. ಈ ಕುರಿತು ಪ್ರತಿಕ್ರಿಯೆ ನೀಡಿರುವ ಗೋವಾ ಕಾಂಗ್ರೆಸ್ ವಕ್ತಾರ ಅಲ್ಟೋನ್ ಡಿ'ಕೋಸ್ಟ, 'ಗೋವಾದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ರಾತ್ರಿ ಹೊರಗಡೆ ಓಡಾಡಲು ನಾವೇಕೆ ಹೆದರಬೇಕು. ಅಪರಾಧಿಗಳು ಜೈಲಿನಲ್ಲಿ ಇರಬೇಕು ಮತ್ತು ಸಾರ್ವಜನಿಕರು ಹೊರಗಡೆ ಮುಕ್ತವಾಗಿ ಓಡಾಡುವಂತಿರಬೇಕು' ಎಂದಿದ್ದಾರೆ.

ಗೋವಾ ಫಾರ್ವರ್ಡ್ ಪಕ್ಷದ ಶಾಸಕ ವಿಜಯ್ ಸರ್ದೇಸಾಯಿ ಪ್ರತಿಕ್ರಿಯೆ ನೀಡಿ, 'ಮುಖ್ಯಮಂತ್ರಿ ಅಂತಹ ಹೇಳಿಕೆ ನೀಡಿರುವುದು ಅಸಹ್ಯ ತರಿಸಿದೆ. ರಾಜ್ಯದ ಜನರ ರಕ್ಷಣೆಯು ಪೊಲೀಸರು ಮತ್ತು ರಾಜ್ಯ ಸರ್ಕಾರದ ಕರ್ತವ್ಯವಾಗಿದೆ. ಜನರಿಗೆ ಭದ್ರತೆ ಒದಗಿಸಲು ಆಗದಿದ್ದರೆ ಮುಖ್ಯಮಂತ್ರಿಗೆ ಆ ಸ್ಥಾನದಲ್ಲಿ ಕೂರುವ ಅರ್ಹತೆ ಇರುವುದಿಲ್ಲ' ಎಂದಿದ್ದಾರೆ.

ಪಕ್ಷೇತರ ಶಾಸಕ ರೋಹನ್ ಕೌಂತೆ ಈ ಕುರಿತು ಟ್ವೀಟ್ ಮಾಡಿದ್ದಾರೆ, 'ಮಕ್ಕಳನ್ನು ರಾತ್ರಿವೇಳೆ ಹೊರಬಿಟ್ಟಿದ್ದಕ್ಕೆ ಮುಖ್ಯಮಂತ್ರಿ ಪೋಷಕರನ್ನು ದೂಷಿಸಿದ್ದು ನನಗೆ ಆಶ್ಚರ್ಯ ತರಿಸಿತು. ಮಹಿಳೆಯರಿಗೆ ಸುರಕ್ಷಿತ ರಾಜ್ಯ ಎಂಬ ಇತಿಹಾಸ ಗೋವಾಕ್ಕೆ ಇತ್ತು. ಬಿಜೆಪಿ ಅಧಿಕಾರ ಹಿಡಿದ ಬಳಿಕ ಆ ಹೆಗ್ಗಳಿಗೆ ಮರೆಯಾಯಿತು' ಎಂದಿದ್ದಾರೆ.

ನಡೆದದ್ದು ಏನು?: ದಕ್ಷಿಣ ಗೋವಾದ ಬೆನೌಲಿಯಂ ಕರಾವಳಿ ತೀರಕ್ಕೆ ಭಾನುವಾರ 10 ಜನ ಯುವಕ ಯುವತಿಯರ ಗುಂಪೊಂದು ತೆರಳಿತ್ತು. ಅವರಲ್ಲಿ ಇಬ್ಬರು ಯುವಕರು ಮತ್ತು ಇಬ್ಬರು ಯುವತಿಯರು ರಾತ್ರಿ ಪೂರ್ತಿ ಸಮುದ್ರ ತೀರದಲ್ಲೇ ಕಾಲ ಕಳೆದಿದ್ದರು. ತಾವು ಪೊಲೀಸರು ಎಂದು ಹೇಳಿಕೊಂಡು ಬಂದ ನಾಲ್ವರು ಪುರುಷರು ಸ್ನೇಹಿತರ ಗುಂಪಿನಲ್ಲಿದ್ದ ಇಬ್ಬರು ಯುವಕರನ್ನು ಥಳಿಸಿ ಯುವತಿಯರ ಮೇಲೆ ಅತ್ಯಾಚಾರ ನಡೆಸಿದ್ದಾರೆ. ನಾಲ್ವರು ದುಷ್ಕರ್ಮಿಗಳನ್ನು ಬಂಧಿಸಲಾಗಿದೆ ಎಂದು ಸಾವಂತ್ ಹೇಳಿದ್ದಾರೆ.

ಸರ್ಕಾರಿ ಕೆಲಸದಿಂದ ಅಮಾನತು

ಬಂಧಿತರಲ್ಲಿ ಒಬ್ಬ ಕೃಷಿ ಇಲಾಖೆಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದಾನೆ. ಆತನನ್ನು ಸೇವೆಯಿಂದ ಅಮಾನತು ಮಾಡಲಾಗಿದೆ ಎಂದು ಪ್ರಮೋದ್ ಸಾವಂತ್ ವಿಧಾನಸಭೆಯಲ್ಲಿ ಗುರುವಾರ ತಿಳಿಸಿದರು. ಆತನನ್ನು ಕೆಲಸದಿಂದ ತೆಗೆದುಹಾಕಲು ಪ್ರಕ್ರಿಯೆಗಳು ನಡೆಯುತ್ತಿವೆ ಎಂದರು.

ಇಂಥ ಘಟನೆಗಳು ಮರಕಳಿಸದಂತೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಸಮುದ್ರ ತೀರಗಳು ಮತ್ತು ಜನ ಸಂಪರ್ಕ ಕಡಿಮೆ ಇರುವ ಪ್ರದೇಶಗಳಲ್ಲಿ ಪಹರೆ ಕಾರ್ಯವನ್ನು ತೀವ್ರಗೊಳಿಸಲಾಗಿದೆ ಎಂದು ಗೋವಾ ಪೊಲೀಸ್ ಮಹಾನಿರ್ದೇಶಕ ಮುಖೇಶ್ ಕುಮಾರ್ ಮೀನಾ ತಿಳಿಸಿದ್ದಾರೆ.

ಕೇರಳ ವಿಧಾನಸಭೆಯಲ್ಲಿನ ಗದ್ದಲ ಪ್ರಕರಣ

'ಶಿಕ್ಷಣ ಸಚಿವರ ರಾಜೀನಾಮೆ ಅಗತ್ಯವಿಲ್ಲ'

ತಿರುವನಂತಪುರ (ಪಿಟಿಐ): ಕೇರಳ ವಿಧಾನಸಭೆಯಲ್ಲಿ 2015ರಲ್ಲಿ ನಡೆದಿದ್ದ ಗದ್ದಲಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಪ್ರಕರಣ ಎದುರಿಸುತ್ತಿರುವ ಶಿಕ್ಷಣ ಸಚಿವ ವಿ.ಶಿವನ್ ಕುಟ್ಟಿ ಅವರ ರಾಜೀನಾಮೆಗೆ ವಿರೋಧ ಪಕ್ಷಗಳು ವಿಧಾನಸಭೆಯಲ್ಲಿ ಗುರುವಾರ ಆಗ್ರಹಿಸಿದವು.

ಆದರೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಶಿಕ್ಷಣ ಸಚಿವರು ರಾಜೀನಾಮೆ ನೀಡುವ ಅಗತ್ಯವಿಲ್ಲ ಎಂದು ವಿರೋಧ ಪಕ್ಷಗಳ ಬೇಡಿಕೆಯನ್ನು ತಳ್ಳಿಹಾಕಿದರು.

ಈ ಪ್ರಕರಣದಲ್ಲಿ ಶಿವನ್ ಕುಟ್ಟಿ ಸೇರಿದಂತೆ ಎಲ್‌ಡಿಎಫ್ ಶಾಸಕರ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ವಾಪಸ್ ಪಡೆಯುವಂತೆ ಕೋರಿ ಕೇರಳ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಬುಧವಾರ ತಿರಸ್ಕರಿಸಿತ್ತು. ಇದನ್ನು ಪ್ರಮುಖ ಅಸ್ತ್ರವಾಗಿಸಿಕೊಂಡ ವಿರೋಧ ಪಕ್ಷಗಳು ಗುರುವಾರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡವು.

ಸುಪ್ರೀಂ ಕೋರ್ಟ್ ತೀರ್ಪಿನ ಚರ್ಚೆ ಹಾಗೂ ಶಿಕ್ಷಣ ಸಚಿವರ ರಾಜೀನಾಮೆಗೆ ವಿರೋಧ ಪಕ್ಷಗಳು ಪಟ್ಟು ಹಿಡಿದವು. ಈ ವೇಳೆ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ವಾಕ್ಸಮರ ನಡೆಯಿತು.

ಪಿಣರಾಯಿ ವಿಜಯನ್

ಕ್ರಿಮಿನಲ್ ಪ್ರಕರಣ ಎದುರಿಸುತ್ತಿರುವ ಮಾರ್ಕ್ಸ್‌ವಾದಿ ನಾಯಕರು ನ್ಯಾಯಾಂಗ ವಿಚಾರಣೆಯನ್ನು ಎದುರಿಸಬೇಕು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದ ನಂತರವೂ ಶಿವನ್ ಕುಟ್ಟಿ ಅವರು ಸಚಿವರಾಗಿ ಮುಂದುವರಿಯುವುದು ಸರಿಯಲ್ಲ. ಅದು ಅನ್ಯಾಯ. ಕೂಡಲೇ ಮುಖ್ಯಮಂತ್ರಿ ಅವರು ಸಚಿವರಿಂದ ರಾಜೀನಾಮೆ ಪಡೆಯಬೇಕು ಅಥವಾ ಅವರನ್ನು ಆ ಸ್ಥಾನದಿಂದ ಕೆಳಗಿಳಿಸಬೇಕು ಎಂದು ವಿರೋಧ ಪಕ್ಷಗಳ ಸದಸ್ಯರು ಆಗ್ರಹಿಸಿದರು.

ವಿರೋಧ ಪಕ್ಷಗಳ ಬೇಡಿಕೆಯನ್ನು ತಿರಸ್ಕರಿಸಿದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು, ನ್ಯಾಯಾಲಯವು ಯಾವುದೇ ನಿರ್ದಿಷ್ಟ ವ್ಯಕ್ತಿಯನ್ನು ತಪ್ಪಿತಸ್ಥರೆಂದು ಹೇಳಿಲ್ಲ. ಹಾಗಾಗಿ ಶಿಕ್ಷಣ ಸಚಿವರು ರಾಜೀನಾಮೆ ನೀಡುವ ವಿಷಯ ಬರುವುದಿಲ್ಲ ಎಂದರು.

ಸಂವಿಧಾನ ಬದ್ಧವಾಗಿ ಶಾಸಕಾಂಗ ಮತ್ತು ಅದರ ಸದಸ್ಯರಿಗೆ ಕೆಲವು ಸವಲತ್ತುಗಳು ದೊರೆತಿವೆ. ಶಾಸಕಾಂಗದ ಈ ಸವಲತ್ತಿಗೆ ಸಂಬಂಧಿಸಿದ ವ್ಯವಸ್ಥೆಯನ್ನು ಸಂರಕ್ಷಿಸಲು ಸರ್ಕಾರ ಪ್ರಯತ್ನಿಸುತ್ತಿದೆ ಎಂದರು.

ಶಾಸಕಾಂಗ ಒಂದು ಸಾರ್ವಭೌಮ ಸಂಸ್ಥೆ. ಸದನದೊಳಗಿನ ಸಮಸ್ಯೆಗಳು ಅಲ್ಲಿಯೇ ಕೊನೆಗೊಳ್ಳಬೇಕು. ಅಂತಹ ಸಮಸ್ಯೆಗಳನ್ನು ಹೊರಗೆ ಎಳೆಯುವುದು ಶಾಸಕಾಂಗದ ಸಾರ್ವಭೌಮತ್ವವನ್ನು ಹಾಳುಮಾಡುವ ಪ್ರವೃತ್ತಿಯನ್ನು ಬಲಪಡಿಸಿದಂತಾಗುತ್ತದೆ ಎಂದು ವಿಜಯನ್ ವಿವರಿಸಿದರು.

ಈ ಪ್ರಕರಣದ ಆರೋಪಿ ಶಾಸಕರ ವಿರುದ್ಧ ಆಗಿನ ವಿಧಾನಸಭಾ ಸ್ಪೀಕರ್ ಆಗಲೇ ಕ್ರಮ ತೆಗೆದುಕೊಂಡಿದ್ದರು. ಈ ಸಂಬಂಧ ಆರೋಪಿಗಳನ್ನು ಅವರು ಸದನದಿಂದ ಅಮಾನತುಗೊಳಿಸಿದ್ದರು. ಒಂದೇ ಅಪರಾಧಕ್ಕೆ ಎರಡೆರಡು ಬಾರಿ ಶಿಕ್ಷೆ ನೀಡುವುದು ನಮ್ಮ ಕಾನೂನು ಪರಿಕಲ್ಪನೆಯ ಮೂಲ ಸಿದ್ಧಾಂತಗಳಿಗೆ ವಿರುದ್ಧವಾಗಿವೆ ಎಂದು ಅವರು ಹೇಳಿದರು.

ಅವರು ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು 1998 ರಿಂದ 2021ರ ನಡುವೆ ದೇಶದ ವಿವಿಧ ರಾಜ್ಯಗಳ ಶಾಸನ ಸಭೆಗಳಲ್ಲಿ ನಡೆದ ಹಿಂಸಾತ್ಮಕ ಘಟನೆಗಳ ವಿವರವಾದ ಪಟ್ಟಿಯನ್ನೂ ನೀಡಿದರು.

ಮುಖ್ಯಮಂತ್ರಿ ಅವರ ಉತ್ತರಕ್ಕೆ ಅಸಮಾಧಾನ ವ್ಯಕ್ತಪಡಿಸಿದ ವಿರೋಧ ಪಕ್ಷಗಳು ಸಭಾತ್ಯಾಗ ಮಾಡಿದವು.

ಸಂಕ್ಷಿಪ್ತ ಸುದ್ದಿ

ಮತ್ತೆ ಏರಿಕೆಯತ್ತ ಕೋವಿಡ್

ನವದೆಹಲಿ: ಗುರುವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆಗಳಲ್ಲಿ ದೇಶದಲ್ಲಿ 43,509 ಹೊಸ ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, 640 ಮಂದಿ ಕೋವಿಡ್ ಸೋಂಕಿತರು ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಇಲಾಖೆಯ ಪ್ರಕಟಣೆ ತಿಳಿಸಿದೆ.

ಈವರೆಗೆ ದೇಶದಲ್ಲಿ ಕೋವಿಡ್ ಸೋಂಕಿತರ ಒಟ್ಟು ಸಂಖ್ಯೆ 3,15,28,114ಕ್ಕೆ ಏರಿದೆ.

ಈ ಅವಧಿಯಲ್ಲಿ 38,465 ಸೋಂಕಿತರು ಗುಣಮುಖರಾಗಿದ್ದಾರೆ. ಚೇತರಿಕೆ ಪ್ರಮಾಣ ಶೇ 97.39ರಷ್ಟಿದ್ದು, ಸದ್ಯ, ದೇಶದಲ್ಲಿ 4,03,840 ಸಕ್ರಿಯ ಪ್ರಕರಣಗಳಿವೆ. ಈವರೆಗೆ ದೇಶದಲ್ಲಿ 45.07 ಕೋಟಿ ಡೋಸ್ ಲಸಿಕೆ ವಿತರಿಸಲಾಗಿದೆ.

'ಕೋವ್ಯಾಕ್ಸಿನ್' ಆಮದು ರದ್ದುಪಡಿಸಿದ ಬ್ರೆಜಿಲ್

ಹೈದರಾಬಾದ್ (ಪಿಟಿಐ): ಭಾರತ್ ಬಯೊಟೆಕ್‌ನ ಕೋವಿಡ್–19 'ಕೋವ್ಯಾಕ್ಸಿನ್' ಲಸಿಕೆಯ 40 ಲಕ್ಷ ಡೋಸ್‌ಗಳನ್ನು ಆಮದು ಮಾಡಿಕೊಳ್ಳುವ ನಿರ್ಧಾರವನ್ನು ಬ್ರೆಜಿಲ್ ರದ್ದುಗೊಳಿಸಿದೆ.

'ಕೋವ್ಯಾಕ್ಸಿನ್'ನ ಕ್ಲಿನಿಕಲ್ ಅಧ್ಯಯನವನ್ನು ಸ್ಥಗಿತಗೊಳಿಸಿದ ಬೆನ್ನಲ್ಲೇ ಬ್ರೆಜಿಲ್ ಈ ಕ್ರಮಕೈಗೊಂಡಿದೆ.

ಬ್ರೆಜಿಲ್‌ನ ಪ್ರೆಸಿಸಾ ಮೆಡಿಸಿಮೆಂಟೋಸ್ ಮತ್ತು ಎನ್ವಿಕ್ಸಿಯಾ ಫಾರ್ಮಾಸ್ಯುಟಿಕಲ್ಸ್ ಎಲ್‌ಎಲ್‌ಸಿ ಜತೆಗಿನ ಒಪ್ಪಂದವನ್ನು ರದ್ದುಗೊಳಿಸಲಾಗಿದೆ ಎಂದು ಭಾರತ್ ಬಯೋಟೆಕ್ ಕಂಪನಿ ಜುಲೈ 23ರಂದು ಬ್ರೆಜಿಲ್ ಸರ್ಕಾರಕ್ಕೆ ತಿಳಿಸಿತ್ತು. ಬ್ರೆಜಿಲ್‌ನಲ್ಲಿ ಕೋವ್ಯಾಕ್ಸಿನ್ ಪರಿಚಯಿಸುವ ಉದ್ದೇಶದಿಂದ ಭಾರತ್ ಬಯೋಟೆಕ್ ಈ ಎರಡೂ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡಿತ್ತು.

ಭಾರತ್ ಬಯೋಟೆಕ್ ತನ್ನ ನಿರ್ಧಾರ ಪ್ರಕಟಿಸಿದ ಬಳಿಕ ಬ್ರೆಜಿಲ್‌ನ ರಾಷ್ಟ್ರೀಯ ಆರೋಗ್ಯ ನಿಗಾ ಸಂಸ್ಥೆಯು 'ಕೋವ್ಯಾಕ್ಸಿನ್' ಆಮದು ಮಾಡಿಕೊಳ್ಳುವುದನ್ನು ರದ್ದುಪಡಿಸುವುದಾಗಿ ತಿಳಿಸಿದೆ.

ಎರಡು ಕೋಟಿ ಡೋಸ್ 'ಕೋವ್ಯಾಕ್ಸಿನ್' ಪೂರೈಕೆಗೆ ಸಂಬಂಧಿಸಿದಂತೆ ಬ್ರೆಜಿಲ್ ಸರ್ಕಾರದ ಜತೆ ಮಾಡಿಕೊಳ್ಳಲಾದ ಒಪ್ಪಂದವು ವಿವಾದಕ್ಕೀಡಾಗಿತ್ತು. ಈ ಬಗ್ಗೆ ಬ್ರೆಜಿಲ್‌ನಲ್ಲಿ ಅಧಿಕಾರಿಗಳು ತನಿಖೆಯನ್ನು ಕೈಗೊಂಡಿದ್ದಾರೆ.

ವಿದೇಶಗಳಿಗೆ ಲಸಿಕೆ ರವಾನೆ

ನವದೆಹಲಿ (ಪಿಟಿಐ): ಭಾರತ ಈ ವರ್ಷದ ಜನವರಿ 12 ರಿಂದ ಜುಲೈ 22ರ ಅವಧಿಯಲ್ಲಿ ಒಟ್ಟು 6.4 ಕೋಟಿ ಕೋವಿಡ್ ಲಸಿಕೆಗಳನ್ನು ವಿದೇಶಗಳಿಗೆ ಕಳುಹಿಸಿಕೊಟ್ಟಿದೆ ಎಂದು ಕೇಂದ್ರ ಸರ್ಕಾರ ಗುರುವಾರ ಸಂಸತ್ತಿಗೆ ಮಾಹಿತಿ ನೀಡಿದೆ.

ಲೋಕಸಭೆಯಲ್ಲಿ ಈ ಕುರಿತು ಲಿಖಿತ ಉತ್ತರ ನೀಡಿದ ನಾಗರಿಕ ವಿಮಾನಯನ ಸಚಿವ ವಿ.ಕೆ.ಸಿಂಗ್, ಈ ಅವಧಿಯಲ್ಲಿ ಒಟ್ಟಾಗಿ 42.2 ಕೋಟಿ ಡೋಸ್ ಲಸಿಕೆಗಳನ್ನು ವಿಮಾನಗಳ ಮೂಲಕ ರವಾನಿಸಲಾಗಿದೆ ಎಂದು ತಿಳಿಸಿದ್ದಾರೆ. ಈ ಪೈಕಿ 35.8 ಕೋಟಿ ಡೋಸ್ ಲಸಿಕೆಗಳನ್ನು ದೇಶೀಯ ವಿಮಾನಗಳ ಮೂಲಕ ಕಳುಹಿಸಲಾಗಿದೆ. ಇದೇ ಅವಧಿಯಲ್ಲಿ ದೇಶದಾದ್ಯಂತ ನೀಡಲಾಗಿರುವ ಲಸಿಕೆಯ ಪ್ರಮಾಣ 45 ಕೋಟಿಗೂ ಅಧಿಕವಾಗಿದೆ. ಇವರಲ್ಲಿ 18–44 ವರ್ಷದವರಿಗೆ ನೀಡಿದ 15.38 ಕೋಟಿ ಡೋಸ್ ಲಸಿಕೆಗಳು ಸೇರಿವೆ ಎಂದೂ ತಿಳಿಸಿದ್ದಾರೆ.

ಅಥ್ಲೆಟಿಕ್ಸ್ ಸ್ಪರ್ಧೆಗಳು ಇಂದಿನಿಂದ: ಮೊದಲ ದಿನ ಸ್ಪ್ರಿಂಟ್ ವಿಭಾಗದ ಹೀಟ್ಸ್, 10,000 ಮೀಟರ್ಸ್ ಓಟದ ಫೈನಲ್

ಎತ್ತರದ ಸಾಧನೆಯ ಕನಸು...

ಟೋಕಿಯೊ (ಪಿಟಿಐ/ಎಎಫ್‌ಪಿ): ದೂರ ಮತ್ತು ಎತ್ತರದಲ್ಲಿ ಹೊಸ ಮೈಲುಗಲ್ಲು ಸ್ಥಾಪಿಸುವ ಕನಸು ಹೊತ್ತುಕೊಂಡು ವಿಶ್ವದ ಶ್ರೇಷ್ಠ ಅಥ್ಲೀಟ್‌ಗಳು ಶುಕ್ರವಾರ ಟ್ರ್ಯಾಕ್ ಮತ್ತು ಫೀಲ್ಡ್‌ಗೆ ಇಳಿಯಲಿದ್ದಾರೆ.

ಓಟ, ಜಿಗಿತ, ಎಸೆತಗಳ ಮೇಳ ಆರಂಭಗೊಳ್ಳುವುದರೊಂದಿಗೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಹೊಸ ಹುರುಪು ಕಾಣಿಸಿಕೊಳ್ಳಲಿದ್ದು ಕೊನೆಯ 10 ದಿನ ಇತರ ಕ್ರೀಡೆಗಳೊಂದಿಗೆ ಅಥ್ಲೆಟಿಕ್ಸ್ ಕೂಡ ಪದಕ ಗಳಿಕೆಯ ಪ್ರಮುಖ ದಾರಿಯಾಗಲಿದೆ.

ಉಸೇನ್ ಬೋಲ್ಟ್ ನಂತರ ಜಗತ್ತಿನ ಅತಿ ವೇಗದ ವ್ಯಕ್ತಿ ಯಾರು ಎಂಬ ಕುತೂಹಲ ಕ್ರೀಡಾಪ್ರೇಮಿಗಳಲ್ಲಿ ಮೂಡಿದೆ. 100 ಮೀಟರ್ಸ್ ಓಟದ ಹೀಟ್ಸ್‌ನೊಂದಿಗೆ ಈ ಬಾರಿಯ ಅಥ್ಲೆಟಿಕ್ಸ್‌ಗೆ ಚಾಲನೆ ಸಿಗಲಿದೆ. ಮೊದಲ ದಿನವೇ ಫೈನಲ್ ಸ್ಪರ್ಧೆಯೊಂದಕ್ಕೆ ಸಾಕ್ಷಿಯಾಗುವ ಅವಕಾಶವೂ ಕ್ರೀಡಾಜಗತ್ತಿಗೆ ಲಭಿಸಿದೆ. ಒಲಿಂಪಿಕ್ ಕ್ರೀಡಾಂಗಣದಲ್ಲಿ 10,000 ಮೀಟರ್ಸ್ ಓಟದ ಫೈನಲ್‌ನೊಂದಿಗೆ ಮೊದಲ ದಿನದ ಸ್ಪರ್ಧೆಗಳು ಮುಕ್ತಾಯಗೊಳ್ಳಲಿವೆ.

ಪುರುಷರ ಮೂರು ಸಾವಿರ ಮೀಟರ್ಸ್ ಸ್ಟೀಪಲ್ ಚೇಸ್, ಮಹಿಳೆಯರ 800 ಮೀಟರ್ಸ್ ಓಟ, ಪುರುಷರ 400 ಮೀಟರ್ಸ್ ಹರ್ಡಲ್ಸ್, ಮಹಿಳೆಯರ 100 ಮತ್ತು 5000 ಮೀಟರ್ಸ್ ಓಟ, ಟ್ರಿಪಲ್ ಜಂಪ್ ಮತ್ತು ಮಿಶ್ರ ರಿಲೇಗಳ ಪ್ರಾಥಮಿಕ ಹಂತದ ಸ್ಪರ್ಧೆಗಳು ಕೂಡ ಮೊದಲ ದಿನದ ಪ್ರಮುಖ ಆಕರ್ಷಣೆಯಾಗಿದೆ.

ಎರಡನೇ ದಿನ ಮಹಿಳೆಯರ 100 ಮೀಟರ್ಸ್ ಸೇರಿದಂತೆ ಒಟ್ಟು ಮೂರು ಫೈನಲ್ ಸ್ಪರ್ಧೆಗಳು ನಡೆಯಲಿವೆ. ನಾಲ್ಕನೇ ದಿನದ ಫೈನಲ್‌ಗಳ ಸಂಖ್ಯೆ ಹೆಚ್ಚಾಗಲಿರುವುದರಿಂದ ಪದಕಗಳ ಬೇಟೆಗಾಗಿ ಅಥ್ಲೀಟ್‌ಗಳ ಪೈಪೋಟಿಯೂ ಹೆಚ್ಚಲಿದೆ.

26
ಟ್ರ್ಯಾಕ್–ಫೀಲ್ಡ್‌ನಲ್ಲಿ ಪಾಲ್ಗೊಳ್ಳುವ ಭಾರತದ ಅಥ್ಲೀಟ್‌ಗಳು

150
ಅಮೆರಿಕವನ್ನು ಪ್ರತಿನಿಧಿಸುವ ಅಥ್ಲೀಟ್‌ಗಳು

58
ಜಮೈಕಾದ ಟ್ರ್ಯಾಕ್–ಫೀಲ್ಡ್ ಅಥ್ಲೀಟ್‌ಗಳ ಸಂಖ್ಯೆ

14
ಟ್ರ್ಯಾಕ್–ಫೀಲ್ಡ್‌ನಲ್ಲಿರುವ ಸ್ಪರ್ಧಾ ವಿಭಾಗ

ಕೆಂಡ್ರಿಕ್ಸ್‌ಗೆ ಕೋವಿಡ್

ಎರಡು ಬಾರಿಯ ವಿಶ್ವ ಚಾಂಪಿಯನ್, ಅಮೆರಿಕದ ಸ್ಯಾಮ್ ಕೆಂಡ್ರಿಕ್ಸ್ ಕೋವಿಡ್ ಸೋಂಕಿಗೆ ಒಳಗಾಗಿದ್ದು ಪೋಲ್‌ವಾಲ್ಟ್ ಸ್ಪರ್ಧೆಗೆ ಅಲಭ್ಯರಾಗಲಿದ್ದಾರೆ ಎಂದು ಅಮೆರಿಕ ಒಲಿಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್ಸ್ ಸಮಿತಿ ಗುರುವಾರ ತಿಳಿಸಿದೆ.

2017 ಮತ್ತು 2019ರ ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಚಿನ್ನ ಗಳಿಸಿದ್ದ ಕೆಂಡ್ರಿಕ್ಸ್ ಟೋಕಿಯೊದಲ್ಲಿ ಪದಕ ಗೆಲ್ಲುವ ನೆಚ್ಚಿನ ಅಥ್ಲೀಟ್ ಎನಿಸಿಕೊಂಡಿದ್ದರು.

ವಿಶ್ವ ದಾಖಲೆಯನ್ನು ಹೊಂದಿರುವ ಸ್ವೀಡನ್‌ನ ಅರ್ಮಾಂಡ್ ಡುಪ್ಲಾಂಟಿಸ್ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಕೆಂಡ್ರಿಕ್ಸ್ ಈಗ ಪ್ರತ್ಯೇಕವಾಸದಲ್ಲಿದ್ದಾರೆ.

ಅರ್ಜೆಂಟೀನಾದ ಪೋಲ್‌ವಾಲ್ಟರ್ ಜರ್ಮನ್ ಚಿಯಾರವಿಲಿಯೊ ಕೂಡ ಸೋಂಕಿಗೆ ಒಳಗಾಗಿರುವುದರಿಂದ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ತಿಳಿಸಿದ್ದಾರೆ.

ನೀರಜ್ ಚೋಪ್ರಾ —ರಾಯಿಟರ್ಸ್ ಚಿತ್ರ

ದ್ಯುತಿ ಚಾಂದ್ —ಪಿಟಿಐ ಚಿತ್ರ

ದ್ಯುತಿ, ನೀರಜ್ ಮೇಲೆ ನಿರೀಕ್ಷೆ

ಅಥ್ಲೆಟಿಕ್ಸ್‌ನಲ್ಲಿ ಭಾರತ ಮಹತ್ವದ ಸಾಧನೆಯನ್ನೇನೂ ಮಾಡಿಲ್ಲ. ಈ ಬಾರಿ ನೀರಜ್ ಚೋಪ್ರಾ ಮತ್ತು ದ್ಯುತಿ ಚಾಂದ್ ಮೇಲೆ ನಿರೀಕ್ಷೆ ಇರಿಸಿಕೊಂಡಿದೆ. 23 ವರ್ಷದ ಚೋಪ್ರಾ ಜಾವೆಲಿನ್ ಎಸೆತದಲ್ಲಿ ವಿಶ್ವದಲ್ಲಿ ನಾಲ್ಕನೇ ಕ್ರಮಾಂಕದ ಅಥ್ಲೀಟ್ ಆಗಿದ್ದಾರೆ. ಕೋವಿಡ್‌ನಿಂದಾಗಿ ಇತರ ಅಥ್ಲೀಟ್‌ಗಳಿಗೆ ಅಭ್ಯಾಸ ಮಾಡಲು ಹೆಚ್ಚು ಅವಕಾಶಗಳು ಲಭಿಸಲಿಲ್ಲ. ಈ ನಡುವೆ ನೀರಜ್ ಮಾತ್ರ ಯುರೋಪ್‌ನಲ್ಲಿ ತರಬೇತಿ ಪಡೆದುಕೊಂಡಿದ್ದಾರೆ.

ಫಿನ್ಲೆಂಡ್‌ನಲ್ಲಿ ನಡೆದ ಕ್ರೀಡಾಕೂಟದಲ್ಲಿ ಅವರು 86.79 ಮೀಟರ್ಸ್ ದೂರದ ಸಾಧನೆ ಮಾಡಿದ್ದರು. ಒಲಿಂಪಿಕ್ಸ್‌ನಲ್ಲಿ ಅವರಿಗೆ ಜರ್ಮನಿಯ ಜೊಹಾನ್ಸ್ ವೆಟರ್ ಸವಾಲೆಸೆಯಲಿದ್ದಾರೆ.

ಜೊಹಾನ್ಸ್ ಅವರ ಇತ್ತೀಚಿನ ಸಾಧನೆ 93.59 ಮೀಟರ್ಸ್ ಆಗಿದೆ. ರಾಷ್ಟ್ರೀಯ ದಾಖಲೆ ಮುರಿದ ಕ್ರೀಡಾಕೂಟದಲ್ಲಿ ಚೋಪ್ರಾ 88.07 ಮೀಟರ್ಸ್ ದೂರದ ಸಾಧನೆ ಮಾಡಿದ್ದಾರೆ.

ಡಿಸ್ಕಸ್ ಥ್ರೋವರ್ ಕಮಲ್‌ಪ್ರೀತ್ ಕೌರ್ ವಿಶ್ವ ರ್‍ಯಾಂಕಿಂಗ್‌ನಲ್ಲಿ ಆರನೇ ಸ್ಥಾನದಲ್ಲಿದ್ದು ಒಲಿಂಪಿಕ್ಸ್ ಪದಕದ ಮೇಲೆ ಕಣ್ಣಿಟ್ಟಿದ್ದಾರೆ. ಪದಕ ಗೆಲ್ಲಲಾಗದೇ ಇದ್ದರೂ ಅವರು ಅಗ್ರ ಐದರಲ್ಲಿ ಸ್ಥಾನ ಗಳಿಸುವ ಸಾಧ್ಯತೆ ಇದೆ.

ಏಷ್ಯನ್ ಗೇಮ್ಸ್ ಚಾಂಪಿಯನ್ ತಜಿಂದರ್ ಸಿಂಗ್ ತೂರ್ ಅವರು ಶಾಟ್‌ಪಟ್‌ನಲ್ಲಿ ಭರವಸೆ ಮೂಡಿಸಿದ್ದಾರೆ.

ಮೂರು ಸಾವಿರ ಮೂಟರ್ಸ್ ಸ್ಟೀಪಲ್ ಚೇಸ್‌ನಲ್ಲಿ ಅವಿನಾಶ್ ಸಬ್ಲೆ ಮತ್ತು ಲಾಂಗ್‌ಜಂಪ್‌ನಲ್ಲಿ ಶ್ರೀಶಂಕರ್ ಮೇಲೆ ನಿರೀಕ್ಷೆ ಇದೆ.

ಮಹಿಳೆಯರ 100 ಮೀಟರ್ಸ್ ಓಟದಲ್ಲಿ ದ್ಯುತಿ ಚಾಂದ್ ಮತ್ತು ಪುರುಷರ 400 ಮೀಟರ್ಸ್ ಓಟದಲ್ಲಿ ಎಂ.ಪಿ. ಜಬೀರ್ ಗಮನ ಸೆಳೆಯುವ ನಿರೀಕ್ಷೆ ಇದ್ದು ಮಿಶ್ರ ರಿಲೇಯಲ್ಲೂ ಮಿಂಚಲು ಭಾರತದ ಅಥ್ಲೀಟ್‌ಗಳು ಕಾತರರಾಗಿದ್ದಾರೆ.

ಮಿಶ್ರ ರಿಲೆ ಪದಾರ್ಪಣೆ

ಅಥ್ಲೆಟಿಕ್ಸ್ ಕ್ಷೇತ್ರಕ್ಕೆ ಹೊಸದಾಗಿ ಸೇರಿಸಲಾಗಿರುವ 400 ಮೀಟರ್ಸ್ ಮಿಶ್ರ ರಿಲೆ ಸ್ಪರ್ಧೆ ಒಲಿಂಪಿಕ್ಸ್‌ಗೆ 'ಪದಾರ್ಪಣೆ' ಮಾಡಲು ಸಜ್ಜಾಗಿದೆ. ಟೋಕಿಯೊದಲ್ಲಿ ಅಥ್ಲೆಟಿಕ್ಸ್ ಸ್ಪರ್ಧೆಗಳ ಮೊದಲ ದಿನವೇ ಮಿಶ್ರ ರಿಲೆಯ ರೋಚಕತೆ ಮುದ ನೀಡಲಿದೆ. ತಂಡವನ್ನು ತಲಾ ಇಬ್ಬರು ಪುರುಷ ಮತ್ತು ಮಹಿಳಾ ಅಥ್ಲೀಟ್‌ಗಳು ಪ್ರತಿನಿಧಿಸುವ ಸ್ಪರ್ಧೆಯ ಫೈನಲ್ ಶನಿವಾರ ನಡೆಯಲಿದೆ.

ನಾಲ್ವರು ಅಥ್ಲೀಟ್‌ಗಳ ಪೈಕಿ ಪುರುಷ ಮತ್ತು ಮಹಿಳೆಯರನ್ನು ಯಾವ ಲೆಗ್‌ನಲ್ಲಿ ಬೇಕಾದರೂ ಬಳಸಿಕೊಳ್ಳಲು ಮುಕ್ತ ಅವಕಾಶವಿದೆ. ಹೀಗಾಗಿ ತಂಡಗಳು ಹೆಣೆಯುವ ತಂತ್ರಗಳು ಕೂಡ ಮುಖ್ಯ. ಭಾರತವೂ ಮಿಶ್ರ ರಿಲೆಯಲ್ಲಿ ಪಾಲ್ಗೊಳ್ಳುತ್ತಿದ್ದು ಸಾರ್ಥಕ್ ಭಾಂಬ್ರಿ, ಅಲೆಕ್ಸ್ ಆ್ಯಂಟನಿ, ರೇವತಿ ವೀರಮಣಿ, ಶುಭಾ ವೆಂಕಟೇಶನ್ ಮತ್ತು ಧನಲಕ್ಷ್ಮಿ ಶೇಖರ್ ತಂಡದಲ್ಲಿದ್ದಾರೆ. ಈ ಪೈಕಿ ಟ್ರ್ಯಾಕ್‌ಗೆ ಇಳಿಯುವ ನಾಲ್ವರು ಯಾರು ಎಂಬುದೇ ಕುತೂಹಲ. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿರುವ ಅಮೆರಿಕ ಚಾಂಪಿಯನ್ ಆಗುವ ನೆಚ್ಚಿನ ತಂಡ ಎನಿಸಿಕೊಂಡಿದೆ.

- ಭಾರತ ಸ್ಪರ್ಧಿಸುವ ವಿಭಾಗಗಳು
- ಪುರುಷರ 20 ಕಿಮೀ ವೇಗ ನಡಿಗೆ
- ಮಹಿಳೆಯರ 20 ಕಿಮೀ ವೇಗ ನಡಿಗೆ
- ಪುರುಷರ 3000 ಮೀ ಸ್ಟೀಪಲ್ ಚೇಸ್
- ಪುರುಷರ ಲಾಂಗ್‌ಜಂಪ್
- ಪುರುಷರ 400 ಮೀ ಹರ್ಡಲ್ಸ್
- ಪುರುಷರ ಜಾವೆಲಿನ್ ಥ್ರೋ
- ಮಹಿಳೆಯರ ಜಾವೆಲಿನ್ ಥ್ರೋ
- ಪುರುಷರ ಶಾಟ್‌ಪಟ್
- ಮಹಿಳೆಯರ 100 ಮೀ ಓಟ
- ಮಹಿಳೆಯರ 200 ಮೀ ಓಟ
- ಮಹಿಳೆಯರ ಡಿಸ್ಕಸ್ ಥ್ರೋ
- ಮಿಶ್ರ ವಿಭಾಗದ 4x400 ಮೀ ರಿಲೆ
- ಪುರುಷರ 4x400 ಮೀ ರಿಲೆ

ಅಮೆರಿಕ, ಜಮೈಕಾ ಪಾರಮ್ಯ

ಶೆಲ್ಲಿ ಆ್ಯನ್ ಫ್ರೇಸರ್ ಪ್ರೈಸ್ —ಎಎಫ್‌ಪಿ ಚಿತ್ರ

ಒಲಿಂಪಿಕ್ಸ್ ಮತ್ತು ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಅಮೆರಿಕ, ಕೆರಿಬಿಯನ್ ಮತ್ತು ಆಫ್ರಿಕಾದ ತಾರೆಗಳದೇ ಮೇಲುಗೈ. ಸ್ಪ್ರಿಂಟ್ ವಿಭಾಗದಲ್ಲಿ ಅಮೆರಿಕ ಮತ್ತು ಕೆರಿಬಿಯನ್ ಅಥ್ಲೀಟ್‌ಗಳು ಮಿಂಚಿದರೆ ದೂರ ಅಂತರದ ಓಟದಲ್ಲಿ ಆಫ್ರಿಕಾ ಕ್ರೀಡಾಪಟುಗಳು ಪಾರುಪತ್ಯ ಮೆರೆದಿದ್ದಾರೆ. ಈ ಬಾರಿಯೂ ಇವರ ಮೇಲೆಯೇ ಕಣ್ಣು. ಪುರುಷರ ಸ್ಪ್ರಿಂಟ್‌ನಲ್ಲಿ ವಿಶ್ವ ಚಾಂಪಿಯನ್ ಮತ್ತು ಒಲಿಂಪಿಕ್ಸ್ ಚಾಂಪಿಯನ್ ಜಮೈಕಾದ ಉಸೇನ್ ಬೋಲ್ಟ್ ಅವರ ಅನುಪಸ್ಥಿತಿ ಕ್ರೀಡಾಪ್ರಿಯರನ್ನು ಕಾಡಲಿದೆ. ಅವರ ಉತ್ತರಾಧಿಕಾರಿ ಎಂದೇ ಹೇಳಲಾಗುವ ಅಮೆರಿಕದ ನೋಹ್ ಲೈಲ್ಸ್ ಕೂಟದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಜಮೈಕಾದ ಯೊಹಾನ್ ಬ್ಲೇಕ್ 100 ಮೀ ಮತ್ತು 200 ಮೀ ಓಟದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಶೆಲ್ಲಿ ಆ್ಯನ್ ಫ್ರೇಸ್ ಪ್ರೈಸ್ ಕೂಡ ಈ ಎರಡು ವಿಭಾಗಗಳಲ್ಲಿ ಜಮೈಕಾದ ಭರವಸೆ ಎನಿಸಿದ್ದಾರೆ. ಶೆಲ್ಲಿ, ಲಂಡನ್ ಒಲಿಂಪಿಕ್ಸ್‌ನ 100 ಮೀಟರ್ಸ್ ಓಟದಲ್ಲಿ ಚಿನ್ನ ಗೆದ್ದಿದ್ದರು. ಅಮೆರಿಕದ ಅಲಿಸನ್ ಫೆಲಿಕ್ಸ್ ಕೂಡ ಚಿನ್ನ ಗೆಲ್ಲುವ ನಿರೀಕ್ಷೆ ಮೂಡಿಸಿದ್ದಾರೆ. ರಿಯೊ ಒಲಿಂಪಿಕ್ಸ್‌ನ 100 ಮತ್ತು 200 ಮೀಟರ್ಸ್ ಓಟದ ಚಾಂಪಿಯನ್ ಎಲೈನ್ ಥಾಮ್ಸನ್, 400 ಮೀಟರ್ಸ್‌ನಲ್ಲಿ ವಿಶ್ವ ದಾಖಲೆ ಬರೆದಿರುವ ದಕ್ಷಿಣ ಆಫ್ರಿಕಾದ ವೈಡೆ ವ್ಯಾನ್ ನೀಕರ್ಕ್ ಮುಂತಾದವರೂ ಮಿಂಚಿನ ಸಂಚಾರ ಮೂಡಿಸಲು ಸಜ್ಜಾಗಿದ್ದಾರೆ.



ಯೊಹಾನ್ ಬ್ಲೇಕ್ —ಎಎಫ್‌ಪಿ ಚಿತ್ರ

ನೋಹ್ ಲೈಲ್ಸ್ —ಎಎಫ್‌ಪಿ ಚಿತ್ರ

ಪದಕ ಪಟ್ಟಿ				
ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	15	7	9	31
ಜಪಾನ್	15	4	6	25
ಅಮೆರಿಕ	14	14	10	38
ಆರ್‌ಒಸಿ*	8	11	9	28
ಆಸ್ಟ್ರೇಲಿಯಾ	8	2	10	20
ಭಾರತ (46ನೇ ಸ್ಥಾನ)	0	1	0	1

*ರಷ್ಯಾದ ಕ್ರೀಡಾಪಟುಗಳು ರಷ್ಯಾ ಒಲಿಂಪಿಕ್ ಸಮಿತಿಯ ಹೆಸರಿನಲ್ಲಿ ಸ್ಪರ್ಧಿಸುತ್ತಿದ್ದಾರೆ

ಡೋಪಿಂಗ್: 18 ಅಥ್ಲೀಟ್‌ಗಳು ಅನರ್ಹ

ಟೋಕಿಯೊ (ಎಎಫ್‌ಪಿ): ಉದ್ದೀಪನ ಮದ್ದು ಪರೀಕ್ಷಾ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ 18 ಅಥ್ಲೀಟ್‌ಗಳನ್ನು ಅನರ್ಹಗೊಳಿಸಲಾಗಿದೆ ಎಐಯು ತಿಳಿಸಿದೆ.

ಇದರಲ್ಲಿ ನೈಜೀರಿಯಾದ 10 ಅಥ್ಲೀಟ್‌ಗಳು ಸೇರಿದ್ದಾರೆ ಎಂದು ಎಐಯು ತಿಳಿಸಿದೆ. ಉದ್ದೀಪನ ಮದ್ದು ಸೇವನೆ ನಿಯಮಗಳನ್ನು ಉಲ್ಲಂಘಿಸುತ್ತಿರುವ 'ಅಪಾಯಕಾರಿ' ಪಟ್ಟಿಯಲ್ಲಿರುವ ದೇಶಗಳಿಂದ ಭಾಗವಹಿಸುವ ಅಥ್ಲೀಟ್‌ಗಳು, 2019ರಲ್ಲಿ ಜಾರಿಗೆ ತಂದ ನಿಯಮಗಳನ್ನು ಪಾಲಿಸುವಲ್ಲಿ ವಿಫಲರಾಗಿದ್ದಾರೆ ಎಂದು ಎಐಯು ತಿಳಿಸಿದೆ.

ಸ್ಪರ್ಧಾ ಸಮಯ

ಸಮಯ	ಸ್ಪರ್ಧೆ
ಆರ್ಚರಿ	
ಬೆಳಿಗ್ಗೆ 6 ಗಂಟೆ	ಮಹಿಳಾ ವೈಯಕ್ತಿಕ ವಿಭಾಗದ ಪ್ರೀಕ್ವಾರ್ಟರ್‌ಫೈನಲ್ (ದೀಪಿಕಾ ಕುಮಾರಿ)
ಅಥ್ಲೆಟಿಕ್ಸ್	
ಬೆಳಿಗ್ಗೆ 5.30	ಮಹಿಳೆಯರ 100 ಮೀ, 800 ಮೀ. ಹೀಟ್ಸ್ (ದ್ಯುತಿ ಚಾಂದ್)
ಬೆಳಿಗ್ಗೆ 5.45	ಪುರುಷರ ಹೈ ಜಂಪ್ ಅರ್ಹತಾ ಸುತ್ತುಗಳು
ಬೆಳಿಗ್ಗೆ 6.17	ಪುರುಷರ 3000 ಮೀ. ಸ್ಟೀಪಲ್‌ಚೇಸ್ ಹೀಟ್ಸ್ (ಅವಿನಾಶ್ ಸಬ್ಳೆ)
ಬೆಳಿಗ್ಗೆ 8.27	ಪುರುಷರ 400 ಮೀ.ಹರ್ಡಲ್ಸ್ ಮೊದಲ ಸುತ್ತಿನ ಹೀಟ್ಸ್ (ಎಂ. ಪಿ.ಜಬೀರ್)
ಬೆಳಿಗ್ಗೆ 7.50	ಪುರುಷರ ಡಿಸ್ಕಸ್ ಥ್ರೊ ಅರ್ಹತಾ ಸುತ್ತುಗಳು
ಮಧ್ಯಾಹ್ನ 3.30	ಮಹಿಳೆಯರ 5000 ಮೀ. ಹೀಟ್ಸ್
ಸಂಜೆ 4.42	4X400 ಮೀ. ಮಿಶ್ರ ರಿಲೇ ಮೊದಲ ಸುತ್ತಿನ ಹೀಟ್ಸ್ (ಅಲೆಕ್ಸ್ ಆ್ಯಂಟನಿ, ಸಾರ್ಥಕ್ ಭಾಂಬ್ರಿ, ರೇವತಿ ವೀರಮಣಿ, ಶುಭಾ ವೆಂಕಟೇಶನ್)
ಸಂಜೆ 5 ಗಂಟೆ	ಪುರುಷರ 10 ಸಾವಿರ ಮೀ. ಫೈನಲ್
ಬ್ಯಾಡ್ಮಿಂಟನ್	
ಮಧ್ಯಾಹ್ನ 1.15	ಮಹಿಳಾ ಸಿಂಗಲ್ಸ್ ಕ್ವಾರ್ಟರ್‌ಫೈನಲ್ (ಪಿ. ವಿ.ಸಿಂಧು)
ಬಾಕ್ಸಿಂಗ್	
ಬೆಳಿಗ್ಗೆ 7.30	ಮಹಿಳೆಯರ ಲೈಟ್‌ವೇಟ್ ಪ್ರೀಕ್ವಾರ್ಟರ್‌ಫೈನಲ್ (ಸಿಮ್ರನ್‌ಜೀತ್ ಕೌರ್).
ಬೆಳಿಗ್ಗೆ 8.48	ಮಹಿಳೆಯರ ವೆಲ್ಟರ್‌ವೇಟ್ ಕ್ವಾರ್ಟರ್‌ಫೈನಲ್ 2 (ಲವ್ಲಿನಾ ಬೊರ್ಗೊಹೈನ್)

ಸಮಯ	ಸ್ಪರ್ಧೆ
ಈಕ್ವೆಸ್ಟ್ರಿಯನ್	
ಬೆಳಿಗ್ಗೆ 5	ಇವೆಂಟಿಂಗ್ ವೈಯಕ್ತಿಕ ಅರ್ಹತಾ ಸುತ್ತು (ಫವಾದ್ ಮಿರ್ಜಾ)
ಕೆನೊಯ್ ಸ್ಲೇಲಮ್	
ಮಧ್ಯಾಹ್ನ 12.30	ಪುರುಷರ ಕಯಾಕ್ ಫೈನಲ್
ಗಾಲ್ಫ್	
ಬೆಳಿಗ್ಗೆ 4 ಗಂಟೆ	ಪುರುಷರ ವೈಯಕ್ತಿಕ ವಿಭಾಗದ ಸ್ಟ್ರೋಕ್‌ಪ್ಲೇ 2ನೇ ಸುತ್ತು (ಅನಿರ್ಬನ್ ಲಾಹಿರಿ, ಉದಯನ್ ಮಾನೆ)
ಶೂಟಿಂಗ್	
ಬೆಳಿಗ್ಗೆ 5.30	ಮಹಿಳೆಯರ 25 ಮೀ. ರ್‍ಯಾಪಿಡ್ ಪಿಸ್ತೂಲ್ ಅರ್ಹತಾ ಸುತ್ತು (ಮನು ಭಾಕರ್, ರಾಹಿ ಸರ್ನೋಬತ್)
ಬೆಳಿಗ್ಗೆ 11.20	ಮಹಿಳೆಯರ 25 ಮೀ. ಪಿಸ್ತೂಲ್ ಫೈನಲ್
ಈಜು	
ಬೆಳಿಗ್ಗೆ 7.11	ಮಹಿಳೆಯರ 200 ಮೀ. ಬ್ರೆಸ್ಟ್‌ಸ್ಟ್ರೋಕ್ ಫೈನಲ್
ಬೆಳಿಗ್ಗೆ 7.20	ಪುರುಷರ 200 ಮೀ. ಬ್ಯಾಕ್‌ಸ್ಟ್ರೋಕ್ ಫೈನಲ್
ಬೆಳಿಗ್ಗೆ 7.29	ಮಹಿಳೆಯರ 100 ಮೀ. ಫ್ರೀಸ್ಟೈಲ್ ಫೈನಲ್
ಬೆಳಿಗ್ಗೆ 7.46	ಪುರುಷರ 200 ಮೀ. ವೈಯಕ್ತಿಕ ಮೆಡ್ಲೆ ಫೈನಲ್
ಟೆನಿಸ್	
ಬೆಳಿಗ್ಗೆ 11.30	ಪುರುಷರ ಸಿಂಗಲ್ಸ್ ಸೆಮಿಫೈನಲ್
ಬೆಳಿಗ್ಗೆ 11.30	ಪುರುಷರ ಡಬಲ್ಸ್ ಫೈನಲ್
ಹಾಕಿ (ಮಹಿಳಾ ತಂಡ)	
ಬೆಳಿಗ್ಗೆ 8.15	ಭಾರತ–ಐರ್ಲೆಂಡ್
ಪುರುಷರ ತಂಡ	
ಮಧ್ಯಾಹ್ನ 3 ಗಂಟೆ	ಭಾರತ–ಜಪಾನ್

(ಆವರಣದಲ್ಲಿ ಭಾರತದ ಸ್ಪರ್ಧಿಗಳು)

ಲೈವ್ ಸೋನಿ ನೆಟ್‌ವರ್ಕ್ | ಭಾರತೀಯ ಕಾಲಮಾನ

ಶೂಟಿಂಗ್: ಲಯಕ್ಕೆ ಮರಳಿದ ಮನು

ಟೋಕಿಯೊ (ಪಿಟಿಐ): ಭಾರತದ ಯುವ ಶೂಟರ್ ಮನು ಭಾಕರ್ ಒಲಿಂಪಿಕ್ ಕ್ರೀಡಾಕೂಟದಲ್ಲಿ ಗುರುವಾರ ಲಯ ಕಂಡುಕೊಂಡರು. ಮಹಿಳೆಯರ 25 ಮೀ. ಪಿಸ್ತೂಲ್ ಅರ್ಹತಾ (ಪ್ರಿಸಿಷನ್) ಸುತ್ತಿನಲ್ಲಿ ಅವರು ಐದನೇ ಸ್ಥಾನ ಗಳಿಸಿದರು. ಆದರೆ ರಾಹಿ ಸರ್ನೋಬತ್ 25ನೇ ಸ್ಥಾನಕ್ಕೆ ಕುಸಿದರು.

ಅಸಾಕ ಶೂಟಿಂಗ್ ರೇಂಜ್‌ನಲ್ಲಿ 44 ಶೂಟರ್‌ಗಳಿದ್ದ ಸ್ಪರ್ಧೆಯಲ್ಲಿ ಮನು, 292 ಪಾಯಿಂಟ್ಸ್ ಕಲೆಹಾಕಿದರು. ರಾಹಿ ಅವರಿಗೆ 287 ಪಾಯಿಂಟ್ಸ್ ಮಾತ್ರ ಗಳಿಸಲು ಸಾಧ್ಯವಾಯಿತು. ಎರಡನೇ ಹಂತದ ಅರ್ಹತಾ ಸುತ್ತುಗಳು (ರ್‍ಯಾಪಿಡ್ ಸುತ್ತು) ಶುಕ್ರವಾರ ನಿಗದಿಯಾಗಿದ್ದು, ಅಲ್ಲಿ ಅಗ್ರ ಎಂಟು ಸ್ಥಾನ ಗಳಿಸುವ ಶೂಟರ್‌ಗಳು ಫೈನಲ್‌ಗೆ ಪ್ರವೇಶಿಸಲಿದ್ದಾರೆ.

296 ಪಾಯಿಂಟ್ಸ್ ಗಳಿಸಿದ ಸರ್ಬಿಯಾದ ಜೊರಾನಾ ಅರುನೊವಿಚ್, ಅರ್ಹತಾ ಸುತ್ತಿನಲ್ಲಿ (ಪ್ರಿಸಿಷನ್) ಮೊದಲ ಸ್ಥಾನ ಗಳಿಸಿದರು. ಗ್ರೀಸ್‌ನ ಆ್ಯನಾ ಕೊರಾಕಾಕಿ (294) ಎರಡನೇ ಸ್ಥಾನ ತಮ್ಮದಾಗಿಸಿಕೊಂಡರು. 19ರ ಹರಯದ ಮನು ಮೂರು ಸಿರೀಸ್‌ಗಳಲ್ಲಿ ಕ್ರಮವಾಗಿ 97,97 ಮತ್ತು 98 ಪಾಯಿಂಟ್ಸ್ ಕಲೆಹಾಕಿದರು. ವಿಶ್ವಕಪ್‌ನಲ್ಲಿ ಚಿನ್ನ ಗೆದ್ದಿದ್ದ ರಾಹಿ ಗಳಿಸಿದ ಪಾಯಿಂಟ್ಸ್ 96, 97 ಮತ್ತು 94.

ಮನು ಭಾಕರ್ —ಪಿಟಿಐ ಚಿತ್ರ

ಗಾಲ್ಫ್: ಲಾಹಿರಿ ಅಮೋಘ ಆರಂಭ

ಟೋಕಿಯೊ (ಪಿಟಿಐ): ಭಾರತದ ಅನಿರ್ಬನ್ ಲಾಹಿರಿ ಒಲಿಂಪಿಕ್ಸ್‌ನಲ್ಲಿ ಅಮೋಘ ಆರಂಭ ಕಂಡರು. ಎರಡನೇ ಬಾರಿ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿರುವ ಅವರು ಮೊದಲ ಸುತ್ತಿನಲ್ಲಿ ಎಂಟನೇ ಸ್ಥಾನವನ್ನು ಹಂಚಿಕೊಂಡರು. ಹವಾಮಾನ ಕೈಕೊಟ್ಟ ಕಾರಣ ಗುರುವಾರ ಸ್ಪರ್ಧೆಗೆ ಸ್ವಲ್ಪ ಅಡ್ಡಿಯಾಯಿತು. ಆದರೂ ಲಾಹಿರಿ ಮಿಂಚಿದರು. ಬ್ರಿಟನ್‌ನ ಪೌಲ್ ಕಾಸಿ, ಸ್ವೀಡನ್‌ನ ಅಲೆಕ್ಸ್ ನೊರೇನ್ ಮತ್ತು ಮೆಕ್ಸಿಕೊದ ಸೆಬಾಸ್ಟಿಯನ್ ಮುನೋಜ್ ಕೂಡ ಲಾಹಿರಿ ಜೊತೆ ಸ್ಥಾನ ಹಂಚಿಕೊಂಡಿದ್ದಾರೆ. ಭಾರತದ ಉದಯನ್ ಮಾನೆ ಉತ್ತಮ ಆರಂಭ ಕಂಡರೂ ಕೊನೆಯಲ್ಲಿ ಮುಗ್ಗರಿಸಿದರು.

ವಿಶ್ವ ರ್‍ಯಾಂಕಿಂಗ್‌ನಲ್ಲಿ 161ನೇ ಸ್ಥಾನದಲ್ಲಿರುವ ಆಸ್ಟ್ರಿಯಾದ ಸೆಪ್ ಸ್ಟ್ರಾಕ ದಿನದ ಅಗ್ರ ಸ್ಥಾನವನ್ನು ಗಳಿಸಿಕೊಂಡಿದ್ದಾರೆ.

ಈಜುಕೊಳದಲ್ಲಿ ಡ್ರೆಸೆಲ್ ಮಿಂಚಿನ ಸಂಚಲನ

ಟೋಕಿಯೊ (ಪಿಟಿಐ/ಎಪಿ/ರಾಯಿಟರ್ಸ್): ಅಮೆರಿಕದ ಕೆಲೆಬ್ ಡ್ರೆಸೆಲ್ ವೇಗಕ್ಕೆ ಈಜುಕೊಳದಲ್ಲಿ ಹೊನಲು ಹರಿಯಿತು.

ಪುರುಷರ 100 ಮೀಟರ್ ಫ್ರೀಸ್ಟೈಲ್‌ನಲ್ಲಿ 47.02 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ನೂತನ ದಾಖಲೆ ಬರೆದರು. ನಿಕಟ ಸ್ಪರ್ಧೆಯೊಡ್ಡಿದ್ದ ಆಸ್ಟ್ರೇಲಿಯಾದ ಕೈಲ್ ಚಾಮರ್ಸ್ ಎರಡನೇ ಸ್ಥಾನ ಪಡೆದರು. ರಷ್ಯಾದ ಕ್ಲೈಮೆಂಟ್ ಕೊಲೆನಿಕೊವ್ ಕಂಚು ಗೆದ್ದರು.

200 ಮೀಟರ್ಸ್ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಆಸ್ಟ್ರೇಲಿಯಾದ ಐಜಾಕ್ ಕುಕ್ ಪಾರಮ್ಯ ಮೆರೆದರು. 800 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಅಮೆರಿಕದ ರಾಬರ್ಟ್ ಫಿಂಕ್ ಚಿನ್ನದ ಪದಕ ಗೆದ್ದರು.

ಅಮೆರಿಕದ ಕೆಲೆಬ್ ಡ್ರೆಸೆಲ್ —ಎಎಫ್‌ಪಿ ಚಿತ್ರ

ಬೆಳ್ಳಿಯೇ ಚಿನ್ನ!

ಇಟಲಿಯ ಗ್ರೆಗೊರಿಯೊ ಪ್ಲಾಟ್ರನೀರಿ 800 ಮೀಟರ್ ಫ್ರೀಸ್ಟೈಲ್‌ನಲ್ಲಿ ಬೆಳ್ಳಿ ಜಯಿಸಿ ಹಿರಿಹಿರಿ ಹಿಗ್ಗಿದರು. ಚಿನ್ನ ಗೆದ್ದವರಿಗಿಂತಲೂ ಹೆಚ್ಚು ಸಂಭ್ರಮಿಸಿದರು.

ಒಂದು ತಿಂಗಳು ಹಿಂದಷ್ಟೇ ಮೊನಾನುಕ್ಲೆಯೊಸಿಸ್ ಎಂಬ ಜ್ವರದಿಂದ ಬಳಲಿದ್ದ ಅವರು ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವುದು ಖಚಿತವಿರಲಿಲ್ಲ. ಆದರೆ, ಕಾಯಿಲೆ ಗೆದ್ದು ಬಂದು ಪದಕವನ್ನೂ ಜಯಿಸಿದರು.

ಮಹಿಳೆಯರ ವಿಭಾಗದಲ್ಲಿ ಚೀನಾದ ಈಜುಗಾರ್ತಿಯರು ಪಾರಮ್ಯ ಮೆರೆದರು. 200 ಮೀಟರ್ ಬಟರ್‌ಫ್ಲೈನಲ್ಲಿ ಝೊಂಗ್ ಯೂಫಿ ಚಿನ್ನದ ಪದಕ ಗಳಿಸಿದರು. 4X200 ಮೀಟರ್ ಫ್ರೀಸ್ಟೈಲ್ ರಿಲೆಯಲ್ಲಿಯೂ ಚೀನಾ ತಂಡವೇ ಮೇಲುಗೈ ಸಾಧಿಸಿತು. ಈ ಸ್ಪರ್ಧೆಯಲ್ಲಿ ಕೇಟಿ ಲೆಡಕಿ, ಮಿಕ್ ಲಾಫ್ಲಿನ್ ಅವರಿದ್ದ ಅಮೆರಿಕ ಮತ್ತು ಆರಿ ಯಾನ್ ಟಿಟ್ಮಸ್ ಅವರಿದ್ದ ಆಸ್ಟ್ರೇಲಿಯಾ ತಂಡವನ್ನು ಚೀನಾ ಹಿಂದಿಕ್ಕಿತು.

ಫಲಿತಾಂಶಗಳು (ಪದಕ ವಿಜೇತರು)

ಪುರುಷರು:100 ಮೀ ಫ್ರೀಸ್ಟೈಲ್: ಕೆಲೆಬ್ ಡ್ರೆಸೆಲ್ (ಅಮೆರಿಕ; 47.02 ದಾಖಲೆ)–1, ಕೈಲ್ ಚಾಮರ್ಸ್ (ಆಸ್ಟ್ರೇಲಿಯಾ; 47.08ಸೆ)–2, ಕ್ಲೈಮೆಂಟ್ ಕೊಲೆನಿಕೊವ್ (ರಷ್ಯಾ; 47.44ಸೆ)–3; **200 ಮೀ ಬ್ರೆಸ್ಟ್‌ಸ್ಟ್ರೋಕ್:** ಐಜಾಕ್ ಸ್ಟಬ್ಲೆಟಿ ಕುಕ್ (ಆಸ್ಟ್ರೇಲಿಯಾ; 2ನಿ,06.38ಸೆ, ದಾಖಲೆ)–1, ಅರ್ನೊ ಕಮಿಂಗಾ (ನೆದರ್ಲೆಂಡ್ಸ್; 2ನಿ,7.01ಸೆ)–2, ಮ್ಯಾಟಿ ಮ್ಯಾಟ್ಸನ್ (ಫಿನ್ಲೆಂಡ್; 2ನಿ,7.24ಸೆ)–3; 800 ಮೀ ಫ್ರೀಸ್ಟೈಲ್: ರಾಬರ್ಟ್ ಫಿಂಕ್ (ಅಮೆರಿಕ; 7ನಿ,41.87ಸೆ)–1, ಗ್ರೆಗೊರಿ ಪ್ಲ್ಯಾಟ್ರನೀರಿ (ಇಟಲಿ; 7ನಿ,42.11ಸೆ)–2, ಮೈಖೆಲೊ ರೊಮಾನ್ಚುಕ್ (ಉಕ್ರೇನ್; 7ನಿ,42.33ಸೆ) –3.

ಮಹಿಳೆಯರು:200 ಮೀ ಬಟರ್‌ಫ್ಲೈ: ಝೊಂಗ್ ಯೂಫಿ (ಚೀನಾ: ಕಾಲ: 2ನಿ, 3.86ಸೆ) –1, (ಒಲಿಂಪಿಕ್ ದಾಖಲೆ), ರೇಗನ್ ಸ್ಮಿತ್ (ಅಮೆರಿಕ; 2ನಿ,5.30ಸೆ) –2, ಹ್ಯಾಲಿ ಫ್ಲಿಕಿಂಗರ್ (ಅಮೆರಿಕ; 2ನಿ,5.65ಸೆ) –3.

4X200 ಮೀ ಫ್ರೀಸ್ಟೈಲ್ ರಿಲೆ: ಚೀನಾ (ಯಾಂಗ್, ಟ್ಯಾಂಗ್ ಮುಹಾನ್, ಜ್ಯಾಂಗ್ ಯೂಫೀ, ಲಿ ಬಿಂಗ್ಜಿ– 7ನಿ,40.33ಸೆ ವಿಶ್ವದಾಖಲೆ)–1, ಅಮೆರಿಕ (ಶಿಮಿಟ್, ಮೇಡನ್, ಮೆಕ್‌ಲಾಫ್ಲಿನ್, ಲೆಡಕಿ– 7ನಿ,40.73ಸೆ)–2, ಆಸ್ಟ್ರೇಲಿಯಾ (ಟಿಟ್ಮಸ್, ಮೆಕಾನ್, ವಿಲ್ಸನ್ ನೇಲ್ –7ನಿ,41.29ಸೆ)–3

ಭಾರತದ ಸಜನ್ ಪ್ರಕಾಶ್ —ರಾಯಿಟರ್ಸ್ ಚಿತ್ರ

ಗಮನ ಸೆಳೆದ ಸಜನ್ ಪ್ರಕಾಶ್

ಭಾರತದ ಸಜನ್ ಪ್ರಕಾಶ್ ಪುರುಷರ 100 ಮೀಟರ್ಸ್ ಬಟರ್‌ಫ್ಲೈ ವಿಭಾಗದಲ್ಲಿ ಸೆಮಿಫೈನಲ್ ಅರ್ಹತೆಯನ್ನು ತಪ್ಪಿಸಿಕೊಂಡರು.

27 ವರ್ಷದ ಸಜನ್ ಪ್ರಕಾಶ್ ಹೀಟ್ಸ್‌ನಲ್ಲಿ 55 ಈಜುಪಟುಗಳಲ್ಲಿ 46ನೇ ಸ್ಥಾನ ಪಡೆದರು. ಅಗ್ರ 16 ಸ್ಪರ್ಧಿಗಳು ಮಾತ್ರ ಸೆಮಿಫೈನಲ್ ಪ್ರವೇಶಿಸಿದರು. ಇದರೊಂದಿಗೆ ಈಜು ಕ್ರೀಡೆಯಲ್ಲಿ ಭಾರತದ ಅಭಿಯಾನ ಅಂತ್ಯವಾಯಿತು.

ಜೋಸೆಫ್ ಸ್ಕೂಲಿಂಗ್ ವಿಫಲ

ಐದು ವರ್ಷಗಳ ಹಿಂದೆ ರಿಯೊ ಒಲಿಂಪಿಕ್ಸ್‌ನಲ್ಲಿ 100 ಮೀಟರ್ಸ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಅಚ್ಚರಿ ಮೂಡಿಸಿದ್ದ ಜೋಸೆಫ್ ಸ್ಕೂಲಿಂಗ್ ಈ ಬಾರಿ ವೈಫಲ್ಯ ಅನುಭವಿಸಿದರು.

ಸಿಂಗಪುರದ ಜೋಸೆಫ್ ಹೀಟ್ಸ್‌ನಲ್ಲಿ 44ನೇ ಸ್ಥಾನ ಪಡೆದರು. ಜೋಸೆಫ್ 53.12 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಹೋದ ಬಾರಿ ಜೋಸೆಫ್ ಮಾಡಿದ್ದ ದಾಖಲೆ (50.39ಸೆ)ಯನ್ನು ಅಮೆರಿಕದ ಡ್ರೆಸೆಲ್ ಸರಿಗಟ್ಟಿದರು.

ಗೇಮ್ ಸ್ಕೋರ್

ಸಿಂಧು	21	21
ಮಿಯಾ	15	13

ಪಂದ್ಯ ನಡೆದ ಅವಧಿ 41 ನಿಮಿಷ

ಭಾರತದ ಪಿ.ವಿ. ಸಿಂಧು ಖುಷಿಯ ಕ್ಷಣ –ಪಿಟಿಐ ಚಿತ್ರ

ಮುಖ್ಯಾಂಶಗಳು

- ಜೆ ಗುಂಪಿನ ಎರಡೂ ಪಂದ್ಯಗಳಲ್ಲಿ ಜಯಿಸಿದ್ದ ಸಿಂಧು
- ಪ್ರೀ ಕ್ವಾರ್ಟರ್‌ನ-ಲ್ಲಿ ನೇರ ಎರಡು ಗೇಮ್‌ಗಳಲ್ಲಿ ಜಯ

ಸಿಂಧು ಮತ್ತೊಂದು ಹೆಜ್ಜೆ ಮುಂದು

ಟೋಕಿಯೊ (ಪಿಟಿಐ): ಒಲಿಂಪಿಕ್ಸ್ ಚಿನ್ನದ ಕನಸು ನನಸಾಗಬೇಕಾದರೆ ಇನ್ನೂ ಮೂರು ಮೆಟ್ಟಿಲುಗಳನ್ನು ಏರುವ ಸವಾಲು ಪಿ.ವಿ. ಸಿಂಧು ಅವರ ಮುಂದಿದೆ.

ಗುರುವಾರ ಬೆಳಿಗ್ಗೆ ಮಹಿಳೆಯರ ಬ್ಯಾಡ್ಮಿಂಟನ್ ಸಿಂಗಲ್ಸ್ 16 ರ ಘಟ್ಟದ ಪಂದ್ಯವನ್ನು ಗೆಲ್ಲುವುದರೊಂದಿಗೆ ಸಿಂಧು ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದಾರೆ.

2016ರ ರಿಯೊ ಒಲಿಂಪಿಕ್ಸ್‌ನಲ್ಲಿ ತಾವು ಗೆದ್ದಿರುವ ಬೆಳ್ಳಿಪದಕಕ್ಕೆ ಬಂಗಾರದ ಮೆರುಗು ತುಂಬು ಛಲದೊಂದಿಗೆ ಅವರು ಇಲ್ಲಿ ಕಣಕ್ಕಿಳಿದಿದ್ದಾರೆ. ಇದುವರೆಗೂ ನಿರೀಕ್ಷೆಯಂತೆ ನಡೆದಿದೆ. ಜೆ ಗುಂಪಿನ ಮೊದಲ ಮತ್ತು ಎರಡನೇ ಪಂದ್ಯಗಳಲ್ಲಿ ಸುಲಭ ಜಯ ಸಾಧಿಸಿದ್ದ ಹೈದರಾಬಾದ್ ಹುಡುಗಿ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ 21-15, 21-13ರಿಂದ ಡೆನ್ಮಾರ್ಕ್‌ನ ಮಿಯಾ ಬ್ಲಿಚ್‌ಫೆಲ್ಟ್ ಎದುರು ಜಯಿಸಿದರು.

ಶುಕ್ರವಾರ ನಡೆಯಲಿರುವ ಎಂಟರ ಘಟ್ಟದ ಪಂದ್ಯದಲ್ಲಿ ಆತಿಥೇಯ ಜಪಾನಿನ ಅಕಾನೆ ಯಾಮಗುಚಿ ವಿರುದ್ಧ ಸಿಂಧು ಕಣಕ್ಕಿಳಿಯುವರು.

16ರ ಘಟ್ಟದ ಪಂದ್ಯದಲ್ಲಿ ಉಭಯ ಆಟಗಾರ್ತಿಯರ ನಡುವೆ 41 ನಿಮಿಷಗಳ ಹೋರಾಟ ನಡೆಯಿತು. ಇದರಲ್ಲಿ ಬಹುತೇಕ ಸಮಯದಲ್ಲಿ ಸಿಂಧು ಅವರದ್ದೇ ಪಾರುಪತ್ಯ. ವಿಶ್ವ ಚಾಂಪಿಯನ್ ಸಿಂಧು ಉತ್ತಮ ಸ್ಟ್ರೋಕ್‌ಗಳನ್ನು ಪ್ರಯೋಗಿಸಿದರು. ನಿಖರವಾದ ಸರ್ವಿಸ್ ಮತ್ತು ಸ್ಮ್ಯಾಷ್‌ಗಳ ಮೂಲಕ ಎದುರಾಳಿಯ ಮೇಲೆ ಒತ್ತಡ ಹೇರಿದರು.

ರಿಟರ್ನ್ ಮತ್ತು ಡ್ರಾಪ್‌ನಲ್ಲಿ ಸಿಂಧು ಅವರ ಆಕ್ರಮಣಕಾರಿ ಛಾಪು ಗಮನ ಸೆಳೆಯಿತು.

ಮೊದಲ ಗೇಮ್‌ನಲ್ಲಿ ಡೆನ್ಮಾರ್ಕ್ ಆಟಗಾರ್ತಿ 2-0 ಮುನ್ನಡೆ ಪಡೆದಿದ್ದರು. ಆದರೆ, ತಿರುಗೇಟು ನೀಡಿದ ಸಿಂಧು 6-4ರಲ್ಲಿ ಮುನ್ನಡೆಗೆ ಬಂದರು. ಅಲ್ಪವಿರಾಮಕ್ಕೆ 11-6 ಲೀಡ್ ಪಡೆದಿದ್ದರು. ನಂತರದ ಆಟದಲ್ಲಿ ಮಿಯಾ, ಆರು ಪಾಯಿಂಟ್ಸ್‌ಗಳನ್ನು ಕಲೆಹಾಕಿ ಸಮಬಲ ಸಾಧಿಸುವ ಪ್ರಯತ್ನ ಮಾಡಿದರು. ಇದರಲ್ಲಿ ಸಿಂಧು ಎಸಗಿದ ಲೋಪಗಳೂ ಎದುರಾಳಿಗೆ ಪಾಯಿಂಟ್ಸ್ ನೀಡಿದವು.

ಆದರೆ ಸಿಂಧು ತಮ್ಮ ತಪ್ಪುಗಳನ್ನು ಸರಿಪಡಿಸಿಕೊಂಡು ಚುರುಕಾದ ಆಟವಾಡಿದರು. ನೆಟ್ ಬಳಿಯ ಡ್ರಾಪ್ ಮಾಡುವ ಕೌಶಲವನ್ನು ಉತ್ತಗೊಳಿಸಿಕೊಂಡಿದ್ದು ಲಾಭವಾಯಿತು.

ಎರಡನೇ ಗೇಮ್‌ನಲ್ಲಿಯೂ ಸಿಂಧು ಚುರುಕಾದ ಆಟದೊಂದಿಗೆ ಸುಲಭ ಜಯ ಸಾಧಿಸಿದರು.

ಬ್ಯಾಡ್ಮಿಂಟನ್‌ನಲ್ಲಿ ಸಿಂಧು ಭಾರತದ ಪಾಲಿಗೆ ಏಕೈಕ ಭರವಸೆಯಾಗಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ ಸಾಯಿಪ್ರಣೀತ್, ಡಬಲ್ಸ್‌ನಲ್ಲಿ ಚಿರಾಗ್ ಶೆಟ್ಟಿ–ಸಾತ್ವಿಕ್ ಸಾಯಿರಾಜ್ ಸೋತು ಹೊರಬಿದ್ದಿದ್ದಾರೆ.

ಯಾಮಗುಚಿ ಸವಾಲು

ಇನ್ನೊಂದು ಪ್ರೀ ಕ್ವಾರ್ಟರ್‌ಫೈನಲ್‌ನಲ್ಲಿ ಆತಿಥೇಯ ದೇಶದ ಆಟಗಾರ್ತಿ ಅಕಾನೆ ಯಾಮಗುಚಿ 21-17, 21-18ರಿಂದ ಕೊರಿಯಾದ ಕಿಮ ಗೇನ್ ವಿರುದ್ಧ ಜಯಿಸಿದರು.

ಐದನೇ ಶ್ರೇಯಾಂಕದ ಅಕಾನೆ, ಸಿಂಧು ಎದುರು ಕಣಕ್ಕಿಳಿಯಲಿದ್ದಾರೆ. 24 ವರ್ಷದ ಯಾಮಗುಚಿ ವೇಗದ ಸ್ಮ್ಯಾಷ್ ಪ್ರಯೋಗಗಳಿಗೆ ಹೆಸರಾಗಿದ್ದಾರೆ. 2018ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಜಯಿಸಿದ್ದ ಯಾಮಗುಚಿ ತಮ್ಮ ತವರಿನಲ್ಲಿ ಸಿಂಧುಗೆ ಸವಾಲೊಡ್ಡಲು ಸಿದ್ಧರಾಗಿದ್ದಾರೆ.

ಹೋದ ಮಾರ್ಚ್‌ನಲ್ಲಿ ನಡೆದಿದ್ದ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್ ಎಂಟರ ಘಟ್ಟದಲ್ಲಿ ಸಿಂಧು ಎದುರು ಯಾಮಗುಚಿ ಸೋತಿದ್ದರು.

ಕ್ವಾರ್ಟರ್‌ಫೈನಲ್ ಇಂದು

18	11	7
ಮುಖಾಮುಖಿ	ಸಿಂಧು ಜಯ	ಯಾಮಗುಚಿ ಜಯ

ಸಮಯ: ಮಧ್ಯಾಹ್ನ 12
ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ಟೋಕಿಯೊದಲ್ಲಿ ಬೆಳಗಿದ ಭಾರತೀಯರು

ಅರ್ಜೆಂಟೀನಾ ಎದುರಿನ ಹೋರಾಟದಲ್ಲಿ ಗೋಲು ಬಾರಿಸಿದ ವರುಣ್ ಕುಮಾರ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು –ರಾಯಿಟರ್ಸ್ ಚಿತ್ರ

ಹಾಕಿ: ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಭಾರತ, ಬ್ರಿಟನ್, ನೆದರ್ಲೆಂಡ್ಸ್

ಮನ್‌ಪ್ರೀತ್ ಬಳಗಕ್ಕೆ ಜಯದ ಪುಳಕ

ಟೋಕಿಯೊ (ಪಿಟಿಐ): ದ್ವಿತೀಯಾರ್ಧದಲ್ಲಿ ಗಳಿಸಿದ ಮೂರು ಗೋಲುಗಳ ಬಲದಿಂದ ಭಾರತ ಹಾಲಿ ಚಾಂಪಿಯನ್ನರಿಗೆ ಆಘಾತ ನೀಡಿತು. ಈ ಮೂಲಕ ಒಲಿಂಪಿಕ್ಸ್ ಹಾಕಿಯ ಕ್ವಾರ್ಟರ್ ಫೈನಲ್ ಹಂತ ಪ್ರವೇಶಿಸಿತು. 2-2ರ ಡ್ರಾ ಸಾಧಿಸಿದ ಬ್ರಿಟನ್ ಮತ್ತು ನೆದರ್ಲೆಂಡ್ಸ್ ತಂಡಗಳು ಕೂಡ ಕ್ವಾರ್ಟರ್ ಫೈನಲ್ ಪ್ರವೇಶಿಸಿದವು.

ಗುರುವಾರ ನಡೆದ ಪಂದ್ಯದಲ್ಲಿ ಭಾರತ 3-1ರಲ್ಲಿ ಅರ್ಜೆಂಟೀನಾವನ್ನು ಮಣಿಸಿತು. 43ನೇ ನಿಮಿಷದಲ್ಲಿ ವರುಣ್ ಕುಮಾರ್ ಗಳಿಸಿದ ಗೋಲಿನೊಂದಿಗೆ ಮುನ್ನಡೆ ಗಳಿಸಿದ ಭಾರತಕ್ಕೆ 58ನೇ ನಿಮಿಷದಲ್ಲಿ ವಿವೇಕ್ ಸಾಗರ್ ಪ್ರಸಾದ್ ಮತ್ತು 59ನೇ ನಿಮಿಷದಲ್ಲಿ ಹರ್ಮನ್‌ಪ್ರೀತ್ ಸಿಂಗ್ ಗೋಲು ತಂದುಕೊಟ್ಟರು. ಅರ್ಜೆಂಟೀನಾ ತಂಡಕ್ಕಾಗಿ ಏಕೈಕ ಗೋಲು ಗಳಿಸಿದವರು ಕ್ಯಾಸೆಲಾ ಶುತ್ (48ನೇ ನಿಮಿಷ).

ಮೊದಲೆರಡು ಕ್ವಾರ್ಟರ್‌ಗಳಲ್ಲಿ ಎರಡೂ ತಂಡಗಳು ಗೋಲು ಗಳಿಸಲು ನಡೆಸಿದ ಪ್ರಯತ್ನಗಳು ವಿಫಲವಾದವು. ಆದರೆ ಭಾರತದ ಆಕ್ರಮಣಕಾರಿ ಆಟ ಆರಂಭದಿಂದಲೇ ಎದುರಾಳಿ ತಂಡವನ್ನು ಕಂಗೆಡಿಸಿತು. ಮೊದಲ ಕ್ವಾರ್ಟರ್‌ನಲ್ಲಿ ಸಂಪೂರ್ಣ ಆಧಿಪತ್ಯ ಸ್ಥಾಪಿಸಿದ ಭಾರತ ಅನೇಕ ಬಾರಿ ಎದುರಾಳಿಗಳ ಆವರಣದಲ್ಲಿ ಆತಂಕ ಸೃಷ್ಟಿಸಿದರೂ ಗೋಲು ಗಳಿಸಲು ಆಗಲಿಲ್ಲ.

ಮೂರನೇ ನಿಮಿಷದಲ್ಲೇ ತಂಡಕ್ಕೆ ಮೊದಲ ಗೋಲು ಗಳಿಸುವ ಅವಕಾಶ ಲಭಿಸಿತ್ತು. ಸಿಮ್ರನ್‌ಜೀತ್ ಸಿಂಗ್ ಅವರ ಪಾಸ್‌ನಲ್ಲಿ ದಿಲ್‌ಪ್ರೀತ್ ಸಿಂಗ್ ಹೊಡೆದ ಚೆಂಡು ಅರ್ಜೆಂಟೀನಾ ಗೋಲ್‌ಕೀಪರ್ ಜುವಾನ್ ವಿವಾಲ್ಡಿ ತಡೆದರು.

ದ್ವಿತೀಯಾರ್ಧದಲ್ಲೂ ಭಾರತದ ಆಕ್ರಮಣ ಮುಂದುವರಿಯಿತು. ಮನ್‌ಪ್ರೀತ್ ನೇತೃತ್ವದ ಮಿಡ್‌ಫೀಲ್ಡ್ ವಿಭಾಗದವರು ಅಮೋಘ ಆಟವಾಡಿ ಎದುರಾಳಿಗಳಿಗೆ ಚೆಂಡು ಸಿಗದಂತೆ ತಡೆದರು. ಅರ್ಜೆಂಟೀನಾಗೆ ಆಗೊಮ್ಮೆ ಈಗೊಮ್ಮೆ ಪ್ರತಿ ದಾಳಿ ನಡೆಸುವ ಅವಕಾಶ ಸಿಕ್ಕಿದರೂ ಪಿ.ಆರ್.ಶ್ರೀಜೇಶ್ ಭಾರತ ತಂಡವನ್ನು ರಕ್ಷಿಸಿದರು.

ಮೂರನೇ ಕ್ವಾರ್ಟರ್‌ನಲ್ಲಿ ಭಾರತ ಕೆಲವು ಅವಕಾಶಗಳನ್ನು ಕೈಚೆಲ್ಲಿತು. 35ನೇ ನಿಮಿಷದಲ್ಲಿ ಗುರ್ಜಂತ್ ಸಿಂಗ್ ಮತ್ತು ರೂಪಿಂದರ್ ಪಾಲ್ ಸಿಂಗ್ ಸುವರ್ಣಾವಕಾಶಗಳನ್ನು ಕಳೆದುಕೊಂಡರು. ಕೆಲವೇ ನಿಮಿಷಗಳಲ್ಲಿ ಮಥಾಯಸ್ ರೇ ಚೆಂಡಿನೊಂದಿಗೆ ಮುನ್ನುಗ್ಗಿದರು. ಆದರೆ ಶ್ರೀಜೇಶ್ ಅವರನ್ನು ವಂಚಿಸಿ ಗುರಿ ಮುಟ್ಟಲು ಆಗಲಿಲ್ಲ. ತಂಡಕ್ಕೆ ಲಭಿಸಿದ ಮೂರನೇ ಪೆನಾಲ್ಟಿ ಕಾರ್ನರ್‌ನಲ್ಲಿ ವರುಣ್ ಗೋಲು ಗಳಿಸಿ ಸಂಭ್ರಮಿಸಿದರು. ಮೂರನೇ ಕ್ವಾರ್ಟರ್‌ನ ಕೊನೆಯಲ್ಲಿ ಲಭಿಸಿದ ಸತತ ಮೂರು ಪೆನಾಲ್ಟಿಗಳನ್ನು ಭಾರತ ಕೈಚೆಲ್ಲಿತು.

ಪಂದ್ಯ ಮುಕ್ತಾಯಕ್ಕೆ ಎರಡು ನಿಮಿಷ ಬಾಕಿ ಇದ್ದಾಗ ದಿಲ್‌ಪ್ರೀತ್ ಸಿಂಗ್ ಅವರ ಆಕ್ರಮಣವನ್ನು ವಿವಾಲ್ಡಿ ತಡೆದರು. ಆದರೆ ವಾಪಸ್ ಬಂದ ಚೆಂಡನ್ನು ವಿವೇಕ್ ಗೋಲುಪೆಟ್ಟಿಗೆಯ ಒಳಗೆ ಸೇರಿಸಿದರು. ಎಂಟನೇ ಪೆನಾಲ್ಟಿ ಕಾರ್ನರ್‌ನಲ್ಲಿ ಮತ್ತೊಂದು ಗೋಲು ಮೂಡಿಬಂತು.

ಆರ್ಚರಿ: ಅತನು ಅಮೋಘ ಆಟ

ಗಮನ ಸೆಳೆದ ಉಂಗುರ

ಅತನು ಅವರು ಬಲಗೈ ಬೆರಳಲ್ಲಿ ಧರಿಸಿದ್ದ ಒಲಿಂಪಿಕ್ ರಿಂಗ್‌ಗಳನ್ನು ಹೋಲುವ ಚಿನ್ನದ ಉಂಗುರ ಎಲ್ಲರ ಗಮನ ಸೆಳೆಯಿತು. ಪಂದ್ಯ ಗೆದ್ದ ಬಳಿಕ ಅವರು ಅದನ್ನು ತೋರಿಸಿ ಖುಷಿಪಟ್ಟರು.



ಭಾರತದ ಅತನು ದಾಸ್ ಗುರಿಯೆಡೆಗೆ ಬಾಣ ಬಿಟ್ಟ ಕ್ಷಣ -ಎಎಫ್‌ಪಿ ಚಿತ್ರ

ಟೋಕಿಯೊ (ಪಿಟಿಐ): ಭಾರತದ ಆರ್ಚರಿಪಟು ಅತನು ದಾಸ್, ಕೂಟದಲ್ಲಿ ಗುರುವಾರ ಅಚ್ಚರಿಯ ಫಲಿತಾಂಶಕ್ಕೆ ಕಾರಣರಾದರು.

ವೈಯಕ್ತಿಕ ವಿಭಾಗದಲ್ಲಿ ಕಣಕ್ಕಿಳಿದಿದ್ದ ಅತನು ಎರಡನೇ ಸುತ್ತಿನ ರೋಚಕ ಪೈಪೋಟಿಯಲ್ಲಿ ಮಿಂಚಿದರು. ಶೂಟ್ ಆಫ್‌ನಲ್ಲಿ 6-5ರಿಂದ ಕೊರಿಯಾದ ಜಿನ್ ಹಯೆಕ್‌ಗೆ ಆಘಾತ ನೀಡಿದರು. ಒಲಿಂಪಿಕ್ಸ್‌ನಲ್ಲಿ ಜಿನ್ ಎರಡು ಚಿನ್ನದ ಪದಕ ಗೆದ್ದ ಸಾಧನೆ ಮಾಡಿದ್ದರು. ಶೂಟ್ ಆಫ್‌ನಲ್ಲಿ ಜಿನ್ ಬಿಟ್ಟ ಬಾಣವು 9 ಪಾಯಿಂಟ್ಸ್‌ನ ವೃತ್ತದೊಳಗೆ ನಾಟಿತು. ಹೀಗಾಗಿ ಅತನು ಮೇಲೆ ಎಲ್ಲರ ಕಣ್ಣುಗಳು ನೆಟ್ಟಿದ್ದವು. 'ಪರ್ಫೆಕ್ಟ್-10'ಗೆ ಗುರಿ ಇಟ್ಟ ಭಾರತದ ಬಿಲ್ಲುಗಾರ ಖುಷಿಯ ಕಡಲಲ್ಲಿ ತೇಲಿದರು.

ಬಾಕ್ಸಿಂಗ್ ಅಂಕಣದ ಮತ್ತೊಂದು ಭರವಸೆ ಸತೀಶಕುಮಾರ್

ಪಂದ್ಯ ಗೆದ್ದ ಖುಷಿಯಲ್ಲಿ ಸತೀಶಕುಮಾರ್ –ರಾಯಿಟರ್ಸ್ ಚಿತ್ರ

ಟೋಕಿಯೊ (ಪಿಟಿಐ): ಇದೇ ಮೊದಲ ಬಾರಿ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುತ್ತಿರುವ ಭಾರತದ ಸತೀಶಕುಮಾರ್ ಪುರುಷರ ಬಾಕ್ಸಿಂಗ್‌ನ ಸೂಪರ್ ಹೆವಿವೇಟ್‌ನ ಎಂಟರ ಘಟ್ಟಕ್ಕೆ ಪ್ರವೇಶಿಸಿದರು.

ಗುರುವಾರ ನಡೆದ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಬಾಕ್ಸಿಂಗ್‌ನಲ್ಲಿ ಸತೀಶ 4-1ರಿಂದ ಜಮೈಕಾದ ರಿಕಾರ್ಡೊ ಬ್ರೌನ್ ವಿರುದ್ಧ ಗೆದ್ದರು.

ಎರಡು ಬಾರಿ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಜಯಿಸಿರುವ ಸತೀಶ, ತಮ್ಮ ಎದುರಾಳಿಯ ದುರ್ಬಲ ಪಾದಚಲನೆಯ ಲಾಭ ಪಡೆದರು. ಬೌಟ್‌ನಲ್ಲಿ ಸತೀಶ ಅವರ ಹಣೆ ಮತ್ತು ಗದ್ದಕ್ಕೆ ಕುಯ್ದ ಗಾಯಗಳಾದವು.

'ಮೂರು ಬಾರಿ ಹೆಡ್ ಬಟ್ಸ್‌ನಿಂದಾಗಿ ಗಾಯಗಳಾಗಿವೆ. ಬ್ರೌನ್ ಮಾಡಿದ ಬಲಶಾಲಿ ಮತ್ತು ವೇಗದ ಮುಷ್ಟಿ ಪ್ರಹಾರಕ್ಕೆ ಎದುರಾಗಿ ಸತೀಶ್ ಚಾಣಾಕ್ಷತನದ ರಕ್ಷಣಾ ತಂತ್ರ ಅನುಸರಿಸಿದ್ದರಿಂದ ಸಣ್ಣಪ್ರಮಾಣದ ಗಾಯಗಳಾಗಿವೆ' ಎಂದು ಭಾರತ ಬಾಕ್ಸಿಂಗ್‌ನ ಹೈಪರ್ಫಾರನ್ಸ್ ನಿರ್ದೇಶಕ ಸ್ಯಾಂಟಿಯಾಗೊ ನೀವಾ ತಿಳಿಸಿದ್ದಾರೆ.

ಸತೀಶ್ ಎಂಟರ ಘಟ್ಟದಲ್ಲಿ ಉಜ್ಬೇಕಿಸ್ತಾನದ ಬಕೊದಿರ್ ಜಲೊಲವ್ ವಿರುದ್ಧ ಸೆಣಸಲಿದ್ದಾರೆ. ಸತೀಶ 2018ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಬೆಳ್ಳಿಪದಕ ಜಯಿಸಿದ್ದರು.

'ಸಂಪ್ರದಾಯ ಬಿಡದ ಮೀರಾ'

ಬೆಂಗಳೂರು: ಟೋಕಿಯೊ ಒಲಿಂಪಿಕ್ಸ್‌ನ ಮಹಿಳೆಯರ ವೇಟ್‌ಲಿಫ್ಟಿಂಗ್‌ನಲ್ಲಿ ಬೆಳ್ಳಿ ಪದಕ ಜಯಿಸಿದರೂ ಮೀರಾಬಾಯಿ ಚಾನು ತಮ್ಮ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಮರೆತಿಲ್ಲ. ಸದ್ಯ ಹುಟ್ಟೂರಾದ ಮಣಿಪುರದ ನಂಗ್ ಪಾಕ್ ಕಾಕ್ಚಿಂಗ್‌ನ ಮನೆಯಲ್ಲಿ ನೆಲದ ಮೇಲೆ ಕುಳಿತು ಊಟ ಮಾಡುತ್ತಿರುವ ಚಿತ್ರವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಅವರ ಸರಳ ನಡವಳಿಕೆಗೆ ಮೆಚ್ಚುಗೆ ವ್ಯಕ್ತವಾಗುತ್ತಿದೆ.

'ಮಣಿಪುರ, ಮಿಜೋರಾಂ ರಾಜ್ಯಗಳಲ್ಲಿ ಇವತ್ತಿಗೂ ನೆಲದ ಮೇಲೆ ಕುಳಿತುಕೊಂಡೇ ಊಟ ಮಾಡುವ ಸಂಪ್ರದಾಯವಿದೆ. ಮೀರಾ ಮನೆಯಲ್ಲಿಯೂ ಅದೇ ರೂಢಿ ಮೊದಲಿನಿಂದಲೂ ಇದೆ. ಮೀರಾ ವಿಶ್ವ ಚಾಂಪಿಯನ್ ಮತ್ತು ಕಾಮನ್‌ವೆಲ್ತ್ ಗೇಮ್ಸ್ ಪದಕ ಗೆದ್ದ ನಂತರ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದೆ. ಆದರೆ ಅವರು ತಮ್ಮ ಹಳೆಯ ಮನೆಯನ್ನೇ ಉಳಿಸಿಕೊಂಡಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಆಕೆಯಲ್ಲಿ ಸರಳ ಗುಣವಿದೆ. ಆದ್ದರಿಂದಲೇ ಇಂತಹ ದೊಡ್ಡ ಸಾಧನೆ ಮಾಡಲು ಸಾಧ್ಯವಾಗಿದೆ' ಎಂದು ಮೀರಾ ಅವರ ಕೋಚ್ ವಿಜಯ ಶರ್ಮಾ 'ಪ್ರಜಾವಾಣಿ'ಗೆ ತಿಳಿಸಿದರು.

ಮೀರಾಬಾಯಿ ಸಹೋದರರ ಜೊತೆ ಕುಳಿತು ಊಟ ಮಾಡುತ್ತಿರುವುದು

ಫೈನಲ್‌ಗೆ ಬೆಲಿಂಡಾ

ಟೋಕಿಯೊ (ಪಿಟಿಐ): ಮಹಿಳಾ ಟೆನಿಸ್ ಸಿಂಗಲ್ಸ್ ವಿಭಾಗದಲ್ಲಿ ಸ್ವಿಟ್ಜರ್ಲೆಂಡ್‌ನ ಬೆಲಿಂಡಾ ಬೆನ್‌ಸಿಚ್ ಚಿನ್ನದ ಪದಕದ ಸುತ್ತಿಗೆ ಲಗ್ಗೆ ಇಟ್ಟರು. ಸ್ವಿಟ್ಜರ್ಲೆಂಡ್‌ನ ತಾರೆ 7-6, 4-6, 6-3ರಿಂದ ಕಜಕಸ್ತಾನದ ಎಲಿನಾ ರೈಬಾಕಿನಾ ಅವರನ್ನು ಮಣಿಸಿದರು.

ನಾಲ್ಕರ ಘಟ್ಟದ ಮತ್ತೊಂದು ಪಂದ್ಯದಲ್ಲಿ ಮಾರ್ಕೆಟಾ ವೊಂಡ್ರೌಸೊವಾ 6-3, 6-1 ನೇರ ಸೆಟ್‌ಗಳಿಂದ ಎಲಿನಾ ಸ್ವಿಟೋಲಿನಾಗೆ ಆಘಾತ ನೀಡಿದರು. ಪುರುಷರ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ನೊವಾಕ್ ಜೊಕೊವಿಚ್ 6-2, 6-0ರಿಂದ ಜಪಾನ್‌ನ ಕಿ ನಿಶಿಕೋರಿ ವಿರುದ್ಧ ಜಯಿಸಿದರು.

ಫವಾದ್ ಮಿರ್ಜಾ ಅಶ್ವಕ್ಕೆ ಅನುಮತಿ

ಟೋಕಿಯೊ: ಬೆಂಗಳೂರಿನ ಫವಾದ್ ಮಿರ್ಜಾ ಅವರ ಅಶ್ವ ಸೆನೊರ್ ಮೆಡಿಕಾಟ್ ಗುರುವಾರ ನಡೆದ ವೈದ್ಯಕೀಯ ಪರೀಕ್ಷೆಯಲ್ಲಿ ಉತ್ತೀರ್ಣವಾಗಿದೆ. ಇದರೊಂದಿಗೆ ಮಿರ್ಜಾ, ಮೆಡಿಕಾಟ್ ಅನ್ನು ಸ್ಪರ್ಧೆಗಿಳಿಸಲು ಅನುಮತಿ ಲಭಿಸಿತು.

ಶುಕ್ರವಾರದಿಂದ ಈಕ್ವೆಸ್ಟ್ರಿಯನ್ ಸ್ಪರ್ಧೆಗಳು ಆರಂಭವಾಗಲಿವೆ.

ಐಒಸಿ ಮೇಲೆ ಆಕ್ರೋಶ ಹೊರಹಾಕಿದ ಭಾರತದ ಬಾಕ್ಸರ್

ಮೇರಿಗೆ ಮುಳುವಾದ ನಿರ್ಣಯ

ನವದೆಹಲಿ (ಪಿಟಿಐ): ಗುರುವಾರ ನಡೆದ 51 ಕೆಜಿ ವಿಭಾಗದ ಪ್ರೀಕ್ವಾರ್ಟರ್ ಫೈನಲ್‌ನಲ್ಲಿ ತಮ್ಮ ವಿರುದ್ಧ ನೀಡಲಾದ ತೀರ್ಪಿನ ಬಗ್ಗೆ ಮೇರಿ ಕೋಮ್ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಂದ್ಯದಲ್ಲಿ ಮೇರಿ 2-3 ರಿಂದ ಇಂಗ್ರಿಟಾ ವೆಲೆನ್ಸಿಯಾ ವಿರುದ್ಧ ಸೋತಿದ್ದರು.

ಅಂತರರಾಷ್ಟ್ರೀಯ ಒಲಿಂಪಿಕ್ ಕೌನ್ಸಿಲ್(ಐಒಸಿ) ಬಾಕ್ಸಿಂಗ್ ಕಾರ್ಯಪಡೆಯ ವಿರುದ್ಧ ಹರಿಹಾಯ್ದಿರುವಡ ಅವರು, 'ಕಳಪೆ ಅಂಪೈರಿಂಗ್' ಎಂದಿದ್ದಾರೆ.

ಸುದ್ದಿಸಂಸ್ಥೆಗೆ ಫೋನ್ ಮೂಲಕ ಸಂದರ್ಶನ ನೀಡಿರುವ ಅವರು, 'ನಾನು ಕೂಡ ಈ ಟಾಸ್ಕ್‌ಫೋರ್ಸ್ ಸದಸ್ಯೆ. ಉತ್ತಮವಾದ ಆಯೋಜನೆಗೆ ಬೇಕಾದ ಎಲ್ಲ ಸಲಹೆ, ಸಹಕಾರವನ್ನು ನೀಡುತ್ತ ಬಂದಿದ್ದೇನೆ. ಆದರೆ ನನ್ನ ಜೊತೆಗೆ ಈ ರೀತಿ ಮಾಡಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ರಿಂಗ್‌ನಲ್ಲಿ ಬೌಟ್ ಮುಗಿದಾಗ ನಾನು ಬಹಳ ಸಂತಸದಿಂದ ಇದ್ದೆ. ಏಕೆಂದರೆ, ಗೆದ್ದಿರುವ ವಿಶ್ವಾಸ ನನಗಿತ್ತು. ಉದ್ದೀಪನ ಮದ್ದು ಸೇವನೆ ಪರೀಕ್ಷೆಗೆ ಮಾದರಿ ಪಡೆಯಲು ಕರೆದೊಯ್ದಾಗಲೂ ಬಹಳ ಹರ್ಷದಿಂದ ಇದ್ದೆ. ಆದರೆ ಸಾಮಾಜಿಕ ಜಾಲತಾಣದಲ್ಲಿ ನಾನು ಸೋತ ಸುದ್ದಿಗಳು ಬಂದಿದ್ದನ್ನು ನೋಡಿದೆ. ನನ್ನ ಕೋಚ್ (ಚೋಟೆಲಾಲ್ ಯಾದವ್) ಕೂಡ ಹೇಳಿದರು. ಆಗ ನನಗೆ ಆಘಾತವಾಯಿತು' ಎಂದಿದ್ದಾರೆ.

ಇಂಗ್ರಿಟಾ ವೆಲೆನ್ಸಿಯಾ ಅವರು ಮೇರಿ ಕೋಮ್ ಅವರ ಕೈಯೆತ್ತಿದರು. ಆ ಮೂಲಕ ಬಾಕ್ಸಿಂಗ್ ದಂತಕಥೆ ಮೇರಿಗೆ ಗೌರವ ಸೂಚಿಸಿದರು –ಪಿಟಿಐ ಚಿತ್ರ

'ಈ ಹುಡುಗಿ (ವೆಲೆನ್ಸಿಯಾ)ಯನ್ನು ಈ ಹಿಂದೆ ಎರಡು ಬಾರಿ ಸೋಲಿಸಿದ್ದೇನೆ. ರೆಫರಿ ಆಕೆಯ ಕೈಯೆತ್ತಿ ಗೆಲುವು ಘೋಷಿಸಿದಾಗ ನನಗೆ ನಂಬಲು ಸಾಧ್ಯವೇ ಆಗಲಿಲ್ಲ' ಎಂದಿದ್ದಾರೆ.

ಬೌಟ್‌ನ ಮೊದಲ ಸುತ್ತಿನಲ್ಲಿ ಮೇರಿ 4-1ರಿಂದ ಹಿಂದಿದ್ದರು. ಆದರೆ ಐವರು ನಿರ್ಣಾಯಕರ ತಂಡವು ವೆಲೆನ್ಸಿಯಾ ಪರವಾಗಿ 10-9ರ ವಿಜಯ ಘೋಷಿಸಿತ್ತು. ನಂತರದ ಎರಡು ಸುತ್ತುಗಳಲ್ಲಿ ಮೇರಿ ಗೆದ್ದರೂ ಸ್ಕೋರ್‌ಲೈನ್‌ನಲ್ಲಿ ವೆಲೆನ್ಸಿಯಾ ಮುಂಚೂಣಿಯಲ್ಲಿದ್ದರು. ಇದು ಮೇರಿ ಸೋಲಿಗೆ ಕಾರಣವಾಯಿತು.

'ಅಂಪೈರಿಂಗ್‌ನಲ್ಲಿ ಪಾರದರ್ಶಕತೆಯಿಲ್ಲ. ಇದು ಕೆಟ್ಟ ಸಂಪ್ರದಾಯ. ಇದನ್ನು ಪ್ರತಿಭಟಿಸಲು ಅಥವಾ ಮರುಪರಿಶೀಲನೆ ಮನವಿ ಮಾಡಲು ಕೂಡ ಅವಕಾಶವಿಲ್ಲ. ಈ ಧೋರಣೆ ಕೆಟ್ಟದಾಗಿದೆ' ಎಂದು ಕಿಡಿ ಕಾರಿದರು.

ಜಿಮ್ನಾಸ್ಟಿಕ್ಸ್ ಚಿನ್ನ ಗೆದ್ದ ಸುನೀಸಾ

ಟೋಕಿಯೊ (ಎಎಫ್‌ಪಿ)): ಅಮೆರಿಕದ ಯುವ ಜಿಮ್ನಾಸ್ಟಿಕ್ಸ್ ಪಟು ಸುನೀಸಾ ಲೀ ಅವರು ಮಹಿಳೆಯರ ಆಲ್ ಅರೌಂಡ್ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ರಿಯೊ ಕೂಟದಲ್ಲಿ ಈ ವಿಭಾಗದಲ್ಲಿ ಚಿನ್ನ ಜಯಿಸಿದ್ದ ಅಮೆರಿಕದವರೇ ಆದ ಸಿಮೋನ್ ಬೈಲ್ಸ್ ಈ ಕ್ಷಣಕ್ಕೆ ಸಾಕ್ಷಿಯಾದರು.

ಈ ವಿಭಾಗದಲ್ಲಿ ಚಿನ್ನದ ಪದಕ ಗೆಲ್ಲುವ ನೆಚ್ಚಿನ ಅಥ್ಲೀಟ್ ಆಗಿದ್ದ ಬೈಲ್ಸ್, ಮಾನಸಿಕ ಆರೋಗ್ಯದ ಕಾರಣ ನೀಡಿ ಸ್ಪರ್ಧೆಯಿಂದ ಹಿಂದೆ ಸರಿದಿದ್ದರು.

ಅರಿಯೇಕ್ ಜಿಮ್ನಾಸ್ಟಿಕ್ಸ್ ಸೆಂಟರ್‌ನಲ್ಲಿ 18 ವರ್ಷದ ಸುನೀಸಾ ಅವರ ಸ್ಪರ್ಧೆಯನ್ನು ಬೈಲ್ಸ್ ಕಣ್ತುಂಬಿಕೊಂಡರು.

ಸುನೀಸಾ ಒಟ್ಟು 57.433 ಸ್ಕೋರ್ ಗಳಿಸಿದರು. ಬ್ರೆಜಿಲ್‌ನ 22 ವರ್ಷದ ರೆಬೆಕಾ ಆ್ಯಂಡ್ರಾಡೆ (57.298) ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ಮೂರನೇ ಟ್ವೆಂಟಿ–20 ಪಂದ್ಯ: ಕಳಪೆ ಬ್ಯಾಟಿಂಗ್‌ಗೆ ಬೆಲೆ ತೆತ್ತ ಶಿಖರ್ ಧವನ್ ಬಳಗ

ವಾಣಿಂದು ಮೋಡಿ: ಶ್ರೀಲಂಕಾಗೆ ಸರಣಿ

ಕೊಲಂಬೊ (ಪಿಟಿಐ): ಶಿಖರ್ ಧವನ್ ನಾಯಕತ್ವದ ಭಾರತ ತಂಡವು ಗುರುವಾರ ಕಳಪೆ ಬ್ಯಾಟಿಂಗ್‌ಗೆ ಬೆಲೆ ತೆರಬೇಕಾಯಿತು.

ಲೆಗ್‌ಸ್ಪಿನ್ನರ್ ವಾಣಿಂದು ಹಸರಂಗಾ (9ಕ್ಕೆ4 ವಿಕೆಟ್ ಹಾಗೂ ಔಟಾಗದೆ 14 ರನ್) ಅವರ ಆಲ್‌ರೌಂಡ್ ಆಟದ ನೆರವಿನಿಂದ ಶ್ರೀಲಂಕಾ ತಂಡವು ಮೂರನೇ ಟ್ವೆಂಟಿ–20 ಪಂದ್ಯದಲ್ಲಿ ಜಯಿಸಿತು.

ಏಳು ವಿಕೆಟ್‌ಗಳಿಂದ ಪಂದ್ಯ ಗೆದ್ದುಕೊಂಡ ಆತಿಥೇಯ ಬಳಗ 2–1ರಿಂದ ಸರಣಿಯನ್ನೂ ತನ್ನದಾಗಿಸಿಕೊಂಡಿತು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ್ದ ಭಾರತ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 81 ರನ್ ಗಳಿಸಿತ್ತು.

ಸಾಧಾರಣ ಗುರಿ ಬೆನ್ನತ್ತಿದ ಲಂಕಾ, ಇನ್ನೂ 33 ಎಸೆತಗಳು ಬಾಕಿ ಇರುವಂತೆಯೇ ಮೂರು ವಿಕೆಟ್ ಕಳೆದುಕೊಂಡು ಜಯದ ನಗೆ ಬೀರಿತು.

ಧನಂಜಯ ಡಿಸಿಲ್ವಾ (ಔಟಾಗದೆ 23) ಹಾಗೂ ವಾಣಿಂದು ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 26 ರನ್ ಸೇರಿಸಿ ತಂಡದ ಜಯವನ್ನು ಸುಲಭಗೊಳಿಸಿದರು.

ಭಾರತ ತಂಡದ ಪರ ರಾಹುಲ್ ಚಾಹರ್ (15ಕ್ಕೆ 3) ಮಾತ್ರ ಬೌಲಿಂಗ್‌ನಲ್ಲಿ ಪರಿಣಾಮಕಾರಿ ಎನಿಸಿದರು.

ಬ್ಯಾಟಿಂಗ್ ವೈಫಲ್ಯ: ಭಾರತದ ಪರ ಆರಂಭಿಕ ಬ್ಯಾಟ್ಸ್‌ಮನ್ ಋತುರಾಜ್ ಗಾಯಕವಾಡ್ (14 ರನ್), ಭುವನೇಶ್ವರ್ ಕುಮಾರ್ (16) ಮತ್ತು ಕುಲದೀಪ್ ಯಾದವ್ (ಔಟಾಗದೆ 23) ಬಿಟ್ಟರೆ ಉಳಿದವರು ಎರಡಂಕಿ ಮೊತ್ತ ಮುಟ್ಟಲಿಲ್ಲ.

ನಾಯಕ ಶಿಖರ್ ಧವನ್ ಅವರು ಮೊದಲ ಓವರ್‌ನ ನಾಲ್ಕನೇ ಎಸೆತದಲ್ಲಿ ದುಷ್ಮಂತ ಚಾಮೀರ ಬೌಲಿಂಗ್‌ನಲ್ಲಿ ಔಟಾದರು. ಖಾತೆಯನ್ನೂ ತೆರೆಯಲಿಲ್ಲ.

ಕರ್ನಾಟಕದ ದೇವದತ್ತ ಪಡಿಕ್ಕಲ್ (9 ರನ್) ನಾಲ್ಕನೇ ಓವರ್‌ನಲ್ಲಿ ಆಟ ಮುಗಿಸಿದರು. 36 ರನ್‌ಗಳು ಸೇರುವಷ್ಟರಲ್ಲಿ ಐವರು ಬ್ಯಾಟ್ಸ್‌ಮನ್‌ಗಳು ಪೆವಿಲಿಯನ್ ಸೇರಿಯಾಗಿತ್ತು. ಅಗ್ರಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ಸ್ಪಿನ್ ಬೌಲಿಂಗ್ ಎದುರಿಸುವಲ್ಲಿ ವಿಫಲರಾದರು.

ಋತುರಾಜ್ ಗಾಯಕವಾಡ್, ಸಂಜು ಸ್ಯಾಮ್ಸನ್, ಭುವನೇಶ್ವರ್ ಕುಮಾರ್ ಮತ್ತು ವರುಣ್ ಚಕ್ರವರ್ತಿ ಅವರ ವಿಕೆಟ್‌ಗಳನ್ನು ಹಸರಂಗಾ ತಮ್ಮ ಬುಟ್ಟಿಗೆ ಹಾಕಿಕೊಂಡರು. ಆದರೆ ತಂಡವನ್ನು ಆಲೌಟ್ ಆಗದಂತೆ ತಡೆಯುವಲ್ಲಿ ಭುವನೇಶ್ವರ್ ಮತ್ತು ಕುಲದೀಪ್ ಪ್ರಮುಖ ಪಾತ್ರ ವಹಿಸಿದರು.

ಚೈನಾಮನ್ ಬೌಲರ್ ಕುಲದೀಪ್ 28 ಎಸೆತಗಳನ್ನು ಎದುರಿಸಿದರು. ಭುವಿ 32 ಎಸೆತಗಳನ್ನು ಆಡಿದರು. ಶ್ರೀಲಂಕಾ ಬೌಲರ್‌ಗಳನ್ನು ಧೈರ್ಯದಿಂದ ಎದುರಿಸಿದರು.

ಏಕದಿನ ಸರಣಿಯಲ್ಲಿ ಸೋತಿದ್ದ ಶ್ರೀಲಂಕಾ ತಂಡವು ಟಿ20 ಸರಣಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳುವಲ್ಲಿ ಯಶಸ್ವಿಯಾಯಿತು. ಎರಡನೇ ಪಂದ್ಯದಲ್ಲಿಯೂ ಉತ್ತಮ ಬೌಲಿಂಗ್ ಮತ್ತು ಫೀಲ್ಡಿಂಗ್‌ನಿಂದ ಭಾರತ ತಂಡವನ್ನು ಸೋಲಿಸಿ ಸರಣಿಯಲ್ಲಿ 1–1ರ ಸಮಬಲ ಸಾಧಿಸಿದ್ದರು. ಈ ಪಂದ್ಯದಲ್ಲಿಯೂ ತಮ್ಮ ಸ್ಪಿನ್ ಬೌಲರ್‌ಗಳ ಬಲದಿಂದ ಭಾರತ ತಂಡವು ನೂರರ ಗಡಿಯನ್ನು ದಾಟದಂತೆ ಶ್ರೀಲಂಕಾ ತಂಡವು ನೋಡಿಕೊಂಡಿತು.

ವಿಕೆಟ್‌ಗಾಗಿ ಮನವಿ ಮಾಡಿದ ವಾಣಿಂದು ಹಸರಂಗ– ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಭಾರತ 8ಕ್ಕೆ 81 (20 ಓವರ್)
ಋತುರಾಜ್ ಎಲ್‌ಬಿಡಬ್ಲ್ಯು ಬಿ ಡಿಸಿಲ್ವಾ 14 (10 ಎ, 4x2), ಶಿಖರ್ ಸಿ ಡಿಸಿಲ್ವಾ ಬಿ ಚಮೀರ 0 (1 ಎ), ದೇವದತ್ತ ಎಲ್‌ಬಿಡಬ್ಲ್ಯು 9 (15 ಎ, 4x1), ಸಂಜು ಎಲ್‌ಬಿಡಬ್ಲ್ಯು ಬಿ ಡಿಸಿಲ್ವಾ 0 (3 ಎ), ನಿತೀಶ್ ಸಿ ಮತ್ತು ಬಿ ಶನಕ 6 (15 ಎ), ಭುವನೇಶ್ವರ್ ಸಿ ಶನಕ ಬಿ ಡಿಸಿಲ್ವಾ 16 (32 ಎ), ಕುಲದೀಪ್ ಔಟಾಗದೆ 23 (28 ಎ), ರಾಹುಲ್ ಸಿ ಭಾನುಕ ಬಿ ಶನಕ 5 (5 ಎ, 4x1), ವರುಣ್ ಸಿ ಕರುಣರತ್ನೆ ಬಿ ಡಿಸಿಲ್ವಾ 0 (2 ಎ), ಚೇತನ್ ಔಟಾಗದೆ 5 (9 ಎ)
ಇತರೆ (ವೈಡ್ 3) 3
ವಿಕೆಟ್ ಪತನ: 1-5 (ಶಿಖರ್ ಧವನ್, 0.4), 2-23 (ದೇವದತ್ತ ಪಡಿಕ್ಕಲ್, 3.6), 3-24 (ಸಂಜು ಸ್ಯಾಮ್ಸನ್, 4.4), 4-25 (ಋತುರಾಜ್ ಗಾಯಕವಾಡ್, 4.6), 5-36 (ನಿತೀಶ್ ರಾಣಾ, 8.6), 6-55 (ಭುವನೇಶ್ವರ್ ಕುಮಾರ್, 14.5), 7-62 (ರಾಹುಲ್ ಚಾಹರ್, 15.6), 8-63 (ವರುಣ್ ಚಕ್ರವರ್ತಿ, 16.4)
ಬೌಲಿಂಗ್: ದುಷ್ಮಂತ ಚಮೀರ 4–0–16–1, ಚಮಿಕ ಕರುಣರತ್ನೆ 2–0–12–0, ರಮೇಶ್ ಮೆಂಡಿಸ್ 2–0–13–1, ವಾಣಿಂದು ಹಸರಂಗ 4–0–9–4, ಅಕಿಲ ಧನಂಜಯ 4–0–11–0, ದಸುನ್ ಶನಕ 4–0–20–2

ಶ್ರೀಲಂಕಾ 3ಕ್ಕೆ 82(14.3 ಓವರ್)
ಆವಿಷ್ಕ ಸಿ ಮತ್ತು ಚಾಹರ್ 12 (18ಎ, 4X1) ಭಾನುಕ ಎಲ್ಬಿಡಬ್ಲ್ಯು ಚಾಹರ್ 18 (27 ಎ, 4x1), ಸದೀರ ಬಿ ಚಾಹರ್ 6 (13ಎ), ಡಿಸಿಲ್ವಾ ಔಟಾಗದೆ 23 (20 ಎ, 4X2), ವಾಣಿಂದು ಔಟಾಗದೆ 14 (9ಎ,4X1)
ಇತರೆ (ಲೆಗ್‌ಬೈ 4, ವೈಡ್ 5) 9
ವಿಕೆಟ್ ಪತನ: 1-23(ಆವಿಷ್ಕ ಫರ್ನಾಂಡೊ, 5.5), 2–35 (ಮಿನೋದ್ ಭಾನುಕ, 7.6), 3–56 (ಸದೀರ ಸಮರವಿಕ್ರಮ, 11.6)
ಬೌಲಿಂಗ್: ಭುವನೇಶ್ವರ್ ಕುಮಾರ್ 2–0–9–0 , ವರುಣ್ ಚಕ್ರವರ್ತಿ 3.3–0–15–0, ಸಂದೀಪ್ ವಾರಿಯರ್ 3–0–23–0, ರಾಹುಲ್ ಚಾಹರ್ 4–0–15–3, ಕುಲದೀಪ್ ಯಾದವ್ 2–0–16–0

ಫಲಿತಾಂಶ: ಶ್ರೀಲಂಕಾ ತಂಡಕ್ಕೆ 7 ವಿಕೆಟ್‌ಗಳ ಜಯ, 2–1ರಿಂದ ಸರಣಿ ಗೆಲುವು

ಮುಂಬೈ ಇಂಡಿಯನ್ಸ್ ಪ್ರತಿಭಾ ಶೋಧಕ್ಕೆ ವಿನಯ್

ಮುಂಬೈ (ಪಿಟಿಐ): ಭಾರತ ತಂಡದ ಮಾಜಿ ವೇಗಿ, ಕರ್ನಾಟಕದ ವಿನಯ್ ಕುಮಾರ್ ಅವರು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಫ್ರಾಂಚೈಸ್ ಮುಂಬೈ ಇಂಡಿಯನ್ಸ್‌ಗೆ ಪ್ರತಿಭಾ ಶೋಧಕರಾಗಿ ನೇಮಕವಾಗಿದ್ದಾರೆ. ಫ್ರಾಂಚೈಸ್ ಗುರುವಾರ ಈ ವಿಷಯ ತಿಳಿಸಿದೆ.

ಮುಂಬೈ ತಂಡವು ಇತ್ತೀಚೆಗಷ್ಟೇ ಭಾರತ ತಂಡದ ಮಾಜಿ ವಿಕೆಟ್ ಕೀಪರ್ ಪಾರ್ಥಿವ್ ಪಟೇಲ್ ಅವರನ್ನು ಪ್ರತಿಭಾ ಶೋಧಕ ಗುಂಪಿಗೆ ಸೇರಿಸಿಕೊಂಡಿತ್ತು.

ಬಲಗೈ ಮಧ್ಯಮವೇಗದ ಬೌಲರ್ ಆಗಿರುವ ವಿನಯ್, ಭಾರತ ತಂಡದ ಪರ ಒಂದು ಟೆಸ್ಟ್, 31 ಏಕದಿನ ಮತ್ತು ಒಂಬತ್ತು ಟ್ವೆಂಟಿ–20 ಪಂದ್ಯಗಳಲ್ಲಿ ಆಡಿದ್ದಾರೆ. ಕರ್ನಾಟಕ ಎರಡು ಬಾರಿ ರಣಜಿ ಟ್ರೋಫಿ ಚಾಂಪಿಯನ್ ಆದ ಸಂದರ್ಭಗಳಲ್ಲಿ ಅವರು ತಂಡದ ನಾಯಕರಾಗಿದ್ದರು. 2015 ಮತ್ತು 2017ರಲ್ಲಿ ಮುಂಬೈ ಇಂಡಿಯನ್ಸ್ ಐಪಿಎಲ್ ಪ್ರಶಸ್ತಿ ಗೆದ್ದುಕೊಂಡ ಸಂದರ್ಭಗಳಲ್ಲಿ ವಿನಯ್ ಅವರು ತಂಡದ ಭಾಗವಾಗಿದ್ದರು.

ವಿನಯ್ ಕುಮಾರ್– ಪ್ರಜಾವಾಣಿ ಚಿತ್ರ

ಈ ವರ್ಷದ ಫೆಬ್ರುವರಿಯಲ್ಲಿ ಅವರು ಎಲ್ಲ ಮಾದರಿಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು.

‘ಮುಂಬೈ ಇಂಡಿಯನ್ಸ್ ತಂಡದಲ್ಲಿ ಕಾರ್ಯನಿರ್ವಹಿಸುವ ಅವಕಾಶ ಸಿಕ್ಕಿರುವುದಕ್ಕೆ ಹೆಮ್ಮೆಯಿದೆ. ತಂಡವು ಆಟದ ಪ್ರತಿಯೊಂದು ವಿಭಾಗದಲ್ಲಿ ಉತ್ಕೃಷ್ಟತೆಗಾಗಿ ಶ್ರಮಿಸುತ್ತಿದೆ. ಪ್ರತಿಭಾಶೋಧನೆ ನಿಸ್ಸಂದೇಹವಾಗಿ ಅದರ ಪ್ರಮುಖ ಶಕ್ತಿ. ಇದು ನನಗೆ ಹೊಸ ಅಧ್ಯಾಯ. ಕ್ರಿಕೆಟ್‌ಗೆ ಮರಳಿ ಏನನ್ನಾದರೂ ನೀಡುವ ಅವಕಾಶವೆಂದು ನಾನು ಭಾವಿಸುತ್ತೇನೆ’ ಎಂದು ವಿನಯ್ ಹೇಳಿದ್ದಾರೆ.

ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಅವರು 139 ಪಂದ್ಯಗಳಿಂದ 504 ವಿಕೆಟ್ ಗಳಿಸಿದ್ದಾರೆ.

‘ಎ’ ಡಿವಿಷನ್ ಬ್ಯಾಸ್ಕೆಟ್‌ಬಾಲ್: ಬ್ಯಾಂಕ್ ಆಫ್ ಬರೋಡಾಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಫೀಜ್ ಗಳಿಸಿದ 29 ಪಾಯಿಂಟ್ಸ್ ನೆರವಿನಿಂದ ಬ್ಯಾಂಕ್ ಆಫ್ ಬರೋಡಾ ತಂಡವು ಪ್ರೊ. ಪರಪ್ಪ ಸ್ಮಾರಕ ಟ್ರೋಫಿ ರಾಜ್ಯ ‘ಎ’ ಡಿವಿಷನ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು. ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ 64–30ರಿಂದ ರೈಸಿಂಗ್ ಸ್ಟಾರ್ ಮೈಸೂರು ತಂಡವನ್ನು ಸೋಲಿಸಿತು.

ಮತ್ತೊಂದು ಪಂದ್ಯದಲ್ಲಿ ಮಂಗಳೂರು ಬಿಸಿ ತಂಡವು 63–32ರಿಂದ ಇಂದಿರಾನಗರ ಬ್ಯಾಸ್ಕೆಟ್‌ಬಾಲ್ ಕ್ಲಬ್ ವಿರುದ್ಧ ಗೆಲುವು ಸಾಧಿಸಿತು.

ಎಂ.ಸಿ.ಶ್ರೀನಿವಾಸ್ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ‘ಬಿ’ ಡಿವಿಷನ್ ಲೀಗ್‌ನಲ್ಲಿ ಕೆಎಸ್‌ಪಿ ತಂಡವು 84–52ರಿಂದ ಕನಕ ಕೋಲಾರ ಎದುರು, ಎಂ.ಎನ್.ಕೆ.ರಾವ್ ಪಾರ್ಕ್ ಬಿಸಿ 83–54ರಿಂದ ಬಾಶ್ ವಿರುದ್ಧ, ಪ್ರೊಟೆಕ್ ಅಸೋಸಿಯೇಷನ್ ಮೈಸೂರು ತಂಡವು 66–51ರಿಂದ ರೋವರ್ಸ್ ಧಾರವಾಡ ಎದುರು, ಎಂಇಜಿ ತಂಡವು 69–31ರಿಂದ ಕೋರಮಂಗಲ ಎಸ್‌ಸಿ ವಿರುದ್ಧ ಜಯ ಗಳಿಸಿದವು.

ಮಂಗಳೂರು ಬಿಸಿ ತಂಡದ ಆಶೋಕ ಬಂಡಾ (ಬಲ) ಹಾಗೂ ಇಂದಿರಾನಗರ ಬ್ಯಾಸ್ಕೆಟ್‌ಬಾಲ್ ತಂಡದ ಸಚಿನ್ ನಡುವೆ ಚೆಂಡಿಗಾಗಿ ಪೈಪೋಟಿ– ಪ್ರಜಾವಾಣಿ ಚಿತ್ರ

ಫುಟ್‌ಬಾಲ್: ಪ್ರೇಮ್ ಹ್ಯಾಟ್ರಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೇಮ್ ಅವರು ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಅಗ್ನಿಪುತ್ರ ಎಫ್‌ಸಿ ತಂಡವು ಜಯ ಗಳಿಸಿತು. ಇಲ್ಲಿ ನಡೆಯುತ್ತಿರುವ ಕೆಎಸ್‌ಎಫ್‌ಎ–ಬಿಡಿಎಫ್‌ಎ ‘ಸಿ’ ಡಿವಿಷನ್ ಫುಟ್‌ಬಾಲ್ ಟೂರ್ನಿಯಲ್ಲಿ ಗುರುವಾರ ಆ ತಂಡವು 4–0ಯಿಂದ ಶುಭೋದಯ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು.

ವಿಜೇತ ತಂಡದ ಪರ ಪ್ರೇಮ್ 33, 49 ಮತ್ತು 54ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ಇನ್ನೊಂದು ಗೋಲನ್ನು ರಮೇಶ್ ಕುಮಾರ್ (26ನೇ ನಿಮಿಷ) ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ವೀರಾವಥ್ ರೆಡ್ಡಿ ಅವರು ಗಳಿಸಿದ ಎರಡು ಗೋಲುಗಳು ಬಲಹಾರ್ಕ ಎಫ್‌ಸಿ ತಂಡದ ಗೆಲುವಿಗೆ ಕಾರಣವಾದವು. ಆ ತಂಡವು ಫ್ರಾನ್ಸಿಸ್ ಜೇವಿಯರ್ ಎಫ್‌ಸಿ ತಂಡವನ್ನು 3–0ಯಿಂದ ಪರಾಭವಗೊಳಿಸಿತು. ವೀರಾವಥ್ ನಾಲ್ಕು ಹಾಗೂ 36ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. 53ನೇ ನಿಮಿಷದಲ್ಲಿ ಸುಹಾಸ್ ಎಂ. ಮತ್ತೊಂದು ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಲೆಜೆಂಡರಿ ಡಿ ಸ್ಪೋರ್ಟಿಂಗ್ ಎಫ್‌ಸಿ ತಂಡವು 1–0ಯಿಂದ ಗಾರ್ಡನ್ ಎಫ್‌ಸಿಯನ್ನು ಸೋಲಿಸಿತು. ಡಿ ಸ್ಪೋರ್ಟಿಂಗ್ ತಂಡದ ನಿರ್ಮಲ್ ಕುಮಾರ್ (23ನೇ ನಿಮಿಷ) ಕಾಲ್ಚಳಕ ತೋರಿದರು.

ಶುಕ್ರವಾರ ನಡೆಯುವ ಮೊದಲ ಪಂದ್ಯದಲ್ಲಿ ವಿಜಯನಗರ ಯುನೈಟೆಡ್ ಎಫ್‌ಸಿ– ಛತ್ರಪತಿ ಶಿವಾಜಿ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ. ಬಳಿಕ, ಚಿನ್ನಪ್ಪ ಗಾರ್ಡನ್ ಎಫ್‌ಸಿ–ಒಲಿಂಪಿಯನ್ ರಾಮನ್ ಎಫ್‌ಸಿ, ಕಿಕ್‌ಸ್ಟಾರ್ಟ್ ಅಕಾಡೆಮಿ–ರೊನಾಲ್ಡೊ ಎಫ್‌ಸಿ ತಂಡಗಳ ನಡುವೆ ಹಣಾಹಣಿ ನಡೆಯಲಿದೆ.

ಪ್ರವಾಹ ಸಂತ್ರಸ್ತರಿಗೆ ಅಮೆರಿಕ ಸ್ವಯಂ ಸೇವಾ ಸಂಸ್ಥೆ ನೆರವು

ವಾಷಿಂಗ್ಟನ್ (ಪಿಟಿಐ): ಭಾರಿ ಮಳೆ, ಪ್ರವಾಹ, ಭೂಕುಸಿತದಿಂದ ಇನ್ನೂರಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿರುವ ಮಹಾರಾಷ್ಟ್ರದ ಮೂರು ಜಿಲ್ಲೆಗಳ ಜನರಿಗೆ ವೈದ್ಯಕೀಯ ನೆರವು ನೀಡಲು ಅಮೆರಿಕದ ‘ಅಮೆರಿಕೇರ್ಸ್’ ಸ್ವಯಂ ಸೇವಾ ಸಂಸ್ಥೆ ಮುಂದಾಗಿದೆ.

ಈ ಸಂಬಂಧ ಅಮೆರಿಕೇರ್ಸ್ ಸಂಸ್ಥೆ, ಪ್ರವಾಹದಿಂದ ತೀವ್ರ ಹಾನಿಗೊಳಗಾಗಿರುವ ಮಹಾರಾಷ್ಟ್ರದ ಸಾಂಗ್ಲಿ, ಸಾತಾರಾ ಮತ್ತು ರತ್ನಾಗಿರಿ ಜಿಲ್ಲೆಗಳಿಗೆ ಮೂರು ವೈದ್ಯಕೀಯ ತಂಡಗಳನ್ನು ನಿಯೋಜಿಸಿದೆ. ಈ ತಂಡಗಳು ಈಗಾಗಲೇ ಮಹಾರಾಷ್ಟ್ರದತ್ತ ಪ್ರಯಾಣ ಬೆಳೆಸಿವೆ’ ಎಂದು ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ.

ಬುಧವಾರದವರೆಗಿನ ಮಾಹಿತಿ ಪ್ರಕಾರ, ಮಹಾರಾಷ್ಟ್ರದಲ್ಲಿ ಮಳೆ, ಪ್ರವಾಹ, ಭೂಕುಸಿತದಲ್ಲಿ ಸತ್ತವರ ಸಂಖ್ಯೆ 213. ರಾಯಗಡ ಜಿಲ್ಲೆ ಒಂದರಲ್ಲೇ 100ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಸಾವಿರಾರು ಮಂದಿಯನ್ನು ಸ್ಥಳಾಂತರಿಸಲಾಗಿದೆ. ಅನಾರೋಗ್ಯಕ್ಕೆ ಒಳಗಾಗಿರುವವರಿಗೆ ವೈದ್ಯಕೀಯ ತಂಡಗಳು ಚಿಕಿತ್ಸೆ ನೀಡಲಿವೆ.

ಅಲಸ್ಕಾ ಬಳಿ ಪ್ರಬಲ ಭೂಕಂಪ

ವಾಷಿಂಗ್ಟನ್: ಅಲಸ್ಕಾದ ಪೆನಿನ್ಸುಲಾ ದ್ವೀಪದ ಬಳಿ ಬುಧವಾರ ತಡರಾತ್ರಿ 8.2ರಷ್ಟು ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದ್ದರಿಂದ ಸುನಾಮಿಯ ಎಚ್ಚರಿಕೆ ನೀಡಲಾಗಿತ್ತು. ಆದರೆ ಗಂಟೆಯೊಳಗೆ ಸುನಾಮಿ ಎಚ್ಚರಿಕೆಯನ್ನು ಹಿಂಪಡೆಯಲಾಯಿತು.

ಇದು ಅಮೆರಿಕದಲ್ಲಿ 50 ವರ್ಷಗಳಲ್ಲಿ ಸಂಭವಿಸಿದ ಅತಿದೊಡ್ಡ ಭೂಕಂಪ ಎಂದು ಭೂಕಂಪ ಶಾಸ್ತ್ರಜ್ಞರು ಹೇಳಿದ್ದಾರೆ. ಅಲಸ್ಕಾದ ಆಗ್ನೇಯ ದಿಕ್ಕಿನ ಸುಮಾರು 75 ಮೈಲಿ ದೂರದಲ್ಲಿ ಭೂಕಂಪನದ ಕೇಂದ್ರ ಪತ್ತೆಯಾಗಿದೆ.

ಯಾವುದೇ ಪ್ರಾಣ ಹಾನಿ ಮತ್ತು ಆಸ್ತಿ ಪಾಸ್ತಿ ನಷ್ಟದ ಕುರಿತು ವರದಿಗಳು ಬಂದಿಲ್ಲ. ಭೂಕಂಪದ ತೀವ್ರತೆಯು ಪ್ರಬಲವಾಗಿದ್ದರಿಂದ ದಕ್ಷಿಣ ಅಲಸ್ಕಾ, ಪೆನಿನ್ಸುಲಾ ಮತ್ತು ಅಲ್ಯೂಶಿಯನ್ ದ್ವೀಪಗಳ ಸುತ್ತಲಿನ ಸುಮಾರು 300 ಕಿ.ಮೀ ವ್ಯಾಪ್ತಿಯಲ್ಲಿ ಸುನಾಮಿ ಎಚ್ಚರಿಕೆ ನೀಡಲಾಗಿತ್ತು.

ಧನುಷ್ಕ, ಮೆಂಡಿಸ್ ಮೇಲೆ ನಿಷೇಧಕ್ಕೆ ಶಿಫಾರಸು

ಕೊಲಂಬೊ (ಪಿಟಿಐ): ಇಂಗ್ಲೆಂಡ್ ಪ್ರವಾಸದಲ್ಲಿ ಬಯೋಬಬಲ್ ನಿಯಮ ಉಲ್ಲಂಘಿಸಿದ ತಂಡದ ಬ್ಯಾಟ್ಸ್‌ಮನ್‌ಗಳಾದ ಧನುಷ್ಕ ಗುಣತಿಲಕ ಮತ್ತು ಕುಶಾಲ್ ಮೆಂಡಿಸ್ ಮೇಲೆ ಎರಡು ವರ್ಷಗಳ ನಿಷೇಧ ಹೇರಲು ಶ್ರೀಲಂಕಾ ಕ್ರಿಕೆಟ್ ಮಂಡಳಿಯ (ಎಸ್‌ಎಲ್‌ಸಿ) ಶಿಸ್ತು ಸಮಿತಿಯು ಶಿಫಾರಸು ಮಾಡಿದೆ.

ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ನಿರೋಶನ್ ಡಿಕ್ವೆಲ್ಲಾ ಮೇಲೆ 18 ತಿಂಗಳ ನಿಷೇಧಕ್ಕೂ ಸಮಿತಿ ಶಿಫಾರಸು ಮಾಡಲಾಗಿದೆ. ಅಲ್ಲದೆ ಮೂವರಿಗೂ ₹ 18 ಲಕ್ಷ ದಂಡವನ್ನೂ ವಿಧಿಸಲಾಗಿದೆ.

ಕುಶಲ್ ಮೆಂಡಿಸ್– ಎಎಫ್‌ಪಿ ಚಿತ್ರ

ಜೂನ್ ತಿಂಗಳ ಅಂತ್ಯದಲ್ಲಿ ಮೂರು ಏಕದಿನ ಪಂದ್ಯಗಳನ್ನಾಡಲು ಶ್ರೀಲಂಕಾ ತಂಡವು ಇಂಗ್ಲೆಂಡ್‌ಗೆ ತೆರಳಿತ್ತು. ಸರಣಿ ಆರಂಭಕ್ಕೂ ಮೊದಲು ಈ ಮೂವರು ಆಟಗಾರರು ಡುರ್ಹಾಮ್‌ನಲ್ಲಿ ಬಯೋಬಬಲ್ ನಿಯಮ ಉಲ್ಲಂಘಿಸಿದ್ದು ವರದಿಯಾಗಿತ್ತು. ಆ ತಕ್ಷಣಕ್ಕೆ ಮೂವರನ್ನೂ ಅಮಾನತು ಮಾಡಿ ಶ್ರೀಲಂಕಾಕ್ಕೆ ಕಳುಹಿಸಲಾಗಿತ್ತು.

ಪ್ರಕರಣದ ವಿಚಾರಣೆಗಾಗಿ ಐದು ಸದಸ್ಯರ ಶಿಸ್ತು ಸಮಿತಿಯನ್ನು ರಚಿಸಲಾಗಿತ್ತು. ಸಮಿತಿಯ ಶಿಫಾರಸುಗಳಿಗೆ ಶ್ರೀಲಂಕಾ ಕ್ರಿಕೆಟ್ ಮಂಡಳಿಯ ಕಾರ್ಯಕಾರಿ ಸಮಿತಿ ಅನುಮೋದನೆ ನೀಡಿದರೆ ಮಾತ್ರ ಈ ಶಿಕ್ಷೆ ಜಾರಿಯಾಗಲಿದೆ ಎಂದು ಎಸ್‌ಎಲ್‌ಸಿ ತಿಳಿಸಿದೆ.

ಬಾಂಗ್ಲಾದಲ್ಲಿ ಭಾರಿ ಮಳೆ: ರೋಹಿಂಗ್ಯಾ ನಿರಾಶ್ರಿತರ ಹಲವು ಶಿಬಿರಗಳು ನಾಶ

ಢಾಕಾ (ಎಪಿ): ಬಾಂಗ್ಲಾದೇಶದ ದಕ್ಷಿಣ ಭಾಗದಲ್ಲಿ ಸುರಿಯುತ್ತಿರುವ ಭಾರಿ ಮಳೆಯ ಕಾರಣ ಇಲ್ಲಿನ ರೋಹಿಂಗ್ಯಾ ನಿರಾಶ್ರಿತರ ಹಲವು ಶಿಬಿರಗಳು ನಾಶಗೊಂಡಿದ್ದು, ಸಹಸ್ರಾರು ಮಂದಿಗೆ ಹತ್ತಿರದ ಇತರ ಶಿಬಿರಗಳಲ್ಲಿ ಹಾಗೂ ಸಮುದಾಯ ಭವನಗಳಲ್ಲಿ ವಸತಿ ಸೌಕರ್ಯ ಕಲ್ಪಿಸಲಾಗಿದೆ.

ಕಾಕ್ಸ್ ಬಜಾರ್ ಜಿಲ್ಲೆಯಲ್ಲಿ ಬುಧವಾರ ಒಂದೇ ದಿನ ಸುಮಾರು 30 ಸೆಂ.ಮೀ ಮಳೆಯಾಗಿದೆ. ಈ ಜಿಲ್ಲೆಯಲ್ಲೇ ಸುಮಾರು 8 ಲಕ್ಷ ರೋಹಿಂಗ್ಯಾ ನಿರಾಶ್ರಿತರಿಗೆ ಆಶ್ರಯ ಕಲ್ಪಿಸಲಾಗಿದೆ ಎಂದು ವಿಶ್ವಸಂಸ್ಥೆಯ ನಿರಾಶ್ರಿತರ ಏಜೆನ್ಸಿ ತಿಳಿಸಿದೆ.

ಈ ಪ್ರದೇಶದಲ್ಲಿ ಜುಲೈ ತಿಂಗಳಲ್ಲಿ ಸುರಿಯುವ ಸರಾಸರಿ ಮಳೆಯ ಅರ್ಧದಷ್ಟು ಮಳೆ ಒಂದೇ ದಿನ ಸುರಿದಿದೆ. ಇನ್ನೂ ಕೆಲ ದಿನಗಳು ಮಳೆ ಬರುವ ಸಾಧ್ಯತೆ ಇದೆ. ಈ ವಾರದ ಆರಂಭದಲ್ಲಿ ಮಳೆ, ಪ್ರವಾಹ ಮತ್ತು ಭೂ ಕುಸಿತದಿಂದ ಶಿಬಿರಗಳಲ್ಲಿನ ಆರು ಜನರು ಸಾವನ್ನಪ್ಪಿದ್ದಾರೆ. ಇದರಲ್ಲಿ ಒಂದು ಮಗುವೂ ಸೇರಿದೆ.

ಭಾರಿ ಮಳೆಯಿಂದ 12 ಸಾವಿರಕ್ಕೂ ಹೆಚ್ಚು ನಿರಾಶ್ರಿತರಿಗೆ ತೊಂದರೆ ಆಗಿದೆ. ಅಂದಾಜು 2,500 ತಾತ್ಕಾಲಿಕ ಮನೆಗಳು ನಾಶವಾಗಿವೆ ಅಥವಾ ಹಾನಿಗೊಂಡಿವೆ. 5 ಸಾವಿರಕ್ಕೂ ಹೆಚ್ಚು ನಿರಾಶ್ರಿತರನ್ನು ಸಮೀಪದ ಇತರ ನಿರಾಶ್ರಿತರ ಶಿಬಿರಗಳಲ್ಲಿ ಅಥವಾ ಸಮುದಾಯ ಭವನಗಳಲ್ಲಿ ಉಳಿಸಲು ವ್ಯವಸ್ಥೆ ಮಾಡಲಾಗಿದೆ ಎಂದು ವಿಶ್ವಸಂಸ್ಥೆಯ ನಿರಾಶ್ರಿತರ ಏಜೆನ್ಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಬಾಂಗ್ಲಾದೇಶದ ದಕ್ಷಿಣ ಭಾಗದಲ್ಲಿ ಭಾರಿ ಮಳೆ ಸುರಿಯುತ್ತಿದ್ದು, ಅಲ್ಲಿನ ರೋಹಿಂಗ್ಯಾ ನಿರಾಶ್ರಿತರ ಹಲವು ಶಿಬಿರಗಳು ಪ್ರವಾಹಕ್ಕೆ ಸಿಲುಕಿವೆ– ಪಿಟಿಐ ಚಿತ್ರ

ಪ್ರವಾಹಕ್ಕೆ ಸಿಲುಕಿ 40 ಮಂದಿ ಸಾವು

ಕಾಬೂಲ್ (ರಾಯಿಟರ್ಸ್): ಅಫ್ಗಾನಿಸ್ತಾನದ ತಾಲಿಬಾನ್ ನಿಯಂತ್ರಿತ ಪ್ರದೇಶದಲ್ಲಿ ಉಂಟಾದ ಪ್ರವಾಹದಿಂದಾಗಿ 40 ಮಂದಿ ಮೃತಪಟ್ಟಿದ್ದು, ಹಲವರು ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಫ್ಗಾನಿಸ್ತಾನದ ಪೂರ್ವ ಪ್ರಾಂತ್ಯ ನುರಿಸ್ತಾನದ ಕಾಮ್ದೇಶ್ ಜಿಲ್ಲೆಯಲ್ಲಿ ದುರಂತ ಸಂಭವಿಸಿದೆ. ಈ ಪ್ರದೇಶ ತಾಲಿಬಾನ್ ಉಗ್ರರ ನಿಯಂತ್ರಣದಲ್ಲಿದ್ದು, ದೂರಸಂಪರ್ಕ ವ್ಯವಸ್ಥೆ ಅಸಮರ್ಪಕವಾಗಿದೆ. ನಿಖರವಾದ ಮಾಹಿತಿ ಕಲೆಹಾಕುವುದಕ್ಕೆ ಕಷ್ಟವಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

‘ಮೂಲಗಳ ಪ್ರಕಾರ 60 ಮನೆಗಳು ನಾಶವಾಗಿದ್ದು, 100ಕ್ಕೂ ಹೆಚ್ಚು ಮಂದಿ ಕಾಣೆಯಾಗಿದ್ದಾರೆ’ ಎಂದು ವಿಪತ್ತು ನಿರ್ವಹಣಾ ಸಚಿವಾಲಯದ ವಕ್ತಾರ ಸಮೀವುಲ್ಲಾ ಜರ್ಬಿ ಹೇಳಿದ್ದಾರೆ.

ಕಾಣೆಯಾದವರನ್ನು ಹುಡುಕಲು ತಾಲಿಬಾನಿಗಳು ಗ್ರಾಮಸ್ಥರಿಗೆ ಸಹಾಯ ಮಾಡುತ್ತಿದ್ದಾರೆ ಎಂದು ಹೇಳಲಾಗಿದೆ.